“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಕರ್ನಾಟಕ ವಿಧಾನ ಪರಿಷತ್ತು**

**ದಿನಾಂಕ: 06ನೇ ಫೆಬ್ರವರಿ, 2018**
**ಮಂಗಳವಾರ**

**ವಿಷಯಾನುಕ್ರಮಣಿಕೆ**

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ.**

**ರಾಜ್ಯದಲ್ಲಿ ನಡೆಯುತ್ತಿರುವ ನಿರಂತರ ಕೊಲೆ, ಸುಲಿಗೆ, ಅತ್ಯಾಚಾರ, ಸರಗಳ್ಳತನ, ಗ್ಯಾಂಗ್‌ವಾರ್‌ಗಳು ಅಲ್ಲದೆ, ಪೋಲೀಸ್ ಇಲಾಖೆಯ ಸಿಬ್ಬಂದಿಗಳ ಮೇಲೆ ಹಲ್ಲೆ ಹಾಗೂ ಜೈಲಿನ ಆವರಣದಲ್ಲೆ ಗುಂಪು ಘರ್ಷಣೆ, ಕೊಲೆ ಇತ್ಯಾದಿಗಳಿಂದಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ವಿಫಲಗೊಂಡಿರುವ ವಿಷಯದ ಬಗ್ಗೆ.**

.

– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
– ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)
– ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**49 – ಪಶು ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆ ಬಗ್ಗೆ.**
– ಶ್ರೀ ಎಸ್.ವ್ಹಿ.ಸಂಕನೂರು
– ಶ್ರೀ ಎ. ಮಂಜು(ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು)

**161 – ಕಲ್ಲಡ್ಕ ಶ್ರೀರಾಮ ಶಾಲೆಗೆ ಕೊಲ್ಲೂರು ದೇವಸ್ಥಾನದಿಂದ ಮಂಜೂರು ಮಾಡಿರುವ ಮಧ್ಯಾಹ್ನದ ಊಟವನ್ನು ತಡೆಹಿಡಿದಿರುವ ಬಗ್ಗೆ.**
– ಶ್ರೀ ಕೋಟ ಶ್ರೀನಿವಾಸ ಪೂಜಾರಿ
– ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ(ಮುಜರಾಯಿ ಸಚಿವರು)
– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧದ ನಾಯಕರು)
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಸಚೇತಕರು)
– ಶ್ರೀ ಬಿ.ಜೆ.ಪುಟ್ಟಸ್ವಾಮಿ
– ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)
– ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)
– **ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**

**42 – ತಿರುಪತಿ ತಿರುವಲದಲ್ಲಿ ವಸತಿ ಸೌಕರ್ಯ ಕಲ್ಪಿಸುವ ಬಗ್ಗೆ**
– ಶ್ರೀ ಆರ್.ಧರ್ಮಸೇನ
– ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ(ಮುಜರಾಯಿ ಸಚಿವರು)

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**39 – ಪಶು ವೈದ್ಯಕೀಯ ಕೇಂದ್ರಗಳ ಬಗ್ಗೆ**
– ಶ್ರೀ ಎಂ.ನಾರಾಯಣಸ್ವಾಮಿ
– ಶ್ರೀ ಎ.ಮಂಜು (ಪಶು ಸಂಗೋಪನಾ ಸಚಿವರು)

**26 – ಕೃಷಿ ಬೆಳೆಗಳ ಉತ್ಪಾದನೆ ಬಗ್ಗೆ**
– ಶ್ರೀಮತಿ ಜಯಮ್ಮ
– ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)

**24 – ಲೋಕೋಪಯೋಗಿ ಇಲಾಖೆಯ ಕಟ್ಟಡ ಕಾಮಗಾರಿಗಳ ಕುರಿತು**
– ಶ್ರೀ ಪ್ರದೀಪ ಶೆಟ್ಟರ್
– ಡಾ:ಹೆಚ್.ಸಿ.ಮಹದೇವಪ್ಪ(ಲೋಕೋಪಯೋಗಿ ಸಚಿವರು)

**23 – ವಿದ್ಯುತ್ ಸಮಸ್ಯೆ ನಿವಾರಣೆ ಬಗ್ಗೆ**
– ಶ್ರೀಮತಿ ಮೋಟಮ್ಮ
– ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)

**81 – ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ ಬಗ್ಗೆ**
– ಶ್ರೀ ಎಂ.ಕೆ.ಪ್ರಣೇಶ್
– ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)

**31 – ಮಾವಿನಕಟ್ಟೆ-ಕಿಕ್ಕರಳ್ಳಿ ರಸ್ತೆ ದುರಸ್ತಿ ಬಗ್ಗೆ**
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಡಾ: ಹೆಚ್.ಸಿ.ಮಹದೇವಪ್ಪ(ಲೋಕೋಪಯೋಗಿ ಸಚಿವರು)

**74 – 1985 ರಲ್ಲಿ ನಂಜನಗೂಡಿನಲ್ಲಿ ಕುಸಿದುಬಿದ್ದ ಮಿನಿ ವಿಧಾನಸೌಧ ಕಟ್ಟಡದ ತನಿಖೆ ಬಗ್ಗೆ**
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಡಾ: ಹೆಚ್.ಸಿ.ಮಹದೇವಪ್ಪ(ಲೋಕೋಪಯೋಗಿ ಸಚಿವರು)

**03 – ಆರ್‌ಟಿಪಿಎಸ್/ವೈಟಿಪಿಎಸ್ ಎಲ್ಲಾ ಘಟಕಗಳಲ್ಲಿ ಪೂರ್ಣ ಪ್ರಮಾಣದ ವಿದ್ಯುತ್ ಉತ್ಪಾದನೆ ಬಗ್ಗೆ.**
– ಶ್ರೀ ಎಸ್.ಎಸ್.ಬೋಸ್‌ರಾಜ್
– ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)

**183 – ದೀನ ದಯಾಳ್ ವಿದ್ಯುತ್ ಯೋಜನೆಯ ಕುರಿತು**
– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
– ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.**

**ಅ) ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರು ನೂತನ ಸಿ ಅಂಡ್ ಆರ್ ವಿರೋಧಿಸುತ್ತಿರುವ ಬಗ್ಗೆ**
– ಶ್ರೀ ಅಮರನಾಥ ಪಾಟೀಲ್
– ಶ್ರೀ ಎಸ್.ವಿ.ಸಂಕನೂರು
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಟ್ಟಲಗಿ ಗ್ರಾಮವನ್ನು ವಿಜಯಪುರ ಜಿಲ್ಲೆಯ ಹೊಸದಾಗಿ ಮಂಜೂರಾದದ ತಿಕೋಟಾ ತಾಲ್ಲೂಕಿಗೆ ಸೇರ್ಪಡೆ ಮಾಡುವ ಬಗ್ಗೆ.**

– ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಇ) ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯ ಸಹಾಯಕ ಇಂಜಿನಿಯರುಗಳ ನೇಮಕಾತಿ ಬಗ್ಗೆ.**

– ಶ್ರೀ ರಮೇಶ್ ಬಾಬು
– ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು)

**ಈ) ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ನಟರಾಜನ ಪ್ರಶಸ್ತಿ ವಿಗ್ರಹ ಮಾದರಿಯನ್ನು ಬದಲಾಯಿಸಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಉ) ಸರ್ಕಾರಿ ಶಾಲೆಯನ್ನು ಉಳಿಸಿ, ಸರ್ಕಾರಿ ಶಾಲೆಗೆ ಶಿಕ್ಷಕರನ್ನು ಕೊಡಿ ಎಂದು ವಿಷಯದ ಕುರಿತು ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ.**

– ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷ ಸಚೇತಕರು)
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**4.ಅಭಿನಂದನೆ**

**ಕರ್ನಾಟಕ ರಾಜ್ಯದ ಹಲವಾರು ಗಣ್ಯವ್ಯಕ್ತಿಗಳು ಪದ್ಮ ಪ್ರಶಸ್ತಿಗಳನ್ನು ಪಡೆದಿರುವ ಬಗ್ಗೆ.**

**5. ಪ್ರಕಟಣೆ**

**6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಪ್ರಸ್ತಾವ.**

**– ಶ್ರೀ ಎಸ್.ರವಿ**
**– ಡಾ|| ಜಯಮಾಲ ರಾಮಚಂದ್ರ**

**7. ನಿಯಮ 68ರ ಮೇರೆಗೆ ಚರ್ಚೆ.**

**ರಾಜ್ಯದಲ್ಲಿ ನಡೆಯುತ್ತಿರುವ ನಿರಂತರ ಕೊಲೆ, ಸುಲಿಗೆ ಅತ್ಯಾಚಾರ, ಸರಗಳ್ಳತನ, ಗ್ಯಾಂಗ್‌ವಾರ್‌ಗಳು ಅಲ್ಲದೆ, ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಮೇಲೆ ಹಲ್ಲೆ ಹಾಗೂ ಜೈಲಿನ ಆವರಣದಲ್ಲೆ ಗುಂಪು ಘರ್ಷಣೆ, ಕೊಲೆ ಇತ್ಯಾದಿಗಳಿಂದಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ವಿಫಲಗೊಂಡಿರುವ ವಿಷಯದ ಬಗ್ಗೆ.**

– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
**– ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)**
**– ಶ್ರೀ ಕೋಟ ಶ್ರೀನಿವಾಸ ಪೂಜಾರಿ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
– **ಶ್ರೀ ಎಂ.ಕೆ.ಪ್ರಾಣೇಶ್**
– **ಕ್ಯಾಪ್ಟನ್ ಗಣೇಶ್ ಕಾರ್ಣಿಕ್**
– **ಶ್ರೀ ಬಿ.ಜೆ.ಪುಟ್ಟಸ್ವಾಮಿ**
– **ಶ್ರೀ ಐವನ್ ಡಿ'ಸೋಜಾ**
– **ಡಾ॥ ಜಯಮಾಲ ರಾಮಚಂದ್ರ**
– **ಶ್ರೀ ವಿ.ಎಸ್. ಉಗ್ರಪ್ಪ**
– **ಶ್ರೀಮತಿ ತಾರಾಅನೂರಾಧ**
– **ಶ್ರೀ ಕೆ.ಟಿ.ಶ್ರೀಕಂಠೇಗೌಡ**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 06ನೇ ಫೆಬ್ರವರಿ 2018**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11:00 ಗಂಟೆಗೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ವಿಷಯವನ್ನು ಹೇಗೆ ಪ್ರಾರಂಭ ಮಾಡಬೇಕೆಂಬುದು ನನಗೆ ಗೊತ್ತಾಗುತ್ತಿಲ್ಲ. ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳೊಬ್ಬರೂ ಮುಂದಿನ ಸಾಲಿನಲ್ಲಿ ಇಲ್ಲ. ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ನಿಲುವಳಿ ಸೂಚನೆ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸುವಂತಹ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಮಾನ್ಯ ಗೃಹ ಮಂತ್ರಿಗಳು ಇರಬೇಕು, ಬೇಡ, ಈ ಸರ್ಕಾರಕ್ಕೆ ಅವರ ಅಧಿಕಾರಿಗಳನ್ನಾದರೂ ಕಳುಹಿಸುವಂತಹ ಯೋಗ್ಯತೆ ಇಲ್ಲ ಎಂದು ಹೇಳಿದರೆ, ಸರ್ಕಾರ ಕೊಲೆಗಡುಕರಿಗೆ, ಅತ್ಯಾಚಾರ ಮಾಡುವಂತಹವರಿಗೆ ನೇರವಾಗಿ ಬೆಂಬಲ ಕೊಡುತ್ತಿದೆ ಎಂದುಕೊಳ್ಳಬೇಕೋ ಅಥವಾ ನಾವು ಏನೆಂದುಕೊಳ್ಳಬೇಕು? ಒಬ್ಬ ಅಧಿಕಾರಿಗಳು ಇಲ್ಲ ಎಂದು ಹೇಳಿದರೆ ಇದು ವಿಧಾನ ಪರಿಷತ್ತೋ ಅಥವಾ ರಸ್ತೆಯಲ್ಲಿ ಸಂತೆ ಮಾಡುತ್ತಿರುವಂತಹ ಜಾಗವೋ ಎಂದು ನನಗಂತೂ ಅರ್ಥವಾಗುತ್ತಿಲ್ಲ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)**:- ಮಾನ್ಯ ಸಭಾಪತಿಯವರೆ, ಅಧಿಕಾರಿಗಳು ಕೆಳಗಿನ ಮನೆಯಲ್ಲಿದ್ದಾರೆ. ಇನ್ನು ಐದು ಅಥವಾ ಹತ್ತು ನಿಮಿಷಗಳಲ್ಲಿ ಅಧಿಕಾರಿಗಳು ಬರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಕೆಳಗಿನ ಮನೆಯಲ್ಲಿದ್ದಾರೆ ಎಂದರೆ ಅಲ್ಲಿಯ ತನಕ ಸದನವನ್ನು ಅಡ್ಜರ್ನ್ ಮಾಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತರಕರು):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಬರುತ್ತಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ವಿಧಾನ ಪರಿಷತ್ತು ಏಕೆ ಬೇಕು ಎಂದು ಹೇಳಿ.

**(ಗೊಂದಲ)**

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಕಲಾಪ ನಡೆಯುತ್ತಿದೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಸದನ ಏಕೆ ಬೇಕು? ಕೊಲೆ ನಡೆಯುತ್ತಿರಲಿ ಮತ್ತು ಅತ್ಯಾಚಾರ ನಡೆಯುತ್ತಿರಲಿ. ಅಧಿಕಾರಿಗಳು ಬರುವ ಯೋಗ್ಯತೆ ಇಲ್ಲ ಎಂದಾಗ, ಈ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಗಮನವಿಲ್ಲ ಎಂದರೆ ನಾವು ಏನು ಮಾಡಬೇಕು?

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಮೊದಲು ನಡೆಯಲಿ. ಆನಂತರ ಇದನ್ನು ತೆಗೆದುಕೊಳ್ಳೋಣ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಸಹ ಈ ರೀತಿ ಮಾಡುತ್ತಾರೆ ಎಂದರೆ, ಅವರಿಗೆ ಏನು ಅರ್ಥವೇ ಆಗುವುದಿಲ್ಲವೇ?

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಕಾರ್ಯಕಲಾಪಗಳನ್ನು ಪ್ರಾರಂಭ ಮಾಡಿ.

**(ಗೊಂದಲ)**

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಅವರ ಸದಸ್ಯರುಗಳನ್ನೇ ಸದನಕ್ಕೆ ಕರೆದುಕೊಂಡು ಬಂದಿಲ್ಲ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಕಾನೂನುಬದ್ಧವಾಗಿ ನಮ್ಮ ಪ್ರತಿಭಟನೆ ಏನಿದೆ, ಅದನ್ನು ನಾವು ಮಾಡಿದ್ದೇವೆ. ಸರ್ಕಾರ ಎಚ್ಚೆತ್ತುಕೊಂಡರೆ ಎಚ್ಚೆತ್ತುಕೊಳ್ಳಲಿ. ಸರ್ಕಾರ ಏನು ಮಾಡಬೇಕಾಗುತ್ತೋ ಮಾಡಲಿ.

(ಗೊಂದಲ)

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಪ್ರಾರಂಭವಾಗಲಿ. ಇದರಲ್ಲಿ ನೀವು ಮಾನ್ಯ ಸಭಾಪತಿಯವರಿಗೆ ನೋಟಿಸ್ ಕೊಟ್ಟಿದ್ದೀರಿ. ಆಮೇಲೆ ಕಾನೂನು ಪ್ರಕಾರ ನಾವು ಕ್ರಮ ಕೈಗೊಳ್ಳುತ್ತೇವೆ.

**ಸಭಾಪತಿಯವರು:-** ಒಂದು ನಿಮಿಷ. ಸಭೆಯ ಗಮನಕ್ಕೆ ಒಂದು ವಿಷಯನ್ನು ತರಲೇ ಬೇಕು. ಸರ್ಕಾರ ಸಹ ಇದನ್ನು ಗಮನಿಸಬೇಕಾಗುತ್ತದೆ. ಸದನವು ಹನ್ನೊಂದು ಗಂಟೆಗೆ ಪ್ರಾರಂಭವಾಗುತ್ತದೆಂಬುದು ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ, ಮಾನ್ಯ ಸದಸ್ಯರುಗಳಿಗೆ ಹಾಗೂ ಎಲ್ಲರಿಗೂ ಸಹ ಇದು ಗೊತ್ತಿರುತ್ತದೆ. ಸಭೆಯಲ್ಲಿ ಹಾಜರು ಇರಬೇಕಾದ ಅಧಿಕಾರಿಗಳ ಪಟ್ಟಿ ನಮ್ಮ ಹತ್ತಿರ ಕೊಟ್ಟಿರುತ್ತಾರೆ. ಸರಿಯಾದ ಸಮಯಕ್ಕೆ ಬರಬೇಕಾದ ಜವಾಬ್ದಾರಿ ಅಧಿಕಾರಿಗಳದ್ದು. ಅವರು ಬರಲಿಲ್ಲ ಎಂದರೆ, ಅದು ತಪ್ಪು. ದಯಮಾಡಿ, ಇಡೀ ಸದನದ ಆಡಳಿತ ಪಕ್ಷ, ವಿರೋಧ ಪಕ್ಷದ ಪ್ರಶ್ನೆಯಲ್ಲ. ಅಧಿಕಾರಿಗಳು ಸಭೆಯಲ್ಲಿ ಹಾಜರಿರಬೇಕಾಗಿರುವುದು ಅವರ ಕರ್ತವ್ಯ. ಕರ್ತವ್ಯಲೋಪವಾದಾಗ, ದಯವಿಟ್ಟು ಸಭೆಯಲ್ಲಿ ಯಾರೂ ಅವರನ್ನು ಡಿಫೆಂಡ್ ಮಾಡಬೇಡಿ. ಇದು ಒಳ್ಳೆಯ ಪದ್ಧತಿಯಲ್ಲ. ಸಭೆ ನಡೆಸುವುದು ಆಡಳಿತ ಪಕ್ಷಕ್ಕೆ ಮತ್ತು ವಿರೋಧಪಕ್ಷಕ್ಕೆ ಅದು ಸಂಬಂಧಪಟ್ಟದ್ದು, ನಾವು ಅದನ್ನು ನಡೆಸುತ್ತೇವೆ. ಆದರೆ ಸಭೆಗೆ ಅಧಿಕಾರಿಗಳು ಬರುವುದಿಲ್ಲ. ನನಗೆ ನೆನಪಿರುವ ಮಟ್ಟಿಗೆ ಮಾನ್ಯ ಬಸವರಾಜ ಹೊರಟ್ಟಿಯವರು ಅಧಿಕಾರಿಗಳನ್ನು ಕರೆಸಿ ಎಂದು ಈ ಸದನದಲ್ಲಿ ಸುಮಾರು ಇಪ್ಪತ್ತೈದು ಬಾರಿ ನನಗೆ ಹೇಳಿದ್ದಾರೆ. He is a senior-most Member. ಆದರೆ ಅಧಿಕಾರಿಗಳು ತಪ್ಪು ಮಾಡಿದಾಗ, ಅವರನ್ನು ಸರ್ಕಾರ ದಯವಿಟ್ಟು, ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬಾರದು. ಈಗ ಸಭೆಯನ್ನು ನಡೆಸೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತೇನೆಂದರೆ, ಈ ಸದನ ನಡೆಯುವಾಗ, ಶಾಸಕರು ಮತ್ತು ಮಂತ್ರಿಗಳು ಇಲ್ಲ ಎಂದಾಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟೀಕೆ ಟಿಪ್ಪಣಿಗಳು ಬರುತ್ತವೆ. ಒಬ್ಬ ಅಧಿಕಾರಿಗಳು ಸಹ ಇರಲಿಲ್ಲ ಎಂದು ನಾನು ಕನಿಷ್ಟ ನೂರು ಬಾರಿಯಾದರೂ ಹೇಳಿದ್ದೇನೆ. ಅಧಿಕಾರಿಗಳು ಇರಲಿಲ್ಲವೆಂದರೆ ಹೇಗೆ? ಭರವಸೆ ಸಮಿತಿಯಲ್ಲಿ ಏನು ಬರುತ್ತದೆ ಎಂದರೆ, ಈ ಸದನದಲ್ಲಿ ಮಂತ್ರಿಗಳು ಕೊಟ್ಟಂತಹ ಆಶ್ವಾಸನೆಯನ್ನು ಮೂರು ತಿಂಗಳೊಳಗೆ ಈಡೇರಿಸಿ ಆ ಬಗ್ಗೆ ಸಮಿತಿಗೆ ಮಾಹಿತಿ ಕಳುಹಿಸಬೇಕೆಂಬುದು ಇದೆ. ಇದಕ್ಕೆ ಮೂರು ತಿಂಗಳಲ್ಲ, ಮೂರು ವರ್ಷಗಳಾದರೂ ಸಹ ಅವರು ಅದನ್ನು ಇಂಪ್ಲಿಮೆಂಟ್ ಮಾಡಿ ಮಾಹಿತಿ ಕಳುಹಿಸಿಲ್ಲ. ಹಾಗಿದ್ದರೆ ಈ ಸದನ ನಡೆಸುವಂತಹ ಔಚಿತ್ಯವೇನು? ಸದನ ನಡೆಸಿದಾಗ, ಅದು implement ಆಗಲಿಲ್ಲವೆಂದರೆ ಮೂರು ತಿಂಗಳೊಳಗೆ ಅದು ಅನುಷ್ಟಾನ ಆಗಬೇಕು. ಈ ಬಗ್ಗೆ ನಾನು ತಮಗೆ ಒಂದು ಪತ್ರವನ್ನು ಬರೆದಿದ್ದೆನು. ಒಂದು ಪ್ರಶ್ನೆಗೆ ಹದಿನೆಂಟು ಲಕ್ಷ ರೂಪಾಯಿ ಖರ್ಚಾಗಿರುವುದು ನಿಮ್ಮ ಗಮನಕ್ಕೆ ಬಂದಿದೆ. ಒಂದು ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರ ತರಿಸಲು ಸಾಮಾನ್ಯವಾಗಿ ಸರ್ಕಾರಕ್ಕೆ ಎರಡು-ಮೂರು ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುತ್ತದೆ. ಕನಿಷ್ಟ ಪಕ್ಷ ಎರಡು ಲಕ್ಷ ರೂಪಾಯಿಗಳಂತೂ ಆಗುತ್ತದೆ. ಈ ರೀತಿ ಇದ್ದಾಗ, ನಾವು ಏನೇ ಮಾಡಿದರೂ ಸಹ ಮತ್ತೆ ಅದನ್ನು implement ಮಾಡುವವರು ಅಧಿಕಾರಿಗಳು. ಅದನ್ನು ಸರ್ಕಾರದ ಗಮನಕ್ಕೆ ತರುವುದು ಅವರ ಕರ್ತವ್ಯ. ಅದನ್ನು ತರಲಿಲ್ಲವೆಂದರೆ, ನಿಮ್ಮ ಸರ್ಕಾರವಲ್ಲ, ಯಾವ ಸರ್ಕಾರ ಇದ್ದಾಗಲೂ ಅದು ಅಷ್ಟೇ ಇದೆ.

ಮಾನ್ಯ ಸಭಾಪತಿಯವರೇ ಇದಕ್ಕೆ ಒಂದು ತೀರ್ಮಾನವಾಗಬೇಕು. ಇವತ್ತಿನವರೆಗೂ ಅವರಿಗೆ ಏನು ಶಿಕ್ಷೆ ಇಲ್ಲ. ಇದುವರೆಗೂ ಅವರಿಗೆ ಏನು ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಹೇಳುತ್ತೇವೆ ಮತ್ತು ಪತ್ರಿಕೆಯಲ್ಲಿ ಅವರ ಹೆಸರು ಬರುವುದನ್ನು ಓದುತ್ತೇವೆ. ಆದರೆ ಯಾವುದೇ ಕ್ರಮ ಆಗುವುದಿಲ್ಲ. ಆದ್ದರಿಂದ ಇದಕ್ಕೆ ತಾವು ಏನಾದರೊಂದು ತೀರ್ಮಾನ ಮಾಡಿ. ಇಲ್ಲವಾದರೆ ಕೇಳಲೇಬೇಡಿ. ಅವರು ಬೇಕಾದಾಗ ಬರಲಿ, ಬೇಡವಾದಾಗ ಬಿಡಲಿ.

**ಸಭಾಪತಿಯವರು:-** ಮಾನ್ಯ ಹೊರಟ್ಟಿಯವರ ಭಾವನೆಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಹೇಳಿರುವ ಮಾತಿಗೆ ನಾನು ಪೂರಕವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಾವೇ ಫ್ರೇಮ್ ಮಾಡಿರುವಂತಹ internal rules ಇವರಿಗೆ ಅರ್ಥವಾಗುವುದಿಲ್ಲವೋ ಅಥವಾ ನಮಗೆ ಅರ್ಥವಾಗುವುದಿಲ್ಲವೋ? I don't understand at all. I can understand the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

delay of four or five years. There are matters of 10 years or 15 years or 20 years.

(ಮುಂದು...)

**(005)06.02.2018/11.10/ಟಿಸಿಹೆಚ್-ಜಿ.ಆರ್.**

**ಶ್ರೀ ಶರಣಪ್ಪ ಮಟ್ಟೂರ (ಮುಂದು)**

1983 ರಿಂದ ಇಲ್ಲಿಯವರೆಗೆ ಮಾನ್ಯ ಹೊರಟ್ಟಿಯವರು ಮತ್ತು ನಾವು ಅದನ್ನು bifurcate ಮಾಡಿದ್ದೇವೆ.

**ಸಭಾಪತಿಯವರು:-** ಈಗ ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಈ ವಿಚಾರದ ಬಗ್ಗೆ ಒಂದು ತೀರ್ಮಾನವನ್ನು ಹೇಳಿ.

**ಸಭಾಪತಿಯವರು:-** ಈ ಹಿಂದೆಯೇ ಇದಕ್ಕೆ ತೀರ್ಮಾನ ಬಹಳ ಕ್ಲಿಯರ್ ಆಗಿ ಆಗಿದೆ. ರಾಜ್ಯಾಂಗ ರಚನೆ ಮಾಡಿದಾಗ, ವಿಧಾನ ಪರಿಷತ್ ರಚನೆಯಾದಾಗ, ವಿಧಾನ ಸಭೆ ರಚನೆಯಾದಾಗ ತೀರ್ಮಾನಗಳು ಆಗಿ ಹೋಗಿವೆ. ಅದನ್ನು ನಾವು ಬದಲಾವಣೆ ಮಾಡುವುದು ಬೇಡ. ಅದರಂತೆ ನಡೆಯಬೇಕು. ಯಾರು ಅದರಂತೆ ನಡೆದುಕೊಳ್ಳುತ್ತಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಮಾಡಬೇಕೆಂದು ನಾವು ಮತ್ತೊಮ್ಮೆ ಚರ್ಚೆ ಮಾಡೋಣ. ಈಗ ಇದನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಗೌರವಾನ್ವಿತ ಸದಸ್ಯರುಗಳೆಲ್ಲಾ ಸೇರಿ ಒಂದು ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಈಗ ನನಗೆ ಒಂದು ನಿಲುವಳಿ ಸೂಚನೆಗೆ ಸಹಿ ಹಾಕಿ ಕಳುಹಿಸಿ ಕೊಟ್ಟಿದ್ದಾರೆ. ನಮ್ಮಲ್ಲಿ ಒಂದು ಪದ್ಧತಿಯನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಇತ್ತೀಚಿನ ದಿನಗಳಲ್ಲಿ ಅದಕ್ಕೆ ಹಿಂದೆ ಇದ್ದಂಥದ್ದನ್ನು ಬದಲಾವಣೆ ಮಾಡಿ, ಒಂದು ಪದ್ಧತಿಗೆ ನಾವು ಒಪ್ಪಿಕೊಂಡು ಬಂದಿದ್ದೇವೆ. 5 ರಿಂದ 8 ನಿಮಿಷಗಳ ಕಾಲ preliminary submission ಮೂಲಕ ಇದನ್ನು ಏಕೆ ತೆಗೆದುಕೊಳ್ಳಬೇಕು. ಇದರ ಅವಶ್ಯಕತೆ ಏನಿದೆ ಎನ್ನುವುದನ್ನು ಈ ವಿಷಯವನ್ನು move ಮಾಡಿದಂತಹ ಮಾನ್ಯ ಸದಸ್ಯರುಗಳ ಪೈಕಿ, ಯಾರಾದರೂ ಒಬ್ಬರು ಸದಸ್ಯರು ಹೇಳಬಹುದು. ಅದಾದ ನಂತರ, ಸರ್ಕಾರ ಏನು ಹೇಳುತ್ತದೆಯೋ ಅದರ ಆಧಾರದ ಮೇಲೆ ನನ್ನ ತೀರ್ಮಾನವನ್ನು ನಾನು ಹೇಳುತ್ತೇನೆ. ಈ ವಿಷಯವನ್ನು ಮಾತನಾಡುವವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯವಿಟ್ಟು ಸಮಯವನ್ನು ನೋಡಿಕೊಂಡು ಮಾತನಾಡಿ. 5 ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ, (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಎರಡೇ ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಆದರೆ ಯಾರಿಗೆ ಹೇಳಲಿ?

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸರ್ಕಾರವೇ ಇಲ್ಲೇ ಕುಳಿತಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಸ್ವಾಮಿ ತಾವು ಸ್ವಲ್ಪ ಕುಳಿತುಕೊಳ್ಳಿ. ಇದೇ ಸರ್ಕಾರ ತೀರ್ಮಾನ ಮಾಡಲಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಎಂಟು ಜನ ಮಂತ್ರಿಗಳು ಸದನದಲ್ಲಿ ಇದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಮಾನ್ಯ ಸಭಾಪತಿಯವರನ್ನು ಕೇಳುತ್ತಿದ್ದೇನೆ, ತಾವು ದಯವಿಟ್ಟು ಕುಳಿತುಕೊಳ್ಳಿ. ಇದೇ ರೀತಿ ಮುಂದುವರೆಸಬೇಕೆಂದು ಈ ಸರ್ಕಾರ ತೀರ್ಮಾನ ಮಾಡಿದ್ದರೆ, ಅಧಿಕಾರಿಗಳು ಬಂದರೆ ಆಯಿತು ಅಥವಾ ಬರದಿದ್ದರೆ ಆಯಿತು. ಅವರ ಇಷ್ಟಬಂದಂತೆ ಅವರು ಮಾಡಿಕೊಳ್ಳಬಹುದು. ಕೊಲೆ, ಸುಲಿಗೆ ಏನು ಆದರೂ ಕೂಡ ಮಾನ್ಯ ವಿರೋಧ ಪಕ್ಷದವರು ಹೊಡೆದುಕೊಳ್ಳುತ್ತಿದ್ದಾರೆ. ಅವರು ಹೊಡೆದುಕೊಂಡು ಸಾಯಲಿ. ಕೊಲೆಗಳು ಆಗುತ್ತಿರಲಿ, ಅತ್ಯಾಚಾರಗಳು ನಡೆಯುತ್ತಿರಲಿ ಎಂದರೆ ಅದು ಸರಿಯಲ್ಲ. ಮಾನ್ಯ ಮಂತ್ರಿಗಳು ಕೆಳಮನೆಯಲ್ಲಿ ಇರುತ್ತಾರೆ, ಅದನ್ನು ನಾನು ಒಪ್ಪುತ್ತೇನೆ. ಅವರು ವಿಧಾನಸಭೆಗೆ ಆದ್ಯತೆ ಕೊಡಬೇಕು, ಅದಕ್ಕೆ ಕೊಟ್ಟಿದ್ದಾರೆ. ಆದರೆ ಈ ಸದನಕ್ಕೆ ಬರಲು ಅಧಿಕಾರಿಗಳಿಗೆ ಏನು ಸಮಸ್ಯೆ ಸ್ವಾಮಿ. ನಾನು ಮಾತನಾಡಬೇಕೆಂದು ತಾವು ಅವಕಾಶ ಕೊಟ್ಟಿದ್ದೀರಿ. ಐದು ನಿಮಿಷ ಮಾತನಾಡದೇ ಎರಡೇ ನಿಮಿಷದಲ್ಲಿ ಹೇಳುತ್ತೇನೆ. ಸರ್ಕಾರದ ಗಮನಕ್ಕೆ ತರುತ್ತೇನೆ. ಆ ಸಂಬಂಧಪಟ್ಟ ಅಧಿಕಾರಿಗಳ ತಲೆಯೊಳಗಾದರೂ ಹೋಗಬೇಕಲ್ಲವೇ? ಇಷ್ಟೊಂದು ಕೊಲೆ ನಡೆಯುತ್ತಿದೆ. ಅತ್ಯಾಚಾರಗಳು ನಡೆಯುತ್ತಿದೆ ಎನ್ನುವುದನ್ನು ಮಾಧ್ಯಮದಲ್ಲಿ ಮತ್ತು ಪತ್ರಿಕೆಗಳಲ್ಲಿ ಪ್ರಸಾರವಾಗುವುದನ್ನು ಅವರು ನೋಡಿ ಗಮನಿಸುತ್ತಿರುತ್ತಾರೆ. ಇದು ಹೇಗೆ ಎಂದರೆ ತಾವು ಇಲ್ಲಿ ಗಮನಿಸಬೇಕು. ಈ ಅತ್ಯಾಚಾರ ಮತ್ತು ಗೂಂಡಾಗಿರಿ ನಡೆಯುತ್ತಿರುವುದನ್ನು 'ಕಂಡಲ್ಲಿ ಗುಂಡು' ಇಡಬೇಕು. ಇದನ್ನು ಮಾನ್ಯ ಶಾಮನೂರು ಶಿವಶಂಕರಪ್ಪನವರು ಸಚಿವರಾಗಿದ್ದಂತಹ ಸಂದರ್ಭದಲ್ಲಿ ಹೇಳಿದ್ದು. ಈಗ ಯಾರಿಗೆ ಗುಂಡನ್ನು ಇಡಬೇಕು? "ಅತ್ಯಾಚಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಸಿ.ಎಂ., ಗೂಂಡಾ ಕಾಯ್ದೆ ಅಡಿ ಕೇಸ್" ಎಂದು ಹೇಳಲಾಗಿದೆ. ಆದರೆ ನನಗೆ ಅನಿಸುತ್ತದೆ, ಈ ಅಧಿಕಾರಿಗಳ ಮೇಲೆ ಗೂಂಡಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಯ್ದೆಯಡಿ ಕೇಸ್ ದಾಖಲಿಸಿ. ಇಷ್ಟೊಂದು ಕೊಲೆ ಮತ್ತು ಅತ್ಯಾಚಾರಗಳು ಈ ಸಮಾಜದಲ್ಲಿ ನಡೆಯುತ್ತಿದೆ. ಸರ್ಕಾರದ ಗಮನಕ್ಕೆ ತರಲು ಒಂದು ಗಂಟೆ ಮುಂಚಿತವಾಗಿ ನಿಲುವಳಿ ಸೂಚನೆಯನ್ವಯ ನಿಮಗೆ ನೋಟೀಸ್ ಕಳುಹಿಸಿರುತ್ತೇವೆ. ಅದು ಅವರ ಕಛೇರಿಗೆ ಹೋಗಿರುವುದಿಲ್ಲವೇ? ಮಾನ್ಯ ಸಚಿವರ ಬಗ್ಗೆ ನಾನು ಖಂಡಿತವಾಗಿ comment ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಮಂತ್ರಿಗಳ ಬಗ್ಗೆಯೇ ಅವರಿಗೆ ಭಯವಿಲ್ಲ. ಸರ್ಕಾರದ ಬಗ್ಗೆಯೇ ಅಧಿಕಾರಿಗಳಿಗೆ ಭಯವಿಲ್ಲ. ಇನ್ನು ಕೊಲೆಗಡುಕರಿಗೆ ಏಕೆ ಇವರ ಬಗ್ಗೆ ಭಯವಿರುತ್ತದೆ. ಅತ್ಯಾಚಾರಿಗಳಿಗೆ ಏಕೆ ಇವರ ಬಗ್ಗೆ ಭಯ ಇರುತ್ತದೆ. ಅವರು ಕೊಲೆಯನ್ನು ಮಾಡಿಕೊಂಡು ಹೋಗುತ್ತಿರುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ, ಸಭಾನಾಯಕರು:-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೆಲವು ಹಿರಿಯ ಅಧಿಕಾರಿಗಳು ಸದನಕ್ಕೆ ಬಂದಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಈಗ ಸದನಕ್ಕೆ ಬಂದಿರುವುದಕ್ಕೆ ಸಂತೋಷ. ಅದನ್ನು ನಾನು ಇಲ್ಲ ಎನ್ನಲಿಲ್ಲ. ನಮ್ಮ ಗಂಟಲುಗಳು ಕೂಗಿದ ನಂತರ ನಿಮ್ಮ ಬಗ್ಗೆ ಭಯವಿಲ್ಲದಿದ್ದರೂ ಮಾನ್ಯ ವಿರೋಧಪಕ್ಷದ ಭಯಕ್ಕಾದರೂ ಅವರನ್ನು ಕರೆದುಕೊಂಡು ಬನ್ನಿ. ಅದಕ್ಕೆ ಸಂತೋಷ.

**(ಗೊಂದಲ)**

ಇಲ್ಲ ಬಿಡಿ. ಆಯಿತು ಬಿಡಿ, ನಿಮ್ಮ ಭಯಕ್ಕಾದರೂ ಅವರು ಬಂದಿದ್ದಾರೆ. ನಿಮ್ಮ ಭಯಕ್ಕೇನೇ ರಾಜ್ಯದಲ್ಲಿ ಅತ್ಯಾಚಾರಗಳು ನಡೆಯುತ್ತಿಲ್ಲ. ಕೊಲೆಗಳು ನಡೆಯುತ್ತಿಲ್ಲ. ತಾವು ಹೀಗೆಯೇ ನಡೆಸಿಕೊಂಡು ಹೋಗಿ. ಇನ್ನು ಎರಡು-ಮೂರು ತಿಂಗಳು ನಡೆಸಬೇಕು ತಾನೇ, ನಡೆಸಿಕೊಂಡು ಹೋಗಿ, ನಾನು ಏನೂ ಹೇಳುವುದಿಲ್ಲ.

**ಶ್ರೀ ಎಂ.ಆರ್.ಸೀತಾರಾಂ, ಸಭಾನಾಯಕರು:-** ಅದನ್ನು ಜನ ತೀರ್ಮಾನ ಮಾಡುತ್ತಾರೆ. ಮುಂದಕ್ಕೆ ಅದನ್ನು ನೋಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ದಿನಾಂಕ:17.01.2018ರಂದಿನ ವಿಜಯವಾಣಿ ದಿನಪತ್ರಿಕೆಯಲ್ಲಿ ಒಂದು ವಿಷಯ ಪ್ರಕಟವಾಗಿದೆ ಅದನ್ನು ಹೇಳುತ್ತೇನೆ. “ ರಾಜ್ಯದಲ್ಲಿ ಎರಡು ದಿನಕ್ಕೊಮ್ಮೆ ಅತ್ಯಾಚಾರ, ಮೂರು ದಿನಕ್ಕೊಮ್ಮೆ ಕೊಲೆ, ದಲಿತರ ಮೇಲೆ ದೌರ್ಜನ್ಯ ಹೆಚ್ಚಳ” ಎಂದು ಪ್ರಕಟವಾಗಿದೆ. ತಾವು ಇದರ ಮುಖಪುಟವನ್ನು ಓದಬಹುದು. ಸಂಬಂಧಪಟ್ಟ ಅಧಿಕಾರಿಗಳನ್ನು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆದು, ನೀವು ಏನು ಮಾಡುತ್ತಿದ್ದೀರಿ ಎಂದು ಕೇಳುವಂತಹ ಒಂದು ಯೋಚನೆಯನ್ನು ಸರ್ಕಾರ ಮಾಡಲಿಲ್ಲವೆಂದರೆ ಹೇಗೆ? ಪತ್ರಿಕೆಯವರು, ಅವರಿಗೆ ಬೇಕಾದಂತಹ ವಿಷಯವನ್ನು ಪತ್ರಿಕೆಗಳಲ್ಲಿ ಬರೆದುಕೊಂಡು ಹೋಗುತ್ತಾರೆ. ವಿರೋಧ ಪಕ್ಷದವರು ಏನು ಬೇಕಾದರೂ ಕೂಗಿಕೊಂಡು ಹೋಗುತ್ತಾರೆ. ಅತ್ಯಾಚಾರ ಮತ್ತು ಕೊಲೆಗಳು ಪ್ರತಿನಿತ್ಯ ನಡೆಯುತ್ತಲೇ ಇವೆ. ಇದಕ್ಕೆ ಏನು ಉತ್ತರ, ಬರೀ ಹೇಳಿಕೆಗಳೇನಾ. "ಗೂಂಡಾ ಕಾಯ್ದೆಯಡಿ ಅತ್ಯಾಚಾರಿಗಳ ಮೇಲೆ" ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಕೊಟ್ಟಿದ್ದಾರೆ. ಮತ್ತೊಂದು ಕಡೆ ಏನು ಹೇಳುತ್ತಾರೆಂದರೆ, "ಅತ್ಯಾಚಾರಿಗಳನ್ನು ಕಂಡಲ್ಲಿ ಗುಂಡು ಇಕ್ಕಬೇಕು" ಎಂದು ಆಕ್ರೋಶ ಇದೆ. ನಿಮ್ಮ ಆಕ್ರೋಶ, ನಿಮ್ಮ ಹೇಳಿಕೆ, ಆ ಕೊಲೆಗಡುಕರಿಗೆ, ಅತ್ಯಾಚಾರಿಗಳಿಗೆ ಏನೇನೂ ಅದು ನಾಟುತ್ತಲೇ ಇಲ್ಲ. ಇವತ್ತಿನ ಪರಿಸ್ಥಿತಿ ಏನಿದೆ ಎಂದರೆ, ರಾಜ್ಯದಲ್ಲಿ "Bangalore is next only to Delhi in crimes, says NRCB Data" ಎಂದು ದಿನಾಂಕ 1.12.2017ರ TIMES OF INDIA ಪತ್ರಿಕೆಯಲ್ಲಿ ಡಾಟಾ ಕೊಟ್ಟಿದ್ದಾರೆ. ಕೊಲೆಗಳು; ದೆಹಲಿಯಲ್ಲಿ ಶೇ.21 ರಷ್ಟು ಇದ್ದು, ಬೆಂಗಳೂರಿನಲ್ಲಿ ಶೇ.10 ರಷ್ಟು ಇದ್ದು ಎರಡನೇ ಸ್ಥಾನದಲ್ಲಿದೆ. ಕಿಡ್ನ್ಯಾಪ್ ಮತ್ತು ರೇಪ್‌ಗಳು; ದೆಹಲಿಯಲ್ಲಿ ಶೇ.48 ಇದ್ದು ಮೊದಲನೆಯ ಸ್ಥಾನದಲ್ಲಿದೆ. ಬಾಂಬೆ ಶೇ.16 ಇದ್ದು, ಎರಡನೆಯ ಸ್ಥಾನದಲ್ಲಿದೆ. ಬೆಂಗಳೂರು 3ನೇ ಸ್ಥಾನದಲ್ಲಿದೆ. ಇದರ ಬಗ್ಗೆ ಇಷ್ಟೆಲ್ಲಾ ಆಗುತ್ತಿರುವಂತಹ ಸಂದರ್ಭದಲ್ಲಿ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಸರ್ಕಾರದ ಬಗ್ಗೆ ಇವರಿಗೆ ಭಯವೇ ಇಲ್ಲ. ಕೊಲೆಗಡುಕರಿಗೆ ಮತ್ತು ಅತ್ಯಾಚಾರಿಗಳಿಗೆ ಯಾರಿಗೂ ಕೂಡ ಭಯವೇ ಇಲ್ಲ. ಕೊಲೆ ಆಗುತ್ತದೆ. ಹಾಗೊಂದು, ಹೀಗೊಂದು ಬಹಳ ಗಲಾಟೆಗಳು ಮಾಡಿ, ಹೋರಾಟಗಳನ್ನು ಮಾಡಿದ ನಂತರ ಕೆಲವರನ್ನು ಬಂಧಿಸುತ್ತಾರೆ. ಇಲ್ಲವೆಂದರೆ, ಪೊಲೀಸ್ ಠಾಣೆಗಳಲ್ಲಿ ಅವರಿಗೆ ಬಿರಿಯಾನಿ ಕೊಟ್ಟು ಕಳುಹಿಸುವಂತಹ ಉದಾಹರಣೆಗಳನ್ನು ನಾನು ನೋಡಿದ್ದೇನೆ. ಅವರನ್ನು ಕೋರ್ಟ್‌ಗೆ ಕಳುಹಿಸುತ್ತಾರೆ, ಅವರಿಗೆ bail ಸಿಗುತ್ತದೆ. ಅವರು ಹೊರಗಡೆ ಬಂದು ಮತ್ತೆ ಅದೇ ದಂಧೆ ಮಾಡುತ್ತಾರೆ. ಮಾನ್ಯ ಉಗ್ರಪ್ಪನವರು ಅತ್ಯಾಚಾರದ ಬಗ್ಗೆ ಅವರು ಎಷ್ಟು ನೊಂದುಕೊಂಡು ಹೇಳಿದ್ದಾರೆ. ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಏನೆಂದರೆ, " ಈ ಸಮಿತಿಯು ತನ್ನ ವರದಿಯನ್ನು ಡಿಸೆಂಬರ್-2015ರಲ್ಲಿ ಸರ್ಕಾರಕ್ಕೆ ಕಳುಹಿಸಿದ್ದರೂ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ" ಎಂದು ಮಾನ್ಯ ಉಗ್ರಪ್ಪನವರು ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಅವರು ಇಡೀ ಕರ್ನಾಟಕ ರಾಜ್ಯವನ್ನು ಸುತ್ತಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹೆಣ್ಣು ಮಕ್ಕಳಿಗೆ ಅತ್ಯಾಚಾರವಾಗಿರತಕ್ಕಂತಹ ಸಂದರ್ಭದಲ್ಲಿ ಅವರ ಅಕ್ಕ-ತಂಗಿಯರು ಎಂದು ತಿಳಿದುಕೊಂಡು, ಅವರ ಮನೆಗೆ ಭೇಟಿ ನೀಡಿ, ಅವರಿಗೆ ಸಾಂತ್ವನ ಹೇಳ ಬಂದಿದ್ದಾರೆ. ಅವರು ಅದನ್ನೆಲ್ಲಾ ಅಧ್ಯಯನ ಮಾಡಿ, ವರದಿಯನ್ನು ಕೊಟ್ಟಿದ್ದಾರೆ. ಡಿಸೆಂಬರ್-2015ರಲ್ಲಿ ಕೊಟ್ಟಂತಹ ವರದಿಗೆ ಇವತ್ತಿನವರೆಗೂ ಸರ್ಕಾರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಪಂದಿಸುತ್ತಿಲ್ಲವೆಂದರೆ, ಈ ಸರ್ಕಾರಕ್ಕೆ ನಾವು ಏನೆಂದು ಕರೆಯಬೇಕು. ಈ ಸಮಿತಿಯನ್ನು ಏಕೆ ಮಾಡಬೇಕಾಗಿತ್ತು. ರಾಜ್ಯದ ಜನತೆಯ ಕಣ್ಣೊರೆಸುವುದಕ್ಕೆ ಸಮಿತಿಯನ್ನು ಮಾಡಿರುವುದೇ? ಅತ್ಯಾಚಾರಗಳು ನಡೆಯುತ್ತಿವೆ, ಇದನ್ನು ತಡೆಯುತ್ತೇವೆಂದು ತೋರಿಸುವುದಕ್ಕೋಸ್ಕರ ಮಾನ್ಯ ಉಗ್ರಪ್ಪನವರ ನೇತೃತ್ವದಲ್ಲಿ ಸಮಿತಿಯನ್ನು ಮಾಡಿದ್ದೀರಾ? ಅವರು ವರದಿ ಕೊಟ್ಟಿರುವ ಬಗ್ಗೆ ಕನಿಷ್ಟಪಕ್ಷ ಗ್ಲಾನ್ಸ್ ಮಾಡಿದ್ದೀರಾ? ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಿಮಗೆ ಅನ್ನಿಸಲಿಲ್ಲವೇ? ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, "ಅತ್ಯಾಚಾರಿಗಳಿಗೆ ಕರ್ನಾಟಕ ರಾಜ್ಯದಲ್ಲಿ ಸ್ವರ್ಗ"ವಾಗಿದೆ. ಇಲ್ಲಿ ಏನು ಬೇಕಾದರೂ ಮಾಡಬಹುದು, ಎಷ್ಟೊತ್ತು ಬೇಕಾದರೂ ಮಾಡಬಹುದು. ಆದ್ದರಿಂದ ನಾನು ತಮಗೆ ಕೈಮುಗಿದು ಹೇಳುತ್ತೇನೆ, ಇದರ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ. ಆದರೆ, ನನಗೆ ಅನ್ನಿಸುವುದೇನೆಂದರೆ, ಮೊದಲ ಅವಕಾಶವನ್ನು ಮಾನ್ಯ ಉಗ್ರಪ್ಪನವರಿಗೆ ಕೊಡಬೇಕು. ಅವರ ನೋವನ್ನು ಅವರು ಹೇಳಿಕೊಳ್ಳಲಿ. ಇದನ್ನು ತಡೆಯಬೇಕೆಂದರೆ, ಇನ್ನು ಮೂರು ತಿಂಗಳ ಅಧಿಕಾರಾವಧಿಯಲ್ಲಿ ನೀವು ಇನ್ನೆಷ್ಟರಮಟ್ಟಿಗೆ ಇದನ್ನು ಜಾರಿಗೆ ತರುತ್ತೀರೋ ಅಥವಾ ಬಿಡುತ್ತೀರೋ ಗೊತ್ತಿಲ್ಲ. ಆದರೆ, ಇದನ್ನು ಜಾರಿಗೆ ತರುವ ದಿಕ್ಕಿನಲ್ಲಿ ಪ್ರಯತ್ನ ನಡೆಸಬೇಕಾಗುತ್ತದೆ. ಮಾನ್ಯ ಉಗ್ರಪ್ಪನವರು ಇದರ ಬಗ್ಗೆ ಸಾಕಷ್ಟು ಹೋರಾಡಿದ್ದಾರೆ. ಅವರು ಏಕೆ ಹೋರಾಡಿದರು ಎಂದರೆ, ಅವರಿಗೆ ಇರುವಂತಹ ಜವಾಬ್ದಾರಿ. ಆದರೆ ಅವರಿಗೆ ಇರುವಂತಹ ಜವಾಬ್ದಾರಿ ಸರ್ಕಾರಕ್ಕೆ ಹಾಗೂ ಅಧಿಕಾರಿಗಳಿಗೆ ಇರುವುದು ಬೇಡವೇ? ಮಾನ್ಯ ಉಗ್ರಪ್ಪನವರು ನೀಡಿರುವ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಇವರಿಗೆ ಏನು ತೊಂದರೆ ಇದೆ, ಏನು ಕಷ್ಟ. ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಯಾರು ಅಡ್ಡ ಬಂದಿದ್ದಾರೆ? ಮಾನ್ಯ ಸಭಾಪತಿಯವರೇ, ನಾನು ಇದನ್ನು ತುಂಬಾ ನೊಂದುಕೊಂಡು ಹೇಳುತ್ತಿದ್ದೇನೆ. ಆರು ವರ್ಷದ ಕಂದಮ್ಮನ ಮೇಲೆ ಅತ್ಯಾಚಾರವಾಗಿದೆ. 60 ವರ್ಷದ ವೃದ್ಧೆಯ ಮೇಲೆ ಅತ್ಯಾಚಾರವಾಗಿದೆ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ, ಭಾರತ ದೇಶದಲ್ಲಿ "ಹೆಣ್ಣು, ಮಕ್ಕಳನ್ನು ಹಡೆಯುವ ಯಂತ್ರ" ಎಂದು ಕರೆಯುತ್ತಾರೆ. " ಭೋಗದ ವಸ್ತು" ಎಂದು ಕರೆಯುತ್ತಾರೆ. ಆದರೆ ಭಾರತದಲ್ಲಿ ಮಾತ್ರ "ಹೆಣ್ಣನ್ನು ತಾಯಿ" ಎಂದು ಕರೆಯುವ ದೇಶವಾಗಿದೆ. ಈ ತಾಯಿ ಎಂದು ಕರೆಯುವಂತಹ ನಮ್ಮ ದೇಶದಲ್ಲಿ, ಪ್ರತಿನಿತ್ಯ ಬೆಳಗ್ಗೆಯಿಂದ ಸಂಜೆಯವರೆಗೆ ಪತ್ರಿಕೆಗಳಲ್ಲಿ ನೋಡಿದಾಗ, ಅತ್ಯಾಚಾರಗಳು ನಡೆಯುತ್ತಿವೆ ಎಂದರೆ ಇದಕ್ಕೆ ನಾವು ಏನು ಹೇಳಬೇಕು. ರಾಜ್ಯದಲ್ಲಿ ಎರಡು ದಿನಕ್ಕೊಮ್ಮೆ ಅತ್ಯಾಚಾರ ನಡೆಯುತ್ತಿದೆ. ಇದನ್ನು ನಾನು ಬಹಳ ನೊಂದು ಹೇಳುತ್ತಿದ್ದೇನೆ. ಅದಕ್ಕೋಸ್ಕರ, ಸರ್ಕಾರ ತಕ್ಷಣವೇ ಈ ದಿಕ್ಕಿನಲ್ಲಿ ಏನು ಮಾಡಬೇಕೆನ್ನುವುದರ ಬಗ್ಗೆ ಪೂರ್ಣ ವಿವರ ಕೊಡುವವನಿದ್ದೇನೆ.

**ಸಭಾಪತಿಯವರು:-** ಇದು ಸರಿಯಾದ ಪ್ರಶ್ನೆಯಾಗಿದೆ. ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆಂದು ಕೇಳೋಣ. ನಂತರ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳಿಬಿಡುತ್ತೇನೆ. ನಾನು ಹೆಚ್ಚು ಸಮಯ ಮಾತನಾಡುವುದಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, both jihadi killings and political killings ಬಗ್ಗೆ ಪಟ್ಟಿಯೇ ಸಿಗುತ್ತದೆ. ಇದನ್ನು ನಾನು ಪೊಲೀಸ್ ಇಲಾಖೆಯಿಂದ ತರಿಸಿಕೊಂಡಿದ್ದೇನೆ. ಶ್ರೀ ಪ್ರಶಾಂತ್ ಪೂಜಾರಿಯಿಂದ ಶ್ರೀ ಸಂತೋಷ್‌ವರೆಗೆ 23 ಜನ ಆರ್.ಎಸ್.ಎಸ್., ಮತ್ತು ಭಜರಂಗದಳದ ಕಾರ್ಯಕರ್ತರ ಕಗ್ಗೊಲೆಗಳಾಗಿದೆ. ಈ ಕಗ್ಗೊಲೆಗಳಾದಂತಹ ಸಂದರ್ಭದಲ್ಲಿ ..

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೇ, ಬೇರೆಯವರು ಸಹ ಸತ್ತಿದ್ದಾರೆ, ನೀವು ಬರೀ ಆರ್.ಎಸ್.ಎಸ್., ಮತ್ತು ಬಿಜೆಪಿ ಎಂದು ಏಕೆ ಹೇಳುತ್ತಿದ್ದೀರಿ. ಸತ್ತವರೆಲ್ಲರೂ human beings ಅಲ್ಲವೇ? ಎಲ್ಲರೂ ಮನುಷ್ಯರೇ ತಾನೆ. ಅವರ ಬಗ್ಗೆಯೂ ಕೂಡ ತಾವು ಉಲ್ಲೇಖ ಮಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅದನ್ನು ಸಹ ಹೇಳುತ್ತೇನೆ. ಕರ್ನಾಟಕದಲ್ಲಿ ಯಾವ ರೀತಿ ಅತ್ಯಾಚಾರಿಗಳಿಗೆ ಸ್ವರ್ಗವೋ, ಅದೇ ರೀತಿ ಕೊಲೆಗಡುಕರಿಗೂ ಕೂಡ ಸ್ವರ್ಗ. ಅದು ಹಿಂದೂ ಅಥವಾ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಎಂಬುದಲ್ಲ. ಕೊಲೆಗಡುಕರಿಗೂ ಕೂಡ ಕರ್ನಾಟಕ ರಾಜ್ಯ ಇವತ್ತಿನ ದಿವಸ ಒಂದು ರೀತಿಯ ಸ್ವರ್ಗವಾಗಿದೆ. ಈ ಕೊಲೆಗಡುಕರ ಬೆಂಬಲಕ್ಕೆ ಸಾಕಷ್ಟು ಜನ ಇದ್ದಾರೆ. ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಮಾನ್ಯ ಶಾಸಕರಾದ ಶ್ರೀ ಸಿ.ಟಿ.ರವಿಯವರಿಗೆ ಇತ್ತೀಚೆಗೆ ಒಂದು ಬೆದರಿಕೆ ಪತ್ರ ಬಂದಿದೆ. ನನಗೂ ಸಹ ಕೊಲೆ ಬೆದರಿಕೆ ಬಂದಿದೆ ಎಂದು ಇದೇ ವಿಧಾನ ಪರಿಷತ್ತಿನಲ್ಲಿ ಕಳೆದ ಬಾರಿ ಪ್ರಸ್ತಾಪ ಮಾಡಿದ್ದೇನೆ.

**(ಮುಂದು. . .)**

<u>**(06)06.02.2018/11.20/ಎಂಎಂ-ಎಂಡಿ**</u>

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):-**

ಕೊಲೆ ಬೆದರಿಕೆ ಪತ್ರ ಬಂದಿದೆಯೆಂದು ಹಿಂದೆ ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಿದಾಗ complaint ಕೊಡಿ ತಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಸಭಾನಾಯಕರಾಗಿದ್ದ ಮಾನ್ಯ ಎಸ್.ಆರ್. ಪಾಟೀಲ್‌ರವರು ಹೇಳಿದ್ದರು. ಅದರಂತೆ ನಾನು complaint ಕೊಟ್ಟಿದ್ದೇನೆ. Complaint ಕೊಟ್ಟು ಒಂದು ವರ್ಷವಾಗುತ್ತಿದೆ. ಮೂರು ದಿವಸದ ಕೆಳಗೆ ಪೊಲೀಸ್ ಅಧಿಕಾರಿಗಳು ನನಗೆ ಒಂದು ಪತ್ರವನ್ನು ಕೊಟ್ಟರು. ಆ ಪತ್ರವನ್ನು ನೋಡಿ ಬೆದರಿಕೆ ಪತ್ರ ಕಳುಹಿಸಿದ್ದವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂಧಿಸಿರಬಹುದೆಂದು ನನಗೆ ಸಂತೋಷವಾಯಿತು. ಒಂದು ವರ್ಷಪೂರ್ತಿ ನಾವು ಸರ್ವೇ ಮಾಡಿದ್ದೇವೆ, ಕೊಲೆಗಡುಕರು, ಬೆದರಿಕೆ ಪತ್ರ ಕೊಟ್ಟವರು ನಮಗೆ ಸಿಗಲಿಲ್ಲ, ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯ ಮಾಡಿದ್ದೇವೆಂದು ಆ ಪತ್ರದಲ್ಲಿ ತಿಳಿಸಿದ್ದರು. ಇದರಿಂದ ಸರ್ಕಾರಕ್ಕೆ ನಾಚಿಕೆಯಾಗಬೇಕು. ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಇದು ವೈಯಕ್ತಿಕವಾಗಿ ಈಶ್ವರಪ್ಪನ ಪ್ರಶ್ನೆಯಲ್ಲ. ನಾನು ಕೊಲೆಯಾದರೆ ನನ್ನಂತಹ ಲಕ್ಷಾಂತರ ಕಾರ್ಯಕರ್ತರು ನನ್ನ ವಿಚಾರವನ್ನಿಟ್ಟಿಕೊಂಡಿರುವವರು ರಾಜ್ಯದಲ್ಲಿದ್ದಾರೆ. ಆ ವಿಚಾರ ಮುಂದುವರೆಯುತ್ತದೆ. ಆದರೆ ಸರ್ಕಾರ ಬದುಕಿದೆಯೋ ಅಥವಾ ಸತ್ತಿದೆಯೋ ಎಂದು ಕೇಳಬೇಕಲ್ಲವೇ. ನಾನು ಏಕೆ ಈ ಎಲ್ಲಾ ಅಂಶಗಳನ್ನು ಕೂಡ ಚರ್ಚೆ ಮಾಡಬೇಕಾಗಿದೆ ಎಂದರೆ, ಕೊಲೆ, ಸುಲಿಗೆ, ಅತ್ಯಾಚಾರ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ಕಾಂಗ್ರೆಸ್ ಸರ್ಕಾರದಲ್ಲಾಗಿರುವಷ್ಟು ಹಿಂದೆಂದೂ ಆಗಿಲ್ಲ, ಇದನ್ನು ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು.

**ಸಭಾನಾಯಕರು:–** ಮಾನ್ಯ ಸಭಾಪತಿಯವರೇ, ಕ್ರೈಂ ಬಗ್ಗೆ ಸರ್ಕಾರವಾಗಿ ನಾವು ಕಳೆದ ನಾಲ್ಕು ವರ್ಷ ಒಂಭತ್ತು ತಿಂಗಳು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಆ ಪೈಕಿ ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆ. ಈ crime rate ಆಗಲೀ ಮತ್ತೊಂದರ ಬಗ್ಗೆ ನಿನ್ನೆ ತಾನೇ ಮಾನ್ಯ ಮುಖ್ಯಮಂತ್ರಿಯವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ. 2008 ರಿಂದ 2013ವರೆವಿಗೂ ಆಗಿರುವ crime rate ಗಿಂತ ಈಗ 2013 ರಿಂದ 2018ವರೆಗೂ ಏನು ಕ್ರೈಂ ರೇಟ್ ಆಗುತ್ತಿದೆ ಅದರೊಳಗೆ ಶೇ.2ರಷ್ಟು ಇಳಿತವಾಗಿದೆ. ಸರ್ಕಾರ ಜವಾಬ್ದಾರಿಯಿಂದ ಗೃಹ ಇಲಾಖೆಯನ್ನು ನಿರ್ವಹಿಸುತ್ತಿದೆ. ಎಲ್ಲಾ ಮಾನ್ಯ ಸದಸ್ಯರ ಅನಿಸಿಕೆಗಳನ್ನು ತಿಳಿದು ಸರ್ಕಾರ ಉತ್ತರ ಕೊಡಲು ತಯಾರಿದೆ.

**ಸಭಾಪತಿಯವರು:–** ಈಗ adjournment motion ಒಪ್ಪಿಕೊಳ್ಳುತ್ತೀರೋ?

**ಸಭಾನಾಯಕರು:–** ಮೊದಲು ಪ್ರಶ್ನೋತ್ತರಗಳನ್ನು ನಡೆಸಿ, ನಂತರ ಅದನ್ನು ಬೇರೆ ನಿಯಮದಡಿಯಲ್ಲಿ ತೆಗೆದುಕೊಳ್ಳಿ.

**ಸಭಾಪತಿಯವರು:–** ಈಗ ವಿಷಯದ ಗಾಂಭೀರ್ಯವನ್ನು ಸರ್ಕಾರ ಒಪ್ಪಿರುವ ಹಿನ್ನೆಲೆಯಲ್ಲಿ, ನಿಲುವಳಿ ಸೂಚನೆ ಮೂಲಕ ಕೊಟ್ಟಿರುವಂತಹ ವಿಷಯ, ನಿಯಮ 68ರಡಿಯಲ್ಲಿ ಚರ್ಚೆ ಮಾಡಲು ಅವಕಾಶವನ್ನು ಕೊಡುತ್ತೇನೆ. ಅದಕ್ಕೆ ಸಮಯವನ್ನು ನಿಗದಿ ಮಾಡುತ್ತೇನೆ. ಆಗ ಚರ್ಚೆ ಮಾಡೋಣ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಾದರೆ ಇವತ್ತೇ ಅವಕಾಶ ಮಾಡಿಕೊಡುತ್ತೇನೆ. ಮಧ್ಯಾಹ್ನ ಊಟದ ನಂತರ ಅದನ್ನು ತೆಗೆದುಕೊಳ್ಳೋಣ. ಪ್ರಶ್ನೋತ್ತರಗಳನ್ನು ತೆಗೆದುಕೊಂಡು ನಂತರ ಬಾಕಿ ವಿಷಯಗಳಿಗೆ ಹೋಗೋಣ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೇ, ಕೆಳ ಮನೆಯಲ್ಲಿಯೂ ಕೂಡ ಇದೇ ವಿಷಯದ ಮೇಲೆ adjournment motion ಕೊಟ್ಟಿರುವುದರಿಂದ ಒಂದು ವೇಳೆ ಮಧ್ಯಾಹ್ನ ಆಗದಿದ್ದರೆ, ಮಾನ್ಯ ಸಚಿವರು ಹೇಳಿದ ಹಾಗೆ ನಾಳೆ ತೆಗೆದುಕೊಳ್ಳಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರ ಜೊತೆಗೆ ಮಧ್ಯಾಹ್ನ ಚರ್ಚೆ ಮಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾನಾಯಕರಿಗೆ ಶಕ್ತಿ ಇದೆ. ಅವರನ್ನೇಕೆ ಮಾನ್ಯ ಮುಖ್ಯಸಚೇತಕರು overtake ಮಾಡಲು ಹೋಗುತ್ತಾರೆ?

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ ಪ್ರಾರಂಭವಾಗುತ್ತಿದೆ, ಮತ್ತೊಮ್ಮೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಈ ದಿನ list ಆಗಿರುವಷ್ಟು ಪ್ರಶ್ನೆಗಳನ್ನು ಮುಗಿಸಬೇಕೆಂದರೆ, ಪ್ರಶ್ನೆ ಕೇಳುವವರು ಯಾರು ಯಾರು ಇದ್ದೀರಿ ಅವರ ಹೆಸರುಗಳನ್ನು ನಾನು ಹೇಳುವುದಿಲ್ಲ, ತಮ್ಮ ಉಪಪ್ರಶ್ನೆ ಏನೆಂದು ನೇರವಾಗಿ ಕೇಳಿ. ಹಾಗೆಯೇ ಗೌರವಾನ್ವಿತ ಸಚಿವರುಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಮಾನ್ಯ ಸದಸ್ಯರು ಏನು ಉಪಪ್ರಶ್ನೆಯನ್ನು ಕೇಳಿರುತ್ತಾರೆ ಅದಕ್ಕೆ ನೇರವಾಗಿ ಅಷ್ಟಕ್ಕೆ ಮಾತ್ರ ಉತ್ತರ ಹೇಳಿ, ಅದಕ್ಕೆ ವಿವರಣೆಯನ್ನು ತೀರಾ ಅವಶ್ಯಕತೆ ಬಿದ್ದಾಗ ಮಾತ್ರ ಅವಕಾಶ ಕೊಡುತ್ತೇನೆ. ಉದ್ದುದ್ದ ಉತ್ತರಗಳನ್ನು ಕೊಟ್ಟರೆ ಉದ್ದುದ್ದ ಪ್ರಶ್ನೆಗಳನ್ನು ಕೇಳಿದರೆ, ಮೊನ್ನೆ ತಾನೇ ಒಂದು ಸಣ್ಣ ಘಟನೆ ನಡೆದಿದ್ದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸ್ವಾಭಾವಿಕವಾಗಿ ಅಧಿವೇಶನಕ್ಕೆ ಮೂರ್ನಾಲ್ಕು ದಿನಗಳ ಮುಂಚೆ ಪತ್ರಿಕಾ ಗೋಷ್ಠಿ ಕರೆದು ಮಾಧ್ಯಮದ ಮಿತ್ರರೆದುರಿಗೆ ಸಭೆಯನ್ನು ಹೀಗೆಲ್ಲಾ ನಡೆಸುತ್ತೇವೆಂದು ಹೇಳಿದಾಗ, ಮಾಧ್ಯಮದ ಮಿತ್ರರು ಒಂದು ಮಾತನ್ನು ಏನು ಹೇಳಿದರು ಎಂದರೆ ತಮ್ಮ ಸದನದಲ್ಲಿ Question Hour ಆಗಬೇಕೇ ಹೊರತು, Question Hours ಆಗುತ್ತಿದೆ, ದಯವಿಟ್ಟು ಇದನ್ನು ತಾವು ಗಮನಿಸಿ ಎಂದು ಹೇಳಿ ಮಾಧ್ಯಮದ ಮಿತ್ರರು ನನ್ನ ಗಮನ ಸೆಳೆಯುವ ಪ್ರಯತ್ನ ಮಾಡಿದರು. ಆಗ ಅದಕ್ಕೆ ನಾನು ಇದರ ಬಗ್ಗೆ ಸದನದಲ್ಲಿ ಹೇಳುತ್ತೇನೆ, ಗೌರವಾನ್ವಿತ ಸದಸ್ಯರು ಮತ್ತು ಗೌರವಾನ್ವಿತ ಸಚಿವರುಗಳ ಸಹಕಾರವನ್ನು ಕೇಳುತ್ತೇನೆ ಎಂದು ಹೇಳಿದ್ದೇನೆ. ಇದನ್ನು ದಯಮಾಡಿ ಎಲ್ಲರೂ ಕೇಳಿಸಿಕೊಂಡಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ಈಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 02. ಪ್ರಶ್ನೋತ್ತರಗಳು:

### ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

**ಚುಕ್ಕೆ ಪ್ರಶ್ನೆ ಸಂಖ್ಯೆ:- 49**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಪಶುವೈದ್ಯರ ಕೊರತೆ ರಾಜ್ಯದಲ್ಲಿ ಇದ್ದು ಸುಮಾರು 742 ಪಶುವೈದ್ಯರ ನೇಮಕಾತಿ ಪ್ರಕ್ರಿಯೆ ಇದ್ದು, ಅದನ್ನು ಸ್ವಲ್ಪ ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಗ್ರಾಮ ಪಂಚಾಯಿತಿ ಮಟ್ಟದೊಳಗೆ ಪಶು ವೈದ್ಯ ಸಹಾಯಕರದ್ದು 1068 ಹುದ್ದೆಗಳ ನೇಮಕಾತಿಗೆ ಕ್ರಮ ವಹಿಸುತ್ತೇವೆಂದು, ಹಾಗೂ 'ಡಿ' ದರ್ಜೆಯ ಸುಮಾರು 4277 ಹುದ್ದೆಗಳ ನೇಮಕಾತಿಗೆ ಚಿಂತನೆ ಮಾಡುತ್ತೇವೆಂದು ಹಾಗೂ ಹೈದರಾಬಾದ್-ಕರ್ನಾಟಕದಲ್ಲಿ 126 ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿದ್ದೇವೆಂದು, ಒಟ್ಟಾರೆ ರಾಜ್ಯದೊಳಗೆ 6213 ಹುದ್ದೆಗಳು ಖಾಲಿ ಇವೆ ಎನ್ನುವುದು ಸಚಿವರು ಕೊಟ್ಟಿರುವ ಅಂಕಿ ಸಂಖ್ಯೆಗಳ ಪ್ರಕಾರ ಲೆಕ್ಕ ಮಾಡಿದ್ದೇನೆ.

**ಸಭಾಪತಿಯವರು:-** ವಿವರಣೆ ಬೇಡ, ನಿಮ್ಮ ಪ್ರಶ್ನೆ ಏನೆಂದು ಕೇಳಿ. ಅದೆಲ್ಲಾ ಲಿಖಿತ ಉತ್ತರದಲ್ಲಿದೆ. What is it you want from the Government?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯೇನೆಂದರೆ, ರಾಜ್ಯದೊಳಗೆ ಸುಮಾರು 6213 ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಸಮರ್ಪಕವಾಗಿ ಜಾನುವಾರುಗಳ ಚಿಕಿತ್ಸೆಯನ್ನು ಸರ್ಕಾರ ಹೇಗೆ ಮಾಡುತ್ತದೆ? ಮನುಷ್ಯರ ಆರೋಗ್ಯ ಎಷ್ಟು ಮುಖ್ಯವೋ ಜಾನುವಾರುಗಳ ಆರೋಗ್ಯ ಅಷ್ಟೇ ಮುಖ್ಯವಾಗಿದೆ. ಇವತ್ತು ಪಶುಗಳಿಗೆ ತೊಂದರೆಯಾದಾಗ . .

**ಸಭಾಪತಿಯವರು:-** ಪ್ರಶ್ನೆ ಕೇಳಿ. Don't make a statement. It is a Question Hour.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಪಶುಗಳಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಕೊಡಲು ಯಾರೂ ಇಲ್ಲದಿದ್ದರೆ ಪಶುಗಳು ಸತ್ತು ಹೋದರೆ ಅದಕ್ಕೆ ಯಾರು ಹೊಣೆ? ಸರ್ಕಾರಕ್ಕೆ ಕಾಳಜಿ ಇದೆಯೋ ಇಲ್ಲವೋ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ದಯವಿಟ್ಟು ಕ್ಷಮಿಸಿ, ಇದನ್ನು ನಾನು ಎಲ್ಲರಿಗೂ ಹೇಳುತ್ತಿದ್ದೇನೆ. It is a Question Hour. Don't make a statement. ಸುಮಾರು 6200 ಹುದ್ದೆಗಳು ಖಾಲಿ ಇದೆ ಅವುಗಳನ್ನು ಯಾವ ರೀತಿಯಲ್ಲಿ ತುಂಬುತ್ತೀರಿ ಎಂದು ಕೇಳುತ್ತಿದ್ದಾರೆ ಅದಕ್ಕೆ ಉತ್ತರವನ್ನು ಹೇಳಿ.

**ಶ್ರೀ ಎ. ಮಂಜು:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಕೇಳಿರುವುದಕ್ಕೆ ಬಹುಶಃ ಉತ್ತರವನ್ನು ಕೊಟ್ಟಿದ್ದೇವೆ. ಇವತ್ತು ಸುಮಾರು 5000 ಜಾನುವಾರುಗಳಿಗೆ ಒಂದು ಆಸ್ಪತ್ರೆ ಇರಬೇಕೆಂದು ನಿಯಮ ಇದೆ. ಸುಮಾರು 1.2 ಕೋಟಿ ಜಾನುವಾರುಗಳಿವೆ. 1.43 ಲಕ್ಷ ಎಮ್ಮೆಗಳಿವೆ, ಈ ಆಧಾರವನ್ನು ಎಲ್ಲಾ ರೀತಿಯಲ್ಲಿಯೂ ಲೆಕ್ಕ ಹಾಕಿದಾಗ ಸುಮಾರು 5000 ಜಾನುವಾರುಗಳಿಗೆ ಒಂದು ಘಟಕದಂತೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದು ಇದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು 4215 ಪಶು ವೈದ್ಯಕೀಯ ಚಿಕಿತ್ಸಾಲಯಗಳಿವೆ. ನಮ್ಮ ratio ಪ್ರಕಾರ ಇರಬೇಕಾಗಿದ್ದು ಕೇವಲ ಮೂರು ಸಾವಿರ ಚಿಲ್ಲರೆ. ಆದರೆ ಜಾನುವಾರುಗಳ population ಆಧಾರಕ್ಕಿಂತ ಜಾಸ್ತಿ ಇದೆ ಎನ್ನುವುದನ್ನು ಅವರ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ಜೊತೆಗೆ ವೈದ್ಯರುಗಳು ಮತ್ತು ಸಿಬ್ಬಂದಿಗಳ ಕೊರತೆ ಬಗ್ಗೆ ಕೇಳಿದ್ದಾರೆ. ಈಗಾಗಲೇ ಹುದ್ದೆಗಳನ್ನು ತುಂಬಲು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸುಮಾರು 476 ವೈದ್ಯರುಗಳನ್ನು ಈಗಾಗಲೇ ನೇಮಕ ಮಾಡಿಕೊಂಡಿದ್ದೇವೆ. ಪೋಸ್ಟಿಂಗ್ ಮಾಡುವ ಬಗ್ಗೆ ಇಂದು ಮಧ್ಯಾಹ್ನ ಮುಖ್ಯಕಾರ್ಯದರ್ಶಿಯವರ ಜೊತೆ ಒಂದು ಸಭೆ ಇದ್ದು ಅದರಲ್ಲಿ ತೀರ್ಮಾನವಾಗುತ್ತದೆ. ಜೊತೆಗೆ 126 ಹುದ್ದೆಗಳನ್ನು ಅದರ ಜೊತೆಯಲ್ಲಿಯೇ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. 476 ವೈದ್ಯರುಗಳ ಹುದ್ದೆಯಲ್ಲಿ 46 ಹುದ್ದೆಗಳು ಹೈದರಾಬಾದ್-ಕರ್ನಾಟಕದಲ್ಲಿ ಬಂದಿದೆ. ಅವೆರಡು ಕೂಡ ಕೊರತೆಯಾಗುತ್ತದೆಂದು ಅದನ್ನು ಜೊತೆಗೆ ಮಾಡಬೇಕೆಂದು ಇಂದಿನ ಸಭೆಯಲ್ಲಿ ಈಡೇರಿಸುವ ಕ್ರಮ ತೆಗೆದುಕೊಂಡಿದ್ದೇವೆ. ಜೊತೆಗೆ 'ಡಿ' ಗ್ರೂಪ್‌ನ ಸುಮಾರು 4000 ಹುದ್ದೆಗಳಿಗೆ ಖಾಯಂ ಆಗಿ ತೆಗೆದುಕೊಳ್ಳುವುದಕ್ಕೆ ಅನುಮತಿ ಕೇಳಿದ್ದೇವೆ. 'ಡಿ' ಗ್ರೂಪ್‌ನ ಸುಮಾರು 1500 ಜನರನ್ನು ನಾವು ಈಗ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ. ಅದು ನಮ್ಮ ಗಮನದಲ್ಲಿದ್ದು, ಅವರುಗಳನ್ನು ಕೂಡಲೇ ನೇಮಕಾತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸರ್ಕಾರದ ಮುಂದೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ.

**ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಎಸ್.ವಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ಉಪ ಪ್ರಶ್ನೆಯನ್ನು ಕೇಳಿದ್ದೇನೆ, ಉಳಿದವನ್ನು ಕೇಳುವುದಕ್ಕೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ನಿಮ್ಮ ಪ್ರಶ್ನೆ ಏನು? What is your question? ನೀವು ಪೀಠಿಕೆ ಹಾಕುವುದಕ್ಕೆ ಎರಡು ನಿಮಿಷ ತೆಗೆದುಕೊಂಡರೆ ಹೇಗೆ?

**ಶ್ರೀ ಎಸ್.ವ್ಹಿ. ಸಂಕನೂರ:–** ಒಟ್ಟು ಸುಮಾರು 6000 ಹುದ್ದೆಗಳು ಖಾಲಿ ಇಟ್ಟುಕೊಂಡು ಜಾನುವಾರುಗಳಿಗೆ ಹೇಗೆ ಸರಿಯಾದ ಚಿಕಿತ್ಸೆಯನ್ನು ಕೊಡುತ್ತಾರೆ?

**Mr. CHAIRMAN:-** Ask your question.

**ಶ್ರೀ ಎಸ್.ವ್ಹಿ. ಸಂಕನೂರ:–** ಇವೆಲ್ಲಾ ನೇಮಕಾತಿ ಪ್ರಕ್ರಿಯೆಯಲ್ಲಿವೆ ಎಂದು ಹೇಳುತ್ತಾರೆ. ನನ್ನ ಎರಡನೇ ಉಪ ಪ್ರಶ್ನೆಯೇನೆಂದರೆ, ಗದಗ ಜಿಲ್ಲೆಯ 'ಸೊರಟೂರು' ಗ್ರಾಮದಲ್ಲಿರುವ ಪಶು ಆಸ್ಪತ್ರೆಯ ಬಗ್ಗೆ ಪತ್ರಿಕೆಯಲ್ಲಿ ಬಂದ ನಂತರ ಆ ಪಶು ಆಸ್ಪತ್ರೆಯನ್ನು ರಿಪೇರಿ ಮಾಡಿಸುತ್ತಾರೆ ಎಂದರೆ ಇದು ಪತ್ರಿಕೆಯಲ್ಲಿ ಬರಬೇಕೇ? ಈ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬರೆದಿದ್ದಾರೆ.

**ಸಭಾಪತಿಯವರು:–** ರಿಪೇರಿ ಮಾಡಿಸಿದ್ದಾರೋ ಇಲ್ಲವೋ?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದು ಇಷ್ಟೇ.

**ಸಭಾಪತಿಯವರು:–** ಪತ್ರಿಕೆಯಲ್ಲಿ ಬಂದ ಮೇಲಾದರು ರಿಪೇರಿ ಮಾಡಿಸಿದ್ದಾರೆ ಎಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಪತ್ರಿಕೆಯಲ್ಲಿ ಬಂದಾಗ ನಾನು ಪ್ರಶ್ನೆಗಳನ್ನು ಕಳುಹಿಸಿದ್ದೇನೆ ಆಗ ಅವರು ರಿಪೇರಿ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಈಶ್ವರಪ್ಪನವರು ಪತ್ರಿಕೆಯಲ್ಲಿ ಬಂದರೂ ರಿಪೇರಿ ಮಾಡುವುದಿಲ್ಲ ಎಂದು ಹೇಳಿದರು. ಆದರೆ ಇಲ್ಲಿ ಪತ್ರಿಕೆಯಲ್ಲಿ ಬಂದ ನಂತರ ರಿಪೇರಿ ಮಾಡಿದ್ದಾರೆ ಅವರಿಗೆ ಧನ್ಯವಾದಗಳನ್ನು ಹೇಳಿ.

**ಶ್ರೀ ಎ. ಮಂಜು:–** ಮಾನ್ಯ ಸಭಾಪತಿಯವರೇ, ನೀವು ಪತ್ರಿಕೆಯಲ್ಲಿ ಬಂದಿದೆ, ಆಮೇಲೆ ರಿಪೇರಿ ಮಾಡಿದ್ದಾರೆ ಎನ್ನುವುದಕ್ಕಿಂತ ಬಹುಶಃ ನೀವು ಕೇಳಿರುವುದು ಪತ್ರಿಕೆಯಲ್ಲಿ ಬಂದಿರಬಹುದು. ನೀವು ನನಗೆ ಅಥವಾ ಮಂತ್ರಿಗೆ ನಮ್ಮ ಊರಿಗೆ ಆಸ್ಪತ್ರೆ ಬೇಕೆಂದು ನಮಗೆ ಪತ್ರವನ್ನು ಬರೆದಿರಲಿಲ್ಲ, ಕೇಳಿರಲೂ ಇಲ್ಲ.

(ಮುಂದು . .

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(7) 06-02-2018/11-30/ಕೆಹೆಚ್/ಎಂಡಿ

**ಶ್ರೀ ಎ.ಮಂಜು (ಮುಂದು):-** ಆದರೆ ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ನೋಡಿದಾಕ್ಷಣ ನಮ್ಮ ಕಾಳಜಿ ನಿಮ್ಮ ಊರಿಗೆ ಆಗಬೇಕೆಂದು ಕೇಳಿರುವುದರಿಂದ 75 ಸಾವಿರ ರೂಪಾಯಿಗಳನ್ನು ಕೊಟ್ಟು ರಿಪೇರಿಯನ್ನು ಮಾಡಿಸಿದ್ದೇವೆ. ಮಾನ್ಯ ಸಭಾಪತಿಯವರು ಹೇಳಿದ ಹಾಗೆ ತಾವು ಸರ್ಕಾರಕ್ಕೆ ಧನ್ಯವಾದಗಳನ್ನು ತಿಳಿಸಬೇಕು. ಮಾನ್ಯ ಸದಸ್ಯರು ನಮ್ಮ ಹುಟ್ಟೂರಿನಲ್ಲಿ ಆಸ್ಪತ್ರೆಯಿದೆ, ಅದರ ರಿಪೇರಿ ಕೆಲಸವನ್ನು ಮಾಡಿಸಬೇಕೆಂದು ನನಗೆ ಏನಾದರೂ ಪತ್ರವನ್ನು ಬರೆದು ಅದನ್ನು ಮಾಡಿಸಿಲ್ಲವೆಂದರೆ ತಾವು ಕೇಳುವ ಪ್ರಶ್ನೆಗೂ ಅರ್ಥವಿದೆ. ಆದರೆ ಮಾನ್ಯ ಸದಸ್ಯರು ಕೇಳಿದ ತಕ್ಷಣ ರಿಪೇರಿ ಕೆಲಸವನ್ನು ಮಾಡಿಸಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಪಶು ಚಿಕಿತ್ಸಾಲಯದಲ್ಲಿ ಯಾವುದೇ ಕಾಲಕ್ಕೋ ವೈದ್ಯಕೀಯ ಯಂತ್ರೋಪಕರಣಗಳನ್ನು ಕೊಟ್ಟಿರುತ್ತಾರೆ. ಅದರ ನಿರ್ವಹಣೆಯೇನೂ ಇಲ್ಲ. ಅದೆಲ್ಲ ತುಕ್ಕು ಹಿಡಿದಿದೆ. ಈ ವಿಷಯಗಳು ಪತ್ರಿಕೆಯಲ್ಲಿ ಬಂದಿದೆ.

**ಸಭಾಪತಿಯವರು:-** ಅದನ್ನು ರಿಪೇರಿ ಮಾಡುತ್ತಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಇಂತಹ ಸಮಸ್ಯೆಗಳಿಗೆ ಪರಿಹಾರವೇನು?

**ಸಭಾಪತಿಯವರು:-** ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು. ನೀವು ಮಾನ್ಯ ಸಚಿವರನ್ನು ಕೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಈ ರೀತಿ ಆಗದೇ ಇರುವ ಹಾಗೆ ನೀವು ಮುನ್ನೆಚ್ಚರಿಕೆಯನ್ನು ಕೈಗೊಳ್ಳಬೇಕು.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, . . .

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಈ ರೀತಿಯ ವಿಷಯಗಳು ಪತ್ರಿಕೆಯಲ್ಲಿ ಬಂದು ಸರ್ಕಾರಕ್ಕೆ ಛೀಮಾರಿಯನ್ನು ಹಾಕಿದ ಮೇಲೆ ನಂತರ ನೀವು ಕೆಲಸವನ್ನು ಮಾಡಿಸಿದರೆ ಇದರಿಂದ  ಏನು ಒಳ್ಳೆಯದಾಗುತ್ತದೆ?

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಮಾತನಾಡಬೇಕಾದರೆ ಛೀಮಾರಿ ಎಂಬ ಪದದನ್ನು ಉಪಯೋಗಿಸಿ ಮಾಡನಾಡಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಪತ್ರಿಕೆಯಲ್ಲಿ ಈ ರೀತಿಯಾಗಿ ಬರೆಯುತ್ತಾರೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬರೆಸಿದ್ದೇನೆ ಎಂದು ಹೇಳಬೇಕು. ಪತ್ರಿಕೆಯವರು ಬರೆದಿರುವುದಲ್ಲ. ಮಾನ್ಯ ಸದಸ್ಯರು ಹೇಳಿ ಬರೆಸಿರುವುದು, ಪತ್ರಿಕೆಯವರು ಸುಮ್ಮನೆ ಏಕೆ ಬರೆಯುತ್ತಾರೆ?

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೆ ನಾನು ಹೇಳಿ ಬರೆಸಿರುವುದಿಲ್ಲ. ಪತ್ರಿಕೆಯಲ್ಲಿ ಈ ರೀತಿ ಬರೆಯಿರಿ ಎಂದು ಯಾರು ಹೇಳುವುದಿಲ್ಲ? ಪತ್ರಿಕೆಯವರೇ ಈ ಕೆಲಸವನ್ನು ಮಾಡುತ್ತಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ ...

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅವರ ಊರಿನ ಗೌರವವನ್ನು ಉಳಿಸಿಕೊಳ್ಳಬೇಕೆನ್ನುವ ಹಾಗಿದ್ದರೆ, ನಮ್ಮ ಸರ್ಕಾರಕ್ಕೆ ಛೀಮಾರಿ ಹಾಕಬೇಕೆನ್ನುವ ಹಾಗಿದ್ದರೆ ಪತ್ರಿಕೆಯಲ್ಲಿ ಬಂದ ತಕ್ಷಣ ನಾವು ಈ ರಿಪೇರಿ ಕೆಲಸವನ್ನು ಮಾಡಿಸಿದ್ದೇವೆ. ಆದರೆ ಸರ್ಕಾರದ ಅನುದಾನವನ್ನು ನಿಮಗೆ ಕೊಡುತ್ತೇವೆಯಲ್ಲವೇ, ನಿಮ್ಮೂರಿಗೆ ಸಂಬಂಧಿಸಿದಂತೆ ರಿಪೇರಿ ಕೆಲಸವನ್ನು ಮಾಡಿಸಬೇಕೆನ್ನುವ ಚಿಂತೆ ತಮಗೆ ಇಲ್ಲವೆನಿಸುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ರಿಪೇರಿ ಮಾಡಿಸಿದ್ದಕ್ಕೆ ಸರ್ಕಾರಕ್ಕೆ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದರೆ ಪ್ರಶ್ನೆ ಅದಲ್ಲ. ಪತ್ರಿಕೆಯಲ್ಲಿ ಬರುವವರೆಗೂ ಕುಳಿತುಕೊಳ್ಳಬೇಡಿ ಎಂದು ನಾನು ಹೇಳುವುದು.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಅದು ಬೇರೆ ಪ್ರಶ್ನೆ. ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. 75 ಸಾವಿರ ಅಥವಾ ಒಂದು ಲಕ್ಷ ರೂಪಾಯಿಯೊಳಗೆ ಮಾತ್ರ ಈ ರಿಪೇರಿ ಕೆಲಸವನ್ನು ಮಾಡಿರುವುದು.

**ಸಭಾಪತಿಯವರು:–** ಆಯಿತು. ದಯಮಾಡಿ ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ: 161**

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಕೊಲ್ಲೂರು ದೇವಸ್ಥಾನದ ಕಲ್ಲಡ್ಕ ಶ್ರೀರಾಮ ಶಾಲೆಯ ಬಡ ಮಕ್ಕಳಿಗೆ ಹಿಂದಿನ ಸರ್ಕಾರ ಮಂಜೂರು ಮಾಡಿದ್ದ ಉಚಿತ ಊಟದ ವ್ಯವಸ್ಥೆಯನ್ನು ನಿಲುಗಡೆ ಮಾಡಲು ಕಾರಣಗಳೇನು ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. 2007ನೇ ಸಾಲಿನಲ್ಲಿ ಸಮಿಶ್ರ ಸರ್ಕಾರ ಅಧಿಕಾರದಲ್ಲಿರುವಾಗ 2,500 ಮಕ್ಕಳಿಗೆ ಉಚಿತ ಊಟವನ್ನು ಕೊಡುವುದಕ್ಕೆ ಸರ್ಕಾರದಿಂದ ಆದೇಶವನ್ನು ಕೊಡಲಾಗಿತ್ತು. ಆದರೆ ಈಗ ಉಚಿತ ಊಟದ ವಿತರಣೆಯನ್ನು ಏಕೆ ತಡೆಯಲಾಗಿದೆ? ಇದಕ್ಕೆ ಯಾರ ಶಿಫಾರಸ್ಸು ಇದೆ? ಸಾಮಾನ್ಯವಾಗಿ ಸರ್ಕಾರವು ಬಡವರ ಪರವಾಗಿ ಮತ್ತು ಮಕ್ಕಳ ಪರವಾಗಿ ಕೆಲಸ ಮಾಡುವಂತಹ ಸರ್ಕಾರ ನಿಮ್ಮದು ಎಂದು ನಾನು ಹೇಳಲಿಲ್ಲ. ಸಾಮಾಜಿಕವಾಗಿ 2,500 ಮಕ್ಕಳು ಕನ್ನಡ ಶಾಲೆಯಲ್ಲಿ ಕಲಿಯುತ್ತಿದ್ದರೆ, ಆ ಮಕ್ಕಳಿಗೆ ದೇವಸ್ಥಾನದ ಊಟವನ್ನು ಕೊಡಲು ಪ್ರಾರಂಭಿಸಿ ಸುಮಾರು 9 ರಿಂದ 10 ವರ್ಷಗಳಾಗುತ್ತಾ ಬಂದಿದೆ. ಇದ್ದಕ್ಕಿದ್ದಹಾಗೆ ದೇವಸ್ಥಾನದ ಊಟವನ್ನು ರದ್ದು ಮಾಡುವುದಕ್ಕೆ ಇರುವಂತಹ ಕಾರಣವೇನು? ಆ ಮಕ್ಕಳಿಗೆ ಬೇರೆ ಬದಲಿ ವ್ಯವಸ್ಥೆಗಳೇನು ಇಲ್ಲ. ಕಲ್ಲಡ್ಕದಲ್ಲಿದೆ ಎನ್ನುವ ಕಾರಣಗೋಸ್ಕರವೇ ಅಥವಾ ಶ್ರೀರಾಮ ಶಾಲೆ ಎಂದು ಹೆಸರು ಇಟ್ಟಿರುವ ಕಾರಣಕ್ಕೋಸ್ಕರವೇ ಹಾಗೂ ದಲಿತ ಮಕ್ಕಳು ಆ ಶಾಲೆಯಲ್ಲಿ ಕಲಿಯುತ್ತಿದ್ದಾರೆ ಎನ್ನುವ ಕಾರಣಕ್ಕೋಸ್ಕರವೇ? ಇದಕ್ಕೆ ಕಾರಣವೇನೆಂದು ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು?

**ಸಭಾಪತಿಯವರು:-** ಒಂದೊಂದು ವಿಷಯದ ಬಗ್ಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಎಲ್ಲಕ್ಕೂ ಅವಕಾಶವನ್ನು ಕೊಡುವುದಿಲ್ಲ. ಶ್ರೀ ಬಸವರಾಜ ಹೊರಟ್ಟಿಯವರು ಸಚಿವರಾಗಿದ್ದಾಗ ಅದಕ್ಕಾಗಿ ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಚಿವ ಸಂಪುಟದಲ್ಲಿ ಸರ್ಕಾರ ಮಾಡುವಂತಹ ಕೆಲಸವನ್ನು ಅವರು ಮಾಡುತ್ತಾರೆ. ಅವರಿಗೆ ಕೊಡಬೇಕೆನ್ನುವ ಚರ್ಚೆ ಸಚಿವ ಸಂಪುಟದಲ್ಲಿ ಬಂದಿತು. ಅದಕ್ಕೆ ಅವರಿಗೆ ಕೊಟ್ಟಿದ್ದೇವೆ. ಕೊಟ್ಟ ನಂತರ, "ಮಕ್ಕಳು ದೇವರ ಸಮಾನ" ಎಂದು ಹೇಳುತ್ತೇವೆ. ಇದರಲ್ಲಿ differentiation ಏಕೆ ಮಾಡಬೇಕು? ಅದನ್ನು ನಿಲ್ಲಿಸುವುದರಿಂದ ಏನಾಗುತ್ತದೆ? ಕಾನೂನುಗಳನ್ನು ದೂರವಿಡಿ. ಕಾನೂನು ಇದೆ ಅಥವಾ ಇಲ್ಲವೋ ಎಂಬುದು ನಂತರದ ಪ್ರಶ್ನೆ. ಎಲ್ಲರಿಗೂ ಸಹ ಉಚಿತ ಊಟವನ್ನು ಕೊಡಲಾಗುತ್ತಿದೆ, ಎಲ್ಲರಿಗೂ ಸಹ ಉಚಿತ ಊಟವನ್ನು ಕೊಡುವಾಗ ಇವರಿಗೂ ಕೊಡುವುದನ್ನು ಮುಂದುವರೆಸಿದರೆ ಇದರಲ್ಲಿ ಏನು ತಪ್ಪು ಇದೆ? ದಯಮಾಡಿ ಈ ರೀತಿ ಮಾಡುವುದು ಬೇಡ. ರಾಜಕಾರಣವನ್ನು ಆಮೇಲೆ ಮಾಡೋಣ. ಮಕ್ಕಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ರಾಜಕಾರಣವನ್ನು ಮಾಡುವುದು ಬೇಡ. ದಯಮಾಡಿ ಅವರಿಗೆ ಇರುವ ಬದ್ಧತೆಯನ್ನು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ ನನ್ನದೊಂದು ಮನವಿಯೇನೆಂದರೆ ಶ್ರೀರಾಮ ಸಂಸ್ಥೆಗೆ ಉಚಿತ ಊಟವನ್ನು ಕೊಡುವ ವ್ಯವಸ್ಥೆಯನ್ನು ಈಗಾಗಲೇ ನಿಲ್ಲಿಸಲಾಗಿದೆ. ಹಾಗೆಯೇ ಕೆಲವು ಕ್ರಿಶ್ಚಿಯನ್ ಸಂಸ್ಥೆಗಳಿಗೂ ಉಚಿತ ಊಟವನ್ನು ಕೊಡ್ಡುವ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ. ಅಂಗವಿಕಲ ಮಕ್ಕಳು ಓದುವಂತಹ ಶಾಲೆಗಳಿಗೂ ಸಹ ಉಚಿತ ಊಟವನ್ನು ಕೊಡವ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ. ಹಾಗಾಗಿ ಇದರಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂಬ ಧರ್ಮಗಳನ್ನು ತರಬೇಡಿ. ರಾಜಕಾರಣವನ್ನು ಹೊರಗಡೆ ಬೇಕಾದಷ್ಟು ಮಾಡಿಕೊಳ್ಳೋಣ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮೊದಲು ಯಾವ ರೀತಿಯಲ್ಲಿ ಕೊಡಲಾಗುತ್ತಿತ್ತೋ, ಅದೇ ಪ್ರಕಾರ ಮುಂದುವರೆಸಬಹುದೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಇವರು ಸರ್ಕಾರಕ್ಕೆ ಬಂದು 4 ವರ್ಷಗಳ ಕಾಲ ಮುಂದುವರೆಸಿದ್ದಾರೆ. ಈಗ ಇದನ್ನು ತೆಗೆಯಲಾಗಿದೆ. ತಕ್ಷಣಕ್ಕೆ ಏಕೆ ತೆಗೆದಿದ್ದಾರೆ?

**ಸಭಾಪತಿಯವರು:-** ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಸರ್ಕಾರ ಇದಕ್ಕೆ ಉತ್ತರವನ್ನು ಹೇಳಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ಉತ್ತರವನ್ನು ಹೇಳಿದ ಮೇಲೆ ನೋಡೋಣ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಕಲ್ಲಡ್ಕ ಶ್ರೀರಾಮ ಶಾಲೆಯು ಒಂದು ಖಾಸಗಿ ಶಾಲೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, . . .

**ಸಭಾಪತಿಯವರು:-** ಮಾನ್ಯ ಸಚಿವರು ಪೂರ್ತಿಯಾಗಿ ಉತ್ತರವನ್ನು ಹೇಳುವುದಕ್ಕೆ ಬಿಡಿ. ಅವರನ್ನು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಈ ಖಾಸಗಿ ಶಾಲೆಗಳಿಗೆ ಉಚಿತ ಊಟವನ್ನು ಕೊಡುವ ವ್ಯವಸ್ಥೆಗೆ ನಮ್ಮ ದತ್ತಿ ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ ಹಿಂದಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಗಳು ಉಚಿತ ಊಟವನ್ನು ಕೊಟ್ಟಿದೆ. ಖಾಸಗಿ ಶಾಲೆಗಳಿಗೆ ಉಚಿತ ಊಟವನ್ನು ಕೊಡುವುದರ ಬಗ್ಗೆ ಕೆಲವು ದೂರುಗಳು ಬಂದಿವೆ. ಈಗಾಗಲೇ ಸರ್ಕಾರವು ಕೂಡ ಬಿಸಿ ಊಟವನ್ನು ಎಲ್ಲಾ ಅನುದಾನಿತ ಶಾಲೆಗಳಿಗೂ ಕೊಡುವಂತಹ ಪದ್ಧತಿಯನ್ನು ಜಾರಿಗೊಳಿಸಿದೆ. ನಾನು ಕೊಲ್ಲೂರು ದೇವಸ್ಥಾನಕ್ಕೆ ಹೋದಂತಹ ಸಂದರ್ಭದಲ್ಲಿ ಎಲ್ಲಾ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಈ ವಿಷಯವು ಸಹ ಬಂದಿತ್ತು. ಆಗ ಎಲ್ಲಾ ಖಾಸಗಿ ಶಾಲೆಗಳಿಗೆ ಎಷ್ಟು ಕೊಟ್ಟಿದ್ದೇವೆ ಎನ್ನುವ ಬಗ್ಗೆ ಮಾಹಿತಿಯನ್ನು ತೆಗೆದುಕೊಂಡಿದ್ದೇವೆ. ಮಾಹಿತಿಯನ್ನು ತೆಗೆದುಕೊಂಡ ಮೇಲೆ ಈ ಶಾಲೆಗೆ ಕೊಡುವ ಅವಕಾಶವಿದೆ ಎಂದು ಅಧಿಕಾರಿಗಳನ್ನು ಕೇಳಿದೆ. ಇದಕ್ಕೆ ಕಾನೂನಿನಲ್ಲಿ ಕೊಡುವ ಅವಕಾಶವಿಲ್ಲವೆಂದು ಅಧಿಕಾರಿಗಳು ಹೇಳಿದರು. ಆದ್ದರಿಂದ ಇದನ್ನು ತೆಗೆದಿದ್ದೇವೆ. ಅದರ ಜೊತೆಗೆ ಇನ್ನು ಕೆಲವು ಶಾಲೆಗೆ ಕೊಟ್ಟಿರುವುದನ್ನು ಕೂಡ ನಾವು ರಾಜ್ಯ ಧಾರ್ಮಿಕ ಪರಿಷತ್ತಿನಲ್ಲಿ ಚರ್ಚೆ ಮಾಡಿ ಎಲ್ಲವನ್ನೂ ರದ್ದುಪಡಿಸುವುದಕ್ಕೆ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಈ ಶಾಲೆಯಲ್ಲಿ 2,500 ಮಕ್ಕಳಿಗೆ ಉಚಿತ ಊಟವನ್ನು ಕೊಡುತ್ತಿದ್ದೇವೆ. ಈಗ ಇದನ್ನು ನಿಲುಗಡೆ ಮಾಡುವುದಕ್ಕೆ ಕಾರಣವೇನು ಎಂದು ಕೇಳಿದಾಗ ಉಳಿದ ಶಾಲೆಗಳಲ್ಲೂ ರದ್ದು ಮಾಡುತ್ತೇವೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ಹೇಳಿದರು. ನಾನು ಸರ್ಕಾರದಲ್ಲಿ ಅಗ್ರಹಪಡಿಸುವುದೇನೆಂದರೆ, ಇದರಲ್ಲಿ ದಲಿತ ಮಕ್ಕಳು, ಹಿಂದುಳಿದ ವರ್ಗಗಳ ಮಕ್ಕಳು ಇದ್ದಾರೆ. ಬೆರಳೆಣಿಕೆಯಷ್ಟು ಮುಂದುವರೆದ ವರ್ಗದ ಮಕ್ಕಳು ಇರಬಹುದು. ಮಾನ್ಯ ಸಚಿವರು ದಲಿತ ಮಕ್ಕಳ ಬಗ್ಗೆ ಮತ್ತು ಹಿಂದುಳಿದ ವರ್ಗಗಳ ಮಕ್ಕಳ ಬಗ್ಗೆ ಕಾಳಜಿ ಇದೆ ಎಂದು ಹೇಳುವಾಗ 10 ವರ್ಷಗಳ ಕಾಲ ಕೊಡಲಾಗಿದೆ. ಹೂವಿನ ಹಡಗಲಿ ಶಾಲೆಗೆ ಕೊಡಲಾಗಿದೆ. ಬಳ್ಳಾರಿ ಶಾಲೆಗಳಿಗೆ ಕೊಟ್ಟಿರುವಂತಹ ಉದಾಹರಣೆಗಳಿವೆ. 2004ನೇ ಸಾಲಿನಲ್ಲಿ ನಿಮ್ಮ ಪಕ್ಷವು ಅಧಿಕಾರದಲ್ಲಿದ್ದಾಗ ಬೇರೆ ಶಾಲೆಗಳಿಗೆಲ್ಲ ಉಚಿತ ಊಟವನ್ನು ಕೊಟ್ಟಿದ್ದಾರೆ. ಉದ್ದೇಶಪೂರ್ವಕವಾಗಿ ಇದನ್ನು ನಿಲ್ಲಿಸಿದ್ದಾರೆ. ಇದನ್ನು ನಿಲ್ಲಿಸಿರುವುದು ಸರಿಯಲ್ಲ ಎನ್ನುವುದು ನನ್ನ ಆಗ್ರಹವಾಗಿದೆ ಮತ್ತು ಇದನ್ನು ಯಾವ ಶಿಫಾರಸ್ಸಿನ ಮೇಲೆ ನಿಲ್ಲಿಸಲಾಗಿದೆ ಎಂದು ಮಾನ್ಯ ಸಚಿವರನ್ನು ಕೇಳಿದ್ದೇನೆ. ಯಾವುದಾದರೂ ಸಮಿತಿಯ ವರದಿಯ ಆಧಾರದ ಮೇಲೆ ಇದನ್ನು ನಿಲ್ಲಿಸಲಾಗಿದೆಯೇ ಎನ್ನುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿಲ್ಲ.

ಮಾನ್ಯ ಸಭಾಪತಿಯವರೇ ಒಂದು ಅಂಶವನ್ನು ತಾವು ಗಮನಿಸಬೇಕು. ಗೌರವಾನ್ವಿತ ಉಸ್ತುವಾರಿ ಮಂತ್ರಿಯವರೇ, ಇದನ್ನು ನಿಲ್ಲಿಸಿ ಎಂದು ಉತ್ತರವನ್ನು ಬರೆದಿದ್ದಾರೆ. ಇದು ಸರಿ ಎಂದು ತಮಗೆ ಅನಿಸುತ್ತದೆಯೇ? ನಾನು ಈ ಸದನದ ಮೂಲಕ ವಿನಂತಿ ಮಾಡುವುದೇನೆಂದರೆ, ರಾಜಕಾರಣ ಮಾಡಬೇಡಿ. ದಯವಿಟ್ಟು ಇದರಲ್ಲಿ ರಾಜಕಾರಣವನ್ನು ತರಬೇಡಿ. ಕೊಲ್ಲೂರು ದೇವಸ್ಥಾನದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖಾಂತರ ಹಾಲುಗಲ್ಲದ ಮಕ್ಕಳಿಗೆ ಏನು ಬೇಕೋ ಅದನ್ನು ಸರ್ಕಾರವು ಮಾಡುತ್ತದೆ ಎಂದು ಮಾನ್ಯ ಸಚಿವರು ಹೇಳಲಿ. ಅದರಿಂದ ನಿಮಗೂ ಪುಣ್ಯ ಬರುತ್ತದೆ, ನಿಮ್ಮ ಗೌರವ ಹೆಚ್ಚುತ್ತದೆ. ಇಲ್ಲದಿದ್ದರೆ ತಾವು ಅನ್ಯಾಯ ಮಾಡುತ್ತಿದ್ದೀರೆನ್ನುವ ಅಪವಾದ ತಮ್ಮ ಮೇಲೆ ಬರುತ್ತದೆ.

**ಸಭಾಪತಿಯವರು:–** ಸರ್ಕಾರದ ನಿಲುವೇನು ಎಂಬುದನ್ನು ಮಾನ್ಯ ಸಚಿವರು ಹೇಳುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 6 ಅಂಗವಿಕಲ ಶಾಲೆಗಳ ಮಕ್ಕಳಿಗೆ ಉಚಿತ ಊಟವನ್ನು ಕೊಡುತ್ತಿಲ್ಲ.

**ಸಭಾಪತಿಯವರು:–** ಇದರ ಬಗ್ಗೆ ಭಾಷಣವೇನೂ ಬೇಡ? ಪ್ರಶ್ನೆಗಳೇನಾದರೂ ಇದ್ದರೆ ಕೇಳಬಹುದು.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಆಡಳಿತ ಮಂಡಳಿಯ ಕೋಪಕ್ಕೆ ಇದನ್ನು ನಿಲ್ಲಿಸಲಾಗಿದೆ. "ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದರು" ಎನ್ನುವ ಹಾಗೆ ಮಕ್ಕಳು ಏನು ಮಾಡಿದ್ದಾರೆ? ಆಡಳಿತ ಮಂಡಳಿಯಲ್ಲಿ ಏನಾದರೂ ದೋಷಗಳಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. ಮಕ್ಕಳಿಗೆ ಕೊಡುತ್ತಿದ್ದಂತಹ ಊಟವನ್ನು ಏಕೆ ನಿಲ್ಲಿಸುತ್ತೀರಿ ಎನ್ನುವುದು ಅಷ್ಟೆ ನನ್ನ ಪ್ರಶ್ನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, . . . .

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ಸರ್ಕಾರದಿಂದ ಉತ್ತರವೇನು ಬೇಡವೇ? ನಾನು ಮುಂದಿನ ಪ್ರಶ್ನೆಗೆ ಹೋಗಲೇ, ಈ ಪ್ರಶ್ನೆಗೆ ಉತ್ತರವೇನು ಬೇಡವೇ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಒಂದೇ ವಾಕ್ಯದಲ್ಲಿ ಮಾತನಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 2,500 ಮಕ್ಕಳ ಅನ್ನಕ್ಕೆ ಕನ್ನ ಹಾಕುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರೆ ಬೇಡ. ಇದು ಪ್ರಶ್ನೋತ್ತರ ಅವಧಿ. ಬೇರೆ ಪ್ರಶ್ನೆಗಳ ಬಗ್ಗೆ ಚರ್ಚೆ ಮಾಡುವುದು ಏನು ಬೇಡವೇ? ಈ ಪ್ರಶ್ನೆಯ ಮೇಲಿನ ಚರ್ಚೆಯನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ರಾಜ್ಯವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡುವಾಗ ಮಕ್ಕಳ ಹಸಿವನ್ನು ನೀಗಿಸಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಪ್ರತ್ಯೇಕವಾಗಿ ಮಕ್ಕಳಿಗೆ ಊಟವನ್ನು ಕೊಡುತ್ತಿದ್ದೇವೆ. ಎಲ್ಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟವನ್ನು ಕೊಡುತ್ತಿದ್ದೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಈ ಶಾಲೆಗೆ ಏಕೆ ಕೊಡುತ್ತಿಲ್ಲ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಇದು double ಆಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, double ಹೇಗೆ ಆಗುತ್ತದೆ? ಇಲ್ಲಿ ಕೊಡುತ್ತಿದ್ದ ಶಾಲೆಗೆ ಕೊಡುವುದಿಲ್ಲವೆಂದರೆ ಹೇಗೆ? ಸರ್ಕಾರವೇ ಕೊಡಬೇಕೆಂದು ಒಂದು ಯೋಜನೆ ಮಾಡಿದೆ.

**ಸಭಾಪತಿಯವರು:-** ಬೇಡ. ಈಗಾಗಲೇ 15 ನಿಮಿಷಗಳಾಗಿದೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಸರ್ಕಾರದಿಂದ ಎಲ್ಲಾ ಮಕ್ಕಳಿಗೂ ಮಧ್ಯಾಹ್ನದ ಬಿಸಿ ಊಟವನ್ನು ಕೊಡಲಾಗುತ್ತಿದೆ. ಇದರಿಂದ ನಮ್ಮ ದುಡ್ಡನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಏಕೆ ಕೊಡಬೇಕು?

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ಕೊಟ್ಟಾಗಿದೆ. ಪ್ರಶ್ನೋತ್ತರ ಅವಧಿಯಲ್ಲಿ ಇದರ ಬಗ್ಗೆ ಒಪ್ಪಿಸುವುದಕ್ಕೆ ಬರುತ್ತದೆಯೇ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಶಿಕ್ಷಣ ಇಲಾಖೆಯಲ್ಲಿ ದುಡ್ಡಿದೆ. ನಾವು ಯಾವ ಮಕ್ಕಳ ಹಸಿವನ್ನು ನೀಗಿಸ ಹಸಿವು ಮುಕ್ತ ಕರ್ನಾಟಕವಾಗಿ ನಿರ್ಮಾಣ ಮಾಡಬೇಕೆನ್ನುವ ದಿಕ್ಕಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ಬಿಸಿ ಊಟವನ್ನು ಹಿಂದೆ ಶ್ರೀ ಎಸ್.ಎಂ.ಕೃಷ್ಣರವರು ಮಾನ್ಯ ಮುಖ್ಯಮಂತ್ರಿಯವರಾಗಿದ್ದಂತಹ ಸಂದರ್ಭದಲ್ಲಿ ನಾನೂ ಕೂಡ ಶಾಸಕನಾಗಿದ್ದೆ. ಅವತ್ತಿನ ದಿವಸ ದೇಶದಲ್ಲಿ ಪ್ರಥಮ ಬಾರಿಗೆ ಬಿಸಿ ಊಟವನ್ನು ಕೊಡುವಂತಹ ವ್ಯವಸ್ಥೆಯನ್ನು ತಂದಿದ್ದೇವೆ. ಆ ಬಿಸಿ ಊಟದ ವ್ಯವಸ್ಥೆಯನ್ನು ಇಲ್ಲಿ ಮಾಡಿಕೊಳ್ಳುವುದಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ. ಇಲ್ಲಿ ಮಾಡಿಕೊಳ್ಳಬಹುದು. ನಮ್ಮ ಸರ್ಕಾರ ಹಣ ಕೊಡುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾರ್ವಜನಿಕರಿಗಾಗಿ ಹಣ ಕೊಡುವಂತಹದ್ದನ್ನು ಮತ್ತು ಸಾರ್ವಜನಿಕರಿಗೆ ಉಪಯೋಗ ಮಾಡುವಂತಹ ಯಾವುದೇ ಕೆಲಸವನ್ನು ಮಾಡಬಹುದು.

**Mr. CHAIRMAN:-** This is a Question Hour. I cannot force the Government. ಅವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಸರ್ಕಾರವು ಬಿಸಿ ಊಟವನ್ನು ಕೊಡಲಾಗುತ್ತಿದೆ ಎಂದು ಉತ್ತರವನ್ನು ಕೊಡುತ್ತಿದೆ. ಆದರೆ . . .

(ಗೊಂದಲ)

**ಸಭಾಪತಿಯವರು:-** ಆಯಿತು ಬಿಡಿ. Can you make the Government change its stand now? No, it is not possible.

(ಗೊಂದಲ)

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಸರ್ಕಾರ ಉತ್ತರವನ್ನು ಕೊಡುತ್ತದೆ. ನಮ್ಮ ಹತ್ತಿರ ಸಾಕಷ್ಟು ಅನುದಾನ ಇದೆ. ಅದನ್ನು ಕೊಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಉಸ್ತುವಾರಿ ಸಚಿವರಾದ ಮಾನ್ಯ ರಮಾನಾಥ ರೈ ಅವರು ಪತ್ರವನ್ನು ಬರೆಯುವವರೆಗೂ ಕೂಡ ಯಾವುದೇ ರೀತಿ ಸಮಸ್ಯೆ ಇರಲಿಲ್ಲ. ಅವರು ಪತ್ರ ಬರೆಯುತ್ತಿದ್ದ ಹಾಗೆ ಮಕ್ಕಳಿಗೆ ಊಟ ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದೀರಲ್ಲವೇ? ಅದಕ್ಕೋಸ್ಕರ ನಾನು ಹೇಳುತ್ತಿರುವುದು ರಾಜಕಾರಣವೇ ಬೇರೆ, ಮಕ್ಕಳಿಗೆ ಅನ್ನ ಕೊಡುವುದೇ ಬೇರೆ. ಮಾನ್ಯ ರಮಾನಾಥ ರೈ ರವರು ಪತ್ರ ಬರೆಯುತ್ತಿದ್ದ ಹಾಗೆ ನಿಲ್ಲಿಸಿರುವುದು ಖಂಡಿತವಾಗಿ ಸೂಕ್ತವಲ್ಲ. ದಯವಿಟ್ಟು ತಕ್ಷಣ ತಾವು ಅನ್ನವನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತೀರೋ ಅಥವಾ ಇಲ್ಲವೋ?

**ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ ಶಿಕ್ಷಣ ಇಲಾಖೆಯಲ್ಲಿ ಬಿಸಿ ಊಟದ ಕಾರ್ಯಕ್ರಮ ಇದೆ. ಅದರಡಿಯಲ್ಲಿ ಈ ವಿಚಾರವನ್ನು ಚರ್ಚೆ ಮಾಡುವಂತಹದ್ದು ಪ್ರಸ್ತುತವಾಗಿರುವಂತಹ ವಿಚಾರ. ಮುಜರಾಯಿ ಇಲಾಖೆಯಿಂದ ಈ ಒಂದು ಕಾರ್ಯಕ್ರಮಗಳನ್ನು ಮಾಡುವುದಕ್ಕೆ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ನಾನು ಹೇಳುವುದನ್ನು ಮೊದಲು ಕೇಳಿಸಿಕೊಳ್ಳಬೇಕು. ಮುಜರಾಯಿ ಇಲಾಖೆಯಿಂದ ಈ ಊಟದ ಕಾರ್ಯಕ್ರಮವನ್ನು ಮಾಡುವುದಕ್ಕೆ ಅವಕಾಶವಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, . . .

**ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಸಹಕಾರಿಯಾಗಿ ಮಾತನಾಡುತ್ತಿದ್ದೇನೆ. ಶಿಕ್ಷಣ ಇಲಾಖೆಯಡಿಯಲ್ಲಿ ಈ ಒಂದು ವಿಚಾರವನ್ನು ತೆಗೆದುಕೊಂಡು ಬರಲಿ, ಇದರ ಬಗ್ಗೆ ಚರ್ಚೆ ಮಾಡೋಣ.

(ಮುಂದು)

**ಶ್ರೀ ಕೃಷ್ಣಭೈರೇಗೌಡ (ಮುಂದು):-**

ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆ ಅಥವಾ ಬೇಡವೇ ಎನ್ನುವುದನ್ನು ಚರ್ಚಿಸೋಣ. ಮಾನ್ಯ ಮಂತ್ರಿಗಳು ಪ್ರಸ್ತುತ ವಿಚಾರವು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ.

**Mr. CHAIRMAN:** The Government is exposed.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಳೆದ ಹತ್ತು ವರ್ಷಗಳಿಂದ ಸರ್ಕಾರವೇ ಊಟದ ವ್ಯವಸ್ಥೆಯನ್ನು ಮಾಡಿತ್ತು. ಆದರೆ ಸದರಿ ವ್ಯವಸ್ಥೆಯನ್ನು ಈಗ ನಿಲ್ಲಿಸಲು ಕಾರಣಗಳೇನು?

**ಸಭಾಪತಿಯವರು:-** ಕಳೆದ 16 ವರ್ಷಗಳಿಂದ ಸರ್ಕಾರದ ವತಿಯಿಂದ ಉಚಿತ ಊಟದ ವ್ಯವಸ್ಥೆಯನ್ನು ಮಾಡಿದೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಮಕ್ಕಳಿಗೆ ಉಚಿತ ಊಟದ ವ್ಯವಸ್ಥೆಯಲ್ಲಿ ರಾಜಕಾರಣ ಮಾಡಬಾರದು. ಬಡ ಮಕ್ಕಳಿಗೆ ಸರ್ಕಾರವು ಅನ್ಯಾಯ ಮಾಡಬಾರದು. ಸರ್ಕಾರದ ಧೋರಣೆಯ ಬಗ್ಗೆ ನಾವು ಪ್ರತಿಭಟನೆಯನ್ನು ಮಾಡುತ್ತೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Mr. CHAIRMAN:** Can I change the Government? ಪ್ರಶ್ನೋತ್ತರ ಅವಧಿ ವ್ಯರ್ಥವಾಯಿತು.

**(ಗೊಂದಲ)**

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳೆಲ್ಲರೂ ಸರ್ಕಾರ ನೀಡಿರುವ ಉತ್ತರವನ್ನು ವಿರೋಧಿಸಿ ಸದನದ ಬಾವಿಯೊಳಗೆ ಧರಣಿ ಕುಳಿತರು)**

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಈ ವಿಚಾರದಲ್ಲಿ ರಾಜಕಾರಣವನ್ನು ಮಾಡುತ್ತಿದ್ದಾರೆ. ಸಾರ್ವಜನಿಕರ ಹಣವನ್ನು ಉಪಯೋಗಿಸಿಕೊಂಡು ಅವರ ಭಾವನೆಗಳನ್ನು ಕೆರಳಿಸುವಂತಹ ಕೆಲಸಗಳನ್ನು ಅವರು ಮಾಡುತ್ತಿದ್ದಾರೆ. ನಾವು ಈ ರೀತಿಯ ಕೆಲಸವನ್ನು ಮಾಡಿಲ್ಲ. ನಮ್ಮ ಕಾನೂನಿನಲ್ಲಿ ಅವಕಾಶವಿಲ್ಲದೇ ಇರುವುದರಿಂದ ಪ್ರಶ್ನಿತ ಶಾಲೆಯನ್ನೂ ಸಹ ಒಳಗೊಂಡಂತೆ ಇನ್ನುಳಿದ ಹಲವಾರು ಶಾಲೆಗಳಿಗೆ ನೀಡಲಾಗುತ್ತಿದ್ದ ಉಚಿತ ಊಟದ ವ್ಯವಸ್ಥೆಯನ್ನು ರದ್ದುಪಡಿಸಲು ನಿರ್ಧರಿಸಲಾಗಿದೆ. ಕಾನೂನಿನಲ್ಲಿ ಅವಕಾಶವಿಲ್ಲದೇ ಹಿಂದಿನ ಸರ್ಕಾರವು ಶಾಲೆಯ ಬಡ ಮಕ್ಕಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಮಾಡಿದ್ದು ಮೊದಲನೆಯ ತಪ್ಪು. ಆದರೆ, ಧಾರ್ಮಿಕ ದೃಷ್ಟಿಯಿಂದ ಅದನ್ನು ನೀವು ಮಾಡಿದ್ದೀರಿ. ಸರ್ಕಾರದಿಂದ ಉಚಿತ ಊಟದ ವ್ಯವಸ್ಥೆಯನ್ನು ಮಾಡಲಿಕ್ಕೆ ಅವಕಾಶವಿದೆ. . . . **(ಗೊಂದಲ)** . . . ದೇವಸ್ಥಾನದ ಹಣವೇ ಏಕೆ ಬೇಕು? ಬಡ ಮಕ್ಕಳಿಗೆ ಉಚಿತ ಊಟವನ್ನು ನೀಡಿದರೆ ಸಾಕಲ್ಲವೇ.

**Mr. CHAIRMAN:** Nothing will go on record. ಈಗ ಮಾತನಾಡುತ್ತಿರುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ದೇವಸ್ಥಾನದ ಹಣದಿಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟದ ವ್ಯವಸ್ಥೆಯನ್ನು ಮಾಡಲಿಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಕಾನೂನಿನಲ್ಲಿ ಅವಕಾಶವಿಲ್ಲದೇ ಇರುವುದನ್ನು ನಾವು ಮಾಡಲಿಕ್ಕೆ ಆಗುವುದಿಲ್ಲ. ಆಡಿಟ್ ಮಾಡುವ ಸಂದರ್ಭದಲ್ಲಿ ನಾವು ಮಾಡಿದ ತಪ್ಪುಗಳನ್ನು ಎತ್ತಿ ಹಿಡಿಯುತ್ತಾರೆ. ಸಣ್ಣ ಪುಟ್ಟ ದೇವಸ್ಥಾನಗಳಿದ್ದರೆ ಅವುಗಳನ್ನು ದತ್ತು ತೆಗೆದುಕೊಳ್ಳಲು ಮಾತ್ರ ಅವಕಾಶವಿರುತ್ತದೆ ಹೊರತು ಉಚಿತ ಊಟದ ವ್ಯವಸ್ಥೆಯನ್ನು ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಈಗ ಮಾತನಾಡುತ್ತಿರುವುದು ರೆಕಾರ್ಡ್‌ಗೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ**:- ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನೇ ಸ್ವತ: ಚರ್ಚೆಯನ್ನು ಮಾಡಿ, ಕೊಲ್ಲೂರು ಕ್ಷೇತ್ರಕ್ಕೆ ಭೇಟಿಯನ್ನು ನೀಡಿ ಅಲ್ಲಿನ ವಾಸ್ತವಾಂಶಗಳನ್ನು ಪರಿಶೀಲಿಸಿ, ನಾನೇ ಉಚಿತ ಊಟದ ವ್ಯವಸ್ಥೆಯನ್ನು ರದ್ದುಪಡಿಸಿದ್ದೇನೆ. ಸುಖಾಸುಮ್ಮನೇ ಬೇರೆಯವರ ಹೆಸರನ್ನು ಪ್ರಸ್ತಾಪಿಸಬೇಡಿ. . . . **(ಗೊಂದಲ)** . . . ನಿಯಮಾವಳಿಗೆ ತಿದ್ದುಪಡಿಯನ್ನು ಮಾಡಲಾಗುತ್ತಿದೆ. ಈಗಾಗಲೇ ನಮ್ಮ ಸರ್ಕಾರದ ಶಿಕ್ಷಣ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟವನ್ನು ನೀಡಲಾಗುತ್ತಿದೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಶಾಲೆಯ ಆಡಳಿತ ಮಂಡಳಿಗೆ ಏನಾದರೂ ಮಾಡಿ ಆದರೆ, ಮಕ್ಕಳಿಗೆ ಏಕೆ ಅನ್ಯಾಯ ಮಾಡುತ್ತಿದ್ದೀರಾ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, ದೇವಸ್ಥಾನದ ಹಣದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟದ ವ್ಯವಸ್ಥೆಯನ್ನು ಮಾಡಲು ಯಾವ ಕಾನೂನಿನಲ್ಲಿ ಅವಕಾಶವಿದೆ ಎಂಬುದನ್ನು ತೋರಿಸಿ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮುಜರಾಯಿ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಮತ್ತೂ ಈ ವಿಚಾರದಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು**:- ಸಭಾನಾಯಕರಿಗೆ ಮಾತನಾಡಲು ನೀವುಗಳು ಅವಕಾಶವನ್ನು ನೀಡುತ್ತಿಲ್ಲ.

**ಶ್ರೀ ಎಂ.ಆರ್.ಸೀತಾರಾಂ**:- ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಮಾತನಾಡಲು ಅವಕಾಶ ನೀಡಿ. ನೀವುಗಳೆಲ್ಲರೂ ಒಂದು ಕಡೆಯಿಂದ ಮಾತನಾಡುತ್ತಿದ್ದೀರಿ. ಈ ವಿಚಾರದಲ್ಲಿ ಮುಜರಾಯಿ ಮಂತ್ರಿಗಳು ಈಗಾಗಲೇ ಒಂದು ಸಲಹೆಯನ್ನು ನೀಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿದೆ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಆದಾಯದಲ್ಲಿ ವಿದ್ಯಾರ್ಥಿಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಚಿತವಾಗಿ ಊಟವನ್ನು ನೀಡುವ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ ಹೀಗಾಗಿ ಮಧ್ಯಾಹ್ನದ ಊಟದ ಯೋಜನೆಯಲ್ಲಿ ಉಚಿತ ಊಟದ ವ್ಯವಸ್ಥೆ ಮಾಡಿಕೊಡಬೇಕೆಂದು ಅರ್ಜಿ ಸಲ್ಲಿಸಿದರೆ, ವಿದ್ಯಾರ್ಥಿಗಳಿಗೆ ಖಂಡಿತವಾಗಿಯೂ ಸಹ ಉಚಿತ ಊಟ ಸಿಗುತ್ತದೆ. ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಮನವಿಯನ್ನು ಸಲ್ಲಿಸಿದರೆ ಖಂಡಿತವಾಗಿಯೂ ಸಹ ಸರ್ಕಾರವು ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಮಾಡಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆದರೆ ಈಗಾಗಲೇ ಉಚಿತವಾಗಿ ನೀಡಲಾಗುತ್ತಿದ್ದ ಊಟದ ವ್ಯವಸ್ಥೆಯನ್ನು ಯಾವ ಕಾರಣಕ್ಕಾಗಿ ನಿಲ್ಲಿಸಲಾಗಿದೆ. ಈ ವಿಚಾರದಲ್ಲಿ ರಾಜಕಾರಣ ಮಾಡಬೇಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಳೆದ 11 ವರ್ಷಗಳಿಂದ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಇದೇ ಕಾಂಗ್ರೆಸ್ ಸರ್ಕಾರವೂ ಸಹ ಈ ವ್ಯವಸ್ಥೆಯನ್ನು ಮಾಡಿತ್ತು. ಜಿಲ್ಲೆಯ ಉಸ್ತುವಾರಿ ಮಂತ್ರಿಗಳ ರಾಜಕೀಯ ದ್ವೇಷಕ್ಕಾಗಿ ಬಡ ಮಕ್ಕಳ ಅನ್ನವನ್ನು ಕಸಿಯುತ್ತೀರಾ?

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ದೇವಸ್ಥಾನಗಳ ಅಭಿವೃದ್ಧಿಗಾಗಿ ಮುಜರಾಯಿ ಇಲಾಖೆ ಇರುವುದು. ಶಾಲೆಗಳ ಅಭಿವೃದ್ಧಿಗಾಗಿ ಹಾಗೂ ಶಾಲಾ ಸಂಸ್ಥೆಗಳನ್ನು ನಡೆಸಲು ಬೇರೊಂದು ಇಲಾಖೆ ಇದೆ. ಮಾನ್ಯ ಮಂತ್ರಿಗಳು ಇದನ್ನೇ ಹೇಳುತ್ತಿರುವುದು. ದೇವಸ್ಥಾನದ ಅಭಿವೃದ್ಧಿಗಾಗಿ ಇರುವ ಹಣವನ್ನು ಖಾಸಗಿ ಶಾಲೆಗಳಿಗೆ ಹೇಗೆ ಉಪಯೋಗಿಸುವುದು?

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಶಾಲೆಯವರು ಬಿಸಿಯೂಟದ ಕಾರ್ಯಕ್ರಮದಡಿ ಮನವಿಯನ್ನು ಮಾಡಿಕೊಳ್ಳಲಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳುತ್ತಿರುವ ಮಾತಿಗೆ ಸ್ವಲ್ಪವಾದರೂ ತಾಳ-ಮೇಳ ಇರಬೇಕು. ದೇವಸ್ಥಾನದ ಅಭಿವೃದ್ಧಿಗಾಗಿ ಇರುವ ಹಣವನ್ನು ಖಾಸಗಿ ಶಾಲೆಗಳಿಗೆ ಹೇಗೆ ಉಪಯೋಗಿಸುವುದು? ಇದರ ಅವಶ್ಯಕತೆಯಿಲ್ಲ. . . . **(ಗೊಂದಲ)** . . . ಈ ವಿಚಾರದಲ್ಲಿ ನಾವು ಚರ್ಚೆಯನ್ನು ಮಾಡಿ ಪರಿಹಾರವನ್ನು ಹುಡುಕೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದು ದೇವಸ್ಥಾನದ ಹುಂಡಿಗೆ ಭಕ್ತರು ದೇಣಿಗೆ ನೀಡಿರುವಂತಹ ಹಣವಾಗಿದೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಈ ವಿಚಾರದಲ್ಲಿ ತಿಳಿಸಿದಂತೆ, ನಾವು ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದ ಮೂಲಕ ಖಂಡಿತವಾಗಿಯೂ ಸಹ ವಿದ್ಯಾರ್ಥಿಗಳಿಗೆ ಉಚಿತ ಊಟವನ್ನು ನೀಡಬಹುದು.

**ಸಭಾಪತಿಯವರು:-** ನಾನು ಸದನವನ್ನು ನಡೆಸಬೇಕು. ತಮ್ಮ ಪ್ರತಿಭಟನೆಯನ್ನು ನಿಲ್ಲಿಸಿ ದಯಮಾಡಿ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ. ಸಭೆಯನ್ನು ನಡೆಸುವುದಕ್ಕೆ ಅನುವು ಮಾಡಿ ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಬಡವರ ಮಕ್ಕಳಿಗೆ ಅನ್ನವನ್ನು ಕೊಡಬೇಕು ಎನ್ನುವುದು ನನ್ನ ಆಗ್ರಹ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದಲ್ಲಿ ಶಾಲೆಯವರು ಮನವಿಯನ್ನು ಮಾಡಿಕೊಳ್ಳಲಿ, ಅವರಿಗೆ ಖಂಡಿತವಾಗಿಯೂ ಸಹ ಅವಕಾಶವನ್ನು ಮಾಡಿಕೊಡುತ್ತೇವೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಟ್ರಸ್ಟ್ ಇದೆ ಹಾಗೂ ಕಾನೂನುಗಳನ್ನು ಮಾಡಲಾಗಿದೆ. ಆ ದೇವಸ್ಥಾನಕ್ಕೆ ಬಂದಂತಹ ಭಕ್ತರು ಹುಂಡಿಗೆ ಹಣವನ್ನು ಹಾಕುತ್ತಿದ್ದಾರೆ. ದೇವಸ್ಥಾನದ ಬೋರ್ಡ್‌ನವರು ರೆಸಲ್ಯೂಷನ್‌ವೊಂದನ್ನು ಮಾಡಿಕೊಂಡು ಆ ರೀತಿ ಬಂದಂತಹ ಹಣವನ್ನು ಯಾವುದಾದರೂ ಶಿಕ್ಷಣ ಸಂಸ್ಥೆಗೆ ಸಂಬಂಧಪಡದ ಇಲಾಖೆಯ ಯೋಜನೆಗಳಿಗೆ ಉಪಯೋಗಿಸಿಕೊಂಡರೆ ಹೇಗೆ? ದೇವಸ್ಥಾನಕ್ಕೂ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಯಾವುದೇ ರೀತಿಯ ಸಂಬಂಧವಿಲ್ಲ. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಸರ್ಕಾರವು ಮಧ್ಯಾಹ್ನದ ಬಿಸಿಯೂಟದಂತಹ ಇನ್ನೂ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಹೀಗಾಗಿ ಭಕ್ತರು ದೇವಸ್ಥಾನದ ಅಭಿವೃದ್ಧಿಗಾಗಿ ನೀಡಿರುವಂತಹ ಹಣವನ್ನು ಬೇರೆ ಯೋಜನೆಗಳಿಗೆ ದುರುಪಯೋಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡಿಸಿಕೊಂಡರೆ ಅದಕ್ಕೆ ಹೇಳವವರು-ಕೇಳುವವರು ಯಾರೂ ಇಲ್ಲವೇ? . . . **(ಗೊಂದಲ)** . . . ಅದು ನೀವುಗಳೇ ನೀಡುವಂತಹ ಹಣವಾಗಿರಬಹುದು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸರ್ಕಾರವು ರಾಜಕಾರಣ ಮಾಡುತ್ತಿದೆ.

**(ಗೊಂದಲ)**

**Sri D.K. SHIVAKUMAR:** We will do it.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸರ್ಕಾರವು ರಾಜಕಾರಣ ಮಾಡುತ್ತಿದೆ. ಹೀಗಾಗಿ ಇವರು ಮುಂದೆ ಉದ್ಧಾರ ಆಗುವುದಿಲ್ಲ. ನೀವುಗಳು ನಿಮ್ಮ ಜೀವನದಲ್ಲಿ ಉದ್ಧಾರವಾಗುವುದಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಅಲ್ಲ ನೀವು ವಿರೋಧ ಪಕ್ಷದವರು ಈ ವಿಚಾರದಲ್ಲಿ ರಾಜಕಾರಣವನ್ನು ಮಾಡುತ್ತಿದ್ದೀರಿ. . . . **(ಗೊಂದಲ)** . . . ನಾನು ಮೊನ್ನೆಯ ದಿನ ಕೊಲ್ಲೂರು ದೇವಸ್ಥಾನಕ್ಕೆ ಹೋಗಿದ್ದೆನು. ಅಲ್ಲಿನ ವಿಚಾರಗಳು ನನಗೆ ತಿಳಿದಿವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ರೀತಿಯಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡದೆ, ರಾಜಕಾರಣವನ್ನು ಮಾಡಿಕೊಂಡು ಉಸ್ತುವಾರಿ ಮಂತ್ರಿಗಳಾದ ಶ್ರೀ ರಮಾನಾಥ್ ರೈ ರವರು ಪತ್ರವನ್ನು ಬರೆದು ಉಚಿತ ಊಟದ ವ್ಯವಸ್ಥೆಯನ್ನು ನಿಲ್ಲಿಸಿದ್ದಾರೆ. . . . **(ಗೊಂದಲ)** . . . ಯಾವುದೇ ಕಾರಣಕ್ಕೂ ಸಹ ಇದನ್ನು ಬಿಡುವುದಿಲ್ಲ. ಇದು ಅಕ್ಷಮ್ಯ ಅಪರಾಧವಾಗಿದೆ ಹಾಗೂ ಮಹಾಪಾಪವಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಿಮ್ಮ ಅಧಿಕಾರಾವಧಿಯಲ್ಲಿ ಈ ವಿಚಾರದಲ್ಲಿ ನಿಮ್ಮ ಪಕ್ಷದವರಿಂದ ಅಧಿಕಾರ ದುರುಪಯೋಗ ಮಾಡಲಾಗಿದೆ. ...**(ಗೊಂದಲ)**... That is a different question. ...*(Interruptions)*... They have misused the power of the Trust.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 21 ಶಾಲೆಗಳನ್ನು ದೇವಸ್ಥಾನವು ನಡೆಸುತ್ತಿದೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಯಾವುದೇ ರೀತಿಯ್ದಾದ ಪರ್ಯಾಯ ವ್ಯವಸ್ಥೆಯನ್ನು ಮಾಡದೇ ಇದ್ದಕ್ಕಿದ್ದ ಹಾಗೆ ಉಚಿತ ಊಟದ ವ್ಯವಸ್ಥೆಯನ್ನು ನಿಲ್ಲಿಸಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಭಕ್ತರು ದೇವಸ್ಥಾನಕ್ಕೆ ದುಡ್ಡನ್ನು ನೀಡುತ್ತಾರೆ. ...**(ಗೊಂದಲ)**... It is not possible.

**(ಗೊಂದಲ)**

**ಸಭಾಪತಿಯವರು:-** ಈಗಾಗಲೇ ಚರ್ಚೆಯಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಬಿಸಿಯೂಟದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

**ಸಭಾಪತಿಯವರು:-** ಧರಣಿ ನಿರತ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ. ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ಈ ವಿಚಾರದಲ್ಲಿ ಸರ್ಕಾರದ ನಿಲುವು ಏನು ಎನ್ನುವುದನ್ನು ಸರ್ಕಾರವು ಹೇಳಿದೆ. ಮಾನ್ಯ ಸದಸ್ಯರುಗಳ ಮನಸ್ಸಿಗೆ ಯಾವ ರೀತಿಯಾಗಿ ನೋವು ಆಗಿದೆ, ನಿಮಗೆ ಅನ್ನಿಸಿದ ತೊಂದರೆಗಳ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೀರಿ. ಈ ಕುರಿತು ಪ್ರಶ್ನೋತ್ತರ ಅವಧಿಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಬೇರೆ ರೀತಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ, ಚರ್ಚೆಯನ್ನು ಮಾಡೋಣ. ಅದಕ್ಕೆ ಅವಕಾಶವನ್ನು ನೀಡುತ್ತೇನೆ. ತಮ್ಮ ತಮ್ಮ ಸ್ಥಾನಗಳಿಗೆ ಮಾನ್ಯ ಸದಸ್ಯರುಗಳು ತೆರಳಬೇಕೆಂದು ಮತ್ತೊಮ್ಮೆ ಹೇಳುತ್ತೇನೆ. ಸಭೆಯನ್ನು ನಡೆಸಲು ಅನುವು ಮಾಡಿ ಕೊಡಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಸಲಹೆಯೊಂದನ್ನು ಕೊಡಬಯಸುತ್ತೇನೆ. ಖಾಸಗಿ ಅನುದಾನರಹಿತ ಶಾಲೆಗಳಿಗೆ ಸರ್ಕಾರವು ಉಚಿತ ಊಟದ ವ್ಯವಸ್ಥೆಯನ್ನು ಕೊಡುವುದಕ್ಕೆ ಅವಕಾಶವಿಲ್ಲ. ಮಾನ್ಯ ಮಂತ್ರಿಗಳು ಹೇಳಿದಂತೆ ಮಠದವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಲೆಗಳಿಗೆ ಉಚಿತ ಊಟವನ್ನು ನೀಡಿದರೆ ಅದಕ್ಕೆ ಯಾವುದೇ ರೀತಿಯಾದ ತಕರಾರು ಇಲ್ಲ. ಇದು ಮಠದ ವೈಯಕ್ತಿಕ ವಿಚಾರ. ಅವರು ಊಟ, ಬಟ್ಟೆ ಹಾಗೂ ಇತ್ಯಾದಿಗಳನ್ನು ಕೊಡಬಹುದು. ಮುಜರಾಯಿ ಕಾಯ್ದೆಯ ಪ್ರಕಾರ ಮಠದ ಟ್ರಸ್ಟ್‌ಗೆ ಸಂಪೂರ್ಣ ಅಧಿಕಾರವಿದೆ. ಯಾವುದೇ ಶಾಲೆಗೆ ಉಚಿತ ಊಟವನ್ನು ನೀಡುವುದರಲ್ಲಿ ಯಾವುದೇ ರೀತಿಯಾದ ತಪ್ಪು ಇಲ್ಲ. ಅದರೆ ಈ ವಿಚಾರದಲ್ಲಿ ಸರ್ಕಾರವು ಉಚಿತ ಊಟದ ವ್ಯವಸ್ಥೆಯನ್ನು ಮಾಡುವುದಕ್ಕೆ ಬರುವುದಿಲ್ಲ. ಆದರೆ ಮಠದವರು ಕೊಡಬಹುದು. ದೇವಸ್ಥಾನದವರು ಕೊಟ್ಟರೆ ಕೊಡಲಿ. ಈ ವಿಚಾರದಲ್ಲಿ ಅಲ್ಲಿನ ಟ್ರಸ್ಟ್‌ನವರು ತೀರ್ಮಾನವನ್ನು ತೆಗೆದುಕೊಳ್ಳಲಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಯವರೇ, ಉಚಿತ ಊಟದ ವ್ಯವಸ್ಥೆಯನ್ನು ಮಾಡುವುದು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಯಾವುದೇ ಒಂದು ಟ್ರಸ್ಟ್‌ನವರು ಒಂದು ಊರಿನಲ್ಲಿ ಕಟ್ಟಡಗಳನ್ನು ನಿರ್ಮಿಸಲು ಹಣ ಸಹಾಯವನ್ನು ಮಾಡಬಹುದು, ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟವನ್ನು ನೀಡಬಹುದು. ಅದು ಯಾವುದೇ ರೀತಿಯಾದ ಟ್ರಸ್ಟ್ ಇರಬಹುದು.

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮುಜರಾಯಿ ಇಲಾಖೆಗೆ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟದ ವ್ಯವಸ್ಥೆಯನ್ನು ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಈ ಇಲಾಖೆಗೆ ತನ್ನದೇ ಆದ ಕಾನೂನು ಇದೆ. . . . **(ಗೊಂದಲ)**. . . ಮುಜರಾಯಿ ಇಲಾಖೆಯು ಸಾರ್ವಜನಿಕರಿಗೆ ಸೇರಿದ್ದಾಗಿದೆ ಹಾಗೂ ಇದು ಖಾಸಗಿ ಅಲ್ಲ. . . . **(ಗೊಂದಲ)** . . . ಈ ವಿಚಾರವನ್ನು ಅರ್ಧ ಗಂಟೆ ಚರ್ಚೆಯಡಿ ತೆಗೆದುಕೊಳ್ಳಬಹುದು.

**(ಗೊಂದಲ)**

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿಯವರು ಈ ಹಿಂದೆ ಮುಜರಾಯಿ ಇಲಾಖೆಯ ಮಂತ್ರಿಗಳಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ನಾನು ಹೇಳುವುದನ್ನು ಕೇಳಿ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಕೊಲ್ಲೂರು ಕ್ಷೇತ್ರಕ್ಕೆ ಹೋಗಿದ್ದೇನೆ. ಕಾಗೆ ಕುಳಿತುಕೊಳ್ಳುವುದಕ್ಕೂ ಟೊಂಗೆ ಮುರಿಯುವುದಕ್ಕೂ ಎನ್ನುವ ಗಾದೆ ಹಾಗೆ ವಿರೋಧ ಪಕ್ಷದವರು ಸುಮ್ಮನೆ ಏನೋ ಹೇಳುತ್ತಾರೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ರಮಾನಾಥ್ ರೈರವರನ್ನು ಸುಮ್ಮನೆ ಬಲಿಪಶು ಮಾಡುತ್ತಿದ್ದಾರೆ. . . . **(ಗೊಂದಲ)** . . .

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಉಚಿತ ಊಟದ ವ್ಯವಸ್ಥೆಯನ್ನು ನಿಲ್ಲಿಸುವಂತಹ ಕ್ರಮವನ್ನು ನಾನೇ ತೆಗೆದುಕೊಂಡಿದ್ದೇನೆ. ಸುಮ್ಮನೆ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಹೆಸರನ್ನು ಏಕೆ ಪ್ರಸ್ತಾಪಿಸುತ್ತಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ರಾಜಕಾರಣ ಮಾಡುವುದಕ್ಕಾಗಿ ಹಾಗೂ ಸುಮ್ಮನೆ ವದಂತಿಗಳನ್ನು ಹಬ್ಬಿಸುವುದಕ್ಕಾಗಿ ವಿರೋಧ ಪಕ್ಷದವರು ಈ ರೀತಿಯಾಗಿ ಮಾಡಿದ್ದಾರೆ. . . . **(ಗೊಂದಲ)** . . . ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟವನ್ನು ದೇವಸ್ಥಾನದಿಂದ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ.

**(ಗೊಂದಲ)**

**ಸಭಾಪತಿಯವರು**:- ಸದನವನ್ನು ನಡೆಸಲು ಅವಕಾಶ ಕೊಡೋಣ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೋಟಾ ಶ್ರೀನಿವಾಸ ಪೂಜಾರಿಯವರು ಈ ಹಿಂದೆ ಮುಜರಾಯಿ ಇಲಾಖೆಯ ಮಂತ್ರಿಗಳಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಕಾನೂನಿನಲ್ಲಿ ಏನು ಇದೆ ಅದನ್ನು ಮಾತ್ರವೇ ನಾನು ಹೇಳುತ್ತೇನೆ.

(ಮುಂದು)

(009) 11.50/06-02-2018/CS/AK

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ(ಮುಂದು)**

ಮಾನ್ಯ ಹೊರಟ್ಟಿಯವರು ಹೇಳಿದ ಹಾಗೆ ಮಠಗಳು ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಮಠದಿಂದ ಅವರು ಏನಾದರೂ ಕ್ರಮ ಕೈಗೊಳ್ಳಬಹುದು. ಅಲ್ಲಿಗೆ ನೇರವಾಗಿ ಭಕ್ತಾದಿಗಳಿಂದ ಹಣ ಬರುತ್ತದೆ. ದೇವರ ಹುಂಡಿಗೆ ಬೀಳುವ ಹಣವನ್ನು ನೇರವಾಗಿ ದೇವಸ್ಥಾನದ ಕಾರ್ಯ-ಕಟ್ಟಳೆಗಳಿಗೆ ರಥೋತ್ಸವಗಳಿಗೆ ಉಪಯೋಗ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಸದನವನ್ನು ನಡೆಸುವುದಕ್ಕೆ ನನಗೆ ಅನುವು ಮಾಡಿಕೊಡಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸದಸ್ಯರು ಇನ್ನೂ ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ ಎನ್ನುವಂತಹ ವಿಚಾರ ನನಗೆ ಗೊತ್ತಿತ್ತು. ಏಕೆಂದರೆ ಇನ್ನೂ 6-7 ವಿಚಾರಗಳಿದ್ದವು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು 11 ಗಂಟೆ 51 ನಿಮಿಷಕ್ಕೆ ಮುಂದೂಡಲ್ಪಟ್ಟಿತು)**

(10) 6.2.2018 12.20 ಪಿಕೆ:ವಿಕೆ

(ಸದನವು ಪುನಃ 12.20 ಗಂಟೆಗೆ ಪ್ರಾರಂಭವಾಯಿತು. ಮಾನ್ಯ ಸಭಾಪತಿಗಳು ಪೀಠದಲ್ಲಿ ಉಪಸ್ಥಿತರಿದ್ದರು)

(ಸದನ ಪ್ರಾರಂಭವಾದಾಗ ವಿರೋಧ ಪಕ್ಷದ ಕೆಲವು ಸದಸ್ಯರು ಬಾವಿಯಲ್ಲಿ ಧರಣಿ ನಿರತರಾಗಿದ್ದದ್ದರು)

ಶ್ರೀ **ಕೆ.ಎಸ್.ಈಶ್ವರಪ್ಪ**:-ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳು, ಓದುತ್ತಿರುವ ಆ ಬಡ ಮಕ್ಕಳು ಹಿಂದೂವೇ, ಮುಸಲ್ಮಾನರೇ ಅಥವಾ ಕ್ರಿಶ್ಚಿಯನ್ನರೇ ಯಾರೇ ಆಗಿರಲಿ ಆ ಕುರಿತು ಯೋಚನೆ ಮಾಡದೇ ಅಥವಾ ಶಾಲೆಯನ್ನು ನಡೆಸುತ್ತಿರುವವರು ಯಾವುದೋ ಒಂದು ಪಕ್ಷದವರಾಗಿದ್ದಾರೆ ಎಂಬ ಬಗ್ಗೆ ಯೋಚನೆ ಮಾಡದೆ ಊಟ ನೀಡುವ ವ್ಯವಸ್ಥೆ ಮಾಡಬೇಕು, ಈ ನಿಟ್ಟಿನಲ್ಲಿ ಅವರಿಗೆ ಆಸಕ್ತಿ ಇದೆಯೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು . . .

(ಗೊಂದಲ)

**ಸಭಾಪತಿಯವರು**:- ಇದರ ಬಗ್ಗೆ ಮತ್ತೆ ಹೆಚ್ಚಿನ ಚರ್ಚೆ ಬೇಡ. ಧರಣಿ ನಿರತರು ದಯವಿಟ್ಟು ಅವರವರ ಸ್ಥಾನಗಳಿಗೆ ತೆರಳಬೇಕು. ಮಾನ್ಯ ಸಭಾನಾಯಕರು ಏನು ಹೇಳುತ್ತಾರೋ ಕೇಳೋಣ.

**ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು):**-ಮಾನ್ಯ ಸಭಾಪತಿಗಳೆ, ನಮ್ಮ ಸರ್ಕಾರ ಅಕ್ಷರ ದಾಸೋಹ ಮತ್ತು ಅನ್ನ ದಾಸೋಹ ಎನ್ನುವಂತಹ ಕಾರ್ಯಕ್ರಮಗಳನ್ನೇ ತಂದಿರುವಾಗ ಯಾವುದೇ ಶಾಲೆಗೆ ಊಟ ನಿಲ್ಲಿಸುವ ಪ್ರಶ್ನೆಯೇ ಬರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:-ಮಾನ್ಯ ಸಭಾಪತಿಯವರೇ, ಒಂದು ಸಲ ಹಾವೇರಿ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳು ಪ್ರವಾಸಕ್ಕೆ ಬಂದಿದ್ದಾಗ ಅವರ ಹತ್ತಿರ ಕೆಲವು ಮಕ್ಕಳು ಬಂದು ಮಾತನಾಡಿದರು. ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಟ್ವಿಟ್ ಮಾಡಿ, ಎಳೆಯ ಮಕ್ಕಳಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನಷ್ಟು ಸುಂದರವಾದ ಸಮಾಜವನ್ನು ಕಟ್ಟಿಕೊಡಬೇಕು ಎಂದು ನನಗನಿಸುತ್ತಿದೆ ಎಂದು ಹೇಳಿದ್ದರು. ಮಕ್ಕಳಿಂದ ಅನ್ನ ಕಸಿದುಕೊಂಡಿರುವ ವಿಷಯ ಅವರಿಗೆ ಗೊತ್ತಿಲ್ಲದೇ ಇರಬಹುದು.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಈ ಕುರಿತು ಹೇಳುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಕುರಿತು ಏನು ಸದನದ ಗಮನವನ್ನು ಸೆಳೆದರೋ ಆ ವಿಚಾರವನ್ನು, ಹಿರಿಯ ಮಾನ್ಯ ಸದಸ್ಯರುಗಳ ಸಮಕ್ಷಮದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸೂಕ್ತ ನಿರ್ಧಾರ ಕೈಗೊಳ್ಳುವ ವ್ಯವಸ್ಥೆ ಮಾಡುತ್ತೇನೆ. ಈ ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ನಾನು ಸಹಕರಿಸುತ್ತೇನೆ.

( ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಬಹಳ ಜಾಸ್ತಿ ಆಯಿತು. ಈಗ ಸದನ ನಡೆಯುವ ಅವಧಿಯೇ ಕಡಿಮೆ ಆಗುತ್ತಿದೆ. ಅಪರೂಪಕ್ಕೆ ಪ್ರಶ್ನೆಗಳು ಬಂದಿರುತ್ತವೆ. ಗೌರವಾನ್ವಿತ ಎಲ್ಲಾ ಸದಸ್ಯರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ನಾನು, ಚುಟುಕಾಗಿ ಪ್ರಶ್ನೆ ಕೇಳಬೇಕು ಮತ್ತು ಚುಟುಕಾಗಿ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಹೀಗೆ ಮಾಡಿದರೆ ಉಳಿದ ಪ್ರಶ್ನೆಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ದಯಮಾಡಿ ಸಹಕಾರ ಕೊಡಿ.

**ಪ್ರಶ್ನೆ ಸಂಖ್ಯೆ : 42**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ತಿರುಪತಿಯಲ್ಲಿ ಕರ್ನಾಟಕದಿಂದ ಹೋಗುವಂತಹ ಭಕ್ತಾದಿಗಳಿಗೆ ಸಾಕಷ್ಟು ಸೌಲಭ್ಯಗಳ ಕೊರತೆ ಇದೆ. ಅಲ್ಲಿರುವ ಹಳೆಯ ವಸತಿ ಗೃಹಗಳನ್ನು ಒಡೆದು ಹಾಕಿದ್ದಾರೆ. ಹಿಂದೆ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಏನು ನವೀಕರಣ ಕೆಲಸ ಮಾಡಿಸಿದ್ದರೋ ಅಷ್ಟು ಮಾತ್ರ ಉಪಯೋಗಕ್ಕೆ ಬರುತ್ತಿದೆ. ಅಲ್ಲಿನ ಜಾಗದ ವಿವಾದ ಕೂಡ ಕೋರ್ಟ್‌ನಲ್ಲಿದೆ ಎಂದು ಮಾಹಿತಿ ಕೊಟ್ಟಿದ್ದಾರೆ. ಕೋರ್ಟ್‌ನಿಂದ ಆದಷ್ಟು ಬೇಗ ತೀರ್ಮಾನ ಬರುವಂತಹ ನಿಟ್ಟಿನಲ್ಲಿ ಸೂಕ್ತ ವ್ಯವಸ್ಥೆ ಮಾಡಿಸಿ ಕರ್ನಾಟಕದ ಭಕ್ತಾದಿಗಳಿಗೆ ವಸತಿ ಸೌಕರ್ಯ ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಅಧಿಕಾರಿಗಳು ಆಂಧ್ರಪ್ರದೇಶದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದಾರೆ. ಮುಖ್ಯಮಂತ್ರಿಗಳಿಂದ ಈಗಾಗಲೇ ಒಂದು ಪತ್ರ ಕೂಡ ಕಳುಹಿಸಿ ಕೊಡಲಾಗಿದೆ. ಅಲ್ಲದೇ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಕೋರ್ಟ್‌ನಲ್ಲಿರುವ ತಡೆಯಾಜ್ಞೆಯನ್ನು ಹಿಂಪಡೆಯಲು ಒಪ್ಪಿಕೊಂಡಿದ್ದಾರೆ. ನೀಲ ನಕ್ಷೆ ರೆಡಿಯಾಗಿದೆ. ಸದ್ಯದಲ್ಲೇ ವಸತಿ ಗೃಹಗಳನ್ನು ಕಟ್ಟಲು ಮುಖ್ಯ ಮಂತ್ರಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅಡಿಗಲ್ಲು ಹಾಕುವ ಕೆಲಸ ಮಾಡುತ್ತೇವೆ, ಅದಕ್ಕೆ ನಾವು ತಯಾರಾಗಿದ್ದೇವೆ. ಈ ಕೆಲಸ ಆದಷ್ಟು ಬೇಗ ಆಗುತ್ತದೆ. ಈ ಕೆಲಸವಾದರೆ ನಮ್ಮಿಂದ ಹೋಗುವ ಯಾತ್ರಾರ್ಥಿಗಳಿಗೆ ಎಲ್ಲಾ ರೀತಿಯ ಅನುಕೂಲ ಸಿಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿನ ಮಾಜಿ ಸಚಿವರೊಬ್ಬರು ಅಲ್ಲಿ ದಾಸೋಹ ಎಂದು ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆಯೋ ಇಲ್ಲವೋ ಗೊತ್ತಿಲ್ಲ, ಅದರ ಮಾಹಿತಿ ಇಲ್ಲ. ಕೂಡಲೇ ಅದನ್ನು ನಿಲ್ಲಿಸಿ ಸರ್ಕಾರವೇ ದಾಸೋಹದ ಯೋಜನೆ ಮಾಡಬೇಕು, ಇಂದಿರಾ ಕ್ಯಾಂಟೀನ್ ತರಹ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸೋಮಣ್ಣ ಮ ಬೇವಿನಮರದ:-** ಮಾನ್ಯ ಸಭಾಪತಿಯವರೇ, ಸರ್ಕಾರ ಏನಾದರೂ ಸೂಕ್ತ ಕ್ರಮ ಕೈಗೊಂಡ ಮೇಲೆ ಪ್ರಸ್ತುತ ಅಲ್ಲಿ ನಡೆಯುತ್ತಿರುವ ದಾಸೋಹವನ್ನು ನಿಲ್ಲಿಸಲಿ. ಮೊದಲೇ ನಿಲ್ಲಿಸಿಬಿಟ್ಟರೆ ಕರ್ನಾಟಕದಿಂದ ಹೋದವರಿಗೆ ತೊಂದರೆ ಆಗುತ್ತದೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಸರ್ಕಾರ ಮಾಡಲಿ ಅಥವಾ ಬಿಡಲಿ, ಮೊದಲು ಅದನ್ನು ನಿಲ್ಲಿಸಬೇಕು. ಏಕೆಂದರೆ ಅಲ್ಲಿರುವ ಕೊಠಡಿಗಳನ್ನು ಅವರೇ ತಮ್ಮ ವಶಕ್ಕೆ ಇಟ್ಟುಕೊಂಡು ಇಷ್ಟ ಬಂಧುವರಿಗೆ ಕೊಡುವಂತಹ ಕೆಲಸಗಳಾಗುತ್ತಿವೆ. ಹಾಗಾಗಬಾರದು.

**ಸಭಾಪತಿಯವರು:-** ಮಾನ್ಯ ಸಚಿವರು ಇದಕ್ಕೆ ಏನು ಉತ್ತರ ಕೊಡುತ್ತಾರೆ ನೋಡೋಣ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ : 39

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಹೊಸದಾಗಿ ಎಷ್ಟು ಪಶು ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ, ಮುಂದೆ ಇನ್ನೆಷ್ಟು ಪಶು ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ ಎಂಬುದನ್ನು ತಿಳಿಸಬೇಕು. ಪಶು ವೈದ್ಯರ ಕೊರತೆಯಿಂದ ಪಶುಚಿಕಿತ್ಸಾ ಕೇಂದ್ರಗಳು ಮುಚ್ಚುವ ಹಂತದಲ್ಲಿದ್ದು ಈ ನಿಟ್ಟಿನಲ್ಲಿ ಇಲಾಖೆ ಯಾವ ಕ್ರಮಗಳನ್ನು ರೂಪಿಸಿಕೊಂಡಿದೆ? ಹೊಸ ವೈದ್ಯರ ನೇಮಕ ಮಾಡಿಕೊಳ್ಳುವ ಉದ್ದೇಶವಿದೆಯೇ ಎಂದು ಸರ್ಕಾರವನ್ನು ಕೇಳಿದ್ದೇನೆ. ಮಾನ್ಯ ಸಚಿವರು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. 476 ಜನ ಪಶು ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದೇವೆ, ಆದರೆ ಅವರಿಗೆ ನೇಮಕದ ಆದೇಶ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಆದಷ್ಟು ಬೇಗ ಅವರಿಗೆ ನೇಮಕಾತಿ ಆದೇಶ ಕೊಡಬೇಕು. ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸುಮಾರು ಪಶು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯರು ಇಲ್ಲದೇ ಜಾನುವಾರುಗಳನ್ನು ಶುಶ್ರೂಷೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಷ್ಟು ಬೇಗ ಈ ನಿಟ್ಟಿನಲ್ಲಿ ಗಮನಹರಿಸಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎ. ಮಂಜು:-** ಮಾನ್ಯ ಸಭಾಪತಿಯವರೇ, 2014ರಲ್ಲಿ 100 ಪಶು ಚಿಕಿತ್ಸಾಲಯಗಳನ್ನು ಹೊಸದಾಗಿ ಪ್ರಾರಂಭಿಸಿದ್ದೇವೆ. 100 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿದ್ದೇವೆ. 4 ವರ್ಷಗಳಲ್ಲಿ ವರ್ಷಕ್ಕೆ 302 ರಂತೆ 1512 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಂಡಿದ್ದೇವೆ. ಈಗಾಗಲೇ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. 742 ಪಶು ವೈದ್ಯ ಅಧಿಕಾರಿಗಳ ಹುದ್ದೆ ಖಾಲಿ ಇದೆ, ಇದರಲ್ಲಿ 476 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಅಂತಿಮ ಪಟ್ಟಿಯ ಘೋಷಣೆ ಕೂಡ ಮಾಡಿದ್ದೇವೆ. ಈ ನೇಮಕಾತಿಯಲ್ಲಿ ಜಾತಿ ಸಿಂಧುತ್ವ ಪತ್ರವನ್ನು ಮೊದಲು ಪಡೆದು ನಂತರ ಆದೇಶ ಕೊಡಬೇಕು ಎಂಬ ನಿಯಮ ಇದೆ. ಆದರೆ ನಾವು ಮೊದಲು ಆದೇಶವನ್ನು ಹೊರಡಿಸಿ ನಂತರ ಸಿಂಧುತ್ವ ಪ್ರಮಾಣ ಪತ್ರ ಪಡೆಯಬೇಕೆಂದು ಮನವಿ ಮಾಡಿದ್ದೇನೆ. ಜೊತೆಗೆ, 126 ಹುದ್ದೆಗಳನ್ನು 371 ಜೆ ಅಡಿ ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದ್ದು, ಅಂತಿಮ ದಿನಾಂಕಕ್ಕೆ 108 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ. ಸಲ್ಲಿಸಿರುವ ಅರ್ಜಿಗಳ ಪರಿಶೀಲನಾ ಕಾರ್ಯದ ಪ್ರಕ್ರಿಯೆ ಜಾರಿಯಲ್ಲಿದೆ. ಇಡೀ ರಾಷ್ಟ್ರದಲ್ಲೇ ಕರ್ನಾಟಕ ರಾಜ್ಯ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರಿರುವ ರಾಜ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ : 26

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, 2017-18ನೇ ಸಾಲಿನಲ್ಲಿ ತೊಗರಿ, ಜೋಳ, ರಾಗಿ, ಮೆಕ್ಕೆ ಜೋಳ ಈ ಬೆಳೆಗಳನ್ನು ರಾಜ್ಯಾದ್ಯಂತ ಎಷ್ಟು ಹೆಕ್ಟೇರ್‌ಗಳಲ್ಲಿ ಬೆಳೆಯಲಾಗಿದೆ ಮತ್ತು 2017-18ನೇ ಸಾಲಿನಲ್ಲಿ ಸದರಿ ಬೆಳೆಗಳಿಗೆ ಬೆಂಬಲ ಬೆಲೆ ನೀಡಿ ಎಷ್ಟು ಪ್ರಮಾಣದಲ್ಲಿ ಖರೀದಿಸಲಾಗಿದೆ ಎಂಬ ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರು ಇವಗಳಿಗೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಗಳೆ, ರಾಗಿ, ಜೋಳ ಮತ್ತು ತೊಗರಿ ಬೆಳೆಗಳು ಬಹಳ ಅವಶ್ಯಕವಾದ ಬೆಳೆಗಳು. ಈ ಬೆಳೆಗಳಿಗೆ ಇನ್ನೂ ಹೆಚ್ಚಿನ ಬೆಂಬಲ ಬೆಲೆ ಕೊಟ್ಟು ಖರೀದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, 2017-18ರ ಹಿಂಗಾರು-ಮುಂಗಾರು ಹಂಗಾಮಿನಲ್ಲಿ ಹೆಸರು ಕಾಳು, ಉದ್ದಿನ ಕಾಳು, ಶೇಂಗಾ, ತೊಗರಿ, ಕಡಲೆಕಾಳು ಮತ್ತು ರಾಗಿ ಬೆಳೆಗಳನ್ನು ಖರೀದಿ ಮಾಡಲು ಆರಂಭ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ, ಅವಶ್ಯಕತೆ ಬಂದರೆ ಬಿಳಿ ಜೋಳ ಖರೀದಿ ಮಾಡುವುದಕ್ಕೆ ತಯಾರಿ ಮಾಡಿಕೊಂಡಿದ್ದೇವೆ. ಇಲ್ಲಿಯವರೆಗೂ ಎಲ್ಲಾ ಬೆಳೆಗಳು ಸೇರಿದಂತೆ ಒಟ್ಟು ಸುಮಾರು 18 ಲಕ್ಷ ಕ್ವಿಂಟಾಲ್ ಖರೀದಿ ಮಾಡಿದ್ದೇವೆ. ಇಲ್ಲಿಯವರೆಗೆ ರೂ.1038 ಕೋಟಿ ಮೌಲ್ಯದ ಬೆಳೆಗಳನ್ನು ಖರೀದಿ ಮಾಡಿದ್ದೇವೆ ಮತ್ತು ಇದನ್ನು ಇನ್ನೂ ಮುಂದುವರೆಸಿದ್ದೇವೆ. ತೊಗರಿ ಬೆಳೆ ಇನ್ನೂ ಅರ್ಧ ಅಷ್ಟೇ ಖರೀದಿ ಆಗಿದೆ, ಕಡಲೆ ಈಗ ಆರಂಭವಾಗಿದೆ, ರಾಗಿಯೂ ಈಗ ಆರಂಭವಾಗಿದೆ, ಜೋಳ ಸಹ ಇನ್ನೂ ಬರುವುದಿದೆ. ಎಲ್ಲಾ ಮುಗಿಯುವುದರೊಳಗೆ ಈ ವರ್ಷ ಒಂದೂವರೆಯಿಂದ ಎರಡು ಸಾವಿರ ಕೋಟಿ ಮೌಲ್ಯದ ಖರೀದಿ ಆಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಗಿ ಖರೀದಿಗೆ ಸಂಬಂಧಪಟ್ಟಂತೆ ಸುಮಾರು 31 ಕಡೆ ಖರೀದಿ ಕೇಂದ್ರಗಳನ್ನು ತೆಗೆದಿದ್ದೇವೆ. ರಾಗಿ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ಧನವನ್ನು ಕೊಡುತ್ತಿದ್ದೇವೆ, ಬೋನಸ್ ಪ್ರೈಸ್ ಕೊಡುತ್ತಿದ್ದೇವೆ. ಎಂಎಸ್‌ಪಿ ಮೇಲೆ ರೂ 400 ಬೋನಸ್ ಕೊಟ್ಟು, ಕ್ವಿಂಟಾಲ್‌ಗೆ ರೂ. 2300 ಕೊಟ್ಟು ಖರೀದಿ ಮಾಡುತ್ತಿದ್ದೇವೆ. ಖರೀದಿಯಿಂದ ಹಿಂದೆ ಸರಿಯುವ ಪ್ರಶ್ನೆಯಿಲ್ಲ ಎಂದು ಸದೃಢವಾಗಿ ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ರೂ. 2300 ಎಂದು ಘೋಷಣೆ ಮಾಡಿದ ಮೇಲೆ, ಮಾರುಕಟ್ಟೆಯಲ್ಲಿ ರೂ. 1600 ಬೆಲೆ ಇದ್ದದ್ದು ತಾನೇ ತಾನಾಗಿ ರೂ. 2000-2200ಕ್ಕೆ ಬಂದಿರುವುದರಿಂದ ಬಹುಶಃ ರೈತರು ಅಲ್ಲೇ ಮಾರಾಟ ಮಾಡುತ್ತಿರಬಹುದು. ಆದರೆ ನಮ್ಮ ಖರೀದಿ ಕೇಂದ್ರಗಳನ್ನಂತೂ ತೆರೆದಿದ್ದೇವೆ. (ಮುಂದು . . .)

ಶ್ರೀ ಕೃಷ್ಣಭೈರೇಗೌಡ(ಮುಂದು):-

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ನಮ್ಮ ಖರೀದಿ ಕೇಂದ್ರಗಳನ್ನು ತೆಗೆದಿದ್ದೇವೆ. ಈ ಬೆಳೆಗಳ ಪೈಕಿ ಕೆಲವು ಬೆಳೆಗಳ ಖರೀದಿ ಅವಧಿ ಮುಗಿದಿದೆ, ಕೆಲವು ನಡೆಯುತ್ತಿವೆ. ರೈತರು ತಂದುಕೊಡುವುದನ್ನೆಲ್ಲಾ ಖರೀದಿ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ರಾಗಿಯನ್ನು ನಾವು ಖರೀದಿ ಮಾಡುತ್ತೇವೆ. ನಮ್ಮ ಸರ್ಕಾರದಿಂದ ಬಹಳ aggressive ಆಗಿ ಖರೀದಿ ಮಾಡುತ್ತಿದ್ದೇವೆ. ಈಗಾಗಲೇ 13,22,000 ಕ್ವಿಂಟಾಲ್ ತೊಗರಿ ಖರೀದಿಯಾಗಿತ್ತು. ಇದರ ಜೊತೆಗೆ ಇನ್ನೂ 13 ಲಕ್ಷ ಕ್ವಿಂಟಾಲ್ ಖರೀದಿ ಮಾಡಿದ್ದೇವೆ. 793 ಕೋಟಿ ರೂಪಾಯಿಗಳಷ್ಟು ಮೌಲ್ಯದ ತೊಗರಿ ಇಲ್ಲಿಯವರೆಗೆ ಖರೀದಿಯಾಗಿದೆ. ನೋಂದಣಿ ಮಾಡಿಕೊಳ್ಳುವ ಸಮಯ ಮುಕ್ತಾಯವಾಗಿರಬಹುದು, ಆದರೆ ಖರೀದಿಗೆ ಇನ್ನು ಸಮಯವಿದೆ. ನಮ್ಮ ನಾಲ್ಕೂವರೆ ವರ್ಷದ ಅವಧಿಯಲ್ಲಿ 5,99,000 ರೈತರಿಂದ ಒಟ್ಟು 5769 ಕೋಟಿ ಮೌಲ್ಯದ ಖರೀದಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಅದನ್ನು ಹಿಂದಿನ ಐದು ವರ್ಷಗಳಿಗೆ ಹೋಲಿಕೆ ಮಾಡಿದರೆ 2,24,000 ರೈತರಿಂದ ಒಟ್ಟು 1433 ಕೋಟಿಯಷ್ಟು ಖರೀದಿಯಾಗಿತ್ತು. ಖರೀದಿಯಾಗಿತ್ತು. So, almost three times ಹೆಚ್ಚಿನ ಖರೀದಿಯನ್ನು ಈ ನಾಲ್ಕೂವರೆ ವರ್ಷದಲ್ಲಿ ಮಾಡಿದ್ದೇವೆ. ಇದು ಕೇಂದ್ರ ಸರ್ಕಾರದ ಮೇಲೂ ಅವಲಂಬನೆಯಾಗಿದೆ. ಕೇಂದ್ರ ಸರ್ಕಾರಕ್ಕೆ ತೊಗರಿಗೆ additional quantityಗೆ ಕೇಳಿಕೊಂಡಿದ್ದೇವೆ. ಅದಕ್ಕೆ ಅವರ ಅನುಮತಿ ಬಂದ ಮೇಲೆ ಅದರ ಪ್ರಕಾರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು:-** ಇನ್ನೂ ಖರೀದಿ ಮಾಡುತ್ತೇವೆಂದು ಹೇಳಿದರೂ ನಿಮಗೆ ಸಮಾಧಾನವಾಗಲಿಲ್ಲವೆಂದರೆ ನಾನೇನು ಮಾಡಲಿ?

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನೂ ಸಮಯವಿದೆ, ಸಮಯಕ್ಕೆ ಸಮಸ್ಯೆ ಇಲ್ಲ. Quantityಗೆ restriction ಇದೆ. Quantity additional ಕೊಟ್ಟರೆ ಮಾತ್ರ ನಾವು ಇಲ್ಲಿ reopen ಮಾಡುವುದಕ್ಕಾಗುತ್ತದೆ. ನಮ್ಮ ಹತ್ತಿರ ರೈತರು ಸುಮಾರು 60 ಲಕ್ಷ ಕ್ವಿಂಟಾಲ್ ನೋಂದಣಿ ಮಾಡಿದ್ದಾರೆ. ಕೇಂದ್ರ ಸರ್ಕಾರದ ಅನುಮತಿ ತೆಗೆದುಕೊಂಡು ಅದನ್ನು ಸಹ extension ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. It again depends on the permission of the Central Government. Without their permission we can't do that. ಅದನ್ನು ಪ್ರಯತ್ನ ಮಾಡುತ್ತಿದ್ದೇವೆ. ಖರೀದಿಯನ್ನು ಮುಂದುವರೆಸುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮೆಕ್ಕೆಜೋಳವನ್ನು ಖರೀದಿ ಮಾಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣಭೈರೇಗೌಡ**:– ಮಾನ್ಯ ಸಭಾಪತಿಯವರೇ, ಭಾರತ ಸರ್ಕಾರದವರು ಮೆಕ್ಕೆಜೋಳದ ಖರೀದಿಗೆ ಅನುಮತಿಯನ್ನು ಕೊಡಲಿಲ್ಲ. ಅನುಮತಿ ನಿರಾಕರಣೆ ಮಾಡಿರುವುದರಿಂದ ಮಧ್ಯೆ ಪ್ರವೇಶ ಮಾಡಿ ಖರೀದಿ ಮಾಡುವುದಕ್ಕಾಗುತ್ತಿಲ್ಲ.

**ಶ್ರೀ ಸೋಮಣ್ಣ ಮ.ಬೇವಿನಮರದ**:– ಮಾನ್ಯ ಸಭಾಪತಿಯವರೇ, ಹಾವೇರಿ ಜಿಲ್ಲೆಯಲ್ಲಿ. . . . .

**ಸಭಾಪತಿಯವರು**:– ಇದು ಕೃಷಿ ಇಲಾಖೆಯ ಬಗ್ಗೆ ಚರ್ಚೆಯಲ್ಲ. ಮಾನ್ಯ ಸದಸ್ಯರಾದ ಜಯಮ್ಮರವರು ಪ್ರಶ್ನೆಯನ್ನು ಕೇಳಿದ್ದಾರೆ. ತಾವು ಉಪ ಪ್ರಶ್ನೆಯನ್ನು ಕೇಳಿದ್ದೀರಿ, ಸಾಕು ಬಿಡಿ.

**ಶ್ರೀ ಕೃಷ್ಣಭೈರೇಗೌಡ**:– ಅವಶ್ಯಕತೆ ಇದ್ದರೆ ಹಾವೇರಿ ಜಿಲ್ಲೆಯಲ್ಲಿ ಇವತ್ತೇ ಓಪನ್ ಮಾಡುವುದಕ್ಕೆ ನಾನು ಸೂಚನೆ ಕೊಡುತ್ತೇನೆ.

**Mr. CHAIRMAN:-** It is not a discussion on the Agriculture Department. Please sit down.

**ಚುಕ್ಕೆ ಪ್ರಶ್ನೆ ಸಂಖ್ಯೆ:25**

**ಸಭಾಪತಿಯವರು**:– ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ**:– ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ಏಕೆಂದರೆ, ಈ ಅಧಿವೇಶನ ಸರ್ಕಾರದ ಕೊನೆಯ ಅಧಿವೇಶನವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಹೋದರೂ, ನಾವು 8145 ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದ್ದೇವೆಂದು ಹೇಳುತ್ತಾರೆ. ಒಬ್ಬ ರೈತನ ಖಾತೆಗೂ ಒಂದು ನಯಾಪೈಸೆ ಜಮಾ ಮಾಡಿಲ್ಲ.

**ಸಭಾಪತಿಯವರು**:– ಮಾನ್ಯ ಸಭಾನಾಯಕರು ಇದರ ಬಗ್ಗೆ ಏನು ಹೇಳುತ್ತಾರೆ ಕೇಳೋಣ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ**:– ಮಾನ್ಯ ಸಭಾಪತಿಯವರೇ, ನಾನು ಕೈಮುಗಿಯುತ್ತೇನೆ, ದಯವಿಟ್ಟು ಉತ್ತರ ಕೊಡಲಿ.

**ಸಭಾಪತಿಯವರು**:– ತಮಗೆ ಉತ್ತರ ಬೇಡವೇ? ಮಾನ್ಯ ಸಭಾನಾಯಕರೆ, ಅವರಿಗೇನು ಉತ್ತರ ಬೇಡವಂತೆ, ಅವರು ಒಂದು statement ಮಾಡುತ್ತಾರಂತೆ. ಅದನ್ನು ಕೇಳೋಣ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ರೈತರ ಸಾಲ ಮನ್ನಾ ಮಾಡುತ್ತೇವೆಂದು ಇಡೀ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಪ್ರಚಾರ ಮಾಡಿಕೊಂಡು ಬಂದಿದ್ದಾರೆ. ರೈತರ ಸಾಲದ ಬಗ್ಗೆ ಸ್ಪಷ್ಟ ಮಾಡಲಿಲ್ಲವೆಂದರೆ ಹೇಗೆ?

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಂತ್ರಿಗಳಿಂದ ಆದಷ್ಟು ಬೇಗ ನಾಳೆ ಅಥವಾ ನಾಳಿದ್ದು ನಾನು ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

ಚುಕ್ಕೆ ಪ್ರಶ್ನೆ ಸಂಖ್ಯೆ: 24
ಉತ್ತರ ಲಗತ್ತಿಸಲಾಗಿದೆ

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, 2014-15 ರ ಪ್ರಕಾರ ಕುಂದಗೋಳ, ಹುಬ್ಬಳ್ಳಿ ನ್ಯಾಯಾಲಯ ಕಟ್ಟಡಗಳು 764 ಲಕ್ಷ ರೂಪಾಯಿಗಳ ಅಂದಾಜು ಮೊತ್ತದಲ್ಲಿ ಕೇವಲ 4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು ಕೆಲಸ ಆಗಬೇಕಾಗಿದೆ ಎಂದು ಹೇಳುತ್ತಾರೆ. ಈಗಾಗಲೇ ಎರಡು-ಮೂರು ವರ್ಷಗಳಾಗಿವೆ. ಇನ್ನೂ ಆಗುತ್ತಿಲ್ಲ. ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಸರ್ಕಿಟ್ ಹೌಸ್ ಆವರಣದಲ್ಲಿ ಹೊಸ ಗೆಸ್ಟ್ ಹೌಸ್ ನಿರ್ಮಾಣಕ್ಕೆ 400 ಲಕ್ಷ ಅಂದಾಜು ಮೊತ್ತದಲ್ಲಿ 25 ಲಕ್ಷ ರೂಪಾಯಿಗಳನ್ನು ಮಾತ್ರ ವೆಚ್ಚ ಮಾಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅಡಿಪಾಯದ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ಈ ರೀತಿ ಸಾಕಷ್ಟು ಇವೆ. ಧಾರವಾಡದಲ್ಲಿ ಸರ್ಕಿಟ್ ಹೌಸ್ ಸಲುವಾಗಿ 100 ಲಕ್ಷ ಅಂದಾಜು ಮೊತ್ತದಲ್ಲಿ ಹಣವನ್ನೇ ಬಿಡುಗಡೆ ಮಾಡಿಲ್ಲ. ಕಾಮಗಾರಿ ಪ್ರಗತಿಯಲ್ಲಿದೆ ಎಂದು ಹೇಳುತ್ತಾರೆ. ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಸರ್ಕಿಟ್ ಹೌಸ್ ಆವರಣದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ವಸತಿ ಗೃಹ ನಿರ್ಮಾಣದಲ್ಲಿ ಲಿಫ್ಟ್, ಎಲೆಕ್ಟ್ರಿಕಲ್ ಕೆಲಸ ಆಗಬೇಕಾಗಿದೆ. ಅದಕ್ಕೆ 50 ಲಕ್ಷ ಅಂದಾಜು ಮೊತ್ತದಲ್ಲಿ 17 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಆ ಕಾಮಗಾರಿಯೂ ಆಗುತ್ತಿಲ್ಲ. ಧಾರವಾಡದಲ್ಲಿ 'ಸಿ' ದರ್ಜೆಯ ವಸತಿ ಗೃಹ ನಿರ್ಮಾಣಕ್ಕೆ 200 ಲಕ್ಷ ಅಂದಾಜು ಮೊತ್ತದಲ್ಲಿ ಕೇವಲ 72 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ನಾನು ಬಹಳ ಮುಖ್ಯವಾಗಿ ಹೇಳುವುದೇನೆಂದರೆ, ಗದಗ ಪಟ್ಟಣದಲ್ಲಿ ಜೂನಿಯರ್ ಕಾಲೇಜಿಗೆ ಹಾಗೂ ಗದಗ ತಾಲ್ಲೂಕಿನ ಸೊರಟೂರ ಗ್ರಾಮದಲ್ಲಿ ಜೂನಿಯರ್ ಕಾಲೇಜ್ ನಿರ್ಮಾಣಕ್ಕೆ ಒಂದೊಂದು ಕೋಟಿಯಂತೆ ಕಾಮಗಾರಿಯ ಅಂದಾಜು ಮೊತ್ತವನ್ನು ತೋರಿಸುತ್ತಾರೆ. ಅದರಲ್ಲಿ 50 ಪರ್ಸೆಂಟ್ ಹಣ ಬಿಡುಗಡೆ ಮಾಡಿದ್ದಾರೆ, ಮತ್ತೊಂದು ಕಡೆ 30 ಪರ್ಸೆಂಟ್ ಬಿಡುಗಡೆ ಮಾಡಿದ್ದಾರೆ. 51 ಲಕ್ಷ, 38 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮುಗಿದಿದೆ ಎಂದು ತೋರಿಸುತ್ತಾರೆ. ಪರ್ಸೆಂಟೇಜ್ ಎಂದು ಹೇಳುತ್ತಾರಲ್ಲಾ, ಅದು ಎದ್ದು ಕಾಣುತ್ತಿದೆ. ಗದಗ ನ್ಯಾಯಾಲಯ, ಇವೆಲ್ಲಾ ಕೋರ್ಟ್ ಸಂಕೀರ್ಣಗಳು. ಇಲ್ಲೆಲ್ಲಾ ಅವ್ಯವಹಾರವಾಗಬಾರದು. ಗದಗ ಜಿಲ್ಲೆಯಲ್ಲಿ ಮೂರು ನ್ಯಾಯಾಲಯಗಳ ಕೆಲಸ ನಡೆದಿದೆ. ಮಾನ್ಯ ಎಚ್.ಕೆ.ಪಾಟೀಲ್‌ರವರು ಸದನದಲ್ಲಿದ್ದಾರೆ. 567 ಲಕ್ಷ, 273 ಲಕ್ಷ, 895 ಲಕ್ಷ, ಇದರಲ್ಲಿ 1 ಲಕ್ಷ 27 ಸಾವಿರ ತಗುಲಿದ ವೆಚ್ಚ ಎಂದು ತೋರಿಸುತ್ತಾರೆ. ಕೆಲಸ ಮುಗಿದಿದೆ ಎಂದು ತೋರಿಸುತ್ತಾರೆ. ಈ ಉತ್ತರ ಬಹಳ ಅಸಹ್ಯವಾಗಿದೆ. 273 ಲಕ್ಷ ರೂಪಾಯಿಗಳಲ್ಲಿ ತಗುಲಿದ ವೆಚ್ಚ 69 ಲಕ್ಷ ಎಂದು ಹೇಳಿದ್ದಾರೆ. ಕೆಲಸ ಮುಗಿದಿದೆ ಎಂದು ಹೇಳುತ್ತಾರೆ. 895 ಲಕ್ಷ ರೂಪಾಯಿಗಳಲ್ಲಿ ತಗುಲಿದ ವೆಚ್ಚ 74 ಲಕ್ಷ ರೂಪಾಯಿಗಳು ಎಂದು ಹೇಳುತ್ತಾರೆ. ಕೆಲಸ ಮುಗಿದಿದೆ ಎಂದು ಹೇಳುತ್ತಾರೆ. ಈ ರೀತಿ ಇನ್ನು ಬಹಳ ಇವೆ. ನಾನು ತಡವಾಗಿ ಬಂದಿರುವುದರಿಂದ ಉತ್ತರವನ್ನು ಸರಿಯಾಗಿ ಓದುವುದಕ್ಕಾಗಿಲ್ಲ. ಹಣವೇ ಬಿಡುಗಡೆಯಾಗಿಲ್ಲ, ಕೆಲಸ ಮುಗಿದಿದೆ ಎಂದು ಹೇಳುತ್ತಾರೆ. ಇದು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿರುವ ಹಾಗೆ ಪರ್ಸೆಂಟೇಜ್ ರೀತಿಯ ಲೆಕ್ಕವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರದೀಪ್ ಶೆಟ್ಟರ್‌ರವರು ಇದೇ ತರಹದ ಪ್ರಶ್ನೆಯನ್ನು ಕೇಳುತ್ತಿರುತ್ತಾರೆ. ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಕಟ್ಟಡ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು, ಎಷ್ಟು ಕೆಲಸಗಳಾಗಿವೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಕಳೆದ ಮೂರು ವರ್ಷಗಳಿಂದ 2014-15, 2015-16 ಹಾಗೂ 2016-17ನೇ ಸಾಲಿನಲ್ಲಿ ಆಗಿರುವಂತಹ ಕಾಮಗಾರಿಗಳ ಬಗ್ಗೆ ವಿವಿರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಬಹುತೇಕ ಕಟ್ಟಡಗಳು ಕೇಂದ್ರ ಸರ್ಕಾರದ ನ್ಯಾಯಾಲಯಗಳಿಂದ ಬರುವುದು, ಕೇಂದ್ರ ಸರ್ಕಾರ ಕೊಡತಕ್ಕಂಥ reimbursement ನಿಂದ ಮಾಡಬೇಕು. ಎಲ್ಲಾ ರಾಜ್ಯದಲ್ಲಿ ಕೋರ್ಟ್‌ನವರದು ಒಂದು Building Committee ಇದೆ. ಅದರಲ್ಲಿ ಸಿಟ್ಟಿಂಗ್ ಜಡ್ಜ್‌ನವರು ಅಧ್ಯಕ್ಷರಾಗಿರುತ್ತಾರೆ. ಅವರು ಏನೇನು ತೀರ್ಮಾನ ಮಾಡುತ್ತಾರೆಯೋ ಅದೆಲ್ಲಾ ನಾವು ಅಪ್ರೂವ್ ಮಾಡಿಕೊಂಡು ಮಾಡಿದ್ದೇವೆ. ಆದರೆ ಕೇಂದ್ರ ಸರ್ಕಾರ 50 ಪರ್ಸೆಂಟ್ ಹಣವನ್ನು ಕೊಟ್ಟಿಲ್ಲ. ಕೆಲವು ಕಡೆ ಜಾಗಗಳನ್ನು ಗುರುತು ಮಾಡುವುದಕ್ಕಾಗಿಲ್ಲ. ಉಳಿದಂತೆ ನಾವು ನಮ್ಮ ಸರ್ಕಾರಿ ಕಟ್ಟಡಗಳಿಗೆ ಏನು ಬೇಕು ಅದನ್ನು ಕೊಟ್ಟಿದ್ದೇವೆ. ಒಟ್ಟು ಈ ನಾಲ್ಕೂವರೆ ವರ್ಷದಲ್ಲಿ 121 ಕಟ್ಟಡಕ್ಕೆ ಸಂಬಂಧಪಟ್ಟ ಕಾಮಗಾರಿಗಳಲ್ಲಿ 84 ಕಟ್ಟಡಗಳನ್ನು ಪೂರ್ಣ ಮಾಡಿದ್ದೇವೆ. 37 ಕಟ್ಟಡಗಳು ವಿವಿಧ ಹಂತಗಳಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೆ. It is because, ಕೋರ್ಟ್‌ಗೆ ಕೊಡಬೇಕಾಗಿರುವಂತಹ ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಿಲ್ಲ. ಅದಕ್ಕೆ ನಮ್ಮಲ್ಲೇ ಇರುವಂತಹ ಹಣವನ್ನು ಹೊಂದಿಸಿಕೊಂಡು ರಾಜ್ಯ ಸರ್ಕಾರದಿಂದಲೇ ಮಾಡುತ್ತಿದ್ದೇವೆ. ಇನ್ನೂ 34 ಕಟ್ಟಡಗಳು ಪೂರ್ಣಗೊಳ್ಳಬೇಕು. ಅವರಲ್ಲಿ ಹಿಂದೆ ಎಲ್ಲಾ ಪರ್ಸೆಂಟೇಜ್ ಏನಿತ್ತು ಎಂಬುದು ನಮಗೆ ಗೊತ್ತಿಲ್ಲ. ಇಲ್ಲಿ ಆ ತರಹದ್ದು ಯಾವುದು ನಡೆಯುವುದಕ್ಕೆ ಸಾಧ್ಯವಿಲ್ಲ. ಅವೆಲ್ಲಾ ರಾಜಕೀಯ ಪ್ರೇರಿತವಾದಂತಹ ಆಧಾರ ರಹಿತವಾದಂತಹ ಮಾತುಗಳು. ಆ ರೀತಿ ಏನಾದರೂ ಇದ್ದರೆ ಅದನ್ನು produce ಮಾಡಲಿ. ಅದಕ್ಕೆ ಬೇಕಾದರೆ ಕ್ರಮ ತೆಗೆದುಕೊಳ್ಳೋಣ. ಆಧಾರ ಇಲ್ಲದೆಯೇ ಮಾತನಾಡಿದರೆ, that is not correct.

**ಶ್ರೀ ಪ್ರದೀಪ್ ಶೆಟ್ಟರ್**:- ಮಾನ್ಯ ಸಭಾಪತಿಯವರೇ, ಕೆಲಸ ಮುಗಿದಿದೆ ಎಂದು ಏಕೆ ಹೇಳಬೇಕು? ಇದರಲ್ಲಿ ನಾವು ರಾಜಕೀಯ ಮಾಡುತ್ತಿದ್ದೇವೆಯೇ?

**ಡಾ:ಹೆಚ್.ಸಿ.ಮಹದೇವಪ್ಪ**:- ಮಾನ್ಯ ಸಭಾಪತಿಯವರೇ, ಅನುಬಂಧದಲ್ಲಿ ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ.

**ಶ್ರೀ ಪ್ರದೀಪ್ ಶೆಟ್ಟರ್**:- ಕೇಂದ್ರ ಸರ್ಕಾರದ ಹಣ ಎಂದು ತಾವು ಹೇಳುತ್ತೀರಿ.

**ಡಾ:ಹೆಚ್.ಸಿ.ಮಹದೇವಪ್ಪ**:- ಮಾನ್ಯ ಸಭಾಪತಿಯವರೇ, 121 ಕಾಮಗಾರಿಗಳಲ್ಲಿ 84 ಪೂರ್ಣ ಮಾಡಿದ್ದೇವೆ. ಇನ್ನು 37 ವಿವಿಧ ಹಂತಗಳಲ್ಲಿವೆ. ಕೋರ್ಟ್‌ಗಳಿಗೆ ಹಣ ಕೊಡಬೇಕಾಗಿರುವುದು ಕೇಂದ್ರ ಸರ್ಕಾರದ ಸಹ ಜವಾಬ್ದಾರಿ ಆಗಿದ್ದು, ಅದನ್ನು ಅವರು ಕೊಡಬೇಕಾಗಿತ್ತು. ಕೇಂದ್ರ ಸರ್ಕಾರದ ಕೊಡದಿದ್ದಾಗ ರಾಜ್ಯ ಸರ್ಕಾರವೇ ತನ್ನ ಸಂಪನ್ಮೂಲದ ಮಿತಿಯನ್ನು ಅರ್ಥ ಮಾಡಿಕೊಂಡು ಹಣ ಕೊಟ್ಟು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. 121 ರಲ್ಲಿ 84 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದೇವೆ. ಇನ್ನು 37 ವಿವಿಧ ಹಂತಗಳಲ್ಲಿವೆ, ಅದನ್ನು ಪೂರ್ಣ ಮಾಡುತ್ತೇವೆ.

**ಶ್ರೀ ಪ್ರದೀಪ್ ಶೆಟ್ಟರ್**:- ಇದರಲ್ಲಿ ಪೂರ್ಣಗೊಳ್ಳದಿರುವುದು ಬಹಳ ಇವೆ. ಕೆಲಸ ಮುಗಿದಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ.

(ಮುಂದು)

(012) 06-02-2018/12-40/bkp/bns

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಹೆಚ್.ಸಿ.ಮಹದೇವಪ್ಪ:–** ಎಲ್ಲಿಯೂ ಕೂಡ ಆ ರೀತಿಯ ಕಟ್ಟಡಗಳೇ ಆಗಿರುವುದಿಲ್ಲ. ಇವರು ಯಾವುದನ್ನೂ ನೋಡುವುದೇ ಇಲ್ಲ, appreciate ಮಾಡುವುದೇ ಇಲ್ಲ. ಬಾಯಿಗೆ ಯಾವ ರೀತಿ ಬರುತ್ತದೋ ಅ ರೀತಿಯಲ್ಲಿ ಮಾತನಾಡುತ್ತಾರೆ.

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಮಾಡಿದ ಒಳ್ಳೆಯ ಕೆಲಸವನ್ನು ನಾನು appreciate ಮಾಡುತ್ತೇನೆ. ಆದರೆ, ಕೆಲಸ ಮುಗಿಸಿಲ್ಲ.

**ಡಾ॥ ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಲ್ಲಿ ಹೋಗಿ ನೋಡಿದ್ದಾರೋ ಇಲ್ಲವೋ ಹೇಳಿ. Whether in any taluk of India such type of a building for judiciary has been built? Why he is attributing such things? Let him not attribute such things which are not there.

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ನಾನು ಕೆಲಸ ಮಾಡಿದ್ದರ ಬಗ್ಗೆ ಕೇಳುತ್ತಿಲ್ಲ.

(ಗೊಂದಲ)

**ಸಭಾಪತಿಯವರು:–** ಶ್ರೀಯುತ ಪ್ರದೀಪ್ ಶೆಟ್ಟರ್ ರವರು ಇಲ್ಲಿ ಗಮನಿಸಬೇಕು.

**ಶ್ರೀ ಪ್ರದೀಪ್ ಶೆಟ್ಟರ್:** ಮಾನ್ಯ ಸಭಾಪತಿಯವರೇ, ಅಪೂರ್ಣವಾದ ಕೆಲಸವನ್ನು ಪೂರ್ಣ ಮಾಡಿ ಎಂದು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದ ಹಣ ಬಂದಾಗ ಅದಕ್ಕೆ ಏನಾದರೂ ಉತ್ತರವನ್ನು ಕೊಡುತ್ತೀರಿ, ಇದು ನಮ್ಮ ಪಾಲಿನ ಹಣ ನಮ್ಮದು ಎಂದು ಹೇಳುತ್ತೀರಿ.

**ಡಾ॥ ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಮಾಡಿರುವುದನ್ನು ಮತ್ತು ಕೇಂದ್ರ ಸರ್ಕಾರ ಮಾಡಿರುವುದನ್ನೆಲ್ಲಾ ಹೇಳುತ್ತೇವೆ. ಇದರಲ್ಲಿ ನಾನು ಮುಚ್ಚುಮರೆ ಮಾಡುವುದಿಲ್ಲ. I will never hide anything.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, . .

**ಸಭಾಪತಿಯವರು:–** ಶ್ರೀಯುತ ಶಾಣಪ್ಪನವರೆ, ತಾವು ಹೀಗೆ ಎದ್ದು ನಿಂತರೆ ಗತಿ ಏನು? ಸದನವನ್ನು ಹೇಗೆ ನಡೆಸಬೇಕು?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Dr. H.C. MAHADEVAPPA**:- Hon'ble Chairman, I have never become excited. Only thing that I want to tell is that until and unless he has got evidence and document with him, he is not supposed to pass any comment. Even I am also not supposed to do that.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪುಟ-5 ರಲ್ಲಿ ಹೇಳಿರುವುದಕ್ಕೆ ಉತ್ತರ ಕೊಟ್ಟರೆ ಸಾಕು.

**ಡಾ॥ ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಶ್ರೀಯುತ ಪ್ರದೀಪ್ ಶೆಟ್ಟರ್‌ರವರು ರಾಜಕೀಯವಾಗಿ ಮಾತನಾಡಿದರು, ಅದನ್ನು ಇಲ್ಲಿ quote ಮಾಡಿದರೆ ಹೇಗೆ?

**Sri RAGHUNATH RAO MALKAPURE**:- Hon'ble Chairman, is it the repercussion of yesterday's news in news paper?

**Dr. H.C. MAHADEVAPPA**:- Hon'ble Chairman, I am neither excited nor I am saying about news in news paper. As a Government, I am replying.

(ಗೊಂದಲ)

**ಸಭಾಪತಿಯವರು:-** ಇದು ಪ್ರಶ್ನೋತ್ತರ ಅವಧಿ. ಎಲ್ಲರೂ ಎದ್ದು ನಿಂತರೆ ಗತಿ ಏನು?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ,. . .

**ಸಭಾಪತಿಯವರು:-** ಶ್ರೀಯುತ ಶಾಣಪ್ಪನವರು ದಯಮಾಡಿ ಕುಳಿತುಕೊಳ್ಳಬೇಕು.

**Dr. H.C. MAHADEVAPPA**:- Facts remain the same.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾಡಿರುವ ಕೆಲಸಗಳ ಬಗ್ಗೆ ಹೇಳುತ್ತಿಲ್ಲ. ಮಾಡಲಾರದ ಕೆಲಸಗಳ ಬಗ್ಗೆ ಹೇಳುತ್ತಿದ್ದೇನೆ. ನಿಮ್ಮ ಉತ್ತರದ ಪುಟ ಸಂಖ್ಯೆ 5 ರ ಬಗ್ಗೆ ಹೇಳಿ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿಗೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.ಅವರೇ ಆ ಸಂಬಂದ ನಡೆದ ಸಭೆಗೆ ಬಂದಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಹಣ ಕೊಟ್ಟಿಲ್ಲವೇ?

**ಡಾ|| ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, Tender Sure ರಸ್ತೆಗೆ ಸಂಬಂಧಿಸಿದಂತೆ ಮಾನ್ಯ ಪ್ರದೀಪ್ ಶೆಟ್ಟರ್ ಬಂದಿದ್ದರು. All of you had appreciated it at that time.

**ಸಭಾಪತಿಯವರು:-** ಈಗ ವಿಷಯಾಂತರ ಆಗುವುದು ಬೇಡ.

**Dr. H.C. MAHADEVAPPA**:- Hon'ble Chairman, why he is saying one thing there and a different thing here. What made him to make such a statement?

**ಸಭಾಪತಿಯವರು:** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ 23**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು) ಮಾನ್ಯ (ಶ್ರೀಮತಿ ಮೋಟಮ್ಮನವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ತಮ್ಮ ಇಲಾಖೆಯ ಕೆಲಸ ಕಾರ್ಯಗಳನ್ನು ಬಹಳ ಚೆನ್ನಾಗಿ ನಿರ್ವಹಣೆ ಮಾಡುತ್ತಿದ್ದಾರೆ. ವಿದ್ಯುತ್ ಕಡಿತ ಕಡಿಮೆಯಾಗಿದೆ. ಇದೆಲ್ಲವೂ ಒಟ್ಟಾರೆ ಸರ್ಕಾರಕ್ಕೆ ಮತ್ತು ಸಚಿವರಿಗೆ appreciation ಇದೆ.

ಆದರೆ, ಮಾನ್ಯ ಸದಸ್ಯರು ಚಿಕ್ಕಮಗಳೂರು ಭಾಗದಿಂದ ಬಂದವರಾಗಿದ್ದು, ಅವರು ವಿದ್ಯುತ್ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮಲ್ಲಿ ವಿದ್ಯುತ್ ಉತ್ಪಾದನೆ ಎಷ್ಟಾಗುತ್ತಿದೆ, ಇನ್ನು ಎಷ್ಟು ವಿದ್ಯುತ್ ಬೇಕು, ಪ್ರಸ್ತುತ ಪರಿಸ್ಥಿತಿ ಹೀಗಿದೆ. ನಾವು ಏನು ವಿದ್ಯುತ್ ನಿರೀಕ್ಷೆ ಮಾಡುತ್ತಿದ್ದೇವೆ, BPL (Below Poverty Line) Card ದಾರರಿಗೆ ಏನಾದರೂ ಉಚಿತ ವಿದ್ಯುತ್ ಕೊಡುವಂತಹ ಆಲೋಚನೆ ಸರ್ಕಾರದ ಮುಂದೆ ಇದೆಯೇ? ವಿದ್ಯುತ್ ಪರಿಸ್ಥಿತಿಯನ್ನು ಪ್ರಸ್ತುತ ಸರ್ಕಾರ ಹೇಗೆ ನಿಭಾಯಿಸುತ್ತಿದೆ, ಯಾವ ರೀತಿ ನಿವಾರಣೆ ಮಾಡುತ್ತದೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಐವನ್ ಡಿ'ಸೋಜಾ ರವರು ಪ್ರಶ್ನೆಯನ್ನು ಕೇಳುವುದರ ಜೊತೆಗೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮತ್ತೆ ಏತಕ್ಕೆ ಸಚಿವರು ಉತ್ತರ ಕೊಡಬೇಕು?

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನನ್ನದೊಂದು ಉಪ ಪ್ರಶ್ನೆ ಇದೆ.

**ಸಭಾಪತಿಯವರು:-** ಶ್ರೀಯುತ ಪ್ರಾಣೇಶ್ ಆ ರೀತಿ ಆಗುವುದಿಲ್ಲ. I will adjourn the House. ನನ್ನ ಅನುಮತಿ ಇಲ್ಲದೇ ಎಲ್ಲರೂ ಮಾತನಾಡಿದರೆ ಹೇಗೆ? ಯಾರಾದರೂ ಹಿರಿಯರು ಮಾತನಾಡಲಿಕ್ಕೆ ಪ್ರಾರಂಭ ಮಾಡಿದಾಗ ನಾನು ಅವರಿಗೆ ಹೇಳಲಿಕ್ಕೆ ಹೋದಾಗ ನಾನು ಮಾತನಾಡಿದ್ದು, ಅವರಿಗೆ ಕೇಳಿಸುವುದಿಲ್ಲ. ಎಲ್ಲರೂ ಅದನ್ನು advantage ಆಗಿ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ನನ್ನ ಅನುಮತಿ ಇಲ್ಲದೆ ದಯವಿಟ್ಟು ಎದ್ದುನಿಲ್ಲಬೇಡಿ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರು ಈ ರಾಜ್ಯದ ವಿದ್ಯುತ್ ಪರಿಸ್ಥಿತಿ ಮತ್ತು ಬೇಡಿಕೆ ಏನಿದೆ ಎಂದು ಕೇಳಿದ್ದಾರೆ. ನಾನು ಈ ಬಗ್ಗೆ ಉತ್ತರವನ್ನು ಕೊಟ್ಟಿದ್ದೇನೆ. ಈಗ ಇತ್ತೀಚಿನ ಬೇಡಿಕೆ ಏನೆಂದರೆ, 10347 ಮೆಗಾವ್ಯಾಟ್‌ಗೆ ರಾಜ್ಯದಲ್ಲಿ ಅತಿ ಹೆಚ್ಚು ಬೇಡಿಕೆ ಇದೆ. ಈ ವರ್ಷ ಡ್ಯಾಂಗಳಲ್ಲಿ ನೀರು ಕೇವಲ 60% ನಷ್ಟು ತುಂಬಿದೆ. ಈ ವರ್ಷ ರಾಜ್ಯದಲ್ಲಿ ಒಳ್ಳೆಯ ಮಳೆ ಬಿದ್ದಿದೆ. ಆದರೆ, ಆ ಡ್ಯಾಂಗಳ ಪರಿಸ್ಥಿತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ರೀತಿ ಇತ್ತು ಎನ್ನುವುದು ತಮಗೂ ಕೂಡ ಗೊತ್ತಿದೆ. 60% ಡ್ಯಾಂಗಳಲ್ಲಿ ನೀರು ತುಂಬಿದೆ. ಈ ವರ್ಷ ಅದು 100% ನೀರು ತುಂಬುತ್ತದೆ ಎಂದು ಹೇಳುತ್ತಿದ್ದೆವು. ಈ ಮಧ್ಯೆ coal ಬಹಳ shortage ಆಗಿದೆ. ಇದು ಇಡೀ ದೇಶದಲ್ಲಿಯೇ ದೊಡ್ಡ ಸಮಸ್ಯೆಯಾಗಿದೆ. ಕೆಲವು ವಿದ್ಯುತ್ ಉತ್ಪಾದನಾ ಘಟಕಗಳಿಗೆ plants ಗೆ 100% ಕೊಡುವ ಕಲ್ಲಿದ್ದಲ ಬದಲಿಗೆ 25% ರಷ್ಟು ಕಲ್ಲಿದ್ದಲು ಕೊಟ್ಟಿದ್ದಾರೆ. ಆದರೂ ಸಹಾ ಸರ್ಕಾರದ ಒಂದು ಜವಾಬ್ದಾರಿ ಇದೆ. ನಾವು ಇದಕ್ಕೆ 900 ಮೆಗಾವ್ಯಾಟ್ ರಷ್ಟು ವಿದ್ಯುತ್ ಖರೀದಿ ಮಾಡಲಿಕ್ಕೆ ಟೆಂಡರ್ ಕರೆದು, ಈಗಾಗಲೇ ಯೂನಿಟ್‌ಗೆ 4.08 ರೂಪಾಯಿಗಳಂತೆ ವಿದ್ಯುತ್ ಖರೀದಿ ಮಾಡುತ್ತಿದ್ದೇವೆ. ನಾವು ಹೊಸದಾಗಿ 2000 solar panels ಕೂಡ ಸೇರಿಸಿದ್ದೇವೆ. 600 wind mills ಕೂಡ ಹೊಸದಾಗಿ ಸೇರಿವೆ. ಇನ್ನು ಮಾರ್ಚ್ ತಿಂಗಳಿನಲ್ಲಿ ಇನ್ನೂ 600 wind mills ಮತ್ತು 600-800 solar panels ಸೇರುತ್ತವೆ. ಈಗ ಇರುವಂತಹ ಸಂದರ್ಭದಲ್ಲಿ ಎಷ್ಟೇ ಸಮಸ್ಯೆಯಾದರೂ ಕೂಡ ನಮ್ಮ ರಾಜ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನತೆ ಚಿಂತೆ ಮಾಡುವುದು ಬೇಡ. ಜನರ ಸಂಪೂರ್ಣವಾದ ಬೇಡಿಕೆ ಏನಿರುತ್ತದೆ, ರೈತರಿಗೆ 6 ರಿಂದ 7 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದು ಏನು ನಾವು ಮಾತನ್ನು ಕೊಟ್ಟಿದ್ದೇವೆ, ಆ ಮಾತನ್ನು ನಾವು ಉಳಿಸಿಕೊಳ್ಳುತ್ತೇವೆ. ಮತ್ತೆ, ಎಲ್ಲಾ ಗ್ರಾಹಕರಿಗೂ ಅಂದರೆ, ಅದು ಇಂಡಸ್ಟ್ರೀಸ್ ಇರಬಹುದು ಅಥವಾ ನಮ್ಮ ಸಾಮಾನ್ಯ ಗ್ರಾಹಕರು ಏನು ಎರಡೂವರೆ ಕೋಟಿ ಇದ್ದಾರೆ, ಅವರಿಗೆಲ್ಲರಿಗೂ ಸರ್ಕಾರದಿಂದ ಏನು ಭರವಸೆಯನ್ನು ಕೊಟ್ಟಿದ್ದೇವೆ, ಆ ಪ್ರಕಾರ ನಾವು ಅವರಿಗೆ ವಿದ್ಯುತ್ ಕೊಡುತ್ತೇವೆ, ಅದಕ್ಕೆ ನಾವು 10 ಲಕ್ಷ ಟನ್ coal ಅನ್ನು ಹೊರಗಡೆಯಿಂದ ಆಮದು ಮಾಡಿಕೊಳ್ಳಲಿಕ್ಕೆ ಈಗಾಗಲೇ ಟೆಂಡರ್ ಕೂಡ ಕರೆದು process ಅಂತಿಮ ಮಾಡಿದ್ದೇವೆ. ಬರಗಾಲದಲ್ಲಿಯೂ ಕೂಡ ಯಾವ ಸಮಸ್ಯೆಯಿಲ್ಲದೆ, ಈ ವರ್ಷ ನಾವು ಪರಿಸ್ಥಿತಿಯನ್ನು ನಿಭಾಯಿಸುತ್ತೇವೆಂದು ಹೇಳಿ ತಮ್ಮ ಮೂಲಕ ರಾಜ್ಯದ ಜನತೆಗೆ ಮತ್ತು ನಮ್ಮ ಗೌರವಾನ್ವಿತ ಸದಸ್ಯರಿಗೆ ತಿಳಿಸಲಿಕ್ಕೆ ನಾನು ಇಚ್ಛೆ ಪಡುತ್ತೇನೆ. ಮತ್ತೆ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿಯ ಬಗ್ಗೆ ಕೆಲವರು ಕೇಳಿದರು. 18 volts ವಿದ್ಯುತ್ ಕೊಡುತ್ತಿದ್ದನ್ನು 40 volts ಗೆ ಕಳೆದ ವರ್ಷವೇ ಹೆಚ್ಚು ಮಾಡಿದ್ದೇವೆ. ಈ ನಿಟ್ಟಿನಲ್ಲಿ ನಾವು ಪ್ರಾರಂಭಿಕವಾಗಿ ಕೆಲಸ ಮಾಡುತ್ತಿದ್ದೇವೆ. ಮತ್ತೆ ಏನೇನು ಬೇಡಿಕೆಗಳಿವೆ, ಅವುಗಳ ಬಗ್ಗೆ ನಾವು ಆದ್ಯತೆ ಮೇರೆಗೆ ನಮ್ಮ ಇಲಾಖೆಯಲ್ಲಿ ಕೆಲವು ಹೊಸ ಬದಲಾವಣೆಗಳನ್ನು ತಂದಿದ್ದೇವೆ. ಅದನ್ನೆಲ್ಲಾ ಈಗ ಮಾತನಾಡಲಿಕ್ಕೆ ಆಗುವುದಿಲ್ಲ. ಬೇರೆ ಸಮಯದಲ್ಲಿ ಉತ್ತರ ಕೊಡುವಂತಹ ಸಮಯದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನಿಖರವಾಗಿ ಈ ರಾಜ್ಯಕ್ಕೆ ಯಾವುದೇ ರೀತಿಯಲ್ಲಿ ವಿದ್ಯುತ್ ಸಮಸ್ಯೆಯಿಲ್ಲ. We have sufficient power. ಏನೂ ಸಮಸ್ಯೆಯಿಲ್ಲ. ಸಾಕಷ್ಟು ಬೇಡಿಕೆ ಇದೆ, ನಾವು ಅದನ್ನು ಪೂರೈಸುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀಯುತ ರಮೇಶ್ ಬಾಬು ರವರದ್ದಾಗಿದ್ದು, ಅದಕ್ಕೆ ಮಾನ್ಯ ಸಚಿವರು 7 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ, ಮುಂದಿನ ಬಾರಿ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ 6 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿಲ್ಲ. ದಯಮಾಡಿ, ಇದು ಬಹಳ ಗಂಭೀರ ವಿಷಯ ಇದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇದಕ್ಕೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಮಾನ್ಯ ಸದಸ್ಯರ ಪ್ರಶ್ನೆಗೆ 7 ದಿವಸಗಳ ಕಾಲಾವಕಾಶವನ್ನು ಕೇಳಿದ್ದೀರಿ, ಅದಕ್ಕೆ ತಾವು ಮುಂದಿನ ದಿವಸಗಳಲ್ಲಿ ಅವರಿಗೆ ದಯವಿಟ್ಟು ಉತ್ತರ ಕೊಡಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ(ಮುಜರಾಯಿ ಸಚಿವರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಪೂರ್ಣ ಮಾಹಿತಿಯನ್ನು ಕೊಡಬೇಕಾಗಿದ್ದು, ಕನಿಷ್ಠ ಪಕ್ಷ 3 ದಿವಸಗಳ ಕಾಲಾವಕಾಶವನ್ನು ಕೊಡಬೇಕು.

**ಸಭಾಪತಿಯವರು:** ಆಯಿತು, ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ದಿನಾಂಕ: 7–12–2017ಕ್ಕೆ ಪತ್ರವನ್ನು ಕೊಟ್ಟಿದ್ದೇನೆ. ಇದಾದ ಮೇಲೆ ಇವರ ಆಯುಕ್ತರಿಗೆ ದಿನಾಂಕ: 22–01–2018 ರಂದು ಪತ್ರವನ್ನು ಕೊಟ್ಟಿದ್ದೇನೆ. ಇವತ್ತಿನವರೆಗೂ ಅದಕ್ಕೆ ಉತ್ತರ ಕೊಟ್ಟಿಲ್ಲ. ಉದ್ದೇಶಪೂರ್ವಕವಾಗಿ ಅದನ್ನು ತಡೆಯುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಈ ಬಗ್ಗೆ 3–4 ದಿವಸಗಳಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಇದಕ್ಕೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ convert ಮಾಡಿ. ಇದರ ಬಗ್ಗೆ ಚರ್ಚೆಯೇ ಆಗಲಿ.

**ಶ್ರೀ ರುದ್ರಪ್ಪ ಮಾನಪ್ಪನ ಲಮಾಣಿ:–** ಆಯಿತು. ಇದಕ್ಕೆ ನಾನು ಉತ್ತರ ಕೊಡುತ್ತೇನೆ.

**ಸಭಾಪತಿಯವರು:–** ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

**ಪ್ರಶ್ನೆ ಸಂಖ್ಯೆ: 81**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಾನು ಚಿಕ್ಕಮಗಳೂರು ಜಿಲ್ಲೆಯ ವಿಷಯವಾಗಿ ಮಾನ್ಯ ಸಚಿವರಿಗೆ ಕೇಳಿದ್ದೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯಡಿ ಇದುವರೆವಿಗೂ ವಿಮಾ ಕಂತು ಪಾವತಿಸಿ ನೋಂದಾಯಿಸಿರುವ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು) ಅದರ ವಿವರಗಳನ್ನು ಕೊಡಿ ಎಂದು ಕೇಳಿದ್ದೆ. ಅದಕ್ಕೆ ವಿವರವನ್ನು ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ನನ್ನ ಒಂದೇ ಒಂದು ಪ್ರಶ್ನೆ. ವಿವರ ಇದೆ. ಅದು ಸರಿಯಾಗಿ ವಿತರಣೆಯಾಗಿದೆ ಎಂದು ನಾನು ಭಾವಿಸುತ್ತೇನೆ. ಆದರೆ, ಕಳೆದ ಮೂರು ವರ್ಷಗಳಲ್ಲಿ ಫಸಲನ್ನು ಆಧಾರಿಸಿ, ವಿಮೆಯನ್ನು ಮಂಜೂರು ಮಾಡುತ್ತಿದೆ. ಇದರಲ್ಲಿ ಸಾಕಷ್ಟು ಬೆಳೆ ನಷ್ಟವನ್ನು ಅನುಭವಿಸಿದವರಿಗೆ ಈ ಮೂರು ವರ್ಷಗಳ ಅವಧಿಯನ್ನು ತೆಗೆದುಕೊಂಡಿರುವುದರಿಂದ ಪರಿಹಾರ ಸಿಕ್ಕುತ್ತಿಲ್ಲ. ಇದಕ್ಕೆ ಸರ್ಕಾರದ ವತಿಯಿಂದ ಏನು ಕ್ರಮವನ್ನು ಕೈಗೊಂಡಿದ್ದಾರೆಂದು ಹೇಳಬೇಕು.

**ಮುಂದು. .**

.(013) 06.02.2018 12.50 ಎಸ್‌ವಿ-ಬಿಎನ್‌ಎಸ್

**ಶ್ರೀ ಎಂ.ಕೆ.ಪ್ರಾಣೇಶ್ (ಮುಂದು):-**

ಈಗ ಕಳೆದ ಮೂರು ವರ್ಷಗಳಿಂದ ಸರಾಸರಿ ಫಸಲನ್ನು ಆಧರಿಸಿ ವಿಮೆಯನ್ನು ಮಂಜೂರು ಮಾಡಲಾಗುತ್ತಿದೆ. ಬೆಳೆ ನಷ್ಟವನ್ನು ತಿಳಿಯಲು ಮೂರು ವರ್ಷಗಳ ಸರಾಸರಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಈ ಮೂರು ವರ್ಷಗಳಲ್ಲಿ ಒಂದು ವರ್ಷದಲ್ಲಿ ಅತ್ಯಂತ ಹೆಚ್ಚು ನಷ್ಟವಾದಂತಹ ಸಂದರ್ಭದಲ್ಲಿ ಅದರ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಂಡಿದೆ ಎಂಬುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡುತ್ತೇನೆ. ಅವರು ಪ್ರಶ್ನೆಯನ್ನು ಕೇಳುವಾಗ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಬಗ್ಗೆ ಕೇಳಿದ್ದರು. ಆದರೆ ಚಿಕ್ಕಮಗಳೂರು ಜಿಲ್ಲೆಗೆ ಹವಾಮಾನ ಆಧಾರಿತ ವಿಮಾ ಯೋಜನೆಯಿಂದ ದೊಡ್ಡ ಪ್ರಮಾಣದಲ್ಲಿ ಅನುಕೂಲವಾಗುತ್ತಿದೆ. ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯಲ್ಲಿ ಕೇಳಿರದ ಕಾರಣ ನಾನು ಲಿಖಿತ ಮೂಲಕ ಉತ್ತರವನ್ನು ಕೊಟ್ಟಿರುವುದಿಲ್ಲ. ಆದರೂ ಕೂಡ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಇದರ ಕುರಿತು ಹೇಳಬಯಸುತ್ತೇನೆ. ಚಿಕ್ಕಮಗಳೂರು ಜಿಲ್ಲೆಗೆ ಹವಾಮಾನ ಆಧಾರಿತ ವಿಮಾ ಯೋಜನೆಯಡಿಯಲ್ಲಿ ಹೆಚ್ಚು ಅನುಕೂಲವಾಗುತ್ತಿದೆ. ಮಾನ್ಯ ಸದಸ್ಯರು ಕೇಳಿರುವ ವರ್ಷಕ್ಕೆ ಅಂದರೆ 2016ನೇ ಸಾಲಿಗೆ ಸುಮಾರು 49 ಕೋಟಿ ರೂಪಾಯಿಗಳ ಮೊತ್ತದ ವಿಮೆ ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾಗಿದೆ. 49 ಕೋಟಿ ರೂಪಾಯಿಗಳಲ್ಲಿ 35 ಕೋಟಿ ರೂಪಾಯಿಗಳಷ್ಟು ಮೊತ್ತವು ಈಗಾಗಲೇ ರೈತರಿಗೆ ಪಾವತಿ ಕೂಡ ಆಗಿದೆ. ಸುಮಾರು 10 ಕೋಟಿ ರೂಪಾಯಿಗಳಷ್ಟು ಈಗ ಪಾವತಿಯಾಗುತ್ತಿದೆ. ಈ 35 ಕೋಟಿ ರೂಪಾಯಿಗಳು ನೇರವಾಗಿ ರೈತರ ಖಾತೆಗೆ ಪಾವತಿಯಾಗಿದೆ. ಇನ್ನು 10 ಕೋಟಿ ರೂಪಾಯಿಗಳನ್ನು ಬ್ಯಾಂಕಿಗೆ ನೀಡಲಾಗಿದೆ. ಬ್ಯಾಂಕಿನವರು ರೈತರ ಖಾತೆಯನ್ನು ಪರಿಶೀಲನೆ ಮಾಡಿ ಅವರ ಖಾತೆಗೆ ಜಮಾ ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರಿಗೆ ಲಿಖಿತ ಉತ್ತರದ ಮೂಲಕ ಕೊಟ್ಟಿರುವುದಲ್ಲದೆ 49 ಕೋಟಿ ರೂಪಾಯಿಗಳು ಹವಾಮಾನ ಆಧಾರಿತ ವಿಮಾ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬರುತ್ತಿದೆ ಎನ್ನುವಂತಹ ಹೆಚ್ಚುವರಿ ಮಾಹಿತಿಯನ್ನು ನೀಡಬಯಸುತ್ತೇನೆ.

ಮೂರು ವರ್ಷದ ಸರಾಸರಿ ತೆಗೆದುಕೊಂಡು ಒಂದು ವರ್ಷದಲ್ಲಿ ನಷ್ಟವಾಗಿದ್ದರೆ ಹೇಗೆ ಅದಕ್ಕೆ ನ್ಯಾಯವನ್ನು ಒದಗಿಸುತ್ತೀರಿ ಎಂದು ಮಾನ್ಯ ಸದಸ್ಯರು ಪ್ರಶ್ನಿಸಿದ್ದಾರೆ. ಎಷ್ಟು ಇಳುವರಿ ಬರಬೇಕು ಎಂಬುದನ್ನು ಬೆಂಚ್‌ಮಾರ್ಕ್ ಮಾಡುವ ಸಲುವಾಗಿ ಮೂರು ವರ್ಷದ ಸರಾಸರಿಯನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಅದನ್ನು "threshold yield" ಎಂದು ಕರೆಯಲಾಗುವುದು. ಅಂದರೆ ಈ ವರ್ಷದಲ್ಲಿ ಕನಿಷ್ಟ ಇಷ್ಟು ಮಟ್ಟದ ಇಳುವರಿ ಬರಬೇಕೆಂಬುದಕ್ಕೆ ಅದು ಗುರಿ ಆಗಿರುತ್ತದೆ. ಆ threshold ಮೇಲೆ ಈ ವರ್ಷ ಎಷ್ಟು ಇಳುವರಿ ಬಂದಿದೆ ಎಂಬುದಕ್ಕೆ ನಾವು ಬೆಳೆ ಕಟಾವು ಪ್ರಯೋಗ ಮಾಡುತ್ತೇವೆ. ಅದನ್ನು "actual yield" ಎಂದು ಕರೆಯುತ್ತೇವೆ. ಹೀಗೆ ಮೂರು ವರ್ಷದ ಸರಾಸರಿಯ ವಿರುದ್ಧವಾಗಿ ಈ ವರ್ಷ ಎಷ್ಟು ಬೆಳೆ ಬಂದಿದೆ ಎಂಬುದನ್ನು ಬೆಳೆ ಕಟಾವು ಪ್ರಯೋಗವನ್ನು ಮಾಡುವ ಮೂಲಕ compare ಮಾಡುತ್ತೇವೆ. Threshold yield (TY) ಮತ್ತು Actual Yield (AY)ಗೆ ನಷ್ಟ ಅನುಭವಿಸಿದಾಗ ಎಷ್ಟು ಖೋತಾ ಅಥವಾ ಕಡಿಮೆ ಬರುತ್ತದೆಯೋ ಅದರ ಆಧಾರದ ಮೇರೆಗೆ ವಿಮೆಯನ್ನು ಅಂದಾಜಿಸಲಾಗುತ್ತದೆ. ಹಾಗಾಗಿ ಮೂರು ವರ್ಷದ ಸರಾಸರಿ ಎಂದು ನಾವು ಏನು ಹೇಳಿದ್ದೇವೆ, ಅದು base ಆಗುತ್ತದೆ. ಈ ವರ್ಷದ ಇಳುವರಿಯ ಆಧಾರದ ಮೇಲೆ actual insurance ಅನ್ನು calculate ಮಾಡಲಾಗುತ್ತದೆ. ಇಡೀ ದೇಶದ ಬಹುತೇಕ ಎಲ್ಲಾ ಕಡೆಗಳಲ್ಲಿಯೂ ಇದೇ ಮಾನದಂಡವಾಗಿದೆ. ಇದರಲ್ಲಿಯೂ ಸಹ ಹಲವು ನ್ಯೂನತೆಗಳಿವೆ. ಇಲ್ಲ ಎಂದು ಹೇಳುವುದಿಲ್ಲ. ಈಗ ಅವುಗಳಿಗೆ ಸಾಕಷ್ಟು ತಂತ್ರಾಂಶವನ್ನು ಅಳವಡಿಸಿ ಆ ನ್ಯೂನತೆಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇವೆ. ಬೆಲೆ ಕಟ್ಟುವ ಪ್ರಯೋಗವನ್ನು ರೈತರ ಸಮ್ಮುಖದಲ್ಲಿಯೇ ಮಾಡಬೇಕೆಂದು ಮಾಡಿರುವುದರಿಂದ, ಇದ್ದಂತಹ ನ್ಯೂನತೆಗಳನ್ನು ಸರಿಪಡಿಸುತ್ತಿದ್ದೇವೆ. ಎಲ್ಲೋ ಕುಳಿತು ಬರೆಯುತ್ತಿದ್ದುದನ್ನು ತಪ್ಪಿಸುವ ಸಲುವಾಗಿ GPS (Global Positioning System) ಅನ್ನು ಹಾಕಲಾಗಿದೆ. Photo document and video document ಅನ್ನು ಸಹ ಮಾಡಲಾಗುತ್ತಿದೆ. ಈ ರೀತಿ ಮಾಡಿರುವುದರಿಂದ ನ್ಯೂನತೆಗಳನ್ನು ಕಡಿಮೆ ಮಾಡಬಹುದಾಗಿದೆ. ಬಹುಶಃ ಕಳೆದ ವರ್ಷ ಸ್ವಲ್ಪ ಕಡಿಮೆಯಾಗಿದೆ. ಈ ವರ್ಷ ಇನ್ನಷ್ಟು ಕಡಿಮೆಯಾಗಬಹುದು. ಸುಧಾರಣೆ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 31**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿರುತ್ತಾರೆ. ಆದರೆ ಇದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಗಡಿಭಾಗದಲ್ಲಿರುವ ಒಂದು ಮುಖ್ಯವಾದ ರಸ್ತೆಯಾಗಿದೆ. ಇದಕ್ಕೆ ಈಗಾಗಲೇ ರೂ.8 ಲಕ್ಷಗಳನ್ನು ಕೇವಲ maintenanceಗಾಗಿ ಬಿಡುಗಡೆ ಮಾಡಿದ್ದಾರೆ. ಆದರೆ ಆ ಕಾಮಗಾರಿಯು ಪ್ರಾರಂಭವಾಗಿರುವುದಿಲ್ಲ ಎಂಬ ಅಂಶವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ರಸ್ತೆ ರೂ.1.5 ಕೋಟಿಗಳಷ್ಟು ಅಂದಾಜನ್ನೂ ಸಹ ಮಾಡಲಾಗಿದ್ದು, ಹಣ ಬಿಡುಗಡೆಯಾಗಿರುವುದಿಲ್ಲ. ಇದು ಜಿಲ್ಲೆಯ ಹೆಚ್ಚು ಜನಸಂಖ್ಯೆ ವಾಸವಾಗಿರುವಂತಹ ಒಂದು ಪ್ರಮುಖ ರಸ್ತೆಯಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಕೈಗೆತ್ತಿಕೊಂಡು ಈ ಸಾಲಿನಲ್ಲಿಯೇ ಇದಕ್ಕೆ ಹಣ ಬಿಡುಗಡೆ ಮಾಡಬೇಕೆಂದು ವಿನಂತಿಸುತ್ತೇನೆ.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಇದು MDR (Major District Road) ಆಗಿದ್ದು, 12 ಕಿ.ಮೀ. ಉದ್ದ ಇದೆ. ಕಳೆದ ಬಾರಿ NABARD (National Bank for Agriculture and Rural Development) ಯೋಜನೆಯಡಿಯಲ್ಲಿ 80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಈ ಬಾರಿ 90 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರ maintenanceಗಾಗಿ ಎಂಟು ಲಕ್ಷ ರೂಪಾಯಿಗಳನ್ನು ಸಹ ನೀಡಿರುತ್ತೇವೆ. ಇದರಲ್ಲಿ ಮೂರು ಕಿ.ಮೀ. ಉದ್ದದ ರಸ್ತೆಯು ಅತ್ಯಂತ ಹಾಳಾಗಿದೆ. Availability of funds ಅನ್ನು ನೋಡಿಕೊಂಡು, I will see to it that the road is made motorable.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆಯು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರದ್ದಾಗಿದ್ದು, ಸರ್ಕಾರ ಉತ್ತರಿಸಲು ಸಮಯವನ್ನು ಕೇಳಿದೆ. ಆದಷ್ಟು ಬೇಗ ಕೊಡಿಸುವುದಕ್ಕೆ ಪ್ರಯತ್ನ ಮಾಡಲಾಗುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗೆ ಉತ್ತರವನ್ನು ನಂತರ ಕೊಡಲಿ. ನನ್ನದೇನೂ ಅಭ್ಯಂತರವಿಲ್ಲ. ಉತ್ತರ ಏಕೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಲಿ. ಎಂಟೂವರೆ ಸಾವಿರ ಕೋಟಿ ರೂಪಾಯಿ ಎಂದು ಮೂರು ತಿಂಗಳ ಹಿಂದೆ ಸದನದಲ್ಲಿ ಘೋಷಣೆಯನ್ನು ಮಾಡಲಾಗಿದೆ. ನನ್ನ ಪ್ರಶ್ನೆಯನ್ನೊಮ್ಮೆ ನೋಡಿ. ಅದರಲ್ಲಿ ಯಾವುದಕ್ಕೂ ಸಹ ಸಮಯಾವಕಾಶದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಶ್ಯಕತೆ ಇರುವುದಿಲ್ಲ. ಹಾಗಾಗಿ ಏಕೆ ಉತ್ತರವನ್ನು ಕೊಡುವುಕ್ಕಾಗುತ್ತಿಲ್ಲ ಎಂದು ನನಗೆ ಉತ್ತರ ಕೊಡಲಿ.

**ಸಭಾಪತಿಯವರು:-** ಮಾನ್ಯ ಕಾರ್ಣಿಕ್ ಅವರೇ, ಮಾನ್ಯ ಸಹಕಾರ ಸಚಿವರು ಈಗ ಸದನದಲ್ಲಿ ಇಲ್ಲ. ಅವರು ಬಂದ ನಂತರ ಅವರನ್ನು ಕೇಳಿ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ರೈತರ ಸಾಲವನ್ನು ಮನ್ನಾ ಮಾಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಇಡೀ ರಾಜ್ಯದಲ್ಲಿ ಸಾಧನಾ ಸಮಾವೇಶ ಮಾಡಿ ಘೋಷಣೆ ಮಾಡುತ್ತಿದ್ದಾರೆ. ಆದರೆ ಇಲ್ಲಿ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ತಯಾರಿಲ್ಲ. ಹೊರಗೆ ಸಾಧನಾ ಸಮಾವೇಶವನ್ನು ಮಾಡಿಕೊಂಡು ಪ್ರಚಾರಕ್ಕಾಗಿ ಘೋಷಣೆ ಮಾಡುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಸರ್ಕಾರಿ ದುಡ್ಡಿನಲ್ಲಿ ಅಧಿಕಾರಿಗಳನ್ನು ಕೂರಿಸಿಕೊಂಡು ಸಾಧನಾ ಸಮಾವೇಶವನ್ನು ಮಾಡುತ್ತಿದ್ದಾರೆ. ಸಂತೋಷ. ನನ್ನದೇನೂ ಅಭ್ಯಂತರವಿಲ್ಲ. ಅಲ್ಲಿ ಕೇವಲ ಬಿ.ಜೆ.ಪಿ.ಯನ್ನು ಬೈಯುತ್ತಾರೆ. ಆದರೆ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆಯನ್ನು ಮಾಡಿ ಮನ್ನಾ ಮಾಡುವ ಕುರಿತು ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುವುದಕ್ಕೆ ಸಮಯ ಬೇಕೆಂದು ಕೇಳಿದರೆ ಇದ್ಯಾವ ನ್ಯಾಯ?

**Sri D.K. SHIVAKUMAR :-** You are right and you are eligible to get answer for this. ನಾವು ಉತ್ತರವನ್ನು ಕೊಡಲೇಬೇಕು. It is our bounden duty. I think within next three days we will give the reply.

**ಪ್ರಶ್ನೆ ಸಂಖ್ಯೆ:- 74**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರ ವಾಸ್ತವಕ್ಕೆ ಬಹಳ ವಿರುದ್ಧವಾಗಿದೆ. ನಾನು ಮಾನ್ಯ ಸಚಿವರಿಂದ ಈ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. 1985ರಲ್ಲಿ ಕಟ್ಟಡ ಕುಸಿದಿದೆ ಎಂದರೆ ಸಚಿವರು ಕುಸಿದಿಲ್ಲ ಎಂದು ಹೇಳಿದ್ದಾರೆ. 1997ರಲ್ಲಿ ಕಟ್ಟಡ ಇತ್ತೆಂದು ಹೇಳಲಾಗಿದೆ. ನನ್ನ ಬಳಿ ಇದರ ಬಗ್ಗೆ ಮಾಹಿತಿ ಇದೆ. 31.08.1985ರಂದು ಶ್ರೀ ಅಪ್ಪಾಜಪ್ಪ, ಮುಖ್ಯ ಇಂಜಿನಿಯರ್ ಇವರು ಭೇಟಿ ಕೊಟ್ಟು ಸ್ಥಳ ತನಿಖೆಯನ್ನು ಮಾಡಿದ್ದಾರೆ. ಪರಿವೀಕ್ಷಣೆಯ ಸಂದರ್ಭದಲ್ಲಿ ಕಟ್ಟಡದ ಈಶಾನ್ಯ ಭಾಗದಲ್ಲಿ ತಳಪಾಯದಲ್ಲಿ ಏರುಪೇರಾಗಿರುವುದು, ಬಿರುಕು ಮೂಡಿರುವುದು ಕಂಡು ಬಂದಿದೆ. ಇದರ ರಿಪೇರಿಗಾಗಿ ಲಕ್ಷ ಲಕ್ಷ ಹಣ ಕೊಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದುವರೆದು ಮೊದಲನೆಯ ಅಂತಸ್ತನ್ನು ಹಾಗೂ ಒಂದು ಪಾರ್ಶ್ವವನ್ನು ಕೆಡವಲಾಗಿದೆ ಎಂದು ಉತ್ತರದಲ್ಲಿ ಹೇಳಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ವಿಷಯವು ಭರವಸೆ ಸಮಿತಿಯ ಮುಂದೆ ಬಂದಿತ್ತು. Opening ಆಗುವ ಮೊದಲೇ ಸಾರ್ವಜನಿಕ ಹಿತದೃಷ್ಟಿಯಿಂದ ಇದನ್ನು demolish ಮಾಡುವುದಕ್ಕೆ ಆದೇಶಿಸಲಾಗಿದೆ ಎಂದು ಅಧಿಕಾರಿಗಳೇ ಬಂದು ಹೇಳಿದ್ದಾರೆ. ಮಾನ್ಯ ಸಚಿವರು ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದರು. ನಂತರ ಇದನ್ನು ಲೋಕಾಯುಕ್ತಕ್ಕೆ ಕಳುಹಿಸಿದರು. ದುರ್ದೈವ ಏನೆಂದರೆ ಲೋಕಾಯುಕ್ತದವರು ಬಿ-ರಿಪೋರ್ಟ್ ಕೊಟ್ಟರು. ಇದರ ಕುರಿತು ಸಮಿತಿಯ ನಡವಳಿಗಳು ನಮ್ಮಲ್ಲಿದೆ. ಆದ್ದರಿಂದ ದಯಮಾಡಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಂಡರೆ ಮುಂದೆ ಬರುವವರಿಗೆ ಒಂದು ಎಚ್ಚರಿಕೆಯ ಗಂಟೆಯಾಗುತ್ತದೆ. ದುಡ್ಡು ತಿನ್ನುವುದಕ್ಕೆ ಲೆಕ್ಕವೇ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, 29 ವರ್ಷಗಳ ನಂತರ ಆ ಕಟ್ಟಡದಲ್ಲಿ ಯಾರೂ ವಾಸ ಮಾಡುವುದಕ್ಕೂ ಆಗುವುದಿಲ್ಲ, ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಏನೂ ತಪ್ಪಾಗಿಲ್ಲ ಎಂದು ಬಿ-ರಿಪೋರ್ಟ್ ನೀಡಲಾಯಿತು. ಹಾಗಾದರೆ ಸಿವಿಲ್ ಕೇಸ್ ಅನ್ನು ಏಕೆ ದಾಖಲಿಸಲಾಯಿತು? ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ನಮಗೆ ಏಕೆ ಭರವಸೆ ನೀಡಿದರು? ಅಂತಿಮವಾಗಿ ಕಟ್ಟಡ ಬಿರುಕು ಬಿಟ್ಟದ್ದು ಸುಳ್ಳೇ? ಕಟ್ಟಡ ಕುಸಿದದ್ದು ಸುಳ್ಳೇ? ಈ ಕಟ್ಟಡದಲ್ಲಿ ಕಾರ್ಯ ನಿರ್ವಹಿಸದಿರುವುದು ಸುಳ್ಳೇ? ಮೊದಲನೆಯ ಅಂತಸ್ತು ಹಾಗೂ ಒಂದು ಪಾರ್ಶ್ವವನ್ನು ಕೆಡವಿದ್ದು ಸುಳ್ಳೇ? ಇವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಇದುವರೆವಿಗೂ ಏಕೆ ಕ್ರಮ ಜರುಗಿಸಿಲ್ಲ? 29 ವರ್ಷಗಳ ನಂತರ ಬಿ-ರಿಪೋರ್ಟ್ ಏಕೆ ಬಂದಿತು? ತಪ್ಪಿತಸ್ಥರ ವಿರುದ್ಧ ಏನು ಕ್ರಮ ಜರುಗಿಸಲಾಗುವುದು? ಈ ಎಲ್ಲಾ ಪ್ರಶ್ನೆಗಳಿಗೆ ಅತ್ಯಂತ ಖಚಿತವಾದ ಉತ್ತರವನ್ನು ಮಾನ್ಯ ಸಚಿವರು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಮ್ಮ ಉತ್ತರವನ್ನು ನಾನು ಗಮನಿಸಿದ್ದೇನೆ. ಕಟ್ಟಡ ಸರಿಯಿಲ್ಲದ ಕಾರಣ ಬಿದ್ದು ಹೋಗಿದೆ ಎಂಬುದನ್ನು ತಾವು ಒಪ್ಪಿಕೊಂಡಿರುತ್ತೀರಿ. ದಿನಾಂಕಗಳ ಬಗ್ಗೆ ಚರ್ಚೆ ಬೇಡ. ಇದು ಅಧಿಕಾರಿಗಳು ತಪ್ಪಿಸಿಕೊಳ್ಳುವುದಕ್ಕಾಗಿ ಹುಡುಕುವ ಹಾದಿಗಳಾಗಿದೆ. ಅವರು ಕೇಳಿರುವ ಪ್ರಶ್ನೆಯಲ್ಲಿ ದಿನಾಂಕಗಳು ವ್ಯತ್ಯಾಸವಾಗಿದ್ದರೆ ಬೇಡ.

(...ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು (ಮುಂದು..):-**

ಕಟ್ಟಡ ಕುಸಿದಿದೆ ಹೌದು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು, ಆಗಿಲ್ಲ. ತಾವು ನೇರವಾಗಿ ಪ್ರಶ್ನೆಗೆ ಬನ್ನಿ. ತಾವು ಅಧಿಕಾರಿಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ. ತಾವು ಒಳ್ಳೆಯ ಸಚಿವರು. ತಮಗೆ ವಿಷಯ ಬೇಗ ಅರ್ಥವಾಗುತ್ತದೆ. 31 ನೇ ತಾರೀಖಿಗೆ ಕಟ್ಟಡ ಬಿತ್ತೋ ಅಥವಾ 29 ನೇ ತಾರೀಖಿಗೆ ಕಟ್ಟಡ ಬಿತ್ತೋ ಎಂದು ಕೇಳಬೇಡಿ. ನಾನು 29 ನೇ ತಾರೀಖಿಗೆ ಬಿತ್ತು ಎಂದರೆ, ತಾವು 29 ನೇ ತಾರೀಖಿಗೆ ಬಿದ್ದಿಲ್ಲ. ಅದು 31 ನೇ ತಾರೀಖಿಗೆ ಬಿದ್ದಿದೆ ಎಂದು ಹೇಳಬೇಡಿ. ಇಲ್ಲಿ ಆ ಚರ್ಚೆ ಬೇಡ. ಅದು ಅರ್ಥವಿಲ್ಲದಂತಹ ಚರ್ಚೆ. ಆದ್ದರಿಂದ, ದಯಮಾಡಿ ಮಾನ್ಯ ಸದಸ್ಯರಿಗೆ ನೇರವಾಗಿ ಉತ್ತರ ಕೊಟ್ಟುಬಿಡಿ. ಸದರಿ ವಿಷಯ ಈ ಹಿಂದೆಯೂ ಸಹ ಸದನದಲ್ಲಿ ಚರ್ಚೆಯಾಗಿದೆ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪ್ರಸ್ತಾಪಿಸಿರುವಂತಹ ಸಂಗತಿಗಳು ಸರಿ ಇವೆ. ಆದರೆ, ಆ ಕಟ್ಟಡ 1985 ರಲ್ಲಿ ಕುಸಿದು ಬಿದ್ದು ಹೋಗಿಲ್ಲ.

**ಸಭಾಪತಿಯವರು:-** ಆ ಕಟ್ಟಡ 1995 ರಲ್ಲಿ ಕುಸಿದು ಬಿತ್ತು.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಸುಮಾರು 12 ವರ್ಷಗಳ ಕಾಲ ಆ ಕಟ್ಟಡವನ್ನು ಉಪಯೋಗಿಸಿಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದು ಹೋಗಲಿ ಬಿಡಿ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಅದು water logging area. ಆ ಕಟ್ಟಡ ಕಬಿನಿ ದಡದ ಮೇಲೆ ಇರುವಂಥದ್ದು. ಅದು black cotton soil. ಪ್ರವಾಹ ಬಂದ ನಂತರ ಸುತ್ತಲೂ ನೀರು ತುಂಬಿಕೊಂಡಿದೆ. ಆಗ ಆ ಕಟ್ಟಡದಲ್ಲಿ ಬಿರುಕು ಕಾಣಿಸಿಕೊಂಡಿದೆ. I will come to the point. I am not defending.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ವಿಷಯದ ಬಗ್ಗೆ ಅಧಿಕಾರಿಗಳು ಭರವಸೆ ಸಮಿತಿಯಲ್ಲಿ ಉತ್ತರ ಕೊಟ್ಟಿರುವಂತಹ ದಾಖಲೆ ಇದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದನ್ನು ಕಳುಹಿಸಿಕೊಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅದೇನೆಂದರೆ, ಸದರಿ ಕಟ್ಟಡವನ್ನು ಉದ್ಘಾಟನೆ ಮಾಡಬೇಕಾಗಿತ್ತು, ಆ ವಿಷಯ ದಿನಪತ್ರಿಕೆಯಲ್ಲಿ ಬಂತು. ಹೀಗಾಗಿ, ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟಡವನ್ನು demolish ಮಾಡುವುದಕ್ಕೆ ಆದೇಶ ಮಾಡಿ ಅದರಲ್ಲಿ ಯಾರನ್ನು occupy ಮಾಡುವುದಕ್ಕೆ ಬಿಡಬಾರದೆಂದು ಉತ್ತರ ಕೊಟ್ಟಿದ್ದಾರೆ. ಈಗ ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಟ್ಟರೆ, ಅಧಿಕಾರಿಗಳು ತಪ್ಪು ಹೇಳದಂತಾಗುತ್ತದೆ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, I am not defending.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, 1985 ರಲ್ಲಿ ಸದರಿ ಕಟ್ಟಡ ಕುಸಿದು ಬಿದ್ದಿಲ್ಲವೆಂದರೆ, 1985 ರಲ್ಲಿ ಆ ಕಟ್ಟಡವನ್ನು ಪರಿಶೀಲನೆ ಮಾಡಿ ರಿಪೇರಿಗೆಂದು ಹಣ ಕೊಟ್ಟಿರುವಂತಹ ದಾಖಲೆ ಇದೆ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ನಾನು 1985 ರಲ್ಲಿ ಮೊದಲ ಬಾರಿಗೆ ಶಾಸಕನಾಗಿದ್ದೆ. ನಂಜನಗೂಡು ನಮ್ಮ ಊರು. ಸದರಿ ಕಟ್ಟಡವನ್ನು ಕಚೇರಿಗಾಗಿ 12 ವರ್ಷಗಳ ಕಾಲ ಬಳಕೆ ಮಾಡಿಕೊಂಡಿದ್ದಾರೆ. Subsequently, ಮಾನ್ಯ ಸದಸ್ಯರು ಹೇಳಿದಂತೆ, ಆ ಕಟ್ಟಡದಲ್ಲಿ ಬಿರುಕು ಕಾಣಿಸಿಕೊಂಡಾಗ, Dr.C.S.Vishwanatha, Chairman of Torsteel Research Foundation ಮತ್ತು ನಮ್ಮ ಇಲಾಖಾಧಿಕಾರಿಗಳು ಕಾರ್ಯದರ್ಶಿಗಳ ಜೊತೆಗೆ ಚರ್ಚೆ ಮಾಡಿ ಅದು ವಾಸ ಮಾಡುವುದಕ್ಕೆ ಯೋಗ್ಯವಿದೆಯೋ ಅಥವಾ demolish ಮಾಡಬೇಕೇ ಎಂಬ ಬಗ್ಗೆ they took a decision. ನಂತರ ಮಾನ್ಯ ಲೋಕಾಯುಕ್ತರವರಿಗೆ ದೂರು ಸಲ್ಲಿಸಿದರು. ಮಾನ್ಯ ಲೋಕಾಯುಕ್ತರವರಿಗೆ 'ಬಿ' ವರದಿ ಕೊಡಿ ಎಂದು ಕೇಳುವುದಕ್ಕೆ ಸರ್ಕಾರಕ್ಕೆ ಏನು ಅಧಿಕಾರ ಇದೆಯೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಅಧಿಕಾರ ಇಲ್ಲ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, But subsequently, ಎಲ್ಲಾ inspection ಬಂದಾಗ, ತಪ್ಪಿತಸ್ಥರು ಎಂದು ಕಂಡು ಬಂದಿದೆ. ಅದು 1980 ರಲ್ಲಿ ಅದರ ಅಂದಾಜು ಮೊತ್ತ 9 ಲಕ್ಷ ರೂಪಾಯಿಗಳು ಇತ್ತು. ಆನಂತರ 10 ಲಕ್ಷ ರೂಪಾಯಿಗಳು ಆಯಿತು. Escalation ಆಗಿ ಅಂತಿಮವಾಗಿ ಅದು ಸುಮಾರು 41+ ಲಕ್ಷ ರೂಪಾಯಿಗಳು ಆಯಿತು. ಈಗ ಎಲ್ಲಾ ಮುಗಿದು ಹೋಗಿದೆ. ಅದು ನೆಲಸಮ ಆಗಿದೆ. ಅಲ್ಲಿ ಪಾರ್ಕ್ ಮತ್ತು ಗಾಜಿನ ಮನೆಯನ್ನು ಕಟ್ಟಬೇಕೆಂದು ಆಗಿದೆ. ಕಟ್ಟಡವನ್ನು ಬೇರೆ ಕಡೆಗೆ ಕಟ್ಟಿದೆ. ಅದು ಒಂದು ಭಾಗ. ಲೋಕಾಯುಕ್ತರವರು ಅಂತಿಮವಾಗಿ 'ಬಿ' ವರದಿ ಸಲ್ಲಿಸಿದ್ದರೂ ಸಹ, ಸರ್ಕಾರಕ್ಕೆ ತಪ್ಪಿತಸ್ಥರಿಂದ ಆಗಿರುವಂತಹ ನಷ್ಟವನ್ನು recovery

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುವುದಕ್ಕೆ ಇಲಾಖೆಯಿಂದ ನಂಜನಗೂಡು Munsiff Court ನಲ್ಲಿ ಅವರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆ. In order to recover the loss and to find out who are at fault.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಭರವಸೆ ಸಮಿತಿಯ ನಡವಳಿಕೆಯನ್ನು ಓದುತ್ತೇನೆ. ಕಳೆದ ಬಾರಿಯ ಸಮಿತಿ ಸಭೆಯಲ್ಲಿ ಇಲಾಖೆಯವರು ಕಳಪೆ ಕಾಮಗಾರಿ ಆಗಿದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಕಟ್ಟಡದ ಉದ್ಘಾಟನೆಗೂ ಮೊದಲೇ ಕಟ್ಟಡ ಬಿದ್ದು ಹೋಗಿದೆ ಎಂದು ಇಲಾಖೆಯವರು ಹೇಳಿದ್ದಾರೆ. ಆದರೂ ಸಹ, 'ಬಿ' ವರದಿ ಕಳುಹಿಸಿದ್ದಾರೆಂದರೆ ಏನು ಅರ್ಥ? ಈಗ 'ಬಿ' ವರದಿಯನ್ನು ಕಳುಹಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಳಪೆ ಕಾಮಗಾರಿ ಆಗಿದ್ದರೂ ಸಹ, 'ಬಿ' ವರದಿ ಕೊಟ್ಟಿರುವುದನ್ನು ನೋಡಿದರೆ, ಲೋಕಾಯುಕ್ತದವರು ಏನು ಬೇಕಾದರೂ ಮಾಡಬಹುದೇ ಎನ್ನುವ ಅನುಮಾನಕ್ಕೆ ಬರುತ್ತದೆ. ಯಾರು 'ಬಿ' ವರದಿಯನ್ನು ಕೊಟ್ಟಿದ್ದಾರೆ ಅವರ ಹೆಸರನ್ನು ಕಳುಹಿಸಿ ಕೊಡಿ. ಈ ರೀತಿಯಾದರೆ, ಲೋಕಾಯುಕ್ತ ಹೇಗೆ ನಡೆಯಬೇಕು? ಕಟ್ಟಡ ಉದ್ಘಾಟನೆಗೂ ಮೊದಲೇ ಬಿದ್ದಿದೆ ಎಂದರೆ, ಕಳಪೆ ಕಾಮಗಾರಿ ಎಂದು ಗೊತ್ತಾಗುತ್ತದೆ. Registrar ರವರೇ, ತಮಗೆ ಉತ್ತರ ಕೊಡಲು ಗೊತ್ತಾಗಲ್ಲಿಲ್ಲವೆಂದರೆ, ತಮ್ಮ ಸಹಾಯಕ್ಕಾಗಿ ಯಾರು ಬಂದಿದ್ದಾರೆ ಅವರ ಸಹಾಯವನ್ನು ತೆಗೆದುಕೊಳ್ಳಿ. ಆಗ ಅವರು ಹೇಳಿದ್ದಾರೆ. ADGP wing ನವರು 'ಬಿ' ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಯಾವ ರೀತಿ ಕೊಟ್ಟಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆ ರೀತಿ ಹೇಳಿ ಎಡಿಜಿಪಿಯವರ ನಿರ್ದೇಶನದ ಮೇರೆಗೆ. ನಮ್ಮ technical wing ನವರು ಹೋಗಿ ನೋಡಿದ್ದಾರೆ. ಕೊನೆಗೆ ಅಧೀಕ್ಷಕರು, ಆಡಳಿತ, ಲೋಕಾಯುಕ್ತರವರೆ ಕಳಪೆ ಕಾಮಗಾರಿ ಎಂದು ಅರ್ಥವಾಗುತ್ತದೆಂದು ಹೇಳಿದ್ದಾರೆ. ಅವರು ಸರಿಯಾಗಿ ಹೇಳಿದ್ದಾರೆ. ಇದರಲ್ಲಿ ಇಲ್ಲಿ ತಪ್ಪೋ ಅಥವಾ ಅಲ್ಲಿ ತಪ್ಪೋ ಗೊತ್ತಿಲ್ಲ. ಆದರೆ, ನಮಗೆ ಯಾವುದಾದರೊಂದು ಉತ್ತರ ಬೇಕಲ್ಲವೇ.

**ಡಾ॥ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾರ್ಯಾರು ಇದ್ದಾರೆ. I don't have any jurisdiction to question the authority of Lokayukta. Nonetheless the Government has taken a decision to file a suit in the Court against those have committed the mistake and are responsible for loss of Government money. A case has been filed in the Court.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 1985 ರಲ್ಲಿ ಕಟ್ಟಡ ಏನೂ ಆಗಿರಲ್ಲಿಲ್ಲ, 1997 ರಲ್ಲಿ ಚೆನ್ನಾಗಿ ಇತ್ತು ಎಂದು ಹೇಳಿದ್ದಾರೆ. 1985 ರಲ್ಲಿ ಪರಿಶೀಲನೆ ಮಾಡಿ ರಿಪೇರಿಗೆಂದು ಹಣ ಕೊಟ್ಟಿರುವಂತಹ ದಾಖಲೆ ನನ್ನ ಬಳಿ ಇದೆ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಬಳಕೆ ಮಾಡಿರುವಂತಹ ಒಂದು ಕಟ್ಟಡ ಬಿರುಕು ಬಿಟ್ಟ ತಕ್ಷಣವೇ ಗುದ್ದಲಿಯನ್ನು ತೆಗೆದುಕೊಂಡು ಬಂದು ಆ ಕಟ್ಟಡವನ್ನು ಕೆಡವಿ ಹಾಕಿಬಿಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. We try to retain the building. A final decision will be taken by the technocrats based on the technical report.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದಕ್ಕೆ ಅಂತಿಮವಾಗಿ ಏನು ಮಾಡುತ್ತಾರೆಂದು ಸದನಕ್ಕೆ ತಿಳಿಸಲಿ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಈಗ ನ್ಯಾಯಾಲಯದಲ್ಲಿ ತಪ್ಪಿಸ್ಥರ ವಿರುದ್ಧ ಕೇಸ್ ಹಾಕಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ 30 ವರ್ಷಗಳು ಆಗಿದೆ. ಇನ್ನೊಂದು 25 ವರ್ಷಗಳು ಮುಂದಕ್ಕೆ ಹೋಗಲಿ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಯಾರ್‍ಯಾರು ಸರ್ಕಾರಕ್ಕೆ 41 ಲಕ್ಷ ರೂಪಾಯಿಗಳ ನಷ್ಟವನ್ನುಂಟು ಮಾಡಲು ಕಾರಣರಾಗಿದ್ದಾರೆ ಅವರು ಮತ್ತು ಅವರ ಕುಟುಂಬದವರಿಂದ ಹಣವನ್ನು recovery ಮಾಡುವುದಕ್ಕೆ ನ್ಯಾಯಾಲಯದಲ್ಲಿ ಕೇಸ್ ಹಾಕಿದ್ದೇವೆ. We don't have any other option except filing a case in the Court.

**ಸಭಾಪತಿಯವರು:-** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 03**

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ನಾನು ರಾಯಚೂರಿನಲ್ಲಿರುವಂತಹ ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಘಟಕಗಳ ಬಗ್ಗೆ ವಿವರಗಳನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ವಿವರವಾಗಿ ಸಾಕಷ್ಟು ಮಾಹಿತಿಯನ್ನು ಒದಗಿಸಿದ್ದಾರೆ. ಇದರಲ್ಲಿ ಅತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯವಾಗಿ ವೈಟಿಪಿಎಸ್ ಹೊಸದಾಗಿ ಎರಡು ಘಟಕಗಳು ಪ್ರಾರಂಭವಾಗುತ್ತಿವೆ. ಆ ಎರಡು ಘಟಕಗಳಿಗೆ ಸುಮಾರು 12 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈಗ ಅದನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭ ಮಾಡಬೇಕಾದರೆ, ಕಲ್ಲಿದ್ದಲು ಸರಬರಾಜಿನ ಪರಿಸ್ಥಿತಿ ಏನೆಂಬ ಉದ್ದೇಶಕ್ಕೆ ನಾನು ಈ ಪ್ರಶ್ನೆಯನ್ನು ಕೇಳಿದೇನೆ. ಏಕೆಂದರೆ, ಇಲ್ಲಿಯವರೆಗೂ ಅದಕ್ಕೆ ಬೇಕಾಗಿರುವಂತಹ 25 ಲಕ್ಷ ಟನ್‌ನಲ್ಲಿ Coal Authority ಯಿಂದ ಸ್ವಲ್ಪ ಹೆಚ್ಚು ಕಡಿಮೆ ಕೇವಲ 5 ಲಕ್ಷ ಟನ್ ಕಲ್ಲಿದ್ದಲು ಅಂದರೆ, 25% ಮಾತ್ರ ಸಿಕ್ಕಿದೆ ಎಂದು ನಮಗೆ ಮಾಹಿತಿ ಸಿಕ್ಕಿದೆ. ಇತ್ತೀಚೆಗೆ Legislature Committee ಯ ಜೊತೆಯಲ್ಲಿ ಮಾನ್ಯ ಸದಸ್ಯರಾದ ರಮೇಶ್‌ಬಾಬು ಮತ್ತು ಇತರರು ಸೇರಿ ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಘಟಕಗಳಿಗೆ ಭೇಟಿ ನೀಡಿದ್ದೇವೆ. ನಮಗೆ ಆ ಸಂದರ್ಭದಲ್ಲಿ ಅಲ್ಲಿನ ಮಾಹಿತಿ ಪ್ರಕಾರ 25% demand ನಷ್ಟು ಸಹ ಕಲ್ಲಿದ್ದಲು ಸಿಗುತ್ತಿಲ್ಲವೆಂದು ಹೇಳಿದರು. ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಘಟಕಗಳಿಗೆ ಸ್ವಲ್ಪ ಹೆಚ್ಚು ಕಡಿಮೆ 18 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದರಿಂದ ಸಂಪೂರ್ಣವಾದ ರೀತಿಯಲ್ಲಿ ವಿದ್ಯುತ್ ಉತ್ಪಾದನೆ ಮಾಡಬೇಕೆಂದರೆ 136 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ಬೇಕಾಗುತ್ತದೆಂದು ಹೇಳುತ್ತಾರೆ. ಆದರೆ, ಇವರಿಗೆ ಮುಂದಿನ ವರ್ಷಕ್ಕೆ ಒಪ್ಪಂದವಾಗಿರುವಂಥದ್ದು, ಕೇವಲ 56 ಲಕ್ಷ ಮೆಟ್ರಿಕ್‌ಟನ್ ಕಲ್ಲಿದ್ದಲು ಮಾತ್ರ. ಅಂದರೆ, 80 ಲಕ್ಷ ಮೆಟ್ರಿಕ್‌ಟನ್ ಕಲ್ಲಿದ್ದಲು ಕಡಿಮೆ ಆಗುತ್ತದೆ. ಇವರು ಇದನ್ನು ಯಾವ ರೀತಿ ನಿಭಾಯಿಸಿ ಎಲ್ಲಾ ಘಟಕಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಒಂದು. ಎರಡನೇಯದಾಗಿ, ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಯೋಜನೆಯಲ್ಲಿ land losers ಗೆ ರೈತರ ಬೇಡಿಕೆಗಳಿಗೆ ಅನೇಕ ಬಾರಿ ಮಾನ್ಯ ಸಚಿವರು ಸಭೆಗಳನ್ನು ನಡೆಸಿ ಅದನ್ನು ಸರಿಪಡಿಸುವಂತಹ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ಇನ್ನೂ ಕೆಲವು ಮಾನದಂಡಗಳನ್ನು ಸರಿಪಡಿಸಬೇಕೆಂದು ಅಲ್ಲಿನ ರೈತರ ಬೇಡಿಕೆಗಳು ಇವೆ. ಅದನ್ನು ಸಹ ಸರಿಪಡಿಸುವಂತಹ ಆಶ್ವಾಸನೆಯನ್ನು ಮಾನ್ಯ ಸಚಿವರು ನೀಡಿದ್ದಾರೆ. ಅದನ್ನು ಅದಷ್ಟುಬೇಗ ಅದನ್ನು ಮಂಡಳಿಯ ಮುಂದೆ ಸಹಕಾರ ನೀಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಮಾಹಿತಿಗಳನ್ನು ಮುಚ್ಚಿ ಇಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಅದರ ಪಕ್ಕದ ಜಿಲ್ಲೆಯವರು. ಮಾನ್ಯ ಸದಸ್ಯರು ಮತ್ತು ಇತರರು ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿಯನ್ನು ನೋಡಿಕೊಂಡು ಬಂದಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ನಾನು ಈ ಮೊದಲೇ ಹೇಳಿದ ರೀತಿ ನಮಗೆ ಕೆಲವು coal block ಗಳನ್ನು ಹಿಂದೆ allot ಮಾಡಿಕೊಟ್ಟಿದ್ದರು. ಮಾನ್ಯ ಈಶ್ವರ್‌ರವರು ಇಂಧನ ಸಚಿವರಾಗಿದ್ದಾಗ. ಅದಕ್ಕೆ ಬೇಕಾದಷ್ಟು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಗಳು ಆಗಿ ಅದು ನ್ಯಾಯಾಲಯದಲ್ಲಿ ಉಳಿದುಕೊಂಡಿದೆ. ಈ ಮಧ್ಯದಲ್ಲಿ ಈ ಬ್ಲಾಕ್‌ಗೆ ದೇವಚಾಪಚಾಮಿ ಎನ್ನುವ ಕಡೆಗೆ ಅಲ್ಲಿ 5 ರಾಜ್ಯಗಳನ್ನು ಸೇರಿಸಿ ಕೊಟ್ಟಿದರು. ನಂತರ ಅದನ್ನು ರದ್ದು ಮಾಡಿ, ಪುನಃ ಬೇರೆ ಕಡೆ ಕೊಡುತ್ತೇವೆಂದು ಹೇಳಿದ್ದರು. ಆದರೆ, ಇನ್ನೂ ಕೊಟ್ಟಿಲ್ಲ.

**ಸಭಾಪತಿಯವರು:-** ಬೇರೆ ಯಾರು ಮಧ್ಯೆ ಮಾತನಾಡಬೇಡಿ. ಸಚಿವರು ಉತ್ತರ ಕೊಡುತ್ತಿದ್ದಾರೆ. ಅವರಿಗೆ ತೊಂದರೆ ಆಗುತ್ತದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈ ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಘಟಕಗಳಿಗೆ ನಮ್ಮ ಕೋರಿಕೆ 37 ರಿಂದ 38 ಲಕ್ಷ ಮೆಟ್ರಿಕ್‌ಟನ್ ಕಲ್ಲಿದ್ದಲು ಇತ್ತು. Yermarus ನ ಹೊಸ unit ಇದೆ ಅದಕ್ಕೆ 24 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ಇತ್ತು. ಈ ಆರ್‌ಟಿಪಿಎಸ್ ಕೇವಲ 12.9 ಅಂದರೆ, 32% ನಷ್ಟು ಕಲ್ಲಿದ್ದಲು ಈ ತಿಂಗಳನವರೆಗೆ ಕೊಡುತ್ತಿದ್ದಾರೆ. ವೈಟಿಪಿಎಸ್‌ಗೆ ಬರಿ 5.24 ಅಂದರೆ, ಕೇವಲ 21% ಮಾತ್ರ ಕೊಡುತ್ತಿದ್ದರು. ಇಲ್ಲಿ ಸಮಸ್ಯೆ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಬೇರೆ ಬೇರೆ ರಾಜ್ಯಗಳಲ್ಲೂ ಹಾಗೂ ನಮ್ಮ ಪಕ್ಕದ ಕೆಲವು ರಾಜ್ಯಗಳಲ್ಲಿಯೂ ಸಹಾ ಈ ಸಮಸ್ಯೆ ಇದೆ. ಇಡೀ ನಮ್ಮ ರಾಷ್ಟ್ರದಲ್ಲಿಯೇ ಕಲ್ಲಿದ್ದಲ್ಲಿನ ಸಮಸ್ಯೆ ಇದೆ. ಕೆಲವು ಅನೇಕ ಪಾಲಿಸಿಗಳನ್ನು ಬದಲಾವಣೆ ಮಾಡಿ allotment ಮಾಡುವುದರಿಂದ ಈ ಸಮಸ್ಯೆ ಉಂಟಾಗಿದೆ. ಇದನ್ನು ನಾನು ಯಾರ ಮೇಲೆಯೂ ಶೋಷಣೆ ಮಾಡಿ ಹೇಳುವುದಿಲ್ಲ. ಆದರೆ, ಕೇಂದ್ರ ಸರ್ಕಾರ ನಮಗೆ ಏನು ಮಾತು ಕೊಟ್ಟಿತ್ತೋ ಹಾಗೂ ಆಗ್ರಿಮೆಂಟ್ ಏನೂ ಆಗಿತ್ತು ಆ ಪ್ರಕಾರ ನಮಗೆ ಕೊಡುವುದಕ್ಕೆ ಆಗಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾನು ಕೇಂದ್ರ ವಿದ್ಯುತ್ ಮಂತ್ರಿಯವರನ್ನು ಭೇಟಿ ಮಾಡಿದ್ದೇವೆ. ಈ ಮಧ್ಯೆ ಕೇಂದ್ರ ಕಲ್ಲಿದ್ದಲು ಮಂತ್ರಿಯವರನ್ನು ಭೇಟಿ ಮಾಡಲು ಪ್ರಯತ್ನ ಮಾಡಿದ್ದೇವೆ. But, we could not meet him. ಅವರಿಗೆ ಸುಮಾರು 51 ಪತ್ರಗಳನ್ನು ಬರೆದು ಸಂಪರ್ಕ ಮಾಡಿದ್ದೇವೆ. ಆದರೆ, ನಾವು pressure ಹಾಕಿದರೆ, ಇದಕ್ಕೆ ಹೆಚ್ಚು ಕಡಿಮೆ ಆಗುತ್ತದೆ ಎನ್ನುವುದು ನಮಗೆ ಸ್ವಲ್ಪ ಸಮಸ್ಯೆ ಗೊತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು...)

(015)06.02.2018-01.10-ಎಂವಿ-ಕೆಎಸ್

**ಶ್ರೀ ಡಿ.ಕೆ.ಶಿವಕುಮಾರ್ (ಮುಂದು):-**

ಇಡೀ ರಾಷ್ಟ್ರದಲ್ಲಿ ಖಾಸಗಿ ಕಂಪನಿಗಳಿಗೆ ಮತ್ತು ಸರ್ಕಾರದ ಕಂಪನಿಗಳಿಗೆ ಬೇರೆ ರಾಜ್ಯದಲ್ಲಿ ಇದು ಆಗುತ್ತಿದೆ. ಅದಕ್ಕೆ ನಾವು alternative ಆಗಿ ಸುಮಾರು ಹತ್ತು ಲಕ್ಷ ಮೆಟ್ರಿಕ್ ಟನ್‌ನಷ್ಟನ್ನು

import ಮಾಡಿಕೊಳ್ಳುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಟೆಂಡರ್ ಸಹ ಅಂತಿಮಗೊಂಡಿದೆ. ಇನ್ನು ಒಂದು ವಾರ ಅಥವಾ ಹದಿನೈದು ದಿನಗಳಲ್ಲಿ ಅವರಿಗೆ order ಕೊಡುವಂತಹ ಹಂತದಲ್ಲಿ ಇದ್ದೇವೆ. ಈಗ Board Meeting ಕೂಡ ಆಗಿದೆ. ನಾವು alternative ಮಾಡಿಕೊಂಡಿದ್ದೇವೆ ಮತ್ತು ಈ ಮಧ್ಯೆ ನೀಡಿ ಎಂದು ಸಹ ಅವರಿಗೆ ಒತ್ತಡ ಹಾಕುತ್ತಿದ್ದೇವೆ. ಅವರು ಸ್ವಲ್ಪ ಭರವಸೆಯನ್ನು ಸಹ ಕೊಟ್ಟಿದ್ದಾರೆ. ಅದು ಬರುವವರೆಗೂ, ಈ ಬೇಸಿಗೆಯಲ್ಲಿ ಏನಾದರೂ ಹೆಚ್ಚು-ಕಡಿಮೆ ಆಗುತ್ತದೆ ಎಂದು ನಾವು ಅದನ್ನು alternative ಇಟ್ಟುಕೊಂಡಿದ್ದೇವೆ. ವಿದ್ಯುತ್ ಸಮಸ್ಯೆಯಾಗುತ್ತದೆ ಎಂದು ಶೇಕಡ 60ರಷ್ಟು ಮಳೆ ಬಿದ್ದರೂ ಸಹ ನೀರನ್ನೂ ಕೂಡ ಸಂಗ್ರಹಿಸಿದ್ದೇವೆ. ಯಾವುದೇ ಕಾರಣಕ್ಕೂ ಸಹ ಈ ಹೊಸ ಯೂನಿಟ್‌ಗಳನ್ನು ನಿಲ್ಲಿಸುವಂತಹ ಪ್ರಶ್ನೆಯೇ ಇಲ್ಲ. ಅದಕ್ಕೆ ಯಾವ ರೀತಿಯ ವ್ಯವಸ್ಥೆ ಬೇಕೋ ಅದನ್ನು ನಾವು ಮಾಡಿಕೊಂಡಿದ್ದೇವೆ. ಈಗ ಎರಡನೆಯದಾಗಿ, employment ವಿಚಾರವಾಗಿ ಅವರು ಕೇಳಿದ್ದಾರೆ. ಸರ್ಕಾರದ ಕಂಪನಿಗಳಿಗೆ ಇದು ಒಂದು ದೊಡ್ಡ ಕಾಯಿಲೆ. ನಾವು ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು salary ಯನ್ನು ನಮ್ಮ KPCL (Karnataka Power Corporation Limited) ನ generation unit ಗೆ ಕೊಡುತ್ತಿದ್ದೇವೆ. ಅಂದರೆ, ಒಂದು ತಿಂಗಳಿಗೆ ಹೆಚ್ಚು ಕಡಿಮೆ 90 ರಿಂದ 95 ಲಕ್ಷ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಖಾಸಗಿಯವರು ಮಾಡುವುದಕ್ಕಿಂತ ನಮಗೆ ತುಂಬಾ ಜಾಸ್ತಿಯಾಗುತ್ತಿದೆ. ಈಗ ಜಿಂದಾಲ್ ಕಂಪನಿಯವರು ಮೂರು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಒಬ್ಬರನ್ನು ತೆಗೆದುಕೊಳ್ಳುತ್ತಾರೆ. UPCL (Uttarakhand Power Corporation Limited)ನವರು ನಾಲ್ಕು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಒಬ್ಬರನ್ನು ತೆಗೆದುಕೊಳ್ಳುತ್ತಾರೆ. ನಾವು KPCL ನಿಂದ ಒಂದು ಮೆಗಾವ್ಯಾಟ್‌ಗೆ ವಿದ್ಯುತ್ ಉತ್ಪಾದನೆಗೆ almost ಮೂರು ಜನರನ್ನು, ಅಂದರೆ ಒಬ್ಬರನ್ನು ತೆಗೆದುಕೊಳ್ಳುವ ಕಡೆ ನಾವು ಮೂರು ಜನರನ್ನು ತೆಗೆದುಕೊಂಡಿದ್ದೇವೆ. ಆದರೆ, ಇಲ್ಲಿ ಉತ್ಪಾದನೆ ಸುಮಾರು 0.87 ಬರುತ್ತಿದೆ. ಕಾರಣ, ಭೂಮಿ ಕಳೆದುಕೊಂಡಂತಹವರಿಗೆ ಮತ್ತು ಇತರೆಯವರಿಗೆ ಸಂಬಂಧಪಟ್ಟಂತೆ ನಮ್ಮ ರಾಜಕಾರಣಿಗಳು interfere ಆಗುವುದರಿಂದ ಇದು ಒಂದು ದೊಡ್ಡದಾಗಿದೆ. ಇದು ರಾಯಚೂರು ಜಿಲ್ಲೆಯ ಪಕ್ಕದಲ್ಲಿ ಇದೆ. ನಾವು ಭೂಮಿಯನ್ನು ಖಾಸಗಿಯವರಿಂದ ಖರೀದಿ ಮಾಡಿಲ್ಲ, ಅದನ್ನು KIADB (Karnataka Industrial Area Development Board)ಯಿಂದ ಖರೀದಿ ಮಾಡಿದ್ದೇವೆ, ಆ ದೃಷ್ಟಿಯಿಂದ ಭೂಮಿ ಕಳೆದು ಕೊಂಡಿರುವವರೆಲ್ಲರಿಗೂ ಸಹ ನೌಕರಿಯನ್ನು ಕೊಡಬೇಕೆಂದು ಈ ಹಿಂದೆ ಒಂದು ಒಪ್ಪಂದವಾಗಿದೆ. ನಾವು ಈಗಾಗಲೇ ಸುಮಾರು 109

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಟುಂಬಗಳಿಗೆ ನೌಕರಿಯನ್ನು ಕೊಟ್ಟಿದ್ದೇವೆ. ಇನ್ನೂ 259 ಅರ್ಜಿಗಳು ಬಾಕಿ ಉಳಿದುಕೊಂಡಿವೆ. ಈಗ 121 ಕುಟುಂಬದವರು ಇನ್ನು ಹೆಚ್ಚುವರಿ ನೌಕರಿಯನ್ನು ಕೇಳುತ್ತಿದ್ದಾರೆ. ಮೊನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು, ಅಲ್ಲಿನ ಶಾಸಕರು, ಎಂಪಿಯವರು ಮತ್ತು ಮಾನ್ಯ ಸದಸ್ಯರಾದ ಶ್ರೀ ಎನ್.ಎಸ್.ಬೋಸ್‌ರಾಜುರವರು ಸಭೆಯನ್ನು ಕರೆದು ಬಹಳ ಒತ್ತಡ ಮಾಡಿದರು. ಅವರಿಗೆ ಕಾನೂನಿನ ಚೌಕಟ್ಟಿನಲ್ಲೇ ನೌಕರಿ ಕೊಡಬೇಕೆಂದು ಮಾಡಿದ್ದೇವೆ. ಈಗಿರುವಂತಹ ಪಾಲಿಸಿಯಲ್ಲಿ ಅವರಿಗೆ ಹೆಚ್ಚುವರಿ ನೌಕರಿಯನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ನಾವುಗಳು ಇಲ್ಲಿ ಏನಾದರೂ ಮಾಡಿದರೆ ಅದು ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆ. ಅಂದರೆ ಬೇರೆ ಬೇರೆ ರೀತಿಯ ನೌಕರಿಯನ್ನು ಕೊಡುವಂತದ್ದು. ಆದುದರಿಂದ ಇದಕ್ಕೆ ಒಂದು ಪ್ರತ್ಯೇಕ ಕಾನೂನು ಚೌಕಟ್ಟನ್ನು ತಂದು ಅವರಿಗೆ ನೌಕರಿಯನ್ನು ಕೊಡಬೇಕೆಂದು, we have taken a decision.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರದ್ದು.

**ಚುಕ್ಕೆ ಪ್ರಶ್ನೆ ಸಂಖ್ಯೆ: 183**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ದೀನ್ ದಯಾಳ್ ಗ್ರಾಮೀಣ ವಿದ್ಯುತ್ ಯೋಜನೆಯ ಅನುಷ್ಠಾನದ ಹಂತಗಳ ಬಗ್ಗೆ ಕೇಳಿದ್ದೇನೆ. ಅದೇ ರೀತಿ ಈ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷು ಮತ್ತು ಈ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರದ ಕಾಲಮಿತಿ ಏನು? ಎನ್ನುವಂತಹ ಪ್ರಶ್ನೆಗಳನ್ನು ಕೇಳಿದ್ದೇನೆ. ಇಲ್ಲಿ ಕೊಟ್ಟಿರತಕ್ಕಂಥ ಉತ್ತರದಲ್ಲಿ ಸ್ವೀಕೃತವಾದ ಅರ್ಜಿಗಳು ಮತ್ತು ಅರ್ಹ ಫಲಾನುಭವಿಗಳು ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಉಡುಪಿಯಲ್ಲಿ ಸ್ವೀಕೃತವಾದ ಅರ್ಜಿಗಳು 1362, ಅರ್ಹ ಫಲಾನುಭವಿಗಳು 958. ಕಾರ್ಕಳದಲ್ಲಿ ಸ್ವೀಕೃತವಾದ ಅರ್ಜಿಗಳು 1735, ಅರ್ಹ ಫಲಾನುಭವಿಗಳು 981. ಕುಂದಾಪುರದಲ್ಲಿ ಸ್ವೀಕೃತವಾದ ಅರ್ಜಿಗಳು 2366, ಅರ್ಹ ಫಲಾನುಭವಿಗಳು 1356 ಎಂದು ಇದೆ.

ಮಾನ್ಯ ಸಭಾಪತಿಯವರೇ, ಈಗ ಗ್ರಾಮ ಪಂಚಾಯಿತಿಯಿಂದಾಗಲಿ ಅಥವಾ ಇಲಾಖೆಯಿಂದಾಗಲಿ ಅರ್ಜಿಗಳನ್ನು ಆಹ್ವಾನಿಸಿಲ್ಲ. ಹಾಗಾದರೆ ಅರ್ಜಿಗಳು ಹೇಗೆ ಬಂದಿವೆ. ಅದರಲ್ಲಿ ಅರ್ಹರು ಯಾರು? ಮತ್ತು ಅರ್ಹರಲ್ಲದವರು ಯಾರು? ಎಂಬುದು ಹೇಗೆ ತೀರ್ಮಾನ ಆಗಿದೆ. ಈಗ ಕೊಟ್ಟಿರುವಂತಹ ಪಟ್ಟಿ ಏನಿದೆ, ಅದು ಗ್ರಾಮ ಪಂಚಾಯಿತಿಯಿಂದ ಕೊಟ್ಟಿರುವಂತಹ ಪಟ್ಟಿ, ಈಗ ಅದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರ ಇದೆ. ಒಂದು ವೇಳೆ ಅರ್ಜಿಗಳನ್ನು ಆಹ್ವಾನಿಸದೇ ಇರುವಂತಹ ಹಿನ್ನೆಲೆಯಲ್ಲಿ, ಇಲ್ಲಿಗೆ ಬಾರದೇ ಇರುವಂತಹವರಿಗೆ ಸರಿಪಡಿಸುವಂತಹ ವ್ಯವಸ್ಥೆ ಏನಿದೆ, ಬಸವ ವಸತಿ ಯೋಜನೆ ಎಂಬುದು ಬಿಪಿಎಲ್‌ದಾರರಿಗೆ ಇರುವುದು. ಅದರಲ್ಲಿ ಆಯ್ಕೆ ಆದಂತಹವರು ಬಿಟ್ಟು ಹೋಗಿರುವುದಕ್ಕೆ ಕಾರಣವೇನು? ಈಗ ಬಿಪಿಎಲ್ ಕಾರ್ಡ್‌ಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಅಂತಹವರಿಗೆ ಒಂದು ವರ್ಷವಾದರೂ ಬಿಪಿಎಲ್ ಕಾರ್ಡ್ ಸಿಗುತ್ತಿಲ್ಲ, ಅಂತಹವರಿಗೆ ಯಾವಾಗ ಸಿಗುತ್ತದೆ? ಈ ಬಸವ ವಸತಿ ಯೋಜನೆಯಲ್ಲಿ ಕಡ್ಡಾಯವಾಗಿ ಅವರೆಲ್ಲರನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಈಗಾಗಲೇ ಉಡುಪಿ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ಗ್ರಾಮಗಳಲ್ಲಿ ಎಷ್ಟು ಪೂರ್ಣಗೊಂಡಿವೆ. ಏಕೆಂದರೆ ಒಂಭತ್ತು ತಿಂಗಳನಲ್ಲಿ ಶೇಕಡ 25ರಷ್ಟನ್ನು ಪೂರ್ಣ ಮಾಡಬೇಕಾಗುತ್ತದೆ. ಹಾಗಾದರೆ ಶೇಕಡ 25ರಷ್ಟು ಆಗಿದೆಯೇ ಅಥವಾ ಇಲ್ಲವೆ. ಈಗ ಕೊಟ್ಟಿರುವಂತಹ ವರದಿಯ ಆಧಾರದ ಮೇಲೆ, ಅವರ ಮಾರ್ಗಸೂಚಿ ಅಥವಾ ನಿಬಂಧನೆಗಳು ಏನಿದೆ, ಅದರ ಪ್ರಕಾರ ಕಾರ್ಯ ಪೂರ್ಣ ಆಗಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈ ದೀನ್ ದಯಾಳ ಗ್ರಾಮೀಣ ವಿದ್ಯುತ್ ಯೋಜನೆ ಏನಿದೆ, ಅದರ ಅಡಿಯಲ್ಲಿ ಕೆಲವು ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕೊಡುವಂತಹ ವಿಚಾರದಲ್ಲಿ ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿಯವರು ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಏನಾಗಿದೆ ಎಂದರೆ, ಈ ಬಿಪಿಎಲ್ ಕಾರ್ಡ್ ಇರಬಹುದು, ಬಸವ ವಸತಿ ಯೋಜನೆ ಇರಬಹುದು ಮತ್ತು ಅಂಬೇಡ್ಕರ್ ವಸತಿ ಯೋಜನೆ ಇರಬಹುದು, ಈ ರೀತಿಯ ಬೇರೆ ಬೇರೆ ಯೋಜನೆಗಳು ಬರುತ್ತವೆ. ಅವುಗಳೆಲ್ಲವೂ ಕೂಡ ಒಂದು continuous process. ಕೆಲವರು ಮನೆ ಕಟ್ಟಲು ಸುಮಾರು ಮೂರು ತಿಂಗಳು, ಆರು ತಿಂಗಳು ಅಥವಾ ಎರಡು ವರ್ಷಗಳ ಸಮಯವನ್ನು ತೆಗೆದುಕೊಳ್ಳುತ್ತಾರೆ. ಅವರು ಮನೆಯನ್ನು ಕಟ್ಟಿ ಆದಂತಹ ಸಂದರ್ಭದಲ್ಲಿ ಅರ್ಜಿಯನ್ನು ಹಾಕಿಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಈ ನಂಬರ್‌ಗಳ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಈಗ ನಮ್ಮಲ್ಲಿರುವಂತಹ ದಾಖಲೆ ಪ್ರಕಾರ ಹೊಸದಾಗಿ ಮನೆ ಮತ್ತು ಬಿಪಿಎಲ್ ಕಾರ್ಡ್‌ಗಳು ನಮ್ಮ urban ಮತ್ತು rural ಇವುಗಳೆಲ್ಲ ಸೇರಿ ಸುಮಾರು 5.91 ಲಕ್ಷ ಇದೆ. ಈ ದೀನ್ ದಯಾಳ ಗ್ರಾಮೀಣ ವಿದ್ಯುತ್ ಯೋಜನೆಯಲ್ಲಿ ಶೇಕಡ 99ರಷ್ಟನ್ನು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಮುಂದಿನ ಮಾರ್ಚ್ ತಿಂಗಳನಲ್ಲಿ ಸುಮಾರು 5.83 ಲಕ್ಷಗಳಷ್ಟು complete ಆಗುತ್ತದೆ. ಇನ್ನು ಉಳಿದಿರುವಂತಹವುಗಳನ್ನು "ಸೌಭಾಗ್ಯ" ಎಂದು ಒಂದು ಹೊಸ ಯೋಜನೆ ಬಂದಿದೆ, ಅದರಲ್ಲಿ ಅವುಗಳನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇವೆ. ಅದರಲ್ಲಿ ಮಾನ್ಯ ಸದಸ್ಯರ main contention ಏನೆಂದರೆ, advertisement ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. We can do

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

that, ಅದಕ್ಕೆ ಏನೂ ಸಮಸ್ಯೆ ಇಲ್ಲ. ನಾನು ಇಲ್ಲೇ ಈ ಸದನದ ಮುಖಾಂತರವೇ ಹೇಳುತ್ತಿದ್ದೇನೆ. ಈಗ ಎಲ್ಲರೂ ಮತ್ತು ಯಾರ್ಯಾರಿಗೆ ಬೇಕು ಅವರು complete ಆದ ನಂತರ ಅರ್ಜಿಯನ್ನು ಕೊಡಬೇಕು. ಅವರು ಅರ್ಜಿಯನ್ನು ಕೊಟ್ಟರೆ ಸರ್ಕಾರದಿಂದ ಅವರಿಗೆ ಸಹಾಯ ಮಾಡುವುದಕ್ಕೆ ಅವಕಾಶವಾಗುತ್ತದೆ ಮತ್ತು ಅವರು ಸಹ ಸ್ವಲ್ಪ ಹಾಕಿಕೊಳ್ಳಬೇಕಾಗುತ್ತದೆ. ಏಕೆಂದರೆ ಮೀಟರ್ ಇಲ್ಲದೇ ನಾವು ಸಂಪರ್ಕ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ ಮತ್ತು ಇದರಿಂದ ಮುಂದಕ್ಕೆ ಬೇಕಾದಷ್ಟು ಸಮಸ್ಯೆಯಾಗುತ್ತದೆ. ನೀವು ಹೇಳಿದ ಹಾಗೆ, ಬೇಕಾದರೆ ಕಂಪನಿಯಿಂದ ಮತ್ತು ಸರ್ಕಾರದಿಂದ ಸಹ ಕೊಡುತ್ತೇವೆ. ಯಾರ್ಯಾರು ಅರ್ಜಿಯನ್ನು ಕೊಡುತ್ತಾರೆ, ಅವರು ಮನೆಗಳು complete ಆದ ಮೇಲೆ ಅರ್ಜಿಯನ್ನು ಕೊಡುತ್ತಾರೆ. ಈಗ ಮತ್ತೊಂದು ಸಮಸ್ಯೆ ಏನಾಗುತ್ತದೆ ಎಂದರೆ, ನಾವು ಹೊಸ ಮನೆಗಳಿಗೆ ಬೇರೆ ಬೇರೆ ಯೋಜನೆಯಲ್ಲಿ ಕೊಟ್ಟಿರುತ್ತೇವೆ. ಅವರು ಈ ಮೊದಲು ಬೇರೆ ಯಾವುದೋ ಒಂದು ಗುಡಿಸಲಿನಲ್ಲಿ ವಾಸ ಇರುತ್ತಾರೆ, ಅಲ್ಲಿ ಅವರು ಅದನ್ನು disconnect ಮಾಡುವುದಿಲ್ಲ. ಅಂದರೆ ಅಲ್ಲೂ ಸಂಪರ್ಕ ಇರುತ್ತದೆ, ಇಲ್ಲೂ ಸಹ ಸಂಪರ್ಕ ಇರುತ್ತದೆ. ಆಗ ನಾವು ಸಂಪರ್ಕ ಕೊಡುವಂತಹ ಸಂದರ್ಭದಲ್ಲಿ, ಅವರಿಗೆ ಸುಮಾರು 40 ಯೂನಿಟ್‌ಗಳವರೆಗೆ ಎಂದು ಮಾಡಿದ್ದೇವೆ. ಎಲ್ಲಾ ಮನೆಗಳಲ್ಲೂ ಸಹ ಟಿವಿ, ಫ್ಯಾನ್ ಮತ್ತು ರೆಫ್ರಿಜಿರೇಟರ್ ಇರುತ್ತದೆ. ನಾವು ಯಾವುದನ್ನು ಕಟ್ ಮಾಡುವುದಕ್ಕೆ ಆಗುವುದಿಲ್ಲ. So, ಇದರಲ್ಲಿ social obligation ಬಹಳ ಆಗಿದೆ. ಇಡೀ ರಾಜ್ಯದಲ್ಲಿ ಅದು ಒಬ್ಬರಿಗೆ ಸಂಬಂಧಪಟ್ಟಿದೆ ಎಂದು ನಾನು ಹೇಳುವುದಿಲ್ಲ, ಅದು ಎಲ್ಲರಿಗೂ ಸಂಬಂಧಪಟ್ಟಿದೆ. ಈಗ ನಾವು feeder ಗಳನ್ನು separation ಮಾಡುವುದಕ್ಕೆ ಹೊರಟ್ಟಿದ್ದೇವೆ. ಅಂದರೆ, Agricultural Feeder and Non Agricultural Feeder ಎಂದು ಮಾಡುವುದಕ್ಕೆ ಹೊರಟ್ಟಿದ್ದೇವೆ. ಅವರು ತಮ್ಮ ತೋಟದ ಮನೆಗಳಲ್ಲೇ ಇಟ್ಟುಕೊಳ್ಳುತ್ತಾರೆ, ನಾವು ತೋಟದ ಮನೆಗಳಿಗೆ ದಿನದ 24 ಗಂಟೆಗಳು ವಿದ್ಯುತ್ ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿ ಏಳು ಗಂಟೆಗೆ ವಿದ್ಯುತ್ ಕೊಟ್ಟಿರುತ್ತೇವೆ. But, ಏನೋ ಒಂದು mechanism ಮಾಡಿಕೊಂಡು ಬಿಟ್ಟಿದ್ದಾರೆ ಮತ್ತು ಅದನ್ನು misuse ಮಾಡಿಕೊಳ್ಳುತ್ತಾರೆ. ಈ ತರಹ ಸುಮಾರು internal technical issues ಕೂಡ ಇದೆ. ನಾನು ಅವರ ಪ್ರಶ್ನೆಗೆ ಸಂಬಂಧಪಟ್ಟಂತೆ ಖಂಡಿತವಾಗಿ ಮತ್ತೆ advertisement ಕೊಡುತ್ತೇವೆ. ನಾಳೆ ಅಥವಾ ನಾಡಿದ್ದು Press conference ಕರೆಯುತ್ತಿದೇವೆ. ಈಗ ಹೊಸದಾಗಿ "ಶೀಘ್ರ ಸಂಪರ್ಕ" ಎನ್ನುವಂತಹ ಹೊಸ ಯೋಜನೆಯನ್ನು ತರುತ್ತಿದ್ದೇವೆ. ಆನ್‌ಲೈನ್ ಅರ್ಜಿ ಹಾಕಿಕೊಂಡು ಮಾಡುವಂಥದ್ದು. ನಾಳೆ ಅಥವಾ ನಾಡಿದ್ದು, ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿವೇಶನ ಇರುವುದರಿಂದ ಅದನ್ನು ಇಲ್ಲೂ ಕೂಡ announce ಮಾಡುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ advertisement ಕೊಟ್ಟು ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ನನ್ನ ಪ್ರಶ್ನೆ ಇರುವುದು, ಒಂದು ವೇಳೆ ಮನೆ ಇಲ್ಲದಿರುವವರಿಗೆ ಮತ್ತು ಕಟ್ಟುತ್ತಿರುವವರಿಗೆ ಬೇರೆ. ಮಾನ್ಯ ಸಚಿವರು ಹೇಳಿರುವುದನ್ನು ನಾನು ಒಪ್ಪುತ್ತೇನೆ, ಅಂದರೆ ಅವರು ಮನೆ ಕಟ್ಟಿದ ಮೇಲೆ ಅರ್ಜಿ ಹಾಕುವುದು. ಈಗಾಗಲೇ ಮನೆ ಕಟ್ಟಿರುವವರಿಗೆ ಗ್ರಾಮಪಂಚಾಯಿತಿಯವರು ಅವರನ್ನು ಸೇರಿಸಿಲ್ಲವೆಂದರೆ, ಅವರು ಅವಕಾಶದಿಂದ ವಂಚಿತರಾಗುತ್ತಾರೆ. ಆದ್ದರಿಂದ ನನ್ನ ಅನಿಸಿಕೆ ಏನೆಂದರೆ, ಯಾರು ಮನೆಯನ್ನು ಕಟ್ಟಿದ್ದಾರೆ ಅವರ ಹೆಸರು ಬಿಟ್ಟು ಹೋಗಿದ್ದರೆ, ಅವರನ್ನು ಇದರಲ್ಲೇ ಸೇರಿಸಬೇಕು ಮತ್ತೆ ಬೇರೆಯದರಲ್ಲಿ ಸೇರಿಸಿದರೆ ಹಣ ಕೊಡಬೇಕು, ಅದು ಇದು ಎನ್ನುವಂಥದ್ದೆಲ್ಲಾ ಬರುತ್ತದೆ. ಆ ಫಲಾನುಭವಿಗಳು ಏನೂ ತಪ್ಪು ಮಾಡಿಲ್ಲ. ತಮ್ಮ ಇಲಾಖೆಯಿಂದ ಅಥವಾ ತಮ್ಮ ವ್ಯವಸ್ಥೆಯಿಂದ ಆಗಿರುವಂತಹ ತಪ್ಪಿಗೆ ಫಲಾನುಭವಿಗಳು ಹೊಣೆ ಆಗಬಾರದು. ಅದುದರಿಂದ ಇದಕ್ಕೆ ಯಾವ ರೀತಿಯ ಪರಿಹಾರ ಕಂಡುಕೊಳ್ಳುವುದಕ್ಕೆ ಆಗುತ್ತದೆ ಎನ್ನುವಂಥದ್ದು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, I agree with him. ಗ್ರಾಮಪಂಚಾಯಿತಿಯವರು ಅರ್ಜಿ ಕೊಡಲಿ ಅಥವಾ ಕೊಡದೆ ಇರಲಿ, ಅವರು ನಮಗೆ ಸಂಪರ್ಕ ಬೇಕೆಂದು ಕೇಳಿದರೆ, ಖಂಡಿತವಾಗಿ ನಾವು ಸಂಪರ್ಕ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. I will make necessary arrangements to give advertisement. Regular ಆಗಿ ಒಂದು ಜಾಹೀರಾತು ಕೊಟ್ಟು, ಅದಕ್ಕೆ ಒಂದು ಏರ್ಪಾಡು ಮಾಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ 06ನೇ ಫೆಬ್ರವರಿ, 2018ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಸಮೂಹ 2ರಲ್ಲಿನ ಲಿಖಿತ ಮೂಲಕ ಉತ್ತರಿಸುವ ಒಟ್ಟು 80 ಪ್ರಶ್ನೆಗಳ ಪೈಕಿ 56 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ಶೂನ್ಯವೇಳೆ.

**(ಮುಂದು...)**

**<u>3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>**

**ಸಭಾಪತಿಯವರು:-** ಒಂದೇ ವಿಷಯದಲ್ಲಿ ಶ್ರೀ ಅಮರನಾಥ ಪಾಟೀಲ್ ಮತ್ತು ಶ್ರೀ ಎಸ್.ವ್ಹಿ. ಸಂಕನೂರ ಈ ಇಬ್ಬರು ಸದಸ್ಯರು ಉತ್ತರ ಕೊಟ್ಟಿದ್ದಾರೆ. ಇದನ್ನು ಇಬ್ಬರಲ್ಲಿ ಯಾರಾದರೂ ಒಬ್ಬರು ಓದಿ ಹೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯ ದಾಖಲೆಗೆ ಹೋಗಲಿ. ಆದುದರಿಂದ, ಈ ವಿಷಯದಲ್ಲಿ ಇಬ್ಬರಿಗೂ ಅವಕಾಶ ಕೊಡಿ.

**ಸಭಾಪತಿಯವರು:-** ನಾನು ಇಬ್ಬರ ಹೆಸರನ್ನು ಹೇಳಿರುವುದು ದಾಖಲೆಗೆ ಹೋಗಿದೆ. ಆದುದರಿಂದ, ಆ ವಿಷಯವನ್ನು ಯಾರಾದರೂ ಒಬ್ಬರು ಸದಸ್ಯರು ಓದಿ. ನಾನು ಹೇಳಿದ್ದು, ದಾಖಲೆಗೆ ಹೋಗಿಯೇ ಹೋಗುತ್ತದೆ. ನಾನು ಹೇಳಿದ ಯಾವ ವಿಷಯವನ್ನು ಸಹ ವರದಿಗಾರರು ದಾಖಲು ಮಾಡದೇ ಬಿಡುವುದಿಲ್ಲ.

**ಅ) ವಿಷಯ:- ಪ್ರಾಥಮಿಕ ಶಾಲಾ ಪದವೀಧರರ ಶಿಕ್ಷಕರು ನೂತನ ಸಿ ಅಂಡ್ ಆರ್ ವಿರೋಧಿಸುತ್ತಿರುವ ಕುರಿತು**

---

**ಶ್ರೀ ಅಮರನಾಥ ಪಾಟೀಲ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ಪ್ರಜಾವಾಣಿ ದಿನಪತ್ರಿಕೆಯ "ರಾಜ್ಯ ಸರ್ಕಾರದಿಂದ ಗುರುದ್ರೋಹ" ಶೀರ್ಷಿಕೆಯಡಿ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 'ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಪದವೀಧರರ ಶಿಕ್ಷಕರ ಸಂಘ'ದವರು ದಿನಾಂಕ:20.05.2017ರಂದು ಪ್ರಕಟಿಸಿರುವ ಪ್ರಾಥಮಿಕ ಶಾಲೆಗಳಲ್ಲಿ ಹೊಸ ವೃಂದ ಮತ್ತು ವೃಂದ ಬಲ ನಿರ್ಧರಿಸುವ ಮತ್ತು ದಿನಾಂಕ:07.08.2017 ರಂದು ಪ್ರಕಟಿಸಿರುವ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು(ಸಾರ್ವಜನಿಕ ಶಿಕ್ಷಣ ಇಲಾಖೆ)(ನೇಮಕಾತಿ)(ತಿದ್ದುಪಡಿ)ನಿಯಮಗಳು (ಹೊಸ ಸಿ ಅಂಡ್ ಆರ್ ನಿಯಮಗಳು)-2017 ಈ ನಿಯಮಗಳನ್ನು "ವಿರೋಧಿಸಿ - ತಿದ್ದುಪಡಿಗಾಗಿ ಆಗ್ರಹಿಸಿ ಇಡೀ ಒಂದು ದಿನ ಸತ್ಯಾಗ್ರಹ"ವನ್ನು ದಿನಾಂಕ:05.02.2018ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದು, ರಾಜ್ಯದ ಸಾವಿರಾರು ಪದವೀಧರ ಶಿಕ್ಷಕರು ಈ ಮುಷ್ಕರದಲ್ಲಿ ಪಾಲ್ಗೊಂಡಿರುತ್ತಾರೆ. ಒಟ್ಟು ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಸುಮಾರು 80,000 ಕ್ಕೂ ಹೆಚ್ಚು ಶಿಕ್ಷಕರು B.A., B.Sc., B.Ed., D.Ed., M.A., M.Sc., M.Ed., PhD., M.Phil.,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪದವೀಧರರಿದ್ದು, 12 ರಿಂದ 20 ವರ್ಷಗಳ ಬೋಧನೆ ಅನುಭವ ಹೊಂದಿದವರಾಗಿರುತ್ತಾರೆ. ಸೇವಾ ನಿರತ ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರ ಪ್ರಮುಖ ಬೇಡಿಕೆಗಳು ಈ ಕೆಳಕಂಡಂತಿವೆ.

1) ಪದವೀಧರರ ಪ್ರಾಥಮಿಕ ಶಾಲಾ ಶಿಕ್ಷಕರು (6-8) ವೃಂದಕ್ಕೆ ಎಲ್ಲಾ ಸೇವಾ ನಿರತ ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರರ ಶಿಕ್ಷಕರರನ್ನು ಒಂದು ವಿಶೇಷ ಇನ್‌ಕ್ರಿಮೆಂಟ್ ನೀಡಿ ಪೂರ್ವಾನ್ವಯವಾಗಿ ವಿಲೀನಗೊಳಿಸುವುದು.

2) ಸಿ & ಆರ್ ನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು (6-8) ಹುದ್ದೆಗಳ ಮುಂಬಡ್ತಿ ಮತ್ತು ನೇರ ನೇಮಕಾತಿ ಅನುಪಾತವನ್ನು 25:75 ಕ್ಕೆ ಬದಲಾಗಿ ಸಂಪೂರ್ಣವಾಗಿ ಸೇವಾನಿರತ ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರರ ಶಿಕ್ಷಕರಿಗೆ ನೀಡುವುದು.

3) ಮುಂಬಡ್ತಿಗಾಗಿ ನಿಗದಿಪಡಿಸಿರುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ರದ್ದುಪಡಿಸುವುದು.

4) ಗುಣಾತ್ಮಕ ಶಿಕ್ಷಣಕ್ಕಾಗಿ 6-8ನೇ ತರಗತಿ ಬೋಧಿಸಲು ಆರು ವಿಷಯ ಹುದ್ದೆಗಳನ್ನು ಸೃಜಿಸುವುದು.

1) ಕನ್ನಡ ಭಾಷೆ 2) ಆಂಗ್ಲಭಾಷೆ 3) ಹಿಂದಿಭಾಷೆ 4) ಗಣಿತ(ಪಿ.ಸಿ.ಎಂ.) 5) ವಿಜ್ಞಾನ(ಸಿ.ಬಿ.ಝಡ್.) 6) ಸಮಾಜ ವಿಜ್ಞಾನ

5) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6-8) ಕ್ಕಿಂತ ಮೊದಲೇ ನೇಮಕವಾದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಅಖಂಡ ಸೇವಾ ಹಿರಿತನವನ್ನು ಮುಂದಿನ ಮುಂಬಡ್ತಿಗೆ ಸಂರಕ್ಷಿಸುವುದು.

6) ಸಿ&ಆರ್ ನಲ್ಲಿ B.Sc., (CBZ) ಪದವಿ ಮಾಡಿದ ಮತ್ತು ಸಮಾಜ ವಿಜ್ಞಾನ ಹುದ್ದೆಗಳಿಗೆ ಬಿ.ಎ., ಪದವಿಯನ್ನು ಸಮಾಜಶಾಸ್ತ್ರ ಅಧ್ಯಯನ ಮಾಡಿದ ಶಿಕ್ಷಕರನ್ನು ಪರಿಗಣಿಸುವುದು.

7) 6-8ನೇ ತರಗತಿ ಹೊಂದಿದ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯ ಹುದ್ದೆಯೆಂದು ಪುನರ್ ಪದನಾಮೀಕರಿಸಿ ಪದವೀಧರ ಮುಖ್ಯೋಪಾಧ್ಯಾಯ ಹುದ್ದೆ ಎಂದು (17,650/- ರಿಂದ 32,000/- ವೇತನಶ್ರೇಣಿ) ಮೇಲ್ದರ್ಜೆಗೇರಿಸಿ, ಪ್ರಸ್ತುತ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಶಿಕ್ಷಕರಿಗೆ ಅಖಂಡ ಸೇವಾ ಹಿರಿತನ ಆಧರಿಸಿ ಮುಂಬಡ್ತಿ ನೀಡುವುದು.

8) ಪ್ರಾಥಮಿಕ ಶಾಲಾ B.Ed., ಪದವೀಧರರ ಶಿಕ್ಷಕರನ್ನು ಅಖಂಡ ಸೇವಾ ಹಿರಿತನ ಆಧರಿಸಿ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್-2 ಹುದ್ದೆಗಳಿಗೆ ಮುಂಬಡ್ತಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕ:31.05.2018ಕ್ಕೆ ಇದ್ದಂತೆ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಪರಿಗಣಿಸಿ ಕಾಲ ಬದ್ಧವಾಗಿ ರಾಜ್ಯಾದ್ಯಂತ ಏಕರೂಪದ ವೇಳಾಪಟ್ಟಿ ತಯಾರಿಸಿ ಪ್ರಕ್ರಿಯೆಯನ್ನು ಜಾರಿಗೊಳಿಸುವುದು.

ಈ ಎಲ್ಲಾ ಮೇಲ್ಕಂಡ ನ್ಯಾಯಯುತ ಬೇಡಿಕೆಗಳನ್ನು ಮನ್ನಿಸಿ ಅವಶ್ಯಕತೆ ಇರುವ ವೃಂದಬಲ ಹಾಗೂ ಸಿ ಅಂಡ್ ಆರ್ ನಿಯಮಗಳಿಗೆ ತಿದ್ದುಪಡಿ ತರಲು ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಪದವೀಧರರ ಶಿಕ್ಷಕರ ಸಂಘ(ರಿ) ಇವರು ಪ್ರಮುಖವಾದ 8 ಬೇಡಿಕೆಗಳನ್ನು ಈಡೇರಿಸಲು ಉಪವಾಸ ಸತ್ಯಾಗ್ರಹವನ್ನು ನಡೆಸಿರುವರು. ಈ ಬೇಡಿಕೆಗಳ ಕುರಿತು, ಹೊಸ ಸಿ & ಆರ್ 2017 ಜಾರಿ ಬರುವ ಪೂರ್ವದಲ್ಲಿಯೇ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಗೆ ಹಾಗೂ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು ಮತ್ತು ಆಯುಕ್ತರಿಗೆ ಭೇಟಿ ಮಾಡಿ ಉದ್ದೇಶಿತ ವೃಂದ ಬಲ ನಿರ್ಧರಿಸುವ ಮತ್ತು ಸಿ & ಆರ್‌ನಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಆಗ್ರಹಿಸಿ ಮನವಿ ಸಲ್ಲಿಸಿದ್ದರೂ ಅವರ ಬೇಡಿಕೆಗಳಿಗೆ ಯಾವುದೇ ಸ್ಪಂದನೆ ದೊರೆಯದೇ ಇದ್ದುದರಿಂದ ಅನಿವಾರ್ಯವಾಗಿ ದಿನಾಂಕ:05.02.2018ರಂದು ಒಂದು ದಿನದ ಸಾಂಕೇತಿಕ ಉಪವಾಸ ಸತ್ಯಾಗ್ರಹ ನಡೆಸಬೇಕಾಯಿತೆಂದು ತಿಳಿಸಿದ್ದಾರೆ.

ಈ ಹಿಂದೆ ನೇಮಕಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರು ತರಬೇತಿ ಪಡೆದ ಪದವೀಧರರಾಗಿದ್ದು, ಅರ್ಹತೆಗಳನ್ನು ಹೊಂದಿದ್ದರೂ 1 ರಿಂದ 5ನೇ ತರಗತಿಯ ಶಿಕ್ಷಕರೆಂದು ವರ್ಗೀಕರಿಸಿ ಹಿಂಬಡ್ತಿ ಮಾಡಿದ್ದಾರೆಂದು ಆಪಾದಿಸಿದ್ದಾರೆ. ಸದ್ಯದ ಸಿ & ಆರ್ ನಲ್ಲಿ ಪದೋನ್ನತಿ ಹಾಗೂ ನೇರ ನೇಮಕಾತಿಗೆ ಇರುವ ಅನುಪಾತ 25:75ರ ಬದಲಾಗಿ ಸಂಪೂರ್ಣವಾಗಿ ಸೇವಾ ನಿರತ ಪ್ರಾಥಮಿಕ ಶಾಲಾ ಪದವೀಧರರ ಶಿಕ್ಷಕರನ್ನು 6 ರಿಂದ 8ಕ್ಕೆ ಮುಂಬಡ್ತಿ ನೀಡಬೇಕೆಂದು ಮತ್ತು ಮುಂಬಡ್ತಿ ನೀಡುವಾಗ ನಿಗದಿ ಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ರದ್ದು ಪಡಿಸಬೇಕೆಂಬ ಪ್ರಮುಖ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುವರು.

ಆದುದರಿಂದ, ಸೇವಾ ನಿರತ ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆಗಳು ನ್ಯಾಯಯುತವಾಗಿದ್ದು ಇವುಗಳ ಈಡೇರಿಕೆಗಾಗಿ ಸಿ & ಆರ್, 2017 ನ್ನು ತಿದ್ದುಪಡಿ ಮಾಡಲು ಕ್ರಮ ಜರುಗಿಸಲು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು):-** ಈ ವಿಷಯವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನಕ್ಕೆ ತಂದು ಆದಷ್ಟು ಶೀಘ್ರದಲ್ಲಿ ಅದಕ್ಕೊಂದು ಸಲಹೆಯನ್ನು ಕೊಡುತ್ತೇನೆ.

**ಆ) ವಿಷಯ:- ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಟ್ಟಲಗಿ ಗ್ರಾಮವನ್ನು ವಿಜಯಪುರ ಜಿಲ್ಲೆಯ ಹೊಸದಾಗಿ ಮಂಜೂರಾದ ತಿಕೋಟಾ ತಾಲ್ಲೂಕಿಗೆ ಸೇರ್ಪಡೆ ಮಾಡುವ ಕುರಿತು**

- - -

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೊಸದಾಗಿ ತಾಲ್ಲೂಕುಗಳು ರಚನೆಗೊಂಡಿರುವುದರಿಂದ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಟ್ಟಲಗಿ ಗ್ರಾಮವು ಅಥಣಿ ತಾಲ್ಲೂಕಿಗೆ 40 ಕಿ.ಮೀ. ಅಂತರದಲ್ಲಿರುವುದು ಹಾಗೂ ಜಿಲ್ಲಾ ಕೇಂದ್ರ ಬೆಳಗಾವಿಯು ಕೊಟ್ಟಲಗಿ ಗ್ರಾಮದಿಂದ ಸುಮಾರು 200 ಕಿ.ಮೀ. ಅಂತರದಲ್ಲಿರುತ್ತದೆ. ಸದರಿ ಕೊಟ್ಟಲಗಿ ಗ್ರಾಮದ ಜನತೆ ಪ್ರತಿಶತ 80 ರಷ್ಟು ಜನತೆ ಆಡಳಿತಾತ್ಮಕವಾಗಿ ಸಂಪರ್ಕದಲ್ಲಿರುವುದಿಲ್ಲ. ಸದರಿ ಕೊಟ್ಟಲಗಿ ಗ್ರಾಮಕ್ಕೆ ವಿಜಯಪುರ ಜಿಲ್ಲೆಯು ಸಮೀಪ ಇರುವುದು ಹಾಗೂ ಹೊಸದಾಗಿ ತಾಲ್ಲೂಕು ಆಗುತ್ತಿರುವ ತಿಕೋಟ ಪಟ್ಟಣವು ಕೇವಲ 25 ಕಿ.ಮೀ. ಅಂತರದಲ್ಲಿರುತ್ತದೆ ಹಾಗೂ ಜಿಲ್ಲಾ ಕೇಂದ್ರವಾದ ವಿಜಯಪುರ ನಗರವು ಕೇವಲ 48 ಕಿ.ಮೀ. ಅಂತರದಲ್ಲಿದೆ ಹಾಗೂ ಕೊಟ್ಟಲಗಿ ಗ್ರಾಮವು ಹೊಸ ತಾಲ್ಲೂಕ ತಿಕೋಟಾ ಪಟ್ಟಣದ ಸರಹದ್ದಿಗೆ ಹೊಂದಿಕೊಂಡಿರುತ್ತದೆ ಎಂದು ಮನವಿ ಮಾಡಿಕೊಂಡಿರುತ್ತಾರೆ.

ಕಾರಣ, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಟ್ಟಲಗಿ ಗ್ರಾಮವನ್ನು ವಿಜಯಪುರ ಜಿಲ್ಲೆಯ ಹೊಸದಾಗಿ ಮಂಜೂರಾದ ತಿಕೋಟಾ ತಾಲ್ಲೂಕಿಗೆ ಸೇರ್ಪಡೆ ಮಾಡಿ, ರೈತಾಪಿ ವರ್ಗದವರಿಗೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ನಾನು ಸರ್ಕಾರದ ಗಮನವನ್ನು ಶೂನ್ಯವೇಳೆಯಲ್ಲಿ ಸೆಳೆಯಬಯಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು):-** ಈ ವಿಷಯವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು ಆದಷ್ಟು ಶೀಘ್ರದಲ್ಲಿ ಅದಕ್ಕೊಂದು ಪರಿಹಾರವನ್ನು ಒದಗಿಸಿಕೊಡುತ್ತೇನೆ.

**ಇ) ವಿಷಯ:- ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯ ಸಹಾಯಕ ಇಂಜನೀಯರುಗಳ ನೇಮಕಾತಿ ಕುರಿತು**

- - -

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಕೆ.ಪಿ.ಟಿ.ಸಿ.ಎಲ್. ಉದ್ಯೋಗ ನೇಮಕಾತಿಯಲ್ಲಿ ಸಹಾಯಕ ಇಂಜಿನಿಯರ್ ಹುದ್ದೆಗೆ(ವಿದ್ಯುತ್) ನೇಮಕಾತಿ ಕೋರಿ ಕಳೆದ ಕೆಲವು ವರ್ಷಗಳಿಂದ ಅರ್ಜಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆದು ಹುದ್ದೆಗಳನ್ನು ನೇಮಕ ಮಾಡಲಾಗುತ್ತಿದೆ. ನಿಯಮಾವಳಿಗಳ ಅನ್ವಯ ಸದರಿ ಹುದ್ದೆಗೆ ನೇಮಕಾತಿಗೆ ಎ.ಐ.ಸಿ.ಟಿ.ಇ., ನಿಯಮಾವಳಿಗಳ ಪ್ರಕಾರ ಬಿ.ಇ., ಪದವೀಧರರನ್ನು ಆಯ್ಕೆ ಮಾಡಬೇಕಾಗಿರುತ್ತದೆ. ಆದರೆ, ಕೆ.ಪಿ.ಟಿ.ಸಿ.ಎಲ್., ಸಂಸ್ಥೆಯು ನಿಯಮಾವಳಿಗಳಿಗೆ ವಿರುದ್ಧವಾಗಿ ಬಿ.ಇ. ಪದವೀಧರರ ಜೊತೆಗೆ ಬಿ.ಟೆಕ್. ಪದವೀಧರರನ್ನು ನೇಮಕಾತಿಗೆ ಪರಿಗಣಿಸಿರುತ್ತಾರೆ. ಕರ್ನಾಟಕದಲ್ಲಿ ಎ.ಐ.ಸಿ.ಟಿ.ಇ., ಮತ್ತು ವಿಶ್ವವಿದ್ಯಾಲಯಗಳ ನಿಯಮಾವಳಿಗಳಿಗೆ ಅನುಗುಣವಾಗಿ ಇಂಜಿನಿಯರಿಂಗ್ ಪದವಿ ಕಾಲೇಜುಗಳಲ್ಲಿ ನೀಡುತ್ತಿರುವ ಪದವಿ ಬಿ.ಇ., ಪದವಿಯಾಗಿರುತ್ತದೆ. ನಮ್ಮ ರಾಜ್ಯದಲ್ಲಿ ವಿದ್ಯಾರ್ಥಿಗಳು ಬಿ.ಟೆಕ್. ಪದವಿ ಪಡೆಯಲು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅವಕಾಶ ಇರುವುದಿಲ್ಲ. ಈ ಅಂಶವು ಕೆ.ಪಿ.ಟಿ.ಸಿ.ಎಲ್., ಸಂಸ್ಥೆ ಇಂಜಿನಿಯರ್‌ಗಳ ನೇಮಕಾತಿಯ ಪ್ರಕಟಣೆಯಲ್ಲಿ ಸಹಾಯಕ ಇಂಜಿನಿಯರ್ ಹುದ್ದೆಗೆ ದಿನಾಂಕ: 28.08.2015ರಲ್ಲಿ ಪ್ರಕಟ ಪಡಿಸಿದ ಪ್ರಕಟಣೆಯಲ್ಲಿ ಬಿ.ಇ., ಪದವೀಧರರು ಅರ್ಜಿ ಹಾಕಲು ಅವಕಾಶ ನೀಡಿದ್ದರು. ಆದರೆ, ನೇಮಕಾತಿಯ ಸಂದರ್ಭದಲ್ಲಿ ಬಿ.ಇ., ಮತ್ತು ಬಿ.ಟೆಕ್., ಪದವೀಧರರನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ ಹೊರರಾಜ್ಯದವರ ನೇಮಕಕ್ಕೆ ಆಸ್ಪದ ನೀಡಿರುತ್ತಾರೆ. ಇದರಿಂದ, ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಮತ್ತು ಕನ್ನಡಿಗರು ತಮ್ಮ ಉದ್ಯೋಗ ಅವಕಾಶಗಳನ್ನು ಕಳೆದುಕೊಂಡಿರುತ್ತಾರೆ. ಇತರೆ ರಾಜ್ಯಗಳು ತಮ್ಮ ರಾಜ್ಯಗಳ ಸಹಾಯಕ ಇಂಜಿನಿಯರ್‌ಗಳ ನೇಮಕಾತಿ ಸಂದರ್ಭದಲ್ಲಿ ಸದರಿ ರಾಜ್ಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರೆಂದು ಪ್ರಕಟಿಸಿರುತ್ತಾರೆ. ಕರ್ನಾಟಕ ರಾಜ್ಯ ಮಾತ್ರ ಇಂತಹ ದೃಢ ನಿರ್ಧಾರ ಕೈಗೊಳ್ಳದೇ ರಾಜ್ಯದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿರುತ್ತದೆ.

ಆದುದರಿಂದ, ಕರ್ನಾಟಕದ ಇಂಜಿನಿಯರಿಂಗ್ ಪದವೀಧರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ವಿಷಯವನ್ನು ಪರಿಗಣಿಸಿ ಪರಿಹಾರ ನೀಡಬೇಕೆಂದು ನಾನು ಸರ್ಕಾರವನ್ನು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಇಂಧನ ಸಚಿವರೇ, ಮಾನ್ಯ ಸದಸ್ಯರ ವಿಷಯಕ್ಕೆ ಪ್ರಸ್ತುತದಲ್ಲಿ ಉತ್ತರ ತಯಾರಿದ್ದರೆ ನೀಡಬಹುದು ಅಥವಾ ಉತ್ತರ ನೀಡುವುದಕ್ಕಾಗಿ ಕಾಲಾವಕಾಶ ತೆಗೆದುಕೊಳ್ಳಿ.

**ಶ್ರೀ ಡಿ.ಕೆ. ಶಿವಕುಮಾರ್(ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ವಿಷಯಕ್ಕೆ ಉತ್ತರ ತಯಾರಿರುವುದಿಲ್ಲ. Definitely I will give the reply. It is a very important issue. ಈ ಬಗ್ಗೆ ಬೆಳಕು ಚೆಲ್ಲಲೇಬೇಕಾಗಿದೆ. ಆ ಬಗ್ಗೆ ನಮಗೆ ಕಾಳಜಿಯಿದೆ. I will give the reply.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ:- ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ನಟರಾಜನ ಪ್ರಶಸ್ತಿ ವಿಗ್ರಹ ಮಾದರಿಯನ್ನು ಬದಲಾಯಿಸುವ ಕುರಿತು**

- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳು ಕ್ಷೇತ್ರ):-** ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಹೊಸತೊಂದು ಯೋಜನೆ ಹುಟ್ಟು ಹಾಕಿ ಕಲಾವಿದರಲ್ಲಿ ಮತ್ತು ರಾಜ್ಯದ ಜನರಲ್ಲಿ ಗೊಂದಲ ಸೃಷ್ಟಿಸಿದೆ. ಭಾರತದಲ್ಲಿ ನಟನೆ, ನಾಟ್ಯ ಎಂದರೆ ನಟರಾಜನೆ ಸ್ಫೂರ್ತಿ. ಈ ನೆಲದ ಕೋಟ್ಯಂತರ ಕಲಾಸಕ್ತ ಜನರು ಗೌರವಿಸುವ ಚಾಲುಕ್ಯರ ಕಾಲದ ಶಿಲ್ಪವಾದ ನಟರಾಜನ ಪ್ರತಿಮೆ ಕುರಿತು ಈಗ ವಿವಾದವೆದ್ದಿದೆ. ಕರ್ನಾಟಕ ನಾಟಕ ಅಕಾಡೆಮಿಯಿಂದ ಪ್ರತಿ ವರ್ಷ 25 ಪ್ರತಿಭಾವಂತ ಕಲಾವಿದರನ್ನು ಗುರುತಿಸಿ ನಟರಾಜನ ವಿಗ್ರಹವನ್ನು ಪ್ರಶಸ್ತಿಯ ಫಲಕರೂಪದಲ್ಲಿ ನೀಡಲಾಗುತ್ತಿತ್ತು. ಅದು ಕಲಾವಿದರಿಗೆ ಸೇರಿದ ಗೌರವವೂ ಆಗಿದ್ದು, ನಟರಾಜನ ಪ್ರಶಸ್ತಿ  ಫಲಕ ಪಡೆದ ಕಲಾವಿದರಿಗೆ ಹೆಮ್ಮೆ ಎನಿಸಿತ್ತು. ಇದೀಗ ನಾಟಕ ಅಕಾಡೆಮಿ ಪ್ರಶಸ್ತಿಯ ರೂಪದಲ್ಲಿ ಕೊಡುತ್ತಿದ್ದ ನಟರಾಜನಿಗೆ ಗೇಟ್ ಪಾಸ್ ನೀಡಿ ವಿದೇಶಿ ಮಾದರಿಯ ಆಕೃತಿಯೊಂದನ್ನು ವಾರ್ಷಿಕ ಅಕಾಡೆಮಿ ಪ್ರಶಸ್ತಿ ಎಂದು ಘೋಷಿಸಿ ಕೊಡಮಾಡಲು ಸಿದ್ಧತೆ ಮಾಡಿದೆ.

ಮಾನ್ಯ ಸಭಾಪತಿಯವರೇ, ಈ ಪದ ಬಳಸುವುದನ್ನು ದಯವಿಟ್ಟು ತಪ್ಪಾಗಿ ಭಾವಿಸಬೇಡಿ. ಅದೇನೆಂದರೆ, ಕರ್ನಾಟಕ ನಾಟಕ ಅಕಾಡೆಮಿಯ ಹೆಮ್ಮೆಯ ಪ್ರಶಸ್ತಿಯ ಫಲಕ ಚಾಲುಕ್ಯರ ಕಾಲದ ಶಿಲ್ಪದ ಪ್ರತಿರೂಪವಾದ ನಟರಾಜನ ಪ್ರತಿಮೆ ಆಗಿದ್ದು, ಅದನ್ನು ಬದಲಿಸಿ ಈಗ ಕೊಡಮಾಡಲು ಹೊರಟಿರುವ ಈಗಿನ ಪ್ರಶಸ್ತಿ ರೂಪದ ಸ್ಮರಣಿಕೆ ಸಾರ್ವಜನಿಕ ಸ್ನಾನಗೃಹದ ಒಡೆದ ಬಕೆಟ್ ಮಾದರಿಯಲ್ಲಿದೆ ಎಂದು ಅಂತರ್ಜಾಲದಲ್ಲಿ ಮತ್ತು ಪತ್ರಿಕೆಗಳು ಆಪಾದಿಸಿವೆ. ಸರ್ಕಾರ ಇಡೀ ರಾಜ್ಯವೇ ನಿರೀಕ್ಷೆ ಮಾಡದಿರುವ ನಾಟಕ ಅಕಾಡೆಮಿಯ ಗೌರವದ ಸಂಕೇತವಾದ ನಟರಾಜ ವಿಗ್ರಹದ ಪ್ರಶಸ್ತಿಯನ್ನು ಬದಲಿಸಿ ಊಹಿಸಲಾಗದ ಮಾದರಿಯೊಂದನ್ನು ಸೃಷ್ಟಿಸಿ ನಾಟಕ ಅಕಾಡೆಮಿಯ ಪ್ರಶಸ್ತಿಯ ಗೌರವವನ್ನು ಧೂಳಿಪಟ ಮಾಡಿದೆ. ಮಾತ್ರವಲ್ಲದೇ, ನಾಟಕ ಮತ್ತು ಕಲೆಯ ಸಂಕೇತವಾದ ನಟರಾಜ ವಿಗ್ರಹ ಅದಾವುದೋ ಭಾಗದಲ್ಲಿ ಹಿಂದುತ್ವದ ಸಂಕೇತವಿರಬಹುದೆಂಬ ಆತಂಕ ಸರ್ಕಾರವನ್ನು ಕಾಡಿದೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಈ ಭಾಗದಲ್ಲೂ ಹಿಂದೂ ದೇವರ ವಿಗ್ರಹವನ್ನು ಹೊರಗಿಡುವ ಷಡ್ಯಂತ್ರ ನಡೆದಿದೆಯೆಂದು ಭಾವಿಸಲಾಗಿದೆ.

ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುವುದೇನೆಂದರೆ, ತಕ್ಷಣ ಸರ್ಕಾರ ಈ ವಿಚಾರದಲ್ಲಿ ಕೂಲಂಕಷವಾದ ತನಿಖೆ ನಡೆಸಿ ಕರ್ನಾಟಕ ರಾಜ್ಯದ ನಾಟಕ ಅಕಾಡೆಮಿಯ ಗೌರವದ ಸಂಕೇತವಾದ ನಟರಾಜ ವಿಗ್ರಹದ ಪ್ರಶಸ್ತಿಯ ಫಲಕವನ್ನು ಯಾವುದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಕ್ಕೂ ಬದಲಿಸದೇ ಹಿಂದಿನಂತೆ ಮುಂದುವರೆಸಬೇಕೆಂದು ಈ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು):-** ಈ ವಿಷಯವನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನಕ್ಕೆ ತಂದು ಆದಷ್ಟು ಶೀಘ್ರದಲ್ಲಿ ಅದಕ್ಕೊಂದು ಪರಿಹಾರವನ್ನು ಕೊಡಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದರಿ ನಟರಾಜ ವಿಗ್ರಹ ಮತ್ತು ವಿದೇಶಿ ಮಾದರಿಯ ಆಕೃತಿಯ ಛಾಯಾಪ್ರತಿಯ ನಕಲು ಪ್ರತಿಯನ್ನು ಮಾನ್ಯ ಸಭಾ ನಾಯಕರಿಗೆ ಕಳುಹಿಸಿಕೊಡುತ್ತೇನೆ ಹಾಗೂ ಅದನ್ನು ಮಾನ್ಯ ಸಚಿವರು ಗಮನಿಸಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿಯವರು ನಟರಾಜ ವಿಗ್ರಹ ಮತ್ತು ವಿದೇಶಿ ಮಾದರಿಯ ಆಕೃತಿಯ ಛಾಯಾಪ್ರತಿಯ ನಕಲು ಪ್ರತಿಯನ್ನು ಸದನದ ಮುಂದೆ ಪ್ರದರ್ಶಿಸಿದರು ಹಾಗೂ ಸದರಿ ಪ್ರತಿಯನ್ನು ಮಾನ್ಯ ಸಭಾ ನಾಯಕರಿಗೆ ಕಳುಹಿಸಿಕೊಟ್ಟರು)**

**ಉ) ವಿಷಯ:- ಸರ್ಕಾರಿ ಶಾಲೆಯನ್ನು ಉಳಿಸಿ, ಸರ್ಕಾರಿ ಶಾಲೆಗೆ ಶಿಕ್ಷಕರನ್ನು ಕೊಡಿ ಎಂಬ ವಿಷಯ ಕುರಿತು ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ**

– – –

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ವಂದಿಸುತ್ತಾ, ಇಂದು ಕರ್ನಾಟಕ ರಾಜ್ಯದಲ್ಲೇ ಅಪರೂಪವೆನ್ನುವಂತೆ ರಾಜ್ಯದ ವಿವಿಧೆಡೆಯಿಂದ ಆಗಮಿಸಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ರಾಜಧಾನಿಯ ಫ್ರೀಡಂ ಪಾರ್ಕ್‌ನಲ್ಲಿ ಪೋಷಕರೊಂದಿಗೆ ಸತ್ಯಾಗ್ರಹ ನಡೆಸಿ ಸರ್ಕಾರದ ಗಮನ ಸೆಳೆಯುತ್ತಿದ್ದಾರೆ. ಸಾವಿರಾರು ಪೋಷಕರು ಮತ್ತು ವಿದ್ಯಾರ್ಥಿಗಳು ನಡೆಸುತ್ತಿರುವ ಈ ಸತ್ಯಾಗ್ರಹದಲ್ಲಿ ಅವರ ಬೇಡಿಕೆಯೆಂದರೆ "ಸರ್ಕಾರಿ ಶಾಲೆಯನ್ನು ಉಳಿಸಿ, ಸರ್ಕಾರಿ ಶಾಲೆಗೆ ಶಿಕ್ಷಕರನ್ನು ಕೊಡಿ" ಎಂಬುದಾಗಿ ಆಗ್ರಹಿಸಿರುತ್ತಾರೆ.

ಈ ಸತ್ಯಾಗ್ರಹದ ಮುಖಂಡತ್ವ ವಹಿಸಿರುವ ಶ್ರೀ ಪ್ರಕಾಶ್ ಅಂಚನ್ ಎಂಬುವವರು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ ಶಾಲೆಗಳಿಗೆ ಭೇಟಿ ನೀಡಿದ್ದು ಮಾತ್ರವಲ್ಲದೇ ಆಂಧ್ರಪ್ರದೇಶ, ಕೇರಳ, ತಮಿಳುನಾಡು, ರಾಜಸ್ಥಾನ ಮುಂತಾದ ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ, ಅಧ್ಯಯನ ನಡೆಸಿ ಸರ್ಕಾರಿ ಶಾಲೆಗಳನ್ನು ಉಳಿಸುವ ಬಗ್ಗೆ ಅದರಲ್ಲೂ ಕನ್ನಡ ಶಾಲೆಗಳ ಸಬಲೀಕರಣದ ಕುರಿತಾಗಿ ಸರ್ಕಾರಕ್ಕೆ ಅನೇಕ ಸಲಹೆಗಳನ್ನು ನೀಡುತ್ತಿದ್ದಾರೆ. ಅವರದೇ ನೇತೃತ್ವದಲ್ಲಿ ನಡೆಯುವ ಈ ಹಿಂದೆ 30 ಮಕ್ಕಳಿದ್ದ ಬಂಟ್ವಾಳ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶ್ರೀ ಕರಂಕಿ ಅವರ ಅನೇಕ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಧಾರಣೆ ಕ್ರಮಗಳಿಂದಾಗಿ ಇದೀಗ 450 ಕ್ಕೂ ಮೀರಿ ಹಾಜರಾತಿ ಇರುವುದರ ಕುರಿತು ಸರ್ಕಾರ ತುರ್ತಾಗಿ ಗಮನ ಹರಿಸಬೇಕಾಗಿದೆ. ಸರ್ಕಾರದ ಅನುದಾನವಿಲ್ಲದೆ ಈ ಶಾಲೆಗೆ ಕಟ್ಟಡ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಿರುವುದು ಅವರ ಪ್ರಾಮಾಣಿಕ ಪ್ರಯತ್ನ ಎಂದು ಸಾರ್ವತ್ರಿಕವಾಗಿ ಉಲ್ಲೇಖಿಸಲಾಗಿದ್ದು ಸರ್ಕಾರಕ್ಕೆ ಅವರ ಈ ಪ್ರಯತ್ನ ಮಾದರಿಯಾಗಿದೆ.

ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆ ಉಳಿಸಬೇಕೆಂಬ ಶಿಕ್ಷಣ ಇಲಾಖೆಯ ನಿಲುವಿಗೆ ಇಂದಿನ "ಸರ್ಕಾರಿ ಶಾಲೆ ಉಳಿಸಿ" ಎಂಬ ವಿದ್ಯಾರ್ಥಿ ಮತ್ತು ಹೆತ್ತವರ ಹೋರಾಟ ಅರ್ಥ ಪೂರ್ಣವಾಗಿದ್ದು ಸ್ಥಳಕ್ಕೆ ಶಿಕ್ಷಣ ಮಂತ್ರಿಗಳು ತಕ್ಷಣ ಭೇಟಿ ಮಾಡಬೇಕು. ಸತ್ಯಾಗ್ರಹ ನಿರತರ ಅನುಭವ ಅವರ ಯೋಚನೆಗಳನ್ನು ಅರ್ಥ ಮಾಡಿಕೊಂಡು ಸರ್ಕಾರಿ ಶಾಲೆಗಳಿಗೆ ಶಿಕ್ಷಕರನ್ನು ಒದಗಿಸಬೇಕೆಂಬ ಅವರ ಬಹುಮುಖ್ಯ ಬೇಡಿಕೆ ಹಾಗೂ ಬಡ ಕುಟುಂಬದ ವಿದ್ಯಾರ್ಥಿಗಳ ಮತ್ತು ಪೋಷಕರ ಅಳಲನ್ನು ಅರ್ಥೈಸಿಕೊಂಡು ಸರ್ಕಾರಿ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳುವಂತೆ "ಶೂನ್ಯ" ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು):-** ಈ ವಿಷಯವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

(ಮುಂದುವರೆದಿದೆ...)

**(018)06.02.2018/3.10/ಟಿಸಿಹೆಚ್-ಎಂಡಿ**

**(ಭೋಜನ ವಿರಾಮದ ನಂತರ ಸದನವು ಪುನಃ ಮಧ್ಯಾಹ್ನ 3 ಗಂಟೆ 11 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.)**

**<u>4.ಅಭಿನಂದನೆ.</u>**

**ವಿಷಯಃ ಕರ್ನಾಟಕ ರಾಜ್ಯದ ಹಲವಾರು ಗಣ್ಯವ್ಯಕ್ತಿಗಳು ಪದ್ಮ ಪ್ರಶಸ್ತಿಗಳನ್ನು ಪಡೆದಿರುವ ಬಗ್ಗೆ.**

**ಸಭಾಪತಿಯವರು:-** ಒಂದು ವಿಷಯನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ, ಕರ್ನಾಟಕ ರಾಜ್ಯದ ಹಲವಾರು ಗಣ್ಯವ್ಯಕ್ತಿಗಳಿಗೆ ಪದ್ಮ ಪ್ರಶಸ್ತಿಗಳನ್ನು ಈಗಾಗಲೇ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಹಾಗಾಗಿ, ಕರ್ನಾಟಕದಿಂದ ಈ ಪ್ರಶಸ್ತಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳಪಟ್ಟವರ ಹೆಸರನ್ನು ಓದುತ್ತೇನೆ. ಅವರೆಲ್ಲರಿಗೂ ಈ ಸದನ ಅಭಿನಂದನೆಯನ್ನು ಸಲ್ಲಿಸುತ್ತದೆ ಎಂದು ಹೇಳಿ ತಾವೆಲ್ಲಾ ಸದಸ್ಯರುಗಳು ಒಪ್ಪುಕೊಳ್ಳುತ್ತೀರಿ ಎಂದು ಆ ಪಟ್ಟಿಯನ್ನು ಓದುತ್ತಿದ್ದೇನೆ.

**ಪದ್ಮಭೂಷಣ ವಿಜೇತರು**

01. ಶ್ರೀ ಪಂಕಜ್ ಅದ್ವಾನಿ – (ಒಳಾಂಗಣ ಕ್ರೀಡೆ–ಬಿಲಿಯರ್ಡ್ಸ್)

**ಪದ್ಮಶ್ರೀ ವಿಜೇತರು**

ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಈ ಹಿಂದೆ ಸದನದ ಮಾನ್ಯ ಸದಸ್ಯರಾಗಿದ್ದಂತಹ ಶ್ರೀ ದೊಡ್ಡರಂಗೇಗೌಡರವರು.

**ಸಮಾಜಸ ಸೇವೆ**

1. ಶ್ರೀಮತಿ ಸೀತವ್ವ ಜೋಡಟ್ಟಿ
2. ಶ್ರೀಮತಿ ಸೂಲಗಿತ್ತಿ ನರಸಮ್ಮ

**ಕಲೆ ಮತ್ತು ಸಂಗೀತ**

1. ಶ್ರೀ ಆರ್.ಸತ್ಯನಾರಾಯಣ
2. ಶ್ರೀ ಇಬ್ರಾಹಿಂ ಸುತಾರ್

**ಆದ್ಯಾತ್ಮಿಕ**

1. ಶ್ರೀ ಸಿದ್ದೇಶ್ವರ ಸ್ವಾಮೀಜಿ

**ಕಲೆ ಮತ್ತು ಸಂಗೀತ**

1. ಶ್ರೀ ರುದ್ರಪಟ್ನಂ ನಾರಾಯಣಸ್ವಾಮಿ ತಾರಾನಾಥನ್
2. ಶ್ರೀ ರುದ್ರಪಟ್ನಂ ನಾರಾಯಣಸ್ವಾಮಿ ತ್ಯಾಗರಾಜನ್ ಸಹೋದರರು

ಇದಲ್ಲದೇ ಇತ್ತೀಚೆಗೆ ನಡೆದಂತಹ ಜೂನಿಯರ್ ಕ್ರಿಕೆಟ್ ವಿಶ್ವಕಪ್‌ನಲ್ಲಿ ಭಾರತದ ಟೀಂ ಗೆದ್ದಿದೆ. ತಮಗೆಲ್ಲಾ ಗೊತ್ತಿರತಕ್ಕಂತಹ ಶ್ರೀ ರಾಹುಲ್ ದ್ರಾವಿಡ್‌ರವರು ಕರ್ನಾಟಕದ ಚೀಫ್ ಕೋಚ್ ಆಗಿ ಕೆಲಸ ಮಾಡಿದ್ದರು. ಇವರೆಲ್ಲರಿಗೂ ಸಹ ಈ ಸದನ ಅಭಿನಂದನೆಯನ್ನು ಸಲ್ಲಿಸುತ್ತದೆ ಎನ್ನುವ ನಿರ್ಣಯವನ್ನು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಲಾಗುತ್ತಿದೆ. ಇದಕ್ಕೆ ತಮ್ಮೆಲ್ಲಾ ಸದಸ್ಯರ ಒಪ್ಪಿಗೆ ಇದೆ ಎಂದು ನಾನು ಭಾವಿಸುತ್ತೇನೆ. ಎಲ್ಲರಿಗೂ ಕಳುಹಿಸಿಕೊಡುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿರುವ ಎಲ್ಲಾ ಸದಸ್ಯರು ಮೇಜು ಕುಟ್ಟುವ ಮೂಲಕ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.)**

**5.ಪ್ರಕಟಣೆ**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ-9 ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ.

1. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ - ಸದಸ್ಯರು
2. ಶ್ರೀ ರಾಮಚಂದ್ರಗೌಡ - ಸದಸ್ಯರು
3. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ - ಸದಸ್ಯರು
4. ಶ್ರೀ ಡಿ.ಎಸ್.ವೀರಯ್ಯ - ಸದಸ್ಯರು

**ಸಭಾಪತಿಯವರು:-** ಬೆಳಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಕೆಲವು ಸದಸ್ಯರು ಸಹಿ ಮಾಡಿ ರಾಜ್ಯದಲ್ಲಿರತಕ್ಕಂತಹ ಪರಿಸ್ಥಿತಿಯ ಬಗ್ಗೆ ಒಂದು ನಿಲುವಳಿ ಸೂಚನೆ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕೆಂದಾಗ, ಸರ್ಕಾರ ಬೇರೆ ನಿಯಮದ ಅಡಿಯಲ್ಲಿ ಚರ್ಚೆ ಮಾಡೋಣ ಎಂದಿದ್ದರು.

**ಶ್ರೀ ವಿ.ಎಸ್.ಉಗ್ರಪ್ಪ, (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ಪ್ರಕಟಿಸಿರುವ ಪಟ್ಟಿಯಲ್ಲಿ ಯಾರಾದರೊಬ್ಬರು ಮಹಿಳೆಯರನ್ನು ಮಾನ್ಯ ಸಭಾಪತಿಯವರ ಮತ್ತು ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ನಾಮನಿರ್ದೇಶನ ಮಾಡಿಲ್ಲ. ಇಲ್ಲಿ ಇಷ್ಟು ಜನ ಮಹಿಳಾ ಸದಸ್ಯರು ಇದ್ದಾರೆ, ಅವರಲ್ಲಿ ಒಬ್ಬರಿಗೆ ಅವಕಾಶ ಮಾಡಿಕೊಡುವುದು ಸೂಕ್ತವೆಂದು ನನಗನ್ನಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ತಾವು ಹೇಳುತ್ತಿರುವುದು ಸರಿಯಾಗಿದೆ. ಸೀನಿಯಾರಿಟಿ ಮೇಲೆ ಕೊಡಬೇಕಾಗುತ್ತದೆ. ಶ್ರೀಮತಿ ಮೋಟಮ್ಮನವರ ಹೆಸರು ಬಹಳ ಹಿಂದೆಯೇ ಪ್ರಸ್ತಾಪವಾಗಿತ್ತು. ನಾವು ಅವರ ಹೆಸರನ್ನು ಪ್ರಸ್ತಾಪ ಮಾಡಿದ್ದೆವು. ಆದರೆ ಅವರು ಅದಕ್ಕೆ ಒಪ್ಪಿಕೊಳ್ಳಲಿಲ್ಲ ಅದಕ್ಕೆ ನಾವು ಏನು ಮಾಡೋಣ. ಈಗ ಚರ್ಚೆ ಮಾಡುವುದು ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಸಚಿವಾಲಯದ ಕಾರ್ಯದರ್ಶಿಯವರು ಸಹ ಮಹಿಳೆ ಇದ್ದಾರೆ.

**ಸಭಾಪತಿಯವರು:-** ಒಳ್ಳೆಯದು ಮಾಡೋಣ. ಈಗ ಆ ವಿಷಯದ ಬಗ್ಗೆ ನಿಯಮ 68ರಡಿಯಲ್ಲಿ ಚರ್ಚೆ ಮಾಡಿದರೆ ಒಳ್ಳೆಯದು ಆಗುತ್ತದೆಂದು ಸರ್ಕಾರದ ಪರವಾಗಿ ಮಾನ್ಯ ಸಭಾನಾಯಕರು ಹೇಳಿದ ಹಿನ್ನೆಲೆಯಲ್ಲಿ, ನಾನು ಬೆಳಗ್ಗೆ ಅದನ್ನು ನಿಯಮ-68ರಡಿಯಲ್ಲಿ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೆನು. ನಿಯಮ-68 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಸಹಿ ಮಾಡಿರತಕ್ಕಂತಹ ಎಲ್ಲಾ ಸದಸ್ಯರು ಮಾತನಾಡಬೇಕೆಂದರೆ ಕಷ್ಟವಾಗುತ್ತದೆ. ಸಹಿ ಮಾಡಿರತಕ್ಕಂತಹವರು ಕೆಲವು ಸದಸ್ಯರು ಮಾತನಾಡಿ ಮತ್ತು ಆಡಳಿತ ಪಕ್ಷದಿಂದಲೂ ಯಾರಾದರೂ ಮಾತನಾಡಬೇಕೆಂದಿದ್ದರೆ ಅವರೂ ಸಹ ಮಾತನಾಡಬಹುದು. ಆದರೆ ಸಹಿ ಮಾಡಿರತಕ್ಕಂತಹ ಎಲ್ಲಾ ಸದಸ್ಯರು ಮಾತನಾಡಬೇಕೆಂದರೆ ನನ್ನ ಹತ್ತಿರ ಸಮಯದ ಪ್ರಶ್ನೆ ಬರುತ್ತದೆ. ಅದರ ಬಗ್ಗೆ ಈಗ ಚರ್ಚೆ ಪ್ರಾರಂಭ ಮಾಡೋಣ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣ ಮತ್ತು ಅದರ ಮೇಲಿನ ಚರ್ಚೆಗಾಗಿ ಈ ಸದನ ಕರೆದಿರುವಂಥದ್ದು.

**ಸಭಾಪತಿಯವರು:-** ಬೆಳಗ್ಗೆ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ propose and second ಮಾಡುವವರು ಯಾರೂ ಬಂದಿರಲಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಈಗ ಇರುವುದರಿಂದ ದಯಮಾಡಿ ನಿರ್ಣಯ ಮಂಡನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಹೌದು, ಇದ್ದಾರೆ, ಗೊತ್ತಾಯಿತು. ಧನ್ಯವಾದಗಳು. ನಾನು ಅಜೆಂಡಾದಲ್ಲಿ ಈ ವಿಷಯವನ್ನು ಹಾಕಿಸಿದ್ದೆ. ಬೆಳಗ್ಗೆ ಅದನ್ನು ಗಮನಿಸಿದಾಗ, ಅವರು ಇರಲಿಲ್ಲ. ಅದು ಇಕ್ಕಟ್ಟು ಆಗುತ್ತದೆ ಎನ್ನುವ ಕಾರಣಕ್ಕಾಗಿ ಅದನ್ನು ಪ್ರಸ್ತಾಪ ಮಾಡಲಿಲ್ಲ. ಈಗ ತಾವು ನನ್ನ ಗಮನಕ್ಕೆ ತಂದಿದ್ದೀರಿ. ಈಗ ಇಬ್ಬರೂ ಸದನದಲ್ಲಿ ಇದ್ದಾರೆ. ಶ್ರೀ ಎಸ್.ರವಿಯವರು ಆ ಒಂದು ನಿರ್ಣಯವನ್ನು ಮಂಡಿಸಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವೇನು ಮಾತನಾಡುವುದು ಬೇಡ. ತಾವು ಮಾತನಾಡುವುದಕ್ಕೆ ಟಾಪ್ ಪ್ರಿಯಾರಿಟಿ ಮೇಲೆ ಅವಕಾಶ ಮಾಡಿಕೊಡುತ್ತೇನೆ. ಆದರೆ, ಇವರೇ ನಿರ್ಣಯ ಮಂಡಿಸಿ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಯಾವಾಗ.

**ಸಭಾಪತಿಯವರು:-** ಶ್ರೀ. ಎಸ್.ರವಿಯವರೇ, ತಾವು ಈಗ ಮಾತನಾಡುವುದು ಬೇಡ. ನಿಮಯ 68ರಡಿಯಲ್ಲಿ ಚರ್ಚೆ ಆದ ನಂತರ ಮೊದಲ ಆದ್ಯತೆಯ ಮೇಲೆ ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಪ್ರಸ್ತಾವ.**

**ಅ) ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, " 2018ನೇ ಫೆಬ್ರವರಿ, 05ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ತಮ್ಮ ಅಪ್ಪಣೆಯನ್ನು ಕೋರುತ್ತೇನೆ ".

**ಆ) ಡಾ||ಜಯಮಾಲ ರಾಮಚಂದ್ರ (ನಾಮ ನಿರ್ದೇಶನ ಹೊಂದಿದವರು)** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಎಸ್.ರವಿಯವರ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ. ನಂತರ ನನಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಆಯಿತು. ಸಮಯ adjust ಮಾಡಿಕೊಂಡು ಕೊಡುತ್ತೇವೆ. Same thing applies to you also.

**ಡಾ||ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ಈಗ ನಿಯಮ 68 ರಡಿಯಲ್ಲಿ ಬೆಳಗ್ಗೆ ಪ್ರಸ್ತಾಪಿಸಿದ ವಿಷಯದ ಬಗ್ಗೆ ಚರ್ಚೆ ಪ್ರಾರಂಭ ಮಾಡೋಣ. ಮತ್ತೆ ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ವಿರೋಧಪಕ್ಷದಿಂದ ತುಂಬಾ ಜನ ಮಾನ್ಯ ಸದಸ್ಯರುಗಳು ಸಹಿ ಮಾಡಿಕೊಟ್ಟಿದ್ದಾರೆ. ಎಲ್ಲರೂ ಮಾತನಾಡಬೇಕೆಂದರೆ ಕಷ್ಟವಾಗುತ್ತದೆ. ಕೆಲವು ಸದಸ್ಯರು ಮಾತನಾಡಿ. ಆಡಳಿತ ಪಕ್ಷದಿಂದಲೂ ಯಾರಾದರೂ ಸದಸ್ಯರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಬೇಕೆಂದು ನನಗೆ ಮುಖ್ಯ ಸಚೇತಕರು ಸದಸ್ಯರುಗಳ ಪಟ್ಟಿಯನ್ನು ಕೊಟ್ಟರೆ, ನಾನು ಅವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**7. ನಿಯಮ 68ರ ಮೇರೆಗೆ ಚರ್ಚೆ**

**ವಿಷಯ**:- ರಾಜ್ಯದಲ್ಲಿ ನಡೆಯುತ್ತಿರುವ ನಿರಂತರ ಕೊಲೆ, ಸುಲಿಗೆ, ಅತ್ಯಾಚಾರ, ಸರಗಳ್ಳತನ, ಗ್ಯಾಂಗ್‌ವಾರ್‌ಗಳು ಅಲ್ಲದೆ, ಪೋಲೀಸ್ ಇಲಾಖೆಯ ಸಿಬ್ಬಂದಿಗಳ ಮೇಲೆ ಹಲ್ಲೆ ಹಾಗೂ ಜೈಲಿನ ಆವರಣದಲ್ಲೇ ಗುಂಪು ಘರ್ಷಣೆ ಕೊಲೆ ಇತ್ಯಾದಿಗಳಿಂದಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ವಿಫಲಗೊಂಡಿರುವ ಬಗ್ಗೆ.

----

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಹಿಂದೂ ಯುವಕರ ಕಗ್ಗೊಲೆಗಳು ಆಗುತ್ತಿರುವಂತಹ ಸಂದರ್ಭದಲ್ಲಿ ಪೋಲೀಸ್ ಇಲಾಖೆ ಕೂಡ ಸವಾಲು ಒಡ್ಡುವ ರೀತಿಯಲ್ಲಿ ಕೊಲೆಗಡುಕರು ನಡೆದುಕೊಳ್ಳುತ್ತಿರುವಂತಹ ಒಂದು ತಾಜಾ ಉದಾಹರಣೆಯನ್ನು ನಾನು ನಿಮಗೆ ಹೇಳುತ್ತೇನೆ. ಕಟಿಪಳ್ಳದಲ್ಲಿ ದೀಪಕ್ ರಾವ್‌ರವರನ್ನು ಕೊಲೆ ಮಾಡಿ ಪರಾರಿಯಾಗುತ್ತಿದ್ದವರಿಗೆ ಅಡ್ಡ ಬಂದಂತಹ ಮುಲ್ಕಿ ಠಾಣೆಯ ಎಸ್.ಐ ಮೇಲೆಯೇ ಕಾರನ್ನು ನುಗ್ಗಿಸಿ, ಕೊಲೆ ಮಾಡುವುದಕ್ಕೂ ಯತ್ನಿಸಿದ್ದರು ಎನ್ನುವ ಕಳವಳಕಾರಿ ಮಾಹಿತಿ ಈಗ ಬೆಳಕಿಗೆ ಬಂದಿದೆ. ಇದು ಎಷ್ಟರಮಟ್ಟಿಗೆ ಎಂದರೆ, ಒಂದನೆಯದು ಕೊಲೆ ಮಾಡಿರುವುದು. ಆಮೇಲೆ ಕೊಲೆ ಮಾಡಿದವರನ್ನು ಹಿಡಿಯುವಂತಹ ಪ್ರಯತ್ನ ಮಾಡಿದಂತಹ ಪೋಲೀಸ್ ಅಧಿಕಾರಿಗಳನ್ನು ಕೂಡ ಕೊಲೆ ಮಾಡುವಂತಹ ಒಂದು ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಇದೆ ಎನ್ನುವುದಾದರೆ, ಸರ್ಕಾರದ ಬಗ್ಗೆ ಎಷ್ಟರಮಟ್ಟಿಗೆ ಗೌರವವಿದೆ, ಭಯ ಇದೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಈ ರೀತಿ ಆ ಒಂದು ಪ್ರಕರಣದಲ್ಲಿ chase ಮಾಡಿಕೊಂಡು ಹೊರಟಂತಹ ಪೋಲೀಸ್ ಅಧಿಕಾರಿಗಳ ಮೇಲೆ ಆ ಕೊಲೆಗಡುಕರು ಕಾರನ್ನು ಅವರ ಮೇಲೆ ನುಗ್ಗಿಸಿಕೊಂಡು ಹೋಗುತ್ತಾರೆ ಎನ್ನುವಂತಹ ಪ್ರಯತ್ನ ಇದೆಯೆಲ್ಲಾ, ಇದನ್ನು ಯಾರಿಗೆ ಹೇಳಬೇಕು. ಶ್ರೀ ಶೀತಲ್ ಕುಮಾರ್ ಮತ್ತು ತಂಡ ಎರಡು ವಾಹನಗಳಲ್ಲಿ ಕಿನ್ನಿಗೋಳಿಯಲ್ಲಿರುವ ನೌಷಾದ್ ಉಲ್ಲಂಜೆ ಮನೆಕಡೆಗೆ ತೆರಳಿದರು. ಆರೋಪಿಗಳು ಅಲ್ಲಿಗೆ ಬಂದು ಸ್ನಾನ ಮುಗಿಸಿ, ಬಟ್ಟೆ ಬದಲಿಸಿ, ಹಣ ತೆಗೆದುಕೊಂಡು ಅನ್ಯ ರಾಜ್ಯಕ್ಕೆ ಪರಾರಿಯಾಗಬಹುದು ಎಂಬ ಲೆಕ್ಕಾಚಾರದಲ್ಲಿ ಪೋಲೀಸ್‌ನವರು ನೌಷಾದ್ ಮನೆ ಸಮೀಪದ ದಾರಿಯಲ್ಲಿ ಹೊಂಚು ಹಾಕಿ ಕಾದಿದ್ದರು.

**(ಮುಂದು...)**

**(019)6.02.2018/3.20/ಎಂಎಂ-ಎಕೆ**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):-**

ಪೊಲೀಸರು ನೌಷಾದ್ ಮನೆ ಸಮೀಪದ ದಾರಿಯಲ್ಲಿ ಹೊಂಚು ಹಾಕಿ ಕಾದಿದ್ದರು. ಆಗ ನೌಷಾದ್ ಮತ್ತು ತಂಡದ ಕಾರು ಅದೇ ದಾರಿಯಲ್ಲಿ ವೇಗವಾಗಿ ಆಗಮಿಸಿದ್ದು, ತಕ್ಷಣ ಆರೋಪಿಗಳು ಕಾರನ್ನು ಅಡ್ಡಗಟ್ಟಲು, Sub-Inspector ಶೀತಲ್ ಕುಮಾರ್ ಅವರನ್ನು ಹಿಡಿಯಲು ಮುಂದಾದರು. ಆ ಕ್ಷಣದಲ್ಲಿ ಮುಲ್ಕಿ ಪೊಲೀಸರನ್ನು ಕಂಡ ನೌಷಾದ್ ಮತ್ತು ತಂಡಕ್ಕೆ ಬಚಾವಾಗುವ ಸಾಧ್ಯತೆ ತೀರಾ ಕಡಿಮೆ ಎಂಬ ಅರಿವಾಗಿತ್ತು. ಆಗ ಕಾರು ಚಲಾಯಿಸಿದ ನೌಷಾದ್ ಕಾರನ್ನು Sub-Inspector ಶೀತಲ್ ಕುಮಾರ್ ಮೇಲೇ ನುಗ್ಗಿಸಲು ಮುಂದಾದ, ಅಷ್ಟರಲ್ಲಿ ಶೀತಲ್ ಕುಮಾರ್ ಕ್ಷಣಾರ್ಧದಲ್ಲಿ ಪಕ್ಕದ ಚರಂಡಿಗೆ ಹಾರಿ ಪಾರಾದರು. ಇಲ್ಲದೇ ಹೋಗಿದ್ದರೆ ಆರೋಪಿ ನೌಷಾದ್ Sub-Inspector ಮೇಲೆ ಕಾರು ನುಗ್ಗಿಸಿ ತಪ್ಪಿಸಿಕೊಳ್ಳುವ ಸಾಧ್ಯತೆಯನ್ನು ಸಹ ತಳ್ಳಿ ಹಾಕುವಂತಿಲ್ಲ. ನಾನು ಏತಕ್ಕೆ ಈ ವಿಷಯವನ್ನು ಉಲ್ಲೇಖ ಮಾಡುತ್ತಿದ್ದೇನೆಂದರೆ, ಹಿಂದೂ ಯುವಕರ ಕಗ್ಗೊಲೆಗಳೇನು ನಡೆದಿವೆ ಆ ಒಂದೊಂದು ಯುವಕರ ಕಗ್ಗೊಲೆಗಳನ್ನು ನೋಡುತ್ತಾ ಹೋದಾಗ ಪ್ರಶಾಂತ ಪೂಜಾರಿ ಮಾಡಿದ ತಪ್ಪೇನು ಎಂದರೆ, ಒಬ್ಬ ಹೂ ಮಾರುವಂತಹ ಯುವಕ ಗೋ ಕಳ್ಳರನ್ನು ಪೊಲೀಸರಿಗೆ ಹಿಡಿದುಕೊಡುತ್ತಿದ್ದಾನೆ ಎಂಬ ಕಾರಣಕ್ಕೆ ಮೂಡುಬಿದಿರೆಯಲ್ಲಿ ಅವನನ್ನು ಹಾಡುಹಗಲೇ ಕಗ್ಗೊಲೆ ಮಾಡುತ್ತಾರೆ. ಇದನ್ನು ಪತ್ತೆ ಹಚ್ಚಲು ಪೊಲೀಸ್ ಇಲಾಖೆ ಪ್ರಯತ್ನ ನಡೆಸುತ್ತದೆ. ಕುಟ್ಟಪ್ಪ ಎನ್ನುವವನ ಬಗ್ಗೆ ಗೊತ್ತಿದೆ. ಕಾನೂನುಬದ್ಧವಾಗಿ ದೇವಸ್ಥಾನವನ್ನು ಕಟ್ಟಬೇಕೆಂದು ಹೊರಟ ರಾಜುವಿನ ಕೊಲೆ ಮೈಸೂರಿನಲ್ಲಿ ಆಗುತ್ತದೆ. ಅದೇ ರೀತಿ ಪ್ರವೀಣ್ ಪೂಜಾರಿ ಎನ್ನುವ ಒಬ್ಬ ಆರ್.ಎಸ್.ಎಸ್ ಕಾರ್ಯಕರ್ತನ ಕೊಲೆ ಕುಶಾಲನಗರದಲ್ಲಿ ಆಗುತ್ತದೆ. ವೆಂಕಟೇಶ, ಶಿವಮೊಗ್ಗದಲ್ಲಿ ಒಂದು P.F.I. (Popular Front of India) ನವರದ್ದು ಒಂದು ಸಮ್ಮೇಳನ ಆಗುತ್ತದೆ. ಸಮ್ಮೇಳನ ಆಗುತ್ತಿರುವಂತಹ ಸಂದರ್ಭದಲ್ಲಿ ಕೇರಳದಿಂದ ಶಿವಮೊಗ್ಗಕ್ಕೆ ಮುಸಲ್ಮಾನರು ಬರುತ್ತಾರೆ. ನಾನು ಎಲ್ಲಾ ಮುಸಲ್ಮಾನರೂ ದೇಶದ್ರೋಹಿಗಳೆಂದು ಹೇಳುವುದಕ್ಕೆ ತಯಾರಿಲ್ಲ. ಅನೇಕ ರಾಷ್ಟ್ರಭಕ್ತ ಮುಸಲ್ಮಾನರು ಇದ್ದಾರೆ. ಇಲ್ಲಿ ಬಂದು 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿ, ಆ ಸಮ್ಮೇಳನ ಮುಗಿಸಿಕೊಂಡು ವಾಪಸ್ ಹೋಗುವಾಗ ರಸ್ತೆಯಲ್ಲಿ ಸಿಕ್ಕಿದಂತಹ ಸಂದರ್ಭದಲ್ಲಿ ವ್ಯಾನ್ ಬಾಗಿಲನ್ನು ತೆಗೆದು ಅವನನ್ನು ಕೊಚ್ಚಿ ಹೊರಟು ಹೋಗುತ್ತಾನೆ. ಆಗ ಅವನು ಸತ್ತು ಹೋಗುತ್ತಾನೆ. ಪೊಲೀಸ್ ಅಧಿಕಾರಿಗಳು ಆಗಿನ ಗೃಹ ಸಚಿವರಿಗೆ ಹೀಗಾಗಿದೆ ಎಂದು ಹೇಳುತ್ತಾರೆ. ನಾವು ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಗೃಹ ಸಚಿವರು ಹೇಳಿದರು. ಆದರೆ ಇವತ್ತಿನವರೆಗೂ ಏನೂ ಆಗಿಲ್ಲ. ಬಿ.ಸಿ. ರೋಡ್, ಮಂಗಳೂರಿನಲ್ಲಿ ಶರತ್ ಮಡಿವಾಳ ಎಂಬ ಆರ್.ಎಸ್.ಎಸ್. ಕಾರ್ಯಕರ್ತನ ಕೊಲೆಯಾಗುತ್ತದೆ. ಈ ರೀತಿ ಪರೇಶ್ ಬೇಸ್ತ ಎಂಬ ಹೊನ್ನಾವರದ ಹಿಂದೂ ಕಾರ್ಯಕರ್ತನ ಕೊಲೆ ಹೇಗಾಯಿತು ಎನ್ನುವ ವಿವರ ಕೇಳುತ್ತಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋದರೆ ಯಾವುದೇ ರಾಕ್ಷಸೀ ಪ್ರವೃತ್ತಿಯ ವ್ಯಕ್ತಿಗಳು ಕೂಡ ಅಷ್ಟರಮಟ್ಟಿಗೆ ಅನ್ಯಾಯ ಮಾಡುವುದಿಲ್ಲ. ಇದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಗೊತ್ತು. ಈ ರೀತಿ ನಡೆಯುತ್ತಿರುವಂತಹ ಸಂದರ್ಭದಲ್ಲಿ ಪ್ರತಿಯೊಂದು ಬಾರಿ ಕೊಲೆಯಾದಂತಹ ಸಂದರ್ಭದಲ್ಲಿ ಸ್ವಾಭಾವಿಕವಾಗಿ ರಾಜ್ಯ ಸರ್ಕಾರ ಯಾರು ಕೊಲೆಗಡುಕರಿದ್ದಾರೆ ಅವನು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಇರಬಹುದು ಕೊಲೆ ಮಾಡಿದವನು ಕೊಲೆಗಡುಕನೇ. ಆ ಧರ್ಮ, ಈ ಧರ್ಮ ಎನ್ನುವ ಪ್ರಶ್ನೆಯಲ್ಲ. ಆದರೆ ಆ ವ್ಯಕ್ತಿಗಳ ಬಗ್ಗೆ, ಆ ಸಂಸ್ಥೆಗಳಿಗೆ, ಅವರು ಯಾವ ಸಂಸ್ಥೆಯಲ್ಲಿದ್ದಾರೆ ಅವರ ಬಗ್ಗೆ ನಾನು ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಮಾತು ಮಾನ್ಯ ಮುಖ್ಯಮಂತ್ರಿಯವರ ಬಾಯಲ್ಲಿ ಬಂದಿದ್ದರೆ ಚೆನ್ನಾಗಿತ್ತು. ಕೊಲೆಗಳಾಗುತ್ತಿದ್ದ ಹಾಗೆ ತಕ್ಷಣವೇ ಅವರು ಏನು ಹೇಳುತ್ತಾರೆಂದರೆ, ನಾನು ಕೋಮು ಸಂಸ್ಥೆಗಳ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳುತ್ತೇನೆ, ಆರ್.ಎಸ್.ಎಸ್ ಭಜರಂಗ ದಳವನ್ನು ಬಿಡುವುದಿಲ್ಲ, ಅದನ್ನು ಮಟ್ಟ ಹಾಕುತ್ತೇನೆ ಎಂದು ಹೇಳುತ್ತಾರೆ. ನಮ್ಮ ಕಾರ್ಯಕರ್ತರು ಕೊಲೆ ಆಗಿ ಸತ್ತರೆಂಬ ದುಃಖದಲ್ಲಿ ನಾವಿರುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ಆ ಕುಟುಂಬಗಳಿಗೆ ಮತ್ತು ಸಂಸ್ಥೆಗಳಿಗೆ ಸಾಂತ್ವನ ಹೇಳಬೇಕು. ಯಾರು ಕೊಲೆ ಮಾಡಿದ ಸಂಸ್ಥೆಗಳಿವೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ, ಅವರನ್ನು ಕರ್ನಾಟಕ ರಾಜ್ಯದಲ್ಲಿ ಬಿಡುವುದಿಲ್ಲ ಎಂದು ಹೇಳಿದ್ದರೆ ನಿಜಕ್ಕೂ ಕೂಡ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಒಪ್ಪುತ್ತಿದ್ದೆ. ಆದರೆ ಪ್ರತಿ ಕೊಲೆಯಾದಾಗಲೂ ಕೂಡ ಯಾವ ಕೊಲೆಗಡುಕ ಸಂಸ್ಥೆಗಳಿವೆ ಆ P.F.I. ಅಂತಹ ಸಂಸ್ಥೆಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂಬ ಮಾತು ಇವತ್ತಿನವರೆಗೂ ಬಂದಿಲ್ಲವೆಂದರೆ ತುಂಬಾ ನೋವಾಗುತ್ತದೆ. ಜೊತೆಗೆ ಅವರು ಏನು ಹೇಳುತ್ತಾರೆ ಎಂದರೆ, ಮೊನ್ನೆ ತಾನೇ ಬೆಂಗಳೂರಿನಲ್ಲಿ ಸಂತೋಷ್ ಎಂಬುವವನ ಕೊಲೆಯಾಯಿತು. ನಮ್ಮ ಸಮಾವೇಶದ ಸಂದರ್ಭದಲ್ಲಿ ಬ್ಯಾನರ್ ಕಟ್ಟಿಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಅವನ ಕೊಲೆಯಾಯಿತು. ಕೊಲೆಯಾದುದಕ್ಕೆ ಮುಖ್ಯಮಂತ್ರಿಯವರ ಹೇಳಿಕೆಯೇನೆಂದರೆ, ಕೊಲೆಯಾದ ಸಂತೋಷ್ ಬಿ.ಜೆ.ಪಿಗನಲ್ಲ – ಸಿಪಿಎಂ. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಭಾರತೀಯ ಜನತಾ ಪಾರ್ಟಿ ಎಂದು ಫ್ಲೆಕ್ಸ್ ಹಾಕುತ್ತಾರೆ. ಆ ಫ್ಲೆಕ್ಸ್ ಹಾಕಿರುವುದರಲ್ಲಿ ಯುವ ಮೋರ್ಚಾ, ರಾಮಸ್ವಾಮಿ ಪಾಳ್ಯ, ಆ ಫ್ಲೆಕ್ಸ್‌ನಲ್ಲಿ ಸಂತೋಷನ ಫೋಟೋ ಇದೆ. **(ಈ ಹಂತದಲ್ಲಿ ಮಾನ್ಯ ಈಶ್ವರಪ್ಪನವರು ಪತ್ರಿಕೆಯಲ್ಲಿ ಪ್ರಕಟಗೊಂಡ ಫ್ಲೆಕ್ಸ್‌ನ ಪ್ರತಿಯ ತುಣುಕನ್ನು ಸದನದಲ್ಲಿ ತೋರಿಸಿದರು)** ಮಾನ್ಯ ಸೀತಾರಾಂರವರೇ, ಇದನ್ನು ತಾವು ಗಮನಿಸಬೇಕು. ಏಕೆಂದರೆ, ಕೊಲೆಗಳಲ್ಲಿ ರಾಜಕಾರಣ ಮಾಡುವುದಕ್ಕೆ ನಾನಂತೂ ತಯಾರಿಲ್ಲ. ಕೊಲೆಯಾದಂತಹ ಸಂದರ್ಭದಲ್ಲಿ ಕೊಲೆಗಡುಕರಿಗೆ ನಮ್ಮ ಸರ್ಕಾರ ಬಿಗಿ ಮಾಡುತ್ತೇವೆ, ಅವರನ್ನು ಬಿಡುವುದಿಲ್ಲ. ಆರ್.ಎಸ್.ಎಸ್, ಭಾರತೀಯ ಜನತಾ ಪಾರ್ಟಿ ಕಾಯಕರ್ತರ ಕೊಲೆಯಾದರೆ ಅದಕ್ಕೆ ಬೆಲೆ ಇಲ್ಲವೇ? ಮಾನ್ಯ ಮುಖ್ಯಮಂತ್ರಿಯವರು ಕೇರಳ ಆಗುವುದಕ್ಕೆ ಕರ್ನಾಟಕ ರಾಜ್ಯವನ್ನು ಬಿಡುವುದಿಲ್ಲ ಎಂದು ಹೇಳಬೇಕಾಗಿತ್ತು. ಅದನ್ನು ಬಿಟ್ಟು ಇವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಹೇಳುತ್ತಾರೆಂದರೆ, ಕೊಲೆಯಾದ ಸಂತೋಷ್ ಬಿ.ಜೆ.ಪಿಗನಲ್ಲ ಎಂದು ಮುಖ್ಯಮಂತ್ರಿಯವರು ಹೀಗೆ ಹೇಳಿಬಿಟ್ಟರೆ ಕೊಲೆ ಮಾಡುವವರಿಗೆ ಇನ್ನೂ ತುಂಬಾ ಸಂತೋಷವಾಗುತ್ತದೆ. ನಾನು ಅದಕ್ಕೋಸ್ಕರ ಹೇಳಿದೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ ತಾವು ದಯವಿಟ್ಟು ಇದನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಡಿ. **(ಈ ಹಂತದಲ್ಲಿ ಮಾನ್ಯ ಈಶ್ವರಪ್ಪನವರು ಪತ್ರಿಕೆಯಲ್ಲಿ ಪ್ರಕಟಗೊಂಡ ಫ್ಲೆಕ್ಸ್‌ನ ಪ್ರತಿಯ ತುಣುಕನ್ನು ಸಭಾನಾಯಕರಿಗೆ ಕೊಡಿಸಿದರು)**

ಮತ್ತೆ ಈ ಧೋರಣೆ ಇವತ್ತು ಕೊಲೆಗಡುಕರಿಗೆ ತುಂಬಾ encouraging ಆಗುತ್ತಿದೆ. ಅಕ್ರಮವಾಗಿ ಕಸಾಯಿಖಾನೆಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ಅಕ್ರಮವಾಗಿ ಕಸಾಯಿ ಖಾನೆಯನ್ನು ನಡೆಸುತ್ತಿದ್ದೀರೆಂದು ಅಧಿಕಾರಿಗಳು ಹೋಗಿ ನೋಟಿಸ್ ಕೊಡುತ್ತಾರೆ. ನೋಟೀಸ್ ಕೊಡುವಂತಹ ಅಧಿಕಾರಿಗಳ ಮೇಲೆ ಹಲ್ಲೆಯಾಗುತ್ತದೆ. ಅವರ ಕಾರು ಪುಡಿ ಪುಡಿಯಾಗುತ್ತದೆ. ಹೇಳುವವರು ಇಲ್ಲ, ಕೇಳುವವರಿಲ್ಲದ ಹಾಗೆ ಕರ್ನಾಟಕ ರಾಜ್ಯದಲ್ಲಿ ಈ ರೀತಿ ಆದರೆ ಏನು? ಗೋ ಕಳ್ಳರಿಂದ ಪೋಲೀಸರ ಹತ್ಯೆಗೆ ಯತ್ನ, ಪರಾರಿ; ಹಿಡಿಯಲು ಹೋದ ತಕ್ಷಣವೇ ಓಡುತ್ತಾರೆ. ಇಲ್ಲಿ ನಾನು ತುಂಬಾ ನೋವಿನಿಂದ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರ ಹೇಳಿಕೆಯೇನು ಎಂದರೆ, "BJP and RSS Members are like terrorists – C.M., Siddaramaiah". ಈ ದೇಶದಲ್ಲಿ ಇವತ್ತು ಆರ್.ಎಸ್.ಎಸ್ ಮತ್ತು ಭಾರತೀಯ ಜನತಾ ಪಾರ್ಟಿ ರಾಷ್ಟ್ರ ಭಕ್ತರ ಸಂಘಟನೆಗಳೆಂದು ಅಂದುಕೊಂಡು ಲಕ್ಷಾಂತರ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವಂತಹ ಕೋಟ್ಯಾಂತರ ಕಾರ್ಯಕರ್ತರು ದೊಡ್ಡ ಸಂಘಟನೆ ಇದೆ. ಇದರಿಂದ ಇಡೀ ದೇಶದ ಜನ ಮೆಚ್ಚಿ ಒಬ್ಬ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕನನ್ನು ಪ್ರಧಾನ ಮಂತ್ರಿ ಮಾಡಿದ್ದಾರೆ, ಒಬ್ಬ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕನನ್ನು ರಾಷ್ಟ್ರಪತಿಯನ್ನಾಗಿ ಮಾಡಿದ್ದಾರೆ ಮತ್ತು ಒಬ್ಬ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕನನ್ನು ಉಪರಾಷ್ಟ್ರಪತಿಯನ್ನಾಗಿ ಮಾಡಿದ್ದಾರೆ. ಈ ದೇಶದ ಜನರು ದಡ್ಡರೇ? 19 ರಾಜ್ಯಗಳಲ್ಲಿ ಬಿ.ಜೆ.ಪಿಯ ಮುಖ್ಯಮಂತ್ರಿಯವರಿದ್ದಾರೆ. ಆದರೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಇವತ್ತು ಬಿ.ಜೆ.ಪಿ ಮತ್ತು ಆರ್.ಎಸ್.ಎಸ್ ಕಾರ್ಯಕರ್ತರನ್ನು terrorists ಗೆ ಹೋಲಿಸುವಂತಹ ಪ್ರಯತ್ನ ಮಾಡಿದ್ದಾರಲ್ಲಾ ಅವರು ಇಲ್ಲಿಗೆ ಬರಬೇಕು ಕ್ಷಮೆ ಕೇಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಏಕೆಂದರೆ, ರಾಜಕಾರಣ ಮಾಡುವುದಕ್ಕೆ ಬೇಕಾದಷ್ಟು ದಾರಿಗಳಿವೆ, ಮಾಡಿಕೊಂಡು ಹೋಗಲಿ. ಆದರೆ ಇಡೀ ದೇಶದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಈ ದೇಶದ ಮೇಲೆ ಸೈನಿಕರು ಯುದ್ಧ ಸಾರುವ ಸಂದರ್ಭದಲ್ಲಿ ಆಗ ಸಂಘದ ಸ್ವಯಂ ಸೇವಕರು ಮಾಡಿದ ಕೆಲಸಗಳಿಗೆ ದೇಶದ ಮೇಲೆ ಮಳೆ, ಅತಿವೃಷ್ಟಿ, ಅನಾವೃಷ್ಟಿಯಾದಂತಹ ಸಂದರ್ಭದಲ್ಲಿ ಪೂರ್ಣ ಸ್ವಯಂ ಸೇವಕರು ಮಾಡಿದಂತಹ ಕೆಲಸವನ್ನು ಆಗಿನ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರುರವರು ಮೆಚ್ಚಿ ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಣರಾಜ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಆರ್.ಎಸ್.ಎಸ್ ನವರು ಮೆರವಣಿಗೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರು. ಅಂತಹ ಆರ್.ಎಸ್.ಎಸ್. ಬಗ್ಗೆ ಶ್ರೀ ಸಿದ್ದರಾಮಯ್ಯನವರಿಗೆ ಕಲ್ಪನೆ ಇಲ್ಲ. ಆರ್.ಎಸ್.ಎಸ್ ನವರೆಲ್ಲರೂ ಪ್ರಾಣ ಕೊಟ್ಟಿರುವವರು. ಆರ್.ಎಸ್.ಎಸ್ ಎಂದರೆ ನಮಗೆ ತಾಯಿ ಸಮಾನ. ನಮ್ಮ ಜೀವನದಲ್ಲಿ ನಾವು ಒಂದು ಸಿದ್ಧಾಂತವನ್ನು ಒಪ್ಪಿಕೊಂಡು ಇದೇ ಸಿದ್ಧಾಂತದಲ್ಲಿರುವವರು. ಒಂದು ಸಲ ಬಿ.ಜೆ.ಪಿ ಯಲ್ಲಿದ್ದರೆ ನಾವು ಬಿ.ಜೆ.ಪಿಯವರು. ಇದೇ ಸಿದ್ಧಾಂತವನ್ನು ಎಲ್ಲರೂ ಒಪ್ಪಬೇಕೆಂದಿಲ್ಲ. ಅವರವರ ಸಿದ್ಧಾಂತಕ್ಕೆ ಅವರು ಯಾರನ್ನು ಬೇಕಾದರೂ ಒಪ್ಪಿಕೊಳ್ಳಲಿ. ಆದರೆ ನಮ್ಮ ಸಿದ್ಧಾಂತದ ಬಗ್ಗೆ ಇವರು ಪ್ರಶ್ನೆ ಬೇಕಾದರೆ ಮಾಡಬಹುದು. ಆದರೆ ಈ ಸಿದ್ಧಾಂತ ಟೆರರಿಸ್ಟ್‌ಗೆ ಬೆಂಬಲ ಕೊಡುವಂತಹ ಸಿದ್ಧಾಂತ ಎಂದು ಹೇಳುವುದಿದೆಯಲ್ಲ, ಇದನ್ನು ನಾನು ಖಡಾ ಖಂಡಿತವಾಗಿ ಖಂಡನೆ ಮಾಡುತ್ತೇನೆ. ಇದು ದೇಶದ್ರೋಹಿಗಳಿಗೆ ಬೆಂಬಲ ಕೊಡುವಂತಹ ಒಂದು ವ್ಯವಸ್ಥೆಯಾಗುತ್ತದೆ. ಆರ್.ಎಸ್.ಎಸ್ ಬಗ್ಗೆ ಇವರು ಮಾತನಾಡಬೇಕಾದರೆ, ಇವರಿಗೆ ಒಂದು ಸಂಸ್ಥೆಯಲ್ಲಿದ್ದು ಗೊತ್ತಿಲ್ಲ. ಜನತಾ ದಳದಲ್ಲಿದ್ದರು, ಕಾಂಗ್ರೆಸ್‌ಗೆ ಬಂದರು, ಮಧ್ಯೆ ಇನ್ನೇನೋ ಒಂದು ಪಕ್ಷವನ್ನು ಕಟ್ಟಿದರು. ಅಧಿಕಾರವನ್ನು ಹಿಡಿಯಬೇಕೆಂಬ ಒಂದೇ ಒಂದು ಉದ್ದೇಶದಿಂದ ಇವರು ಪಕ್ಷಾಂತರಗಳನ್ನು ಮಾಡಬಹುದು, ಸೈದ್ಧಾಂತಿಕವಾಗಿ ಬದಲಾವಣೆಗಳಾಗಬಹುದು. ಆದರೆ ಆರ್.ಎಸ್.ಎಸ್ ಮತ್ತು ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರು ಕುತ್ತಿಗೆ ಕೊಯ್ದರೂ ಕೂಡ ನಮ್ಮ ಸಿದ್ಧಾಂತಗಳನ್ನು ಬದಲಾವಣೆ ಮಾಡುವುದಿಲ್ಲ. ಉಗ್ರವಾದಿಗಳ ಜೊತೆಗೆ ಹೋಲಿಸಿದ್ದಾರಲ್ಲ, ಇದು ನಿಜಕ್ಕೂ ಕೂಡ ದೇಶ ಪ್ರೇಮಿಗಳಿಗೆ ಮಾಡಿದಂತಹ ಅಪಮಾನವಾಗಿದೆ. ನಾನು ಅದಕ್ಕೋಸ್ಕರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಈ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು ಮತ್ತು ಕ್ಷಮೆ ಕೇಳಬೇಕು. ಜೊತೆಗೆ ;

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಈಶ್ವರಪ್ಪನವರೇ, ನಿಮ್ಮ ಪಕ್ಕದಲ್ಲಿ ಉಪನಾಯಕರಿದ್ದಾರಲ್ಲ ಅವರು ಯಾವ ಸಿದ್ಧಾಂತದಿಂದ ಬಂದಂತಹವರು?

**ಶ್ರೀ ಕೆ.ಎಸ್. ಈಶ್ವರಪ್ಪ:-** ನಿಮ್ಮ ಬಾಸ್ ಬಗ್ಗೆ ಹೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಏಕೆಂದರೆ, ಸಿದ್ದರಾಮಯ್ಯನವರ ಅಧಿಕಾರದ ಬಗ್ಗೆ ಬಹಳ ಮಾತನಾಡುತ್ತಿದ್ದೀರಲ್ಲಾ, ನೀವು ಅವರನ್ನು (ಶ್ರೀ ಕೆ.ಬಿ.ಶಾಣಪ್ಪ) ಯಾವ ಸಿದ್ಧಾಂತದ ಹಿನ್ನೆಲೆಯಲ್ಲಿ ಸೇರಿಸಿಕೊಂಡಿದ್ದೀರಿ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಒಂದು ನಿಮಿಷ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಒಂದು ವಿಷಯವನ್ನು ಪದೇ ಪದೇ ಹೇಳುತ್ತಿರುತ್ತೇನೆ, ಒಂದು ವಿಷಯವನ್ನು ಈ ಸದನದ ಗಮನಕ್ಕೂ ತರುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ದಿವಸ ರಾಜ್ಯಸಭೆ ನಡೆಯುತ್ತಿತ್ತು ನಾನು ಟಿ.ವಿ. ಹಾಕಿಕೊಂಡು ನೋಡುತ್ತಿದ್ದೆ. ರಾಜ್ಯಸಭೆಯ ಸಭಾಪತಿಯವರು ಸದನದಲ್ಲಿ ಪ್ರಧಾನಮಂತ್ರಿಯವರು, ವಿರೋಧಪಕ್ಷದ ನಾಯಕರು ಎಲ್ಲರೂ ಇದ್ದಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ವಿಷಯವನ್ನು ಮಾತನಾಡುವುದಕ್ಕೆ ಸಮಯವನ್ನು ನಿಗದಿ ಮಾಡುತ್ತೇನೆ, ಮಾತನಾಡುತ್ತಾರೆ. Unparliamentary ಪದಗಳು ಬಂದಾಗ ಮಾತ್ರ ನಾನು ಮಧ್ಯೆ ಬಾಯಿ ಹಾಕುತ್ತೇನೆ ಅಥವಾ ಬೇರೆ ಯಾರಾದರೂ ಮಧ್ಯೆ ಬಾಯಿ ಹಾಕಬಹುದು. ಬಾಕಿ ವಿಷಯದಲ್ಲಿ ಅವರವರು ಮಾತನಾಡುವಾಗ ಮಧ್ಯೆ ಯಾರೂ ದಯಮಾಡಿ ಬಾಯಿ ಹಾಕಬೇಡಿ. ಯಾವುದೇ ರೀತಿಯಲ್ಲಿ ಅವರ ಮಾತಿಗೆ ಅಡ್ಡ ಬರಬೇಡಿ ಎಂದು ಹೇಳಿದರು. ಈ ಮಾತನ್ನು ನಾನು ಇಲ್ಲಿಯೂ ಹೇಳುತ್ತಿರುತ್ತೇನೆ. ಅದಾದ ನಂತರ ನಿನ್ನೆ ಅಷ್ಟು ಸುಂದರವಾಗಿ ನಡೆಯಿತು.

(ಮುಂದು . .

(20) 06-02-2018/3-30/ಕೆಹೆಚ್/ಎಕೆ

**ಸಭಾಪತಿಯವರು (ಮುಂದು):–** ವಿರೋಧಪಕ್ಷದ ನಾಯಕರು ಮಾತನಾಡುವಾಗ ಇರಬಹುದು, ಸಭೆಯಲ್ಲಿರುವಂತಹ ಮಂತ್ರಿಗಳು ಮಾತನಾಡುವಾಗ ಇರಬಹುದು. ಹೊಸ ಸದಸ್ಯರು ಮಾತನಾಡುವಾಗ ಇರಬಹುದು. ಯಾರು ಮಧ್ಯ ಬಾಯಿ ಹಾಕದೆ ರಾಜ್ಯ ಸಭೆಯ ಕಲಾಪ ಇಷ್ಟು ಚೆನ್ನಾಗಿ ನಡೆಯಿತು ಎನ್ನುವುದನ್ನು ನಾನು ಹತ್ತಾರು ಜನರ ಜೊತೆಯಲ್ಲಿ ಹಂಚಿಕೊಂಡಿದ್ದೇನೆ. ನಮ್ಮ ಸದನದ ಬಗ್ಗೆಯೂ ಕೂಡ ಅದೇ ರೀತಿಯ ಅಭಿಪ್ರಾಯಗಳು ಸಾರ್ವಜನಿಕರಲ್ಲಿ ಇದೆ. ದಯಮಾಡಿ ಅವರು ಮಾತನಾಡುತ್ತಿರುವುದು ತಪ್ಪು ಎನ್ನುವುದು ಯಾರಿಗಾದರೂ ಅನಿಸಿದರೆ, ಸರಿಯಲ್ಲವೆಂದು ಅನಿಸಿದರೆ, ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳಬೇಕೆಂದು ಅನಿಸಿದರೆ ಒಂದು ಕಡೆ ಬರೆದಿಟ್ಟುಕೊಳ್ಳಿ. ನಿಮಗೆ ಮಾತನಾಡುವುದಕ್ಕೆ ಅವಕಾಶ ದೊರೆತಾಗ ಇದರ ಬಗ್ಗೆ ಮಾತನಾಡಿ. ನಾನು ಇದನ್ನು ಎರಡು ಕಡೆಯ ಸದಸ್ಯರುಗಳಿಗೂ ಹೇಳುತ್ತೇನೆ. ಸರ್ಕಾರದ ಪರವಾಗಿ ಮಾತನಾಡುವ ಮಂತ್ರಿಗಳಿರಬಹುದು. ಆಡಳಿತ ಪಕ್ಷದ ಸದಸ್ಯರು ಯಾರಾದರೂ ಮಾತನಾಡುವಾಗ ವಿರೋಧ ಪಕ್ಷದ ಸದಸ್ಯರು ಬಾಯಿ ಹಾಕುವುದು ಸರಿಯಲ್ಲ. ವಿರೋಧ ಪಕ್ಷದ ಸದಸ್ಯರು ಯಾರಾದರೂ ಮಾತನಾಡುವಾಗ ಆಡಳಿತ ಪಕ್ಷದ ಸದಸ್ಯರುಗಳು ಬಾಯಿ ಹಾಕುವುದು ಸರಿಯಲ್ಲ. ಆಯಾಯ ಸದಸ್ಯರು ಅವರವರ ಅಭಿಪ್ರಾಯಗಳನ್ನು ಹೇಳಲಿ. ಒಂದೇ ಒಂದು ಸಂದರ್ಭದಲ್ಲಿ ಮಧ್ಯೆ ಬಾಯಿ ಹಾಕುವುದಕ್ಕೆ ನಿಮಗೂ ಅವಕಾಶವಿದೆ, ನನಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಅವಕಾಶವಿದೆ. Unparliamentary words ನ್ನು ಯಾರಾದರೂ ಬಳಸಿದರೆ ಆಗ ನಾವು ಮಧ್ಯ ಬಾಯಿ ಹಾಕೋಣ. ದಯಮಾಡಿ ನಾವು ಬಹಳ ವರ್ಷಗಳ ಕಾಲ ಒಂದು standard ನ್ನು maintain ಮಾಡಿದ್ದೇವೆ. ಅದನ್ನು ಮತ್ತೆ ನೆನಪು ಮಾಡಿಕೊಳ್ಳುತ್ತಿದ್ದೇನೆ. ಹಾಗೆಯೇ standard ನ್ನು maintain ಮಾಡಿಕೊಂಡು ಹೋಗೋಣ. ಶ್ರೀ ಕೆ.ಎಸ್. ಈಶ್ವರಪ್ಪನವರು ಮಾತನಾಡುವುದನ್ನು ಮುಂದುವರೆಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಹೇಳುವುದಕ್ಕೆ ಹೊರಟಿದ್ದೇನೆಂದರೆ . . .

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ತಾವು ಏನು ಆದೇಶವನ್ನು ಮಾಡಿದ್ದೀರಿ. ಅದು ಎಲ್ಲರಿಗೂ ಅನ್ವಯವಾಗಲಿ. ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ. ಸದನದ ಕಡತಕ್ಕೆ ಕೆಲವು . . .

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪನವರೆ ತಮಗೆ ಮಾತನಾಡುವುದಕ್ಕೆ ಅವಕಾಶವಿದೆಯಲ್ಲವೇ, ಆಗ ಶ್ರೀ ಕೆ.ಎಸ್. ಈಶ್ವರಪ್ಪ ನವರು ಹೇಳಿರುವುದು ಸರಿಯಿಲ್ಲವೆಂದು ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಸಾಮಾಜಿಕ ವ್ಯವಸ್ಥೆಯಲ್ಲಿ ಆಯಾಯ ಸಂದರ್ಭಗಳಲ್ಲಿ intervene ಆಗಿರುವಂತಹದ್ದು.

**ಸಭಾಪತಿಯವರು:–** ಅದು ಬೇರೆ ಸಂದರ್ಭ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈಗ ಅವರು ಶ್ರೀ ಸಿದ್ದರಾಮಯ್ಯನವರ ಬಗ್ಗೆ ಹೇಳಿದರು. ಅದೇ ರೀತಿ ಶ್ರೀ ಯಡಿಯೂರಪ್ಪನವರು ಇನ್ನೊಂದು ಪಾರ್ಟಿಯನ್ನು ಮಾಡಿ ಹೋಗಿದ್ದರು.

**ಸಭಾಪತಿಯವರು:–** ಶ್ರೀ ವಿ.ಎಸ್.ಉಗ್ರಪ್ಪ ನವರೇ ತಾವು ನಂತರ ಮಾತನಾಡುವುದಿಲ್ಲವೇ? ನಿಮಗೆ ಅವಕಾಶವನ್ನು ಕೊಡುತ್ತೇನೆ. ಎಲ್ಲಾ ಅಂಶಗಳನ್ನು ಬರೆದಿಟ್ಟುಕೊಳ್ಳಿ. ನೀವು ಮಾತನಾಡುವಾಗ ಅವರು ಮಧ್ಯ ಬಾಯಿ ಹಾಕುವುದಕ್ಕೆ ಅವಕಾಶ ಕೊಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ ಈ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರದ ವಿಚಾರವನ್ನು ಇಟ್ಟುಕೊಂಡು ಈ ದೇಶದಲ್ಲಿ ಸಂಘಟನೆಯಲ್ಲಿ ಭಾಗವಹಿಸುವುದೇ ತಪ್ಪೇ? 23 ಜನ ಯುವಕರ ಕಗ್ಗೊಲೆಗಳೇನಾಗಿವೆ, ಇವರೇನಾದರೂ ರಾಷ್ಟ್ರದ್ರೋಹಿ ಚಟುವಟಿಕೆಗಳೇನಾದರೂ ಮಾಡಿದ್ದಾರೆಯೇ, ಗಾಂಜಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಡೆದಿದ್ದಾರೆಯೇ, ಅತ್ಯಾಚಾರವನ್ನೇನಾದಾರೂ ಮಾಡಿದ್ದಾರೆಯೇ, ಕೊಲೆಗಳೇನಾದರೂ ಮಾಡಿದ್ದಾರೆಯೇ? ಈ ದೇಶದಲ್ಲಿ ಇವರೆಲ್ಲಾ "ಭಾರತ ಮಾತಾಕಿ ಜೈ" "ವಂದೇ ಮಾತರಂ" ಎಂದು ಘೋಷಣೆಗಳನ್ನು ಕೂಗಿಕೊಂಡು, ನಾವು ಗೋಹತ್ಯೆಯನ್ನು ತಡೆಯುತ್ತಿದ್ದೇವೆ ಎಂದು ಈ ರೀತಿ ಹೇಳಿರುವುದು ತಪ್ಪೇ. ಯಾರು ಈ ರೀತಿ ಒಂದು ರಾಷ್ಟ್ರಭಕ್ತಿಯ ವಿಚಾರವನ್ನಿಟ್ಟುಕೊಂಡು ಹೊರಟಿದ್ದಾರೆ. ಒಂದು ದೊಡ್ಡ ಸಂಘಟನೆಯಲ್ಲಿ ಇದ್ದಾರೆ ಎಂದಾಕ್ಷಣ ಗೂಂಡಾ ರೂಪದಲ್ಲಿ ಬಂದು ಕಗ್ಗೊಲೆಗಳನ್ನು ಮಾಡುತ್ತಿರುವ ಸಂದರ್ಭದಲ್ಲಿ ಗೂಂಡಾಗಳಿಗೆ ಬಲಿಯಾಗಬೇಕೋ, ಕಗ್ಗೊಲೆಗಳನ್ನು ಮಾಡುವಂತಹ ಪ್ರಯತ್ನವನ್ನು ನಡೆಸುತ್ತಿದ್ದಾರೋ ಅವರಿಗೆ ಬಲಿಯಾಗಬೇಕೋ, ಅದು ಬಿಟ್ಟು ರಾಷ್ಟ್ರಭಕ್ತರನ್ನು ಕೊಲೆ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಇವರನ್ನೇ ಟೀಕೆ ಮಾಡುವಂತಹ ವ್ಯವಸ್ಥೆಯಿದೆಯಲ್ಲವೇ, ಇದನ್ನು ನಾನು ಇವತ್ತಿನ ದಿವಸ ಖಂಡನೆ ಮಾಡುತ್ತಿದ್ದೇನೆ. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ರೀತಿಯ 23 ಕಗ್ಗೊಲೆಗಳಾಗಿರುವುದನ್ನು ನಾನು ಎಂದೂ ಕೇಳಿರಲಿಲ್ಲ. ಕೊಲೆಗಳಾಗಿವೆ, ಕೊಲೆಗಳಾಗಿಲ್ಲವೆಂದು ನಾನು ಹೇಳುವುದಿಲ್ಲ. ಒಂದು ಭಾರತೀಯ ಜನತಾ ಪಾರ್ಟಿ ಮತ್ತು ಆರ್.ಎಸ್.ಎಸ್. ಕಾರ್ಯಕರ್ತರುಗಳ ಕೊಲೆಗಳು ಅಲ್ಲೊಂದು ಇಲ್ಲೊಂದು ಆದಂತಹ ಸಂದರ್ಭದಲ್ಲಿ ತಕ್ಷಣ ಆ ಸರ್ಕಾರಗಳು ಸಕ್ರಿಯಗೊಂಡವು. ಯಾರು ಕೊಲೆಗಳನ್ನು ಮಾಡಿದ್ದಾರೋ, ಆ ಕೊಲೆ ಮಾಡಿದಂತಹ ವ್ಯಕ್ತಿಗಳನ್ನು ಬಂಧಿಸಲಾಯಿತು, ಅದನ್ನು ಬಿಟ್ಟು ಇಲ್ಲಿ ಏನಾಗಿದೆಯೆಂದರೆ ಕೊಲೆಯಾದ ಮರುದಿನ ಖಾಸಗಿ ವ್ಯಕ್ತಿಗಳಿಂದ ಆ ಕೊಲೆಯಾಗಿರುವುದು ಎಂದು ಹೇಳುತ್ತಾರೆ. ಮೊನ್ನೆಯ ದಿವಸ ಮಾನ್ಯ ಗೃಹ ಮಂತ್ರಿಗಳು ಸಂತೋಷ್‌ರವರ ಕೊಲೆಯಾದರೆ screwdriver ಚುಚ್ಚಿ, ಅವನಿಗೆ ಕೊಲೆ ಮಾಡಬೇಕೆನ್ನುವ ಉದ್ದೇಶವಿರಲಿಲ್ಲ. ಆಕಸ್ಮಾತ್ screwdriver ಚುಚ್ಚಿ ಸತ್ತಿದ್ದಾನೆ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಗೃಹ ಮಂತ್ರಿಯವರ ಬಾಯಿಂದ ಬರುವಂತಹ ಮಾತೇ ಇದು. ಮಾನ್ಯ ಗೃಹ ಮಂತ್ರಿಯವರ ಮಗನಿಗೆ ಈ ರೀತಿ ಯಾರಾದರೂ screwdriver ಚುಚ್ಚಿ ಕೊಲೆ ಮಾಡಿದ್ದರೆ, ಈ ರೀತಿಯ ಉತ್ತರವನ್ನು ಮಾನ್ಯ ಗೃಹ ಮಂತ್ರಿಯವರು ಕೊಡುತ್ತಿದ್ದರೆ? ಆರೂವರೆ ಕೋಟಿ ಜನರಿಗೆ ನಾನು ಗೃಹ ಮಂತ್ರಿಯಾಗಿದ್ದೇನೆ ಎಂಬ ಭಾವನೆ ಅವರಿಗೆ ಬರಬಾರದೆ, ಆರ್.ಎಸ್.ಎಸ್., ಬಿ.ಜೆ.ಪಿ., ಎಂದಾಕ್ಷಣ ಅವರು ಏನು ಬೇಕಾದರೂ ಹೇಳಬಹುದೇ, ಯಾವ ಕಾರಣಕ್ಕೂ ಮಾನ್ಯ ಗೃಹ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳ ಮಕ್ಕಳ ಕೊಲೆ ಈ ರೀತಿ ಆಗಬಾರದು. ಯಾವುದೇ ದೇಶದ್ರೋಹಿ ಕೆಲಸವನ್ನು ಮಾಡಬಾರದು. ನನಗೂ ಸಹ ಅಣ್ಣ-ತಮ್ಮಂದಿರು ಇದ್ದ ಹಾಗೆ ಎನ್ನುವ ಭಾವನೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಗೃಹ ಮಂತ್ರಿಗಳಿಗೆ ಎಲ್ಲಿಯವರೆಗೆ ಬರುವುದಿಲ್ಲವೋ, ಅಲ್ಲಿಯವರೆಗೆ ಈ ರೀತಿಯ ವಿಚಿತ್ರವಾದ ಹೇಳಿಕೆಗಳು ಕರ್ನಾಟಕ ರಾಜ್ಯದ ಜನರು ಅಸಹ್ಯಪಡುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಮಂತ್ರಿಗಳು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಈ ಹೇಳಿಕೆಗಳನ್ನು ಜನರು ಒಪ್ಪುವುದಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರು ದಿನಾಂಕ:27-11-2015 ನೇ ಸಾಲಿನಲ್ಲಿ ಇದೇ ಒಂದು ಕಾನೂನು ಸುವ್ಯವಸ್ಥೆ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಆಗಿದ್ದಂತಹ ಮಾನ್ಯ ಗೃಹ ಸಚಿವರು ಒಂದು ಮಾತನ್ನು ಹೇಳಿದ್ದರು. "Communal ಗೂಂಡಾಗಳ ಮೇಲೆ ನಿರಂತರವಾಗಿ ಪ್ರತಿಬಂಧಕ ಕಾಯ್ದೆ ಪ್ರಕರಣಗಳ ದಾಖಲೆಗಳು ಸಿಗುತ್ತಿದೆ ಮತ್ತು ಉಪವಿಭಾಗದ ಎಲ್ಲಾ ಠಾಣಾ ವ್ಯಾಪ್ತಿಯಲ್ಲಿ ಗೂಂಡಾ ಕಾಯ್ದೆಯ ಪಟ್ಟಿಯನ್ನು ತಯಾರಿಸಲಾಗಿದ್ದು ವರದಿ ಪ್ರಕ್ರಿಯೆ ಪ್ರಗತಿಯಲ್ಲಿದೆ." ಇದು 2015ನೇ ಸಾಲಿನಲ್ಲಿ ಕೊಟ್ಟಿರುವಂತಹ ಹೇಳಿಕೆಯಾಗಿದೆ. ಆ ಹೇಳಿಕೆಯ ಪ್ರಕಾರ ಎಷ್ಟು ಜನ ಈ ಒಂದು ಗೂಂಡಾ ಕಾಯ್ದೆ ಪಟ್ಟಿಯನ್ನು ತಯಾರು ಮಾಡಿದ್ದಾರೆ, ಎಷ್ಟು ಜನರನ್ನು ಬಂಧಿಸಲಾಗಿದೆ, ಎಷ್ಟು ಜನರನ್ನು ಜೈಲಿಗೆ ಕಳುಹಿಸಲಾಗಿದೆ ಅಥವಾ ಈ ಕೊಲೆ ಮಾಡುವಂತಹವರಿಗೆ ಬೆಂಬಲವನ್ನು ಈ ಸರ್ಕಾರ ಕೊಡುತ್ತಿದೆಯೇ, ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ ಕೊಲೆಗಡುಕ ಅವನು ಹಿಂದೂ, ಅವನು ಮುಸ್ಲಿಂ, ಅವನು ಕ್ರಿಶ್ಚಿಯನ್ ಎಂದು ನಾನು ಹೇಳುವುದಿಲ್ಲ. ಶ್ರೀ ನರೇಂದ್ರ ಮೋದಿಯವರು ನಾನು ಒಬ್ಬ ಹಿಂದೂ, ಹಿಂದೂ ಧರ್ಮವನ್ನು ಪೂಜಿಸುತ್ತೇನೆ, ಬೇರೆ ಎಲ್ಲಾ ಧರ್ಮವನ್ನು ಗೌರವಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ವಿಚಾರವನ್ನಿಟ್ಟುಕೊಂಡು ನಾನು ಹೊರಟಿಲ್ಲ. ಯಾರೇ ಮುಸಲ್ಮಾನರು, ಕ್ರಿಶ್ಚಿಯನ್‌ನವರು ಕೊಲೆ ಮಾಡಿದರೆ ನಾನು ಒಪ್ಪುವುದಿಲ್ಲ. ಕೊಲೆ ಮಾಡಿದರೆ ಅವನು ಕೊಲೆಗಡುಕ, ಅವನು ಹಿಂದೂ ಆಗುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಇದೇ ಭಾವನೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಗೃಹ ಮಂತ್ರಿಗಳು, ಆ ಮುಸಲ್ಮಾನ ಗೂಂಡಾಗಳು ಯಾರು ಕೊಲೆ ಮಾಡುತ್ತಾರೆಯಲ್ಲವೇ, ಅವರನ್ನು ಕರೆದು ಬಿಗಿ ಮಾಡಿದ್ದರೆ, ನಮ್ಮ ರಾಜ್ಯದ 23 ಜನ ರಾಷ್ಟ್ರಭಕ್ತ ಯುವಕರು ಬದುಕಿರುತ್ತಿದ್ದರಲ್ಲವೇ, ಈ 23 ಜನರ ಸಾವಿಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಗೃಹ ಮಂತ್ರಿಗಳು ಕಾರಣವೆಂದು ನಾನು ಹೇಳಬೇಕೇ, ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಸಮಾಜಘಾತುಕ ಶಕ್ತಿಗಳ ಪಟ್ಟಿಯನ್ನು ತಯಾರಿಸಿ, ಅವರುಗಳ ವಿರುದ್ಧ ರೌಡಿ ಶೀಟನ್ನು ಹೊಸದಾಗಿ ತೆರೆದು ಅವರ ಚಲನವಲನಗಳ ಬಗ್ಗೆ ನಿಗಾ ಇಡಲಾಗುತ್ತಿದೆ. ಇದು 2015ನೇ ಸಾಲಿನ ಉತ್ತರವಾಗಿದ್ದು, ಈ ಉತ್ತರವನ್ನು ತೆಗೆದುಕೊಂಡು ಏನು ಮಾಡಬೇಕಾಗಿದೆ? ಉತ್ತರಕ್ಕಲ್ಲ ನಾನು ಏನು ಪ್ರಸ್ತಾಪ ಮಾಡುವುದು? ರಾಷ್ಟ್ರಭಕ್ತರ ಜೀವವನ್ನು ಉಳಿಸಿ, ರಾಷ್ಟ್ರದ್ರೋಹಿ ಸಂಘಟನೆಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆಯೇ ಹೊರತು ಇಲ್ಲಿ ರಾಜಕಾರಣದ ಬಗ್ಗೆ ನಾನು ಮಾಡುತ್ತಿಲ್ಲ. ರಾಷ್ಟ್ರಭಕ್ತರ ಕಗ್ಗೊಲೆಗಳಾಂತಹ ಸಂದರ್ಭದಲ್ಲಿ ಒಬ್ಬ ಮುಖ್ಯಮಂತ್ರಿಗಳಾದಂತಹ ವ್ಯಕ್ತಿ ಈ ರೀತಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ಬಿಗಿಯಾಗಿ ಹೇಳಿದ್ದರೆ, ನಾನು ಅವರ ಮಾತನ್ನು ಮೆಚ್ಚುತ್ತಿದ್ದೆ. ಅದನ್ನು ಬಿಟ್ಟು ಈ ರೀತಿ ಬೇಕಾಬಿಟ್ಟಿಯಾಗಿ ಆರ್.ಎಸ್.ಎಸ್., ರವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

terrorist ರಿಗೆ ಹೋಲಿಸುತ್ತಾರಲ್ಲವೇ, ಆರ್.ಎಸ್.ಎಸ್., ರವರನ್ನು ತುಳಿಯುತ್ತೇನೆ. ಶ್ರೀಮತಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಆರ್.ಎಸ್.ಎಸ್.,ನ್ನು ಬ್ಯಾನ್ ಮಾಡಿದರು. ಆರ್.ಎಸ್.ಎಸ್., ರವರನ್ನು ಮುಗಿಸುವುದಕ್ಕೆ ಆಗಲಿಲ್ಲ. ಅವರ ತಂದೆ ಶ್ರೀ ನೆಹರೂರವರು ಕಾಶ್ಮೀರದಲ್ಲಿ ಒಂದು ಭಗವತ್ ಧ್ವಜವನ್ನು ಹಾರಿಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದರು. ಆದರೆ ಇವತ್ತಿನ ದಿವಸ ಇಡೀ ದೇಶದ ಹಳ್ಳಿ-ಹಳ್ಳಿಯಲ್ಲಿ "ಭಗವತ್ ಧ್ವಜ ಭಾರತ್ ಮಾತಾಕಿ ಜೈ" "ವಂದೇ ಮಾತರಂ" ಎಂದು ಘೋಷಣೆ ಮಾಡುತ್ತಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೋಟಿ ಕೋಟಿ ಯುವಕರು ಈ ದೇಶದಲ್ಲಿ ಇದ್ದಾರೆ. ಇವರನ್ನು ಯಾರ ಕೈಯಿಂದಲೂ ಆರ್.ಎಸ್.ಎಸ್., ಏನು ಮಾಡುವುದಕ್ಕೆ ಆಗುವುದಿಲ್ಲ. ನಾನು ಸ್ವಾರ್ಥದಿಂದ ಈ ಸಂಘಟನೆಯಲ್ಲಿ ಅವರು ಯಾರು ಇಲ್ಲ. ಅವರೆಲ್ಲಾ ಈ ದೇಶ ಸೇವೆಗೋಸ್ಕರ ಇರುವುದು. ಸಮಾಜ ಸೇವೆಗೆ ಇರುವುದು. ಅಂತಹ ಆರ್.ಎಸ್.ಎಸ್.,ನ ಬಗ್ಗೆ ಹಗುರವಾಗಿ ಮಾತನಾಡಿಕೊಂಡು ರಾಜಕಾರಣಕ್ಕೋಸ್ಕರ ಯಾರೋ ನಾಲ್ಕು ಜನರನ್ನು ತೃಪ್ತಿಪಡಿಸುವುದಕ್ಕೋಸ್ಕರ  ಯಾರೋ ನಾಲ್ಕು ಜನರಿಗೆ ವೋಟ್ ಸಿಗುತ್ತದೆ ಎಂಬ ಭ್ರಮೆಯಲ್ಲಿದ್ದರೆ ನಾನು ಖಂಡಿತವಾಗಿ ಹೇಳುತ್ತೇನೆ. ಆ ಮುಸಲ್ಮಾನರೆಲ್ಲರೂ ಕೂಡ ಇವರ ಭ್ರಮೆಗೆ ಸರಿಯಾದ ಉತ್ತರವನ್ನು ಕೊಡುತ್ತಾರೆ. ಎಲ್ಲಾ ಮುಸಲ್ಮಾನರು ಕೂಡ ಈ ರೀತಿ ಗಲಾಟೆಯಾಗಲಿ, ದೊಂಬಿಯಾಗಲಿ, ಹಿಂದು ರಾಷ್ಟ್ರೀಯ ಸಂಸತ್ ಸಂಘದ ಕಾರ್ಯಕರ್ತರ ಕೊಲೆಯಾಗಲಿ ಎಂದು ಎಲ್ಲರೂ ಒಪ್ಪುತ್ತಾರೆ ಎಂದು ನನಗಂತೂ ಅನಿಸುವುದಿಲ್ಲ. ಇವರ ಧೋರಣೆಯನ್ನು ಎಲ್ಲಾ ರಾಷ್ಟ್ರಭಕ್ತ ಮುಸಲ್ಮಾನರು ಖಂಡನೆ ಮಾಡುತ್ತಾರೆ. ಈ ಅಂಶವನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕಗ್ಗೊಲೆಗಳ ವಿಚಾರ ತುಂಬಾ ಇದೆ. ಕೊಟ್ಟಿರುವ ಸಮಯದಲ್ಲಿ ಇನ್ನೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ಇಷ್ಟು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.  ಆರ್.ಎಸ್.ಎಸ್., terrorist ಸಂಸ್ಥೆಯ ಜೊತೆ ಹೋಲಿಸಬೇಕೆಂದು ಯಾವ ಕಾರಣಕ್ಕೆ, ಯಾರ ಪ್ರೇರಣೆಯಿಂದ ಹೇಳಿದರೋ ಎಂಬುದು ನನಗೆ ಗೊತ್ತಿಲ್ಲ. ಇದರಿಂದ ನಿಮಗೇನಾದರೂ ವೋಟ್ ಬರುತ್ತದೆ ಎಂಬ ಭ್ರಮೆಯಲ್ಲಿ ಇದ್ದರೆ ಖಂಡಿತವಾಗಿ ಅನ್ಯಾಯವಾಗುತ್ತದೆ ಎಂದು ನಾನು ಹೇಳುತ್ತೇನೆ. 23 ಜನ ರಾಷ್ಟ್ರಭಕ್ತ ಯುವಕರ ಕಗ್ಗೊಲೆಗಳಾಗಿದೆಯಲ್ಲವೇ, ಇದಕ್ಕೆ ನಾನೇ ಮುಖ್ಯಮಂತ್ರಿಯಾಗಿ ಬೇಜವಾಬ್ದಾರಿಯಿಂದ ನಡೆದುಕೊಂಡಿರುವುದಕ್ಕೆ ಈ ರೀತಿಯಾಗಿದೆ. ರಾಜ್ಯದ ಜನತೆಯ ಮುಂದೆ ಕ್ಷಮೆ ಕೇಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಈ "ಕಾನೂನು ಖೈದಿಗಳಿಗೆ Walker Stick ನಲ್ಲಿ ಗಾಂಜಾ ಪೂರೈಕೆ" ಒಂದು ಸರ್ಕಾರ ಇದೇ ಎಂದು ನಾವು ಒಪ್ಪಿಕೊಳ್ಳಬೇಕೇ, ಪರಪ್ಪನ ಅಗ್ರಹಾರ ಜೈಲಿನಲ್ಲಿ ಖೈದಿಗಳಿಗೆ ಗಾಂಜಾ ನೀಡಲು ಹೊಸ ವಿಧಾನ, Walker Stick ನಲ್ಲಿ

ಗಾಂಜಾವನ್ನಿಟ್ಟು ಆರೋಪಿಗಳಿಗೆ ಕೊಡಲು ಬಂದವರ ಸೆರೆ, ಸರ್ಕಾರವಿದೆ ಎಂದು ಹೇಳಿದರೆ ಏನಾಗಿದೆ ಎಂದು ಕೇಳುತ್ತಾರೆ. ಅಧಿಕಾರಿಗಳು ಬಂದು ಕುಳಿತಿಲ್ಲವೆಂದರೆ ನಾವು ಬರೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಮಾನ್ಯ ಗೃಹ ಮಂತ್ರಿಗಳು ಎಲ್ಲಿದ್ದಾರೆಂಬುದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧವಿಲ್ಲ. ನಾವು ಕಂಠ ಶೋಷಣೆ ಮಾಡಿಕೊಳ್ಳುವುದಕ್ಕೋಸ್ಕರ ಇಲ್ಲಿಗೆ ಬಂದಿದ್ದೇವೆ. ಇದರಿಂದ ಏನಾದರೂ ಉಪಯೋಗವಾಗುತ್ತದೆಯೇ ಎಂಬುದನ್ನು ನೋಡೋಣ. ಇನ್ನು crime rate ಬಗ್ಗೆ ಮೊನ್ನೆಯ ದಿವಸ ಶ್ರೀ ನರೇಂದ್ರ ಮೋದಿಯವರು ಹೇಳಿದಾಕ್ಷಣ ಮಾನ್ಯ ಗೃಹ ಮಂತ್ರಿಗಳು ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ crime rate ಕಡಿಮೆ ಎಂದು ಉತ್ತರವನ್ನು ಕೊಟ್ಟರು. ನಾನು ಅದಕ್ಕೋಸ್ಕರ ಹೇಳಿದೆ, ಆಯಾ ರಾಜ್ಯಗಳಲ್ಲಿ ಅವರಿಗೆ ಹೇಳುವವರು, ಕೇಳುವವರು ಯಾರು ಇಲ್ಲವೆಂದರೆ ಏನು ಬೇಕಾದರೂ ಮಾಡಬಹುದು. ಕರ್ನಾಟಕ ರಾಜ್ಯದಲ್ಲೂ ಕೂಡ ಆ ರೀತಿಯ ದುಸ್ಥಿತಿಯನ್ನು ತರಬಾರದು. ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರಭಕ್ತರಿಗೆ ಅವಕಾಶವನ್ನು ಕೊಡುತ್ತೇವೆ. ರಾಷ್ಟ್ರದ್ರೋಹಿಗಳನ್ನು ಮಟ್ಟ ಹಾಕುತ್ತೇವೆನ್ನುವ ಭಾವನೆಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕೆನ್ನುವುದನ್ನು ಬಿಟ್ಟರೆ, ಬೇರೆ ವಿಷಯಗಳು ಇಲ್ಲ. ಪೊಲೀಸ್ ಇಲಾಖೆಯವರೆ ಪ್ರತಿ ವರ್ಷ ಎಷ್ಟೆಷ್ಟು crime rate ಜಾಸ್ತಿಯಾಗುತ್ತಿದೆ ಎಂಬ crime report ಅನ್ನು ಕೊಟ್ಟಿದೆ. ನಾನು ವಿವರವಾಗಿ ಹೋಗುವುದಕ್ಕೆ ಇಷ್ಟಪಡುವುದಿಲ್ಲ.

(ಮುಂದು)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ಮಾನ್ಯ ಸದಸ್ಯರಾದ ಶ್ರೀಯುತ ಉಗ್ರಪ್ಪನವರು ಸಲ್ಲಿಸಿರುವ ವರದಿಯ ಪೂರ್ತಿ ಪ್ರತಿ ನನಗೆ ಇನ್ನೂ ದೊರೆತಿಲ್ಲ. ಮಾನ್ಯ ಸದಸ್ಯರು ರಾಜ್ಯ ಸರ್ಕಾರಕ್ಕೆ ಒಂದು ಮಧ್ಯಂತರ ವರದಿಯನ್ನು ನೀಡಿದ್ದಾರೆ. ಅದು ಇನ್ನೂ ಬಹಿರಂಗಗೊಂಡಿಲ್ಲ. ಈ ನೋವು ನಿಮಗೆ ಇದೆ. ಅದು ನನಗೆ ಗೊತ್ತು. ಆ ವರದಿಯಲ್ಲಿ ಈ ರೀತಿಯಾಗಿ ಉಲ್ಲೇಖಿಸಲಾಗಿದೆ. *If this kind of situation continues, it will be very difficult to ensure safety of women and minor children, who constitute 75 percent of the State's population," Mr. Ugrappa said, in a letter addressed to Chief Minister Siddaramiah".* ನಾನು ಮುಖ್ಯಮಂತ್ರಿಗಳ ಸೈದ್ಧಾಂತಿಕ ವ್ಯತ್ಯಾಸ ಎಂದು ಹೇಳಿದಾಕ್ಷಣ ಮಾನ್ಯ ಸದಸ್ಯರಾದ ಶ್ರೀ ಉಗ್ರಪ್ಪನವರು ಎದ್ದು ನಿಂತು ಮಾತನಾಡಿದರು. ಅವರು ಈಗಲಾದರೂ ಎದ್ದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಂತುಕೊಳ್ಳುತ್ತಾರೆ ಎಂದು ಅಂದುಕೊಂಡಿದ್ದೆ. ಆದರೆ ಮಾನ್ಯ ಸಭಾಪತಿಯವರ ನಿರ್ದೇಶನದಂತೆ ಅವರು ಎದ್ದು ನಿಂತುಕೊಳ್ಳಲಿಲ್ಲ ಎಂದು ನಾನು ಭಾವಿಸುತ್ತೇನೆ. ಈ ರೀತಿಯಾದರೂ ಸರಿ ಅವರು ಮರ್ಯಾದೆಯನ್ನು ಉಳಿಸಿಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. *"Deputy Commissioners, senior officials of Women and Child Welfare and Social Welfare departments, Superintendant of Police, and members of the District Legal Services Authority, which award compensation, are totally ignorant of the existence of the Central Victim Compensation Fund Scheme Guidelines, announced in October-2015," he said.* ಏಕೆಂದರೆ ಅವರುಗಳು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಿದ್ದಾರೆ. ಅವರು ಪ್ರಯತ್ನವನ್ನು ನಡೆಸಿಲ್ಲ ಎಂದು ನಾನು ಖಂಡಿತವಾಗಿಯೂ ಸಹ ಹೇಳುವುದಿಲ್ಲ. ಆದರೆ ಅತ್ಯಾಚಾರ ದುರಂತಗಳು ಎಷ್ಟರ ಮಟ್ಟಿಗೆ ಘಟಿಸುತ್ತಿವೆ ಎನ್ನುವಂತಹ ಅಂಶವನ್ನು ನಾವು ಗಮನಿಸಿದಾಗ, ಇದೂ ಸಹ ಅದೇ ಪರಿಸ್ಥಿತಿಯಲ್ಲಿದೆ. ಹಿಂದೂ ಯುವಕರ ಕಗ್ಗೊಲೆಗಳು ಯಾವ ರೀತಿಯಲ್ಲಿ ಆಗುತ್ತಿದೆ, ಅದಕ್ಕೆ ಹೇಳುವವರು-ಕೇಳುವವರು ಈ ಸರ್ಕಾರದಲ್ಲಿ ಯಾರೂ ಇಲ್ಲ. ಇಂತಹ ಘಟನೆಗಳಿಂದ ತಮಗೆ ರಾಜಕೀಯವಾಗಿ ಲಾಭ ಆಗುತ್ತಿದೆ ಎಂದು ಅಂದುಕೊಂಡಿದ್ದಾರೆ. ಇದಕ್ಕೆ ಹೋಲಿಕೆ ಮಾಡಿದಾಗ, ಅತ್ಯಾಚಾರ ಘಟನೆಯ ಪರಿಸ್ಥಿತಿ ಹೇಗೆ ಆಗಿದೆ ಎಂದರೆ ಆರು ವರ್ಷದ ಮಗುವಿನಿಂದ ಹಿಡಿದು ಅರವತ್ತು ವರ್ಷದ ಮುದುಕರನ್ನೂ ಒಳಗೊಂಡಂತೆ ಈ ರಾಜ್ಯದಲ್ಲಿ ಪ್ರತಿನಿತ್ಯ ಅತ್ಯಾಚಾರ ಘಟನೆಗಳು ನಡೆಯುತ್ತಿದೆ. ಅತ್ಯಾಚಾರ ಪ್ರಕರಣಗಳು ಘಟಿಸುತ್ತಿಲ್ಲ ಎನ್ನುವ ಪ್ರಶ್ನೆಯೇ ಇಲ್ಲ. ರಾಜ್ಯದಲ್ಲಿನ ದಲಿತರ ಮೇಲೆ ಎರಡು ದಿನಕ್ಕೊಮ್ಮೆ ಅತ್ಯಾಚಾರ ಹಾಗೂ ಮೂರು ದಿನಕ್ಕೊಮ್ಮೆ ಕೊಲೆ ಪ್ರಕರಣಗಳಾಗುತ್ತಿವೆ. ಹೀಗಾಗಿ ದಲಿತರ ಮೇಲಿನ ದೌರ್ಜನ್ಯ ಹೆಚ್ಚಳವಾಗಿದೆ. ಇಂತಹ ಘಟನೆಗಳಿಗೆ ಸಂಬಂಧಪಟ್ಟಂತೆ ಸ್ವಾಭಾವಿಕವಾಗಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜಾಗೃತ ಸಮಿತಿ ಸಭೆಗಳನ್ನು ನಡೆಸದೇ ನಿರ್ಲಕ್ಷ್ಯವನ್ನು ತೋರಿದ್ದಾರೆ. ಕನಿಷ್ಟವಾಗಿ ವರ್ಷಕ್ಕೆ ಎರಡು ಸಭೆಗಳನ್ನಾದರೂ ನಡೆಸಬೇಕು. ಮಾನ್ಯ ಮುಖ್ಯಮಂತ್ರಿಗಳು ಸದರಿ ಸಭೆಯ ಅಧ್ಯಕ್ಷರು ಎಂದು ಸಮಿತಿಗಳು ಮರೆತುಹೋಗಿವೆ. ಅಧಿಕಾರಿಗಳಿಗೆ ಯಾವ ರೀತಿಯಾದ ಭಯವೂ ಇಲ್ಲ. ಅತ್ಯಾಚಾರ ಪ್ರಕರಣಗಳು ನಡೆಯಲಿ, ಕೊಲೆಗಳು ಆಗಲಿ ಎನ್ನುವ ಮನೋಭಾವನೆ ಅಧಿಕಾರಿಗಳದ್ದು. ಏಕೆಂದರೆ ಮುಖ್ಯಮಂತ್ರಿಗಳಿಗೆ ಆಸಕ್ತಿಯಿಲ್ಲ. ಹೀಗಾಗಿ ಅಧಿಕಾರಿಗಳು ಏನು ಮಾಡುವುದಕ್ಕಾಗುತ್ತದೆ. ಮಾನ್ಯ ಉಗ್ರಪ್ಪನವರ ಅಧ್ಯಕ್ಷತೆಯ ಸಮಿತಿಯು ಸುಮಾರು 40 ಜನ ಸದಸ್ಯರ ತಂಡವು ಇಡೀ ರಾಜ್ಯದ ಪ್ರವಾಸವನ್ನು ಮಾಡಿತು. 40 ಜನರ ಸದಸ್ಯರ ತಂಡವು ತನ್ನ ಎಲ್ಲಾ ಕೆಲಸವನ್ನು ಬಿಟ್ಟು ರಾಜ್ಯದಲ್ಲೆಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಓಡಾಡಿ, ವರದಿಯೊಂದನ್ನು ಸಲ್ಲಿಸಿದರು. ಆದರೆ ಪ್ರಸ್ತುತ ಆ ವರದಿ ಎಲ್ಲಿದೆ? ಅದು ಎಲ್ಲಿದೆ ಎಂಬ ಬಗ್ಗೆ ತನಿಖೆಯನ್ನು ಮಾಡಬೇಕು. ಈ ಮೊದಲು ಶ್ರೀ ಯಂ.ಸಿ.ನಾಣಯ್ಯನವರು ಸಮಿತಿಯ ಅಧ್ಯಕ್ಷರಾಗಿದ್ದರು, ಅವರ ರಾಜೀನಾಮೆಯ ನಂತರ ಶ್ರೀ ಉಗ್ರಪ್ಪನವರು ಸಮಿತಿಯ ಅಧ್ಯಕ್ಷರಾದರು. ಶ್ರೀ ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿಯು ಇಡೀ ರಾಜ್ಯದಲ್ಲಿ ಪ್ರವಾಸವನ್ನು ಕೈಗೊಂಡು ವರದಿಯೊಂದನ್ನು ನೀಡಿತು. ಸದರಿ ವರದಿ ಪ್ರಸ್ತುತ ಎಲ್ಲಿದೆ ಎಂದು ನಾನು ಒತ್ತಾಯಿಸುತ್ತೇನೆ. ಸದರಿ ವರದಿ ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಥವಾ ಗೃಹ ಇಲಾಖೆಗಳಲ್ಲಿದೆಯೇ? ಈ ವಿಚಾರದಲ್ಲಿ ದಯಮಾಡಿ ತನಿಖೆಯನ್ನು ನಡೆಸಿ, ಏಕೆಂದರೆ, ರಾಜ್ಯದ ಬಡ ರೈತನ ತೆರಿಗೆಯ ಮುಖಾಂತರ ಸಂಗ್ರಹಿಸಿದ ಹಣವನ್ನು ಖರ್ಚು ಮಾಡಿದ ಹಣದ ಆಧಾರದ ಮೇಲೆ ಸಮಿತಿಯು ಶ್ರಮವಹಿಸಿ ವರದಿಯನ್ನು ಸಲ್ಲಿಸಿದೆ. ಆದರೆ ಪ್ರಸ್ತುತ ವರದಿ ಎಲ್ಲಿದೆ? ಆ ವರದಿಯಲ್ಲಿನ ಅಂಶಗಳನ್ನು ಜಾರಿಗೊಳಸುವುದು ನಂತರದ ವಿಚಾರವಾಗಿದೆ. ಸದರಿ ವರದಿಯು ಎಲ್ಲಿಯೋ ಧೂಳು ತಿನ್ನುತ್ತಾ ಬಿದ್ದಿದೆ. ಈ ವರದಿಯ ಬಗ್ಗೆ ವಿಚಾರಿಸಿದಾಗ ಗೃಹ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ತಮಗೆ ಗೊತ್ತಿಲ್ಲ ಎಂಬುದಾಗಿ ಹೇಳುತ್ತಾರೆ. ಪರಿಸ್ಥಿತಿ ಹೀಗಿರುವಾಗ ಸದರಿ ವರದಿ ಎಲ್ಲಿದೆ? ಅತ್ಯಾಚಾರ ಪ್ರಕರಣಗಳನ್ನು ನಿಯಂತ್ರಣ ಮಾಡುವುದು ನಂತರದ ವಿಚಾರವಾಗಿದೆ. ಅತ್ಯಾಚಾರವನ್ನು ತಡೆಯಬೇಕೆನ್ನುವ ಉದ್ದೇಶದಿಂದ ಆ ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿಯನ್ನು ನಾನು ನಿಜವಾಗಿಯೂ ಅಭಿನಂದಿಸುತ್ತೇನೆ ಏಕೆಂದರೆ ಸದರಿ ಸಮಿತಿಯ ಪ್ರಮುಖರು ತುಂಬಾ ಓಡಾಡಿ ಕೆಲಸವನ್ನು ಮಾಡಿದ್ದಾರೆ. ಅವರ ಅಕ್ಕ-ತಂಗಿಯರಿಗೆ ಅನ್ಯಾಯವಾದಾಗ ಎಷ್ಟರ ಮಟ್ಟಿಗೆ ನೋವು ಆಗುತ್ತದೆಯೋ ಆ ಪ್ರಕಾರವಾಗಿ ಓಡಾಡಿಕೊಂಡು ಕೆಲಸವನ್ನು ಮಾಡಿದ್ದಾರೆ. ಆ ಸಮಿತಿಯ ವಿಚಾರದಲ್ಲಿ ನಾನು ಖಂಡಿತವಾಗಿಯೂ ಸಹ ರಾಜಕೀಯವನ್ನು ಬೆರೆಸುವುದಕ್ಕೆ ಇಷ್ಟಪಡುವುದಿಲ್ಲ. ಅವರುಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಸದರಿ ಸಮಿತಿಯು ಸಲ್ಲಿಸಿರುವ ವರದಿಯು ನಮ್ಮ ಬಳಿ ಇಲ್ಲವೆನ್ನುವುದಾರೆ ಈಗ ನಾನು ಏನು ಮಾಡುವುದಕ್ಕಾಗುತ್ತದೆ. ಇದು ತುಂಬಾ ದುರಾದೃಷ್ಟಕರವಾದ ಸಂಗತಿಯಾಗಿದೆ. ಮತ್ತೊಂದು ವಿಚಾರವೇನೆಂದರೆ, 'ನಿರ್ಭಯ' ಎಂಬ ಹೆಸರಿನಡಿ ಕೇಂದ್ರ ಸರ್ಕಾರವು ನಿಧಿಯನ್ನು ನೀಡುತ್ತದೆ. ಈ ನಿಧಿಯಲ್ಲಿ ಐದು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ನೀಡಿದೆ. ಈ ರೀತಿಯ ಹಣವನ್ನು ಯಾರು ಅತ್ಯಾಚಾರಕ್ಕೆ ಒಳಗಾಗುತ್ತಾರೆ ಅಂತಹವರ ಸಾಂತ್ವನಕ್ಕಾಗಿ, ಅವರ ಮನೆಯ ಕಷ್ಟ-ಸುಖಗಳಿಗೆ ಸ್ವಲ್ಪ ಅನುಕೂಲವಾಗಲು ವಿನಿಯೋಗ ಮಾಡಬೇಕು. ಸದರಿ ಪರಿಹಾರದ ಮೊತ್ತವನ್ನು ಕನಿಷ್ಟ 10 ಸಾವಿರ ರೂಪಾಯಿಗಳಿಂದ ಗರಿಷ್ಟ ಮೂರು ಲಕ್ಷಗಳವರೆಗೆ ಕೊಡಲು ಅವಕಾಶವಿದೆ. ರಾಜ್ಯ ಸರ್ಕಾರವು ಸದರಿ ಐದು ಕೋಟಿ ರೂಪಾಯಿಗಳ ಅನುದಾನಕ್ಕೆ ಸಂಬಂಧಪಟ್ಟಂತೆ ಬಳಕೆ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಕೆ ಮಾಡದೇ ಇರುವುದರಿಂದ ಅನೇಕ ವರ್ಷಗಳಿಂದ ಪುನ: ಈ ಅನುದಾನವು ರಾಜ್ಯ ಸರ್ಕಾರಕ್ಕೆ ಬಿಡುಗಡೆಗೊಂಡಿಲ್ಲ. ಇದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನಿಸಿದಾಗ ಅತ್ಯಾಚಾರಕ್ಕೆ ಒಳಪಟ್ಟ ಹೆಣ್ಣುಮಕ್ಕಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ಕಾಳಜಿ ಇದೆ ಎನ್ನುವುದು ಗೋಚರಿಸುತ್ತದೆ. ಅತ್ಯಾಚಾರಿಗಳಿಗೆ ಕಾನೂನಿನ ಭಯವಿಲ್ಲ. ಅತ್ಯಾಚಾರಿಗಳನ್ನು ಪೋಲೀಸರು ದಸ್ತಗಿರಿ ಮಾಡುವುದೇ ಕಷ್ಟ. ಒಂದು ವೇಳೆ ದಸ್ತಗಿರಿ ಮಾಡಿ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಪ್ರಭಾವಿ ರಾಜಕಾರಣಿಗಳಿಂದ ಫೋನ್ ಬರುತ್ತದೆ. ಸದರಿ ವ್ಯಕ್ತಿಯು ತನಗೆ ಚುನಾವಣೆ ಸಂದರ್ಭದಲ್ಲಿ ಸಹಾಯ ಮಾಡಿ ಗೆಲ್ಲಿಸಿದ್ದಾನೆ, ಹೀಗಾಗಿ ಅವನನ್ನು ಬಿಟ್ಟು ಬಿಡಿ ಅವನು ಎಲ್ಲಿಯಾದರೂ ಹಾಳಾಗಿ ಹೋಗಲಿ ಎಂಬುದಾಗಿ ಶಿಫಾರಸ್ಸು ಮಾಡುತ್ತಾರೆ. ಒಂದು ವೇಳೆ ಸದರಿ ಸಂದರ್ಭದಲ್ಲಿ ಪೋಲೀಸ್ ಠಾಣೆಯಿಂದ ಬಿಡುಗಡೆಗೊಳಿಸದೇ ನ್ಯಾಯಾಲಯಕ್ಕೆ ಅತ್ಯಾಚಾರಿಯನ್ನು ಕರೆದುಕೊಂಡು ಹೋದರೆ, ಅವರುಗಳು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಹೊರಗೆ ಬರುತ್ತಾರೆ. ಇಷ್ಟೇ ಆಗುವುದು. ಅತ್ಯಾಚಾರ ಚಂದನೋ, ಅತ್ಯಾಚಾರದಲ್ಲಿ ಸಿಗುವ ಸುಖ ಚಂದನೋ ಅಥವಾ ಜೈಲಿನಲ್ಲಿ ನಾಲ್ಕು ದಿನಗಳು ಇದ್ದು ಹೊರಗೆ ಬರುವುದು ಕಷ್ಟನೋ? ಇಂತಹ ಪ್ರಸಂಗಗಳು ಗೊತ್ತಾಗಿ ಹಲವಾರು ಅತ್ಯಾಚಾರ ಪ್ರಕರಣಗಳು ನಮ್ಮ ರಾಜ್ಯದಲ್ಲಿ ಪ್ರತಿ ಬಾರಿ ನಡೆಯುತ್ತಿದೆ.

ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಾವು ಹಿಂದುಳಿದವರ ಮತ್ತು ದಲಿತರ ಪರ ಎಂಬುದಾಗಿ ಹೇಳುತ್ತಿದ್ದಾರೆ. ಇಂತಹ ಮುಖ್ಯ ಮಂತ್ರಿಗಳನ್ನು ನಾನು ಕೇಳಲಿಚ್ಛಿಸುವುದೇನೆಂದರೆ, ದಲಿತರ ಮೇಲಿನ ದೌರ್ಜನ್ಯ ಹೆಚ್ಚಳವಾಗಲು ಕಾರಣವೇನು? ಇಡೀ ರಾಜ್ಯದ ಸಾಧನಾ ಸಮಾವೇಶದಲ್ಲಿ ಹಿಂದುಳಿದವರಿಗೆ, ದಲಿತರಿಗೆ ನಮ್ಮ ಸರ್ಕಾರದ ಅವಧಿಯಲ್ಲಿ ನೀಡಿರುವ ರಕ್ಷಣೆ ಯಾವಾಗಲೂ ನೀಡಿಲ್ಲ ಎಂಬಂತಹ ಮಾತನ್ನು ಹಲವಾರು ಬಾರಿ ಹೇಳಿದ್ದಾರೆ. ಪರಿಶಿಷ್ಟರ ಮೇಲ್ವಿಚಾರಣೆ ಹಾಗೂ ಬಲವರ್ಧನಾ ಸಮಿತಿ ಇದರ ಸಂಚಾಲಕರಾದ ಶ್ರೀಮತಿ ಯಶೋಧಾ ಪಿ. ರವರು ಸರ್ಕಾರವು ದಲಿತರ ಮೇಲಿನ ದೌರ್ಜನ್ಯ ತಡೆಗೆ ಯಾವುದೇ ರೀತಿಯಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಇದಕ್ಕೆ ಮುಂದುವರೆದಂತೆ ಶಿಕ್ಷೆಯ ಪ್ರಮಾಣ ಕಡಿಮೆ ಇರುವುದರಿಂದ ಪ್ರಕರಣಗಳ ಸಂಖ್ಯೆಯು ಹೆಚ್ಚುತ್ತಿದೆ. ಸರ್ಕಾರ ತಪ್ಪನ್ನು ತಿದ್ದುಕೊಳ್ಳದಿದ್ದರೆ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ದಾಖಲಿಸಲಾಗುವುದು ಎಂಬುದಾಗಿಯೂ ಸಹ ಹೇಳಿದ್ದಾರೆ. ದಲಿತರು, ಹಿಂದುಳಿದವರ ಬಗ್ಗೆ ಕಾಳಜಿ ಇರುವಂತಹ ರಾಜ್ಯದಲ್ಲಿ ಅತೀ ಹೆಚ್ಚು ಹಿಂದುಳಿದವರು ಹಾಗೂ ಅತೀ ಹೆಚ್ಚು ದಲಿತರ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳು ನಡೆಯುತ್ತಿದೆ. ಅಂತಹವರುಗಳಿಗೆ ಕೇಂದ್ರ ಸರ್ಕಾರದಿಂದ ಬರಬೇಕಾಗಿರುವಂತಹ 'ನಿರ್ಭಯ ನಿಧಿ'ಯನ್ನು ತರಿಸಲು ಇವರಿಗೆ ಆಸಕ್ತಿ ಇಲ್ಲ. ಇದನ್ನು ಸರ್ಕಾರ ಎಂದು ನಾವು ಕರೆಯಬೇಕೆ? ರಾಜ್ಯದ ಹೆಣ್ಣುಮಕ್ಕಳಿಗೆ, ರಾಷ್ಟ್ರಭಕ್ತರು, ಹಿಂದುಳಿದವರು ಮತ್ತು ದಲಿತರುಗಳಿಗೆ ಯಾವುದೇ ರೀತಿಯಾದ ರಕ್ಷಣೆ ಇಲ್ಲ. ಇಂತಹದನ್ನು ನಾವು ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದುಕೊಳ್ಳಬೇಕೆ? ಇದನ್ನು ಸರ್ಕಾರ ಹಾಗೂ ಇವರನ್ನು ಮುಖ್ಯಮಂತ್ರಿಗಳು ಎಂದು ಕರೆಯುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಈ ಮಾತನ್ನು ನಾನು ನೊಂದು ಹೇಳುತ್ತಿದ್ದೇನೆ. ಸದರಿಯವರು ರಾಜ್ಯದ ಮುಖ್ಯಮಂತ್ರಿಗಳಾಗುತ್ತಾರೆ ಎಂದು ನಮ್ಮ ರಾಜ್ಯದ ದಲಿತರು, ಹಿಂದುಳಿದವರು ಬಹಳವಾಗಿ ಸಂತೋಷ ಪಟ್ಟಿದ್ದರು. 20-25 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿ ಬಹಳವಾಗಿ ಒದ್ದಾಡಿದವರು ಮುಖ್ಯಮಂತ್ರಿಗಳಾಗುತ್ತಾರೆ, ಅವರು ದಲಿತರಿಗೆ, ಹಿಂದುಳಿದವರಿಗೆ ಆದ ಅನ್ಯಾಯವನ್ನು ತಡೆಯುತ್ತಾರೆ ಎಂಬುದಾಗಿ ಭಾವಿಸಿದ್ದರು. ಅವರುಗಳಿಗೆ ಸುಖ, ಸಮೃದ್ಧಿಯನ್ನು ನೀಡುವುದರ ಜೊತೆಗೆ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದು, ಮಠ-ಮಾನ್ಯಗಳಿಗೆ ಹಣಕಾಸಿನ ನೆರವನ್ನು ನೀಡುವುದು ಇವುಗಳೆಲ್ಲವೂ ನಂತರದ ವಿಚಾರಗಳಾಗಿವೆ. ದಲಿತರಲ್ಲಿ, ಹಿಂದುಳಿದವರಲ್ಲಿ ಯಾರು ಮಹಾಪುರುಷರು ಇದ್ದಾರೆ, ಉದಾಹರಣೆಗೆ ಸಂಗೊಳ್ಳಿ ರಾಯಣ್ಣ, ವಾಲ್ಮೀಕಿ, ಅಂಬೇಡ್ಕರ್, ಕನಕದಾಸ ಇವರುಗಳೆಲ್ಲರಿಗೂ ಗೌರವವನ್ನು ನೀಡುವುದೂ ಸಹ ನಂತರದ ಸಂಗತಿಯಾಗಿದೆ. ಇಂತಹ ಸಮಾಜದಲ್ಲಿ ಹುಟ್ಟಿದ ಹಿಂದುಳಿದ, ದಲಿತ ಹೆಣ್ಣುಮಕ್ಕಳಿಗೆ ಸರ್ಕಾರವು ರಕ್ಷಣೆಯನ್ನು ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದಾದರೆ ಇಂತಹ ಮುಖ್ಯಮಂತ್ರಿಗಳನ್ನು ನಾವು ಕರ್ನಾಟಕ ರಾಜ್ಯದಲ್ಲಿ ಎಂದಿಗೂ ಸಹ ನೋಡಿಲ್ಲ. ಈ ವಿಚಾರವನ್ನು ನಾನು ಅಂಕಿ-ಅಂಶಗಳ ಸಮೇತವಾಗಿ ಹೇಳುತ್ತಿದ್ದೇನೆ. ಈಗಲೂ ಸಹ ನಾನು ಹೇಳಲಿಚ್ಛಿಸುವುದೇನೆಂದರೆ, ಈ ರೀತಿಯ 2014 ನೇ ಸಾಲಿನ ಸಂದರ್ಭದಲ್ಲಿ "ಅತ್ಯಾಚಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ - ಸಿ.ಎಂ." "ಗೂಂಡಾ ಕಾಯ್ದೆಯಡಿ ಕೇಸ್" ಎಂಬುದಾಗಿ ಹೇಳಿದ್ದರು. ಮೈಸೂರು ನಗರದಲ್ಲಿ ಮಾತನಾಡಿದಂತಹ ತೋಟಗಾರಿಕಾ ಸಚಿವರಾದ ಶ್ರೀ ಶಾಮನೂರು ಶಿವಶಂಕರಪ್ಪನವರು "ರಾಜ್ಯದ ಹೆಣ್ಣುಮಕ್ಕಳು ಮತ್ತು ಮಹಿಳೆಯವರ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇದನ್ನು ನಿಯಂತ್ರಿಸಲು ಅತ್ಯಾಚಾರಿಗಳಿಗೆ ಕಂಡಲ್ಲಿ ಗುಂಡಿಕ್ಕಬೇಕು" ಎಂಬುದಾಗಿ ಆಕ್ರೋಶವನ್ನು ವ್ಯಕ್ತಪಡಿಸಿದರು. ಕೇವಲ ಪುಕ್ಕಟೆಯಾಗಿ ಆಕ್ರೋಶವನ್ನು ವ್ಯಕ್ತಪಡಿಸಿದರೆ, ಯಾವುದೇ ರೀತಿಯಾದ ಲಾಭವಾಗುವುದಿಲ್ಲ. ಪುಕ್ಕಟೆ ಮುಖ್ಯಮಂತ್ರಿ, ಪುಕ್ಕಟೆ ಗೃಹಮಂತ್ರಿ ಹಾಗೂ ಪುಕ್ಕಟೆಯಾಗಿ ಆಕ್ರೋಶವನ್ನು ವ್ಯಕ್ತಪಡಿಸಿದ ಮಂತ್ರಿಗಳು. ಇದಕ್ಕಿಂತ ಹೆಚ್ಚಾಗಿ ಏನನ್ನು ಮಾಡುತ್ತೀರಿ? ಮಧ್ಯಪ್ರದೇಶ ರಾಜ್ಯದಲ್ಲಿ ಯಾರು ಅತ್ಯಾಚಾರವನ್ನು ಎಸಗುತ್ತಾರೋ, ಅವರಿಗೆ ಆಜೀವ ಸಜೆಯನ್ನು ವಿಧಿಸುತ್ತಾರೆ. ಈ ರೀತಿಯ ಕಠಿಣ ಶಿಕ್ಷೆಯನ್ನು ನಮ್ಮ ರಾಜ್ಯದಲ್ಲಿ ವಿಧಿಸಲು ನಿಮಗೆ ಏಕೆ ಆಗುತ್ತಿಲ್ಲ. ಅತ್ಯಾಚಾರ ಎಸಗುವವರು ನಿಮ್ಮ ಅಣ್ಣ-ತಮ್ಮಂದಿರೇ? ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಕ್ಕಳು ಅನಾಥರೇ? ಚುನಾವಣೆಗೆ ಯಾರು ಬೇಕಾದರೂ ಸಹಾಯ ಮಾಡಬಹುದು ರಾಷ್ಟ್ರ ದ್ರೋಹಿಗಳಿಗೆ, ಅತ್ಯಾಚಾರಿಗಳಿಗೆ ಕರ್ನಾಟಕ ರಾಜ್ಯದಲ್ಲಿ ಒಂದು ನೆಲೆ ಸಿಗುತ್ತಿದೆ, ಇದನ್ನು ತಮ್ಮ ಸ್ವರ್ಗ ಎಂದುಕೊಂಡಿದ್ದಾರೆ, ಅಂತಹವರುಗಳನ್ನು ಬಲಿ ಹಾಕುತ್ತೇನೆ ಎನ್ನುವಂತಹ ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳ ಅಥವಾ ಗೃಹ ಮಂತ್ರಿಗಳ ಬಾಯಿಯಲ್ಲಿ ಬಂದಿದ್ದರೆ ಕರ್ನಾಟಕ ರಾಜ್ಯದಲ್ಲಿ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಾದ ಪರಿಸ್ಥಿತಿಗಳು ಉಂಟಾಗುತ್ತಿರಲಿಲ್ಲ. ಈ ಕಾರಣಕ್ಕಾಗಿ ನಾನು ಹೇಳುವುದೇನೆಂದರೆ ಸುಖಾಸುಮ್ಮನೆ ಈ ರೀತಿಯಾಗಿ ಹೇಳಿಕೆಗಳನ್ನು ನೀಡಿ ಉತ್ತರ ಪೌರುಷ ತೋರ್ಪಡಿಸುವುದು ಬೇಡ. ಇಂತಹ ಹೇಳಿಕೆಗಳಿಂದ ಯಾವುದೇ ರೀತಿಯಾದ ಲಾಭವಿಲ್ಲ. ಇದನ್ನು ಬಿಟ್ಟು ತಪ್ಪಿತಸ್ಥರ ವಿರುದ್ಧ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳುವಂತಹ ಪ್ರಯತ್ನಗಳನ್ನು ನಡೆಸಿದರೆ ಆಗ ನಿಜವಾಗಿಯೂ ಕೂಡ ನೀವು ಮಾಡುತ್ತಿರುವಂಹ ಕಾರ್ಯಗಳು ಮೆಚ್ಚುಗೆಗೆ ಅರ್ಹವಾದುದು ಎಂದು ನಾನು ಭಾವಿಸುತ್ತೇನೆ.

(ಮುಂದು)

(022) 3.50/06-02-2018/ CS/RN

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-

ಇವತ್ತಿನ ಬೆಳಗ್ಗೆಯ ಪತ್ರಿಕೆಯಲ್ಲಿ "ಹುಬ್ಬಳ್ಳಿಯಲ್ಲಿ ವಕೀಲನ ಮೇಲೆ ಮಾರಕಾಸ್ತ್ರಗಳಿಂದ ದಾಳಿ, ಬೆಚ್ಚಿದ ಹುಬ್ಬಳ್ಳಿಯ ವಕೀಲ ವೃಂದ" ನಾವು ಸುಮ್ಮನೆ ಸದನದಲ್ಲಿ ಓದುವುದು, ಇರುವವರು ಸುಮ್ಮನೆ ಕೇಳುವುದು, ಯಾವ ಅಧಿಕಾರಿಗಳಿಗೂ ಕಿವಿ ಇಲ್ಲ, ಗೃಹಮಂತ್ರಿಗಳು ಸಹ ಸದನದಲ್ಲಿ ಇಲ್ಲ. ಮುಖ್ಯಮಂತ್ರಿಗಳಿಂದ ಉಡಾಫೆಯ ಉತ್ತರ. ಇದು ಕರ್ನಾಟಕ ರಾಜ್ಯದ ಪರಿಸ್ಥಿತಿ, ಇದನ್ನೆಲ್ಲ ಯಾರಿಗೆ ಹೇಳೋಣ. ನಾವಿಲ್ಲಿ ಸುಮ್ಮನೆ ಕಂಠ ಶೋಷಣೆ ಮಾಡಿಕೊಂಡು ಹೋಗುವುದು ನಡೆಯುತ್ತಿದೆ. ಪಾಪ ವಿಜಯಲಕ್ಷ್ಮಿ ಎನ್ನುವ ಒಬ್ಬ ಹೆಣ್ಣುಮಗಳು. . .

**ಶ್ರೀ ಹೆಚ್.ಎಂ.ರೇವಣ್ಣ(ಸಾರಿಗೆ ಸಚಿವರು):-** ಮುತ್ತಿನ ವಿಜಯಲಕ್ಷ್ಮಿಯೇ?

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಹೆಚ್.ಎಂ.ರೇವಣ್ಣನವರಿಗೆ ಇಂತಹ ವಿಚಾರಗಳೇ ನೆನಪಿಗೆ ಬರುವುದು, ಕಾಂಗ್ರೆಸ್ಸಿಗರ ಕತೆಯೇ ಹೀಗೆ ನಾನು ಹೇಳುತ್ತಿರುವುದು ವಿಜಯಲಕ್ಷ್ಮಿ ಎನ್ನುವ ಹೆಣ್ಣುಮಗಳು ಸಚಿವ ಆಂಜನೇಯನವರ ಮನೆಯಲ್ಲಿ ನಡೆಯುತ್ತಿದ್ದ ಲಂಚ ಪ್ರಕರಣವನ್ನು ಸ್ಟಿಂಗ್ ಆಪರೇಷನ್ ಮೂಲಕ ಹೊರಗೆಳೆದು ಸುವರ್ಣ ನ್ಯೂಸ್ ಪ್ರಸಾರವಾಗುತ್ತಿದ್ದ ಹಾಗೆ ಅವರಿಗೆ ಬೆದರಿಕೆ ಕರೆಗಳು ಬಂದು, ಆ ಬಗ್ಗೆ ಅವರು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ. ಸುದ್ದಿ ವಾಹಿನಿಯಲ್ಲಿ ಪ್ರಸಾರ ಆಗುತ್ತಿದ್ದ ಸುದ್ದಿಯನ್ನು ಕೂಡಲೇ ನಿಲ್ಲಿಸುವಂತೆ ಬೆಳಗ್ಗೆಯಿಂದಲೇ ಅವರಿಗೆ ಬೆದರಿಕೆ ಕರೆಗಳು ಬರುತ್ತಿವೆ. ಬಾಗಲಕೋಟೆ, ಮಾಲೂರು, ಕೋಲಾರ ಸೇರಿದಂತೆ ಇನ್ನೂ ಅನೇಕ ಕಡೆಗಳಿಂದ ಅವರಿಗೆ ಬೆದರಿಕೆ ಕರೆಗಳನ್ನು ಕಾಯಿಲ್ ಬೂತ್ ಮೂಲಕ ಮಾಡಿ, ಅವ್ಯಾಚ ಶಬ್ದಗಳಿಂದ ಅವರನ್ನು ನಿಂದಿಸಿದ್ದಾರೆ. ಸುದ್ದಿಯನ್ನು ಪ್ರಕಟಿಸಿದಂತೆ ವಾಹಿನಿಯ ಮೇಲೆ ಒತ್ತಡ ಹೇರಲಾಗಿದೆ. ಹಾಗೂ ಜೀವ ಬೆದರಿಕೆಯನ್ನು ಹಾಕಲಾಗಿದೆ. ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಸಕ್ತಿಯ ವಿಚಾರಗಳ ಬಗ್ಗೆ, ಮಾನ್ಯ ರೇವಣ್ಣನವರ ಆಸಕ್ತಿಯೇ ಬೇರೆ. ನಮ್ಮ ಅಕ್ಕತಂಗಿಯವರಿಗೆ ಈ ರೀತಿ ಅನ್ಯಾಯ ಆಗುತ್ತಿರುವ ಕಾಲದಲ್ಲಿ ಸರ್ಕಾರ ತನ್ನ ಗಮನವನ್ನು ನೀಡಬೇಕಾಗಿತ್ತು. ಮಾನ್ಯ ಹೆಚ್.ಎಂ. ರೇವಣ್ಣನವರು ಭಗವಂತನ ದಯೆಯಿಂದ ಕನಕದಾಸರ ಆಶೀರ್ವಾದದಿಂದ ಮಂತ್ರಿಗಳಾಗಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-ಮಾನ್ಯ ಸಭಾಪತಿಯವರೆ,** ಜನಾದೇಶದಂತೆ ಆಗಿದೆ. ನೀವು ಜಯಲಕ್ಷ್ಮಿ ಎನ್ನುತ್ತಿದ್ದರಲ್ಲ, ಅದಕ್ಕೆ ಜ್ಞಾಪಿಸಿದೆ. ನಿಮ್ಮ ವಿಚಾರಗಳನ್ನು ನೀವು ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಲ್ಲಿ ನಾನು ಪ್ರಸ್ತಾಪಿಸಿತ್ತಿರುವ ವಿಚಾರದ ಬಗ್ಗೆ, ಅರ್ಥಗಂಟೆಯಿಂದ ಕಂಠ ಶೋಷಣೆ ಮಾಡಿಕೊಳ್ಳುತ್ತಿರುವ ವಿಚಾರದಲ್ಲಿ ಅವರು ಎದ್ದೇಳಲಿಲ್ಲ, ಆದರೆ 'ವಿಜಯಲಕ್ಷ್ಮಿ' ಎಂದ ಕೂಡಲೇ ಎದ್ದುಬಿಟ್ಟರು. ಕಾಂಗ್ರೆಸ್ಸಿನವರಿಗೆ ಯಾವುದರಲ್ಲಿ ಖುಷಿ ಎನ್ನುವ ವಿಚಾರ ಅವರ ಮಾತನಿಂದಲೇ ಅರ್ಥವಾಗುತ್ತದೆ. ಸಭಾನಾಯಕರು ಹಿರಿಯರು ಅವರ ಬಗ್ಗೆ ನಮಗೆ ಗೌರವ ಇದೆ. ಆದರೆ ಇಲ್ಲಿ ಏನೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ನಾವು ಗಮನ ಹರಿಸಬೇಕಾಗುತ್ತದೆ. ನಾನು ಮಾನ್ಯ ಉಗ್ರಪ್ಪನವರಿಗೂ ಸಹ ಅಭಿನಂದನೆಯನ್ನು ಸಲ್ಲಿಸಿದೆನು, ಏಕೆಂದರೆ ಎಷ್ಟು ಜನ ಅಧಿಕಾರಿಗಳಿಗೆ ಸಮಿತಿ ಸಭೆಗಳಲ್ಲಿ ಲೆಫ್ಟ್-ರೈಟ್ ತೆಗೆದುಕೊಂಡು ನೀರಿಳಿಸಿ, ಅವರ ನಿಷ್ಠೂರಕ್ಕೆ ಒಳಗಾದರು? ಏಕೆಂದರೆ ತನ್ನ ಅಕ್ಕ-ತಂಗಿಯರಿಗೆ, ಹಿಂದುಳಿದವರಿಗೆ ದಲಿತರಿಗೆ ಅನ್ಯಾಯ ಆಗುತ್ತಿದೆ ಎಂದು ಅವರಿಗೆ ಅನ್ನಿಸಿತ್ತು. ಅವರು ಇನ್ನು ರಾಜಕಾರಣ ಮಾಡಿಕೊಂಡೇ ಇದ್ದಿದ್ದರೆ ಮಾನ್ಯ ಹೆಚ್.ಎಂ.ರೇವಣ್ಣನವರಿಗಿಂತ ಮೊದಲು ಅವರೇ ಸಚಿವರಾಗುತ್ತಿದ್ದರೆನೋ ನನಗೆ ಗೊತ್ತಿಲ್ಲ. ಆದರೆ ಅವರು ಅತ್ಯಾಚಾರ ತಡೆ ಸಮಿತಿಯ ಸಲುವಾಗಿ ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿದ್ದಾರೆ. ಅವರ ಕೆಲಸವನ್ನು ನಾನು ಮೆಚ್ಚುತ್ತೇನೆ. ಎಲ್ಲಾ ವಿಚಾರಗಳಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಬಾರದು, ಅದನ್ನು ನಾನು ಕೂಡ ಇಷ್ಟಪಡುವುದಿಲ್ಲ. ಆದರೆ ಇಲ್ಲಿ ಮಾನ್ಯ ಉಗ್ರಪ್ಪನವರ ನೇತೃತ್ವದ ಸಮಿತಿ ನೀಡಿದ ವರದಿಯೇ ಕಳ್ಳತನ ಆದರೆ ಅದನ್ನು ಎಲ್ಲಿ ಹುಡುಕುವುದು? ಈಗ ಮಾನ್ಯ ಉಗ್ರಪ್ಪನವರು ನೀಡಿರುವ ತನಿಖಾ ವರದಿ ಎಲ್ಲಿದೆ ಎನ್ನುವುದನ್ನು ತನಿಖೆ ಮಾಡುವ ಸಲುವಾಗಿ ಮತ್ತೊಂದು ತನಿಖಾ ಸಮಿತಿಯನ್ನು ನೇಮಕ ಮಾಡೋಣವೇ?

**ಶ್ರೀ ಎಂ.ಆರ್.ಸೀತಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ವರದಿ, ಕಳ್ಳತನ ಆಗಿದೆ ಎಂದು ಯಾರು ಹೇಳಿದರು?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಯಾರಾದರೂ ಏಕೆ ಹೇಳಬೇಕು? ಸಭಾನಾಯಕರಿಗೆ ಆ ವಿಚಾರ ಗೊತ್ತಿಲ್ಲ, ಅವರು ಹೀಗೆ ಎಲ್ಲವನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಿ ಸಿಕ್ಕಿ ಹಾಕಿಕೊಳ್ಳುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಏಕೆ ಚರ್ಚೆಯ ಮಧ್ಯೆ ಪ್ರವೇಶ ಮಾಡಿದೆ ಎಂದರೆ ವರದಿ ಮಿಸ್ಸಿಂಗ್ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅವರು ಆ ರೀತಿ ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ ಈ ವರದಿಯನ್ನು ಮುಖ್ಯಮಂತ್ರಿಗಳಿಗೆ ಸಮಿತಿಯವರು ಸಲ್ಲಿಸಿದ್ದಾರೆ. ಅದು ಸರ್ಕಾರದ ಗಮನದಲ್ಲಿದೆ. ಅದನ್ನು ಗೃಹಸಚಿವರಿಗೆ ನೀಡಿರುತ್ತಾರೆ. ನಾಳೆ ಗೃಹಸಚಿವರು ಸದನಕ್ಕೆ ಬಂದಾಗ ಆ ಬಗ್ಗೆ ಕೂಡ ಬೆಳಕನ್ನು ಚೆಲ್ಲುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ವರದಿಯನ್ನು 2015ನೇ ಇಸವಿಯಲ್ಲಿಯೇ ಸಲ್ಲಿಸಲಾಗಿದೆ. ಈಗಲೂ ಸಹ ಮತ್ತೊಂದು ವರದಿಯನ್ನು ಸರ್ಕಾರಕ್ಕೆ ನೀಡಲಾಗಿದೆ, ಮುಖ್ಯಮಂತ್ರಿಗಳ ಬಳಿ ಇರಬಹುದು, ಗೃಹಸಚಿವರು ಉತ್ತರ ಕೊಡುತ್ತಾರೆ ಇದೆಲ್ಲವೂ ನನಗೆ ಗೊತ್ತಿದೆ. ಅವರು ಎಲ್ಲಿಗೂ ಹೋಗುವುದಿಲ್ಲ. ಆದರೆ ನಾನು ಕೇಳುವುದು ಏನೆಂದರೆ, ಕಳೆದ 2 ವರ್ಷಗಳಿಂದಲೂ ಈ ಅತ್ಯಾಚಾರ ತಡೆ ಸಮಿತಿಯ ವರದಿ ಧೂಳು ತಿನ್ನುತ್ತಿದೆ. ಆ ವರದಿಯನ್ನು ಸರ್ಕಾರ ಇಂಪ್ಲಿಮೆಂಟ್ ಮಾಡಿದ್ದರೆ ಎಷ್ಟೋ ನಮ್ಮ ಅಕ್ಕ ತಂಗಿಯರು ಅತ್ಯಾಚಾರಗಳು ನಿಲ್ಲುತ್ತಿದ್ದವು. ಯಾವುದೇ ಕ್ರಮ ಆಗಿದಿದ್ದ ಮೇಲೆ ಸಮಿತಿ ವರದಿಯನ್ನು ಏಕೆ ನೀಡಬೇಕಿತ್ತು? ನನಗೆ ಬಂದಿರುವ ಮಾಹಿತಿಯ ಪ್ರಕಾರ 2017ರ ಜನವರಿಯಿಂದ ಆ ಸಮಿತಿಯಲ್ಲಿರುವ 40 ಜನರಿಗೂ ಸಹ ಯಾವುದೇ ಸಂಭಾವನೆಯನ್ನು ನೀಡಿರುವುದಿಲ್ಲ ಎನ್ನುವ ಮಾಹಿತಿ ಬಂದಿದೆ. ಅದು ಸತ್ಯವೋ, ಸುಳ್ಳೋ ಎನ್ನುವುದು ನನಗೆ ಗೊತ್ತಿಲ್ಲ. ಇದು ಈ ರಾಜ್ಯದಲ್ಲಿರುವ ಹೆಣ್ಣುಮಕ್ಕಳ ಬಗ್ಗೆ, ಅತ್ಯಾಚಾರಕ್ಕೆ ಒಳಗಾದವರ ಬಗ್ಗೆ ಈ ಸರ್ಕಾರಕ್ಕಿರುವ ಧೋರಣೆ ಸರಿಯಿಲ್ಲ. ಸಭಾನಾಯಕರಾದರೂ ಸಹ ಈ ಬಗ್ಗೆ ಗಮನ ಹರಿಸಬೇಕು. ನಾನು ಗೃಹಸಚಿವರನ್ನು ಈ ಬಗ್ಗೆ ಕೇಳುವುದಿಲ್ಲ. ಏಕೆಂದರೆ ನನಗೆ ಅವರ ಮೇಲೆ ನಂಬಿಕೆ ಇಲ್ಲ. ಏಕೆಂದರೆ ಇಷ್ಟಮಟ್ಟಿಗೆ ಹಿಂದೂಗಳ ಕಗ್ಗೊಲೆ ಆದರೂ ಸಹ ಗೃಹಸಚಿವರು ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ. ಇದರ ಜೊತೆಗೆ ಸ್ಕ್ರೂ ಡ್ರೈವರ್‌ನಿಂದ ಚುಚ್ಚಿ ಸಾಯಿಸಿದ್ದಾರೆ ಎನ್ನುವ ಸುಳ್ಳನ್ನು ಕೂಡ ಹೇಳುತ್ತಾರೆ. ಹಾಗಾಗಿ ಗೃಹಸಚಿವರ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ. ಆದ್ದರಿಂದ ಈ ತಿಂಗಳ 28ರ ತನಕ ಸದನ ನಡೆಯುವ ಹಿನ್ನಲೆಯಲ್ಲಿ ಸಭಾನಾಯಕರಾದರೂ ಸಹ ವರದಿ ಬಗ್ಗೆ ಮಾಹಿತಿ ನೀಡಬೇಕು. ಇಂಪ್ಲಿಮೆಂಟ್ ಮಾಡುವುದು ನಂತರದ ವಿಚಾರ. ಆ ವರದಿ ಸಿಕ್ಕಿದೆ ಎಂದರೆ ಒಂದು ರೀತಿಯ ಸಮಧಾನ ನನಗಾಗುತ್ತದೆ. ಇದನ್ನಾದರೂ ಮಾಡುವಿರಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ವರದಿ ಮಿಸ್ಸಿಂಗ್ ಎಂದ ಕಾರಣ, ವರದಿ ಎಲ್ಲೂ ಕಳೆದಿಲ್ಲ ಎನ್ನುವುದನ್ನು ಹೇಳಿದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದಲ್ಲಿ ಬಹಳಷ್ಟು ಜನ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ. ಆ ಪ್ರಾಮಾಣಿಕ ಅಧಿಕಾರಿಗಳು ಮಾಡಿದಂತಹ ಪ್ರಾಮಾಣಿಕ ಪ್ರಯತ್ನಗಳಿಗೆ ಈ ಸರ್ಕಾರ ಬೆಂಬಲ ನೀಡುತ್ತದೆಯೇ? ಮಂಡ್ಯ ಜಿಲ್ಲೆಯ ಡಿವೈಎಸ್‌ಪಿಯವರಾದ ಶ್ರೀಮತಿ ಸವಿತಾ ಹುಗಾರ್ ಅವರು ಮರಳಿನ ಲಾರಿಯನ್ನು ಹಿಡಿಯಲು ಹೋದರೆ ಅವರ ಮೇಲೆಯೇ ಲಾರಿ ಹತ್ತಿಸುವ ಪ್ರಯತ್ನವನ್ನು ಮಾಡಲಾಯಿತು. ಪಾಂಡವಪುರದ ಅಸಿಸ್ಟೆಂಟ್ ಕಮೀಷನರ್ ಶ್ರೀ ಹೆಚ್.ಎಲ್ ನಾಗರಾಜು ಮತ್ತು ಸಿಬ್ಬಂದಿ, ಹಾಸನ ಜಿಲ್ಲೆಯ ಇನ್ಸ್‌ಪೆಕ್ಟರ್ ಶ್ರೀ ಮಂಜೇಗೌಡ ಮತ್ತು ಸಿಬ್ಬಂದಿ, ತುಮಕೂರಿನ ಜಿಲ್ಲಾಧಿಕಾರಿಗಳಾದ ಶ್ರೀ ಸತ್ಯಮೂರ್ತಿ, ಉಡುಪಿಯ ಡಿಸಿ ಮತ್ತು ಎಸಿ ಇಬ್ಬರೂ ಸಹ ಹೆಣ್ಣುಮಕ್ಕಳು ರಾತ್ರಿ 12 ಗಂಟೆಯಲ್ಲಿ ದಂಧೆಕೋರರನ್ನು ಹಿಡಿಯಲು ಹೋದಾಗ ದಂಧೆಕೋರರು ಅವರ ಮೇಲೆ ಹಲ್ಲೆಯನ್ನು ಮಾಡುತ್ತಾರೆ. ಇವೆಲ್ಲ ನಡೆದಿಲ್ಲ ಎಂದು ಸರ್ಕಾರ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಆ ಡಿಸಿ ಮತ್ತು ಎಸಿ ಯವರು ಉಡುಪಿಯ ಪೋಲೀಸ್ ಠಾಣೆಯಲ್ಲಿ ನಮ್ಮ ಮೇಲೆ ಲೂಟಿಕೋರರು ಹಲ್ಲೆ ನಡೆಸಿದರು ಎಂದು ದೂರನ್ನು ದಾಖಲಿಸಿದ್ದಾರೆ. ಇವತ್ತಿನವರೆಗೂ ಆ ವಿಚಾರದ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ? ಈ ರಾಜ್ಯದಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೂ ಸಹ ರಕ್ಷಣೆ ಇಲ್ಲ. ಇದನ್ನು ಸರ್ಕಾರ ಎಂದು ಕರೆಯಬೇಕೆ? ಕರ್ನಾಟಕ ಸರ್ಕಾರ ಗೂಂಡಾ ಸರ್ಕಾರ. ಇಲ್ಲಿ ಹಲ್ಲೆಕೋರರಿಗೆ ರಕ್ಷಣೆ, ರಾಷ್ಟ್ರದ್ರೋಹಿಗಳಿಗೆ ರಕ್ಷಣೆ, ಅತ್ಯಾಚಾರಿಗಳಿಗೆ ರಕ್ಷಣೆ, ಇಂತಹ ಗೂಂಡಾ ರಾಜ್ಯ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಬಂದಿಲ್ಲ. ಮುಂದೆ ಸಹ ಬರಬಾರದು ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಒಂದು ವಿಚಾರ, ನನಗೆ ಸಮಯದ ಒತ್ತಡ ಇದೆ. ಹಾಗಾಗಿ ಮುಂದೆ ಮಾತನಾಡುವವರೆಲ್ಲರೂ 10-15 ನಿಮಿಷಗಳಲ್ಲಿ ಮುಗಿಸಿದರೆ ನಾನು ಸಹ ಅವರಿಗೆ ಸಹಕಾರ ನೀಡುತ್ತೇನೆ. ಸಮಯ ನೋಡಿಕೊಂಡು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ನಾನು ಸರ್ಕಾರಕ್ಕೆ ಆಗ್ರಹ ಪಡಿಸುವುದೇನೆಂದರೆ ನೂರಕ್ಕೆ ನೂರು ಅಪರಾಧ ಮುಕ್ತ ಸಮಾಜವನ್ನು ನಿರ್ಮಾಣ ಮಾಡುವ ಸಲುವಾಗಿ ಅಂದರೆ ಅಪರಾಧ ಮುಕ್ತ ಸಮಾಜವನ್ನು ನಿರ್ಮಿಸುವುದು ಸುಲಭವಾದ ಮಾತಲ್ಲ, ಅಪರಾಧವನ್ನೇ ಮಾಡದ ಸಮಾಜವನ್ನು ನಿರ್ಮಾಣ ಮಾಡುವುದು ಸಾಧ್ಯವಿಲ್ಲ. ಆದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗಿರುವ ಶಕ್ತಿ, ವ್ಯವಸ್ಥೆ, ಆಡಳಿತಾತ್ಮಕ ವ್ಯವಸ್ಥೆಗಳಿಂದ ಅಪರಾಧಿಗಳನ್ನು ಮತ್ತು ಅಪರಾಧವನ್ನು ನಿಯಂತ್ರಣಗೊಳಿಸಲು ಸಾಧ್ಯವಿಲ್ಲವೇ ಎನ್ನುವುದು ನಮ್ಮಲ್ಲಿರುವ ಸಾಮಾನ್ಯ ಪ್ರಶ್ನೆಗಳಲ್ಲಿ ಒಂದು ಎಂದು ನನಗೆ ಅನಿಸುತ್ತದೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ಜನರು ಅವರಿಗೆ ಅಧಿಕಾರವನ್ನು ನೀಡಿದ್ದಾರೆ. ಹೆಚ್ಚು ಕಡಿಮೆ ಇನ್ನು ನಾಲ್ಕು ತಿಂಗಳು ಕಳೆದರೆ ನಾಲ್ಕೂವರೆ ವರ್ಷಕ್ಕೂ ಹೆಚ್ಚು ಕಾಲ ಸರ್ಕಾರ ಅಧಿಕಾರವನ್ನು ನಡೆಸಿಕೊಂಡು ಬಂದಿದೆ. 4 ಸಲ ಆಯವ್ಯಯವನ್ನು ಮಂಡಿಸಿದ್ದಾರೆ. ನಿನ್ನೆಯೂ ಸೇರಿದಂತೆ 5 ಸಲ ರಾಜ್ಯಪಾಲರ ಭಾಷಣ ನಡೆಸಿದ್ದಾರೆ. ಹೆಚ್ಚು ಕಡಿಮೆ 5 ವರ್ಷಗಳ ಆಡಳಿತಾವಧಿಯ ಅಂತಿಮ ವರ್ಷಗಳಲ್ಲಿ ನನ್ನ ಆತ್ಮಸಾಕ್ಷಿಯಾಗಿ ಹೇಳುವುದೇನೆಂದರೆ, ಅವರು ಅಧಿಕಾರಕ್ಕೆ ಬರುವಾಗ ಇದ್ದ ನಿರೀಕ್ಷೆ,

ಈಗ ಕಾನೂನು ಸುವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಇಟ್ಟಿದ್ದೇವೆ ಎನ್ನುವ ಆತ್ಮಸ್ಥೈರ್ಯ ಏನಾದರೂ ಅವರಲ್ಲಿ ಇದೆಯೇ? ಎನ್ನುವ ಯೋಚನೆಯನ್ನು ಮಾಡಬೇಕೆನ್ನುವುದೇ ನನ್ನ ಮನವಿ.

(ಮುಂದು)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**(ಮುಂದು):- ಆದರೆ ಉಲ್ಲೇಖಿಸಬೇಕು ನೀವು. ಇಲ್ಲಿ ಹಿರಿಯ ಸದಸ್ಯರು, ಸಚಿವರು ಇದ್ದಾರೆ, ಗೃಹ ಮಂತ್ರಿಗಳು 'ಅವನಿಗೆ ಕೊಲೆ ಮಾಡುವ ಉದ್ದೇಶವಿರಲಿಲ್ಲ, ಕೊಲೆ ಮಾಡುವ ಉದ್ದೇಶವಿದ್ದರೆ ಚಾಕು ಬಳಸುತ್ತಿದ್ದ. ಆದರೆ ಆತ ಸ್ಕ್ರೂಡ್ರೈವರ್ ಬಳಸಿದ್ದಾನೆ' ಎಂದು ಹೇಳಿದರೆ ಏನು ಉಳಿಯಿತು? ಒಂದು ಸರ್ಕಾರ ಎಂದರೆ, ಒಬ್ಬರು ಮುಖ್ಯಮಂತ್ರಿ, ಗೃಹ ಮಂತ್ರಿ, ಸಚಿವ ಸಂಪುಟ, ಸದಸ್ಯರು ಎಲ್ಲ ವ್ಯವಸ್ಥೆ ಇರುತ್ತದೆ. ಸುಮ್ಮನೆ ಸಮಾಧಾನ ಹೇಳಬಾರದು. ಕೊಲೆ ಮಾಡುವ ಉದ್ದೇಶವಿದ್ದರೆ ಆತ ಚಾಕು ಬಳಸುತ್ತಿದ್ದ ಎಂದು ಒಬ್ಬ ಗೃಹ ಮಂತ್ರಿಗಳೆ ಮಾಧ್ಯಮದ ಮುಂದೆ ಹೇಳಿದರೆ ಹೇಗೆ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆ. ದಯಮಾಡಿ ಸರ್ಕಾರ ಇದರ ಬಗ್ಗೆ ಸ್ಪಷ್ಟನೆ ಕೊಡಬೇಕು. ಹೊನ್ನಾವರದ Paresh Mesta ರವರ ಬಗ್ಗೆ ನಾವು ಹೇಳಿದ್ದೇವೆ. ಆ ಮೀನುಗಾರ ಹುಡುಗನನ್ನು ಕೊಲೆ ಮಾಡಿದ್ದಾರೆ, ಹತ್ಯೆ ಮಾಡಿದ್ದಾರೆ ಎಂದು ಪ್ರತಿಭಟನೆ ಮಾಡಿದ್ದೆವು; ಧರಣಿ ಮಾಡಿದ್ದೇವೆ. ಆದರೆ ಕೊನೆಗೆ ಸರ್ಕಾರ 'ಅದು ಆಕಸ್ಮಿಕ ಸಾವು ಅನ್ನಿಸುತ್ತದೆ' ಎಂದು ಹೇಳಿಬಿಟ್ಟಿತು. ಭಾರತೀಯ ಜನತಾ ಪಕ್ಷದ ಹುಡುಗರನ್ನು ಸೇರಿಸಿ 76 ಜನ ಸಾರ್ವಜನಿಕರನ್ನು ಬಂಧಿಸಿದರು. ಅವರ ಮೇಲೆ ಬಹಳ ಗಂಭೀರವಾದ ಪ್ರಕರಣವನ್ನು ದಾಖಲು ಮಾಡಲಾಯಿತು. ಇನ್ನು ಕೆಲವರು ಜೈಲಿನಲ್ಲಿದ್ದಾರೆ. ಈಗ ಸರ್ಕಾರ ಏನು ಮಾಡಿತು? ಮುಖ್ಯ ಆರೋಪಿ ಸೇರಿದಂತೆ ನಾಲ್ಕು ಜನರನ್ನು ಬಂಧಿಸಿತು, ಇನ್ನೊಬ್ಬ ಮುಖ್ಯ ಆರೋಪಿಯನ್ನು ಬಂದಿಸಲಾಗುತ್ತದೆ ಎಂದು ಪೋಲೀಸ್ ಅಧಿಕಾರಿಗಳು ಹೇಳಿಕೆಯನ್ನು ಕೊಟ್ಟರು. ಹೀಗಾದರೆ 'ಅದು ಕೊಲೆ ಅಲ್ಲ' ಎಂದು ನೀವು ಹೇಗೆ ಹೇಳುತ್ತೀರಿ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರೋಪಿಯನ್ನು ಬಂಧಿಸಬೇಕೆಂದು ಮೀನುಗಾರರ ಸಮುದಾಯದವರು ಪ್ರತಿಭಟನೆ ಮಾಡಿದಾಗ, 76 ಜನರ ಮೇಲೆ ಪ್ರಕರಣ ದಾಖಲು ಮಾಡಲಾಯಿತು. ಆಗ ಸರ್ಕಾರ 'ಇದು ಆಕಸ್ಮಿಕ ಸಾವು ಅನ್ನಿಸುತ್ತದೆ' ಎಂದು ಹೇಳಿ, ಈಗ ಒಬ್ಬ ಮುಖ್ಯ ಆರೋಪಿಯನ್ನು ಬಂಧಿಸಲಾಗಿದೆ, ಇನ್ನೊಬ್ಬ ಆರೋಪಿ ತಪ್ಪಿಸಿಕೊಂಡಿದ್ದಾನೆ. ಅವನ ಬಂಧನವಾದ ಮೇಲೆ ಈ ಪ್ರಕರಣ ತನಿಖೆಗೆ ಒಳಪಡುತ್ತದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಹೇಳುತ್ತಿದ್ದಾರೆ. ಇಷ್ಟು ಜನ ನಿರಪರಾಧಿಗಳನ್ನು ಆರೋಪಿಗಳೆಂದು ಹೇಳಲು ಸರ್ಕಾರಕ್ಕೆ ಮನಸ್ಸಾದರೂ ಹೇಗೆ ಬಂತು? ಸರ್ಕಾರ ಏನು ಮಾಡುತ್ತಿದೆ? ಮೊದಲೆ ಈ ನಾಲ್ಕು ಜನ ಅಪರಾಧಿಗಳನ್ನು ಹಿಡಿದ್ದಿದರೆ Paresh Mesta ಪ್ರಕರಣಕ್ಕೆ ಒಂದು ತಾರ್ತಿಕ ಅಂತ್ಯ ಬರುತ್ತಿತ್ತು ಎಂದು ತಮಗೆ ಅನ್ನಿಸುವುದಿಲ್ಲವೆ? ನಾವು ಏನಾದರೂ ಹೇಳಿದರೆ, ಹಿಂದು ಕಾರ್ಯಕರ್ತರು ಇದ್ದರು, ಆರ್.ಎಸ್.ಎಸ್ ಕಾರ್ಯಕರ್ತರು, ಬಿಜೆಪಿ ಕಾರ್ಯಕರ್ತರು ಇದ್ದರು ಎಂದು ಹೇಳುತ್ತೀರಿ. ಇದು ಸರಿಯಲ್ಲ. ಸರ್ಕಾರ ಒಂದು ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು, ನಮ್ಮ ದೃಷ್ಟಿಯಲ್ಲಿ Deepak Rao ಹತ್ಯೆ ಮತ್ತು Basheer ಹತ್ಯೆ ಎರಡೂ ಒಂದೇ. ನಮ್ಮ ಭಾರತೀಯ ಜನತಾ ಪಕ್ಷದ ಮುಖಂಡರಾದ ಮಾನ್ಯ ಯಡಿಯೂರಪ್ಪನವರು, ಆ ಪ್ರತಿಭಟನೆಯ ಸಂದರ್ಭದಲ್ಲಿ 'Deepak Rao ಮತ್ತು Basheer ಇವರಿಬ್ಬರು ನಿರಪರಾಧಿಗಳು, ಅವರಿಬ್ಬರ ಸಾವು ನಮಗೆ ನೋವು ತಂದಿದೆ' ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಮ್ಮ ಉಲ್ಲೇಖಗಳಲ್ಲಿ, ಹೇಳಿಕೆಗಳಲ್ಲಿ ಯಾವುದೇ ಒಂದು ಧರ್ಮ, ವರ್ಗ, ಜಾತಿಗೆ ಸಿಮೀತವಾಗಿರುವುದಿಲ್ಲ. ಆದರೆ ನಿಮ್ಮ ವ್ಯವಸ್ಥೆಯಲ್ಲಿ ಒಂದು ವರ್ಗದವರನ್ನೇ ಗುರಿಯಾಗಿ ಇಟ್ಟುಕೊಂಡು ಕೆಲಸಗಳನ್ನು ಮಾಡುತ್ತಿದ್ದೀರಿ, ಅಂತಹವರನ್ನೇ ಬಂದಿಸುತ್ತೀರಿ ಅನ್ನಿಸುತ್ತಿದೆ. ಮಂಗಳೂರು ಜಿಲ್ಲೆ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕು. ಈ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿತು, Sharath Madiwala ರವರ ಕೊಲೆಯಾಯಿತು, ಅದು ಬೇರೆ-ಬೇರೆ ರೂಪ ಪಡೆಯಿತು. ಸರ್ಕಾರ ಏನು ಮಾಡಿತು ಎಂದರೆ, ಇಲ್ಲಿ ದಕ್ಷ ಅಧಿಕಾರಿಯನ್ನು ನೇಮಕ ಮಾಡಬೇಕೆಂದು Sudhir Kumar Reddy ಎನ್ನುವ ಎಸ್‌ಪಿ ಯವರನ್ನು ಇಲ್ಲಿಗೆ ನೇಮಕ ಮಾಡಿತು. ಆ ಎಸ್‌ಪಿ ಯವರು ಚಾರ್ಜ್ ತೆಗೆದುಕೊಂಡ ಮರು ದಿವಸದಿಂದ ಅಕ್ರಮವಾಗಿ ಮರಳುಗಾರಿಕೆ, ಅಕ್ರಮವಾಗಿ ಗೋ ಸಾಗಾಣಿಕೆ ಮಾಡುವವರನ್ನು, ಅಕ್ರಮ ಅವ್ಯವಹಾರದಲ್ಲಿ ತೊಡಗಿದವರನ್ನು, ಅಕ್ರಮವಾಗಿ ಮರಮಟ್ಟುಗಳನ್ನು ಕಡಿಯುವವರನ್ನು, ಗೂಂಡಾಗಳನ್ನು ಒಂದೇ ಬಾರಿ ಹಿಡಿದು ಒಳಗೆ ಹಾಕಿಬಿಟ್ಟರು. ಆಗ ಅಲ್ಲಿ ಕಾನೂನು ಸುವ್ಯವಸ್ಥೆ ನಿಯಂತ್ರಣಕ್ಕೆ ಬಂತು. ಆಗ ಎಲ್ಲ ರಾಜಕೀಯ ಪಕ್ಷದವರು Sudheer Kumar Reddy ಯವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಅವರ ಕೆಲಸಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಬದ್ಧರಾಗಿರುತ್ತೇವೆ ಎಂದು ಹೇಳಿದರು. ಆದರೆ ನಾಲ್ಕೇ ತಿಂಗಳಿನಲ್ಲಿ ಆ Sudheer Kumar Reddy ಎಸ್‌ಪಿ ಯವರನ್ನು ಅಲ್ಲಿಂದ ಎತ್ತಂಗಡಿ ಮಾಡಿಬಿಟ್ಟರು. ಏಕೆ ಎತ್ತಂಗಡಿ ಮಾಡಿದ್ದೀರಿ? ಸಂಘ ಪರಿವಾರದವರಿಂದ ಮಂಗಳೂರಿನಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಅದಕ್ಕೆ ದಕ್ಷ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ ಎಂದು ಸರ್ಕಾರದವರೆ ಹೇಳಿದವರು, ಇನ್ನು 6 ತಿಂಗಳು ಆ ಅಧಿಕಾರಿಯನ್ನು ಏಕೆ ಅಲ್ಲಿಯೇ ಮುಂದುವರೆಸಲಿಲ್ಲ? ಇದಕ್ಕೆ ಕಾರಣ ಎಂದರೆ, ಅಕ್ರಮವಾಗಿ ಮರಳುಗಾರಿಕೆ ಮಾಡುವವರನ್ನು ಆ ಅಧಿಕಾರಿ ಅಡ್ಡ ಹಾಕಿದರು, ಅಕ್ರಮ ಮರಳುಗಾರಿಕೆ ಮಾಡುವವರು ರಾಜಕೀಯ ವ್ಯಕ್ತಿಗಳ ಕೆಳಗೆ ಇರುವವರು. ಇವರಿಂದ ಒತ್ತಡ ಬಂತು ತಕ್ಷಣ ಆ ಎಸ್‌ಪಿ ಯವರನ್ನು ಅಲ್ಲಿಂದ ಎತ್ತಂಗಡಿ ಮಾಡಲಾಯಿತು. ಸರ್ಕಾರ ನ್ಯಾಯವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ರಕ್ಷಣೆ ಕೊಡುವ ಕೆಲಸ ಮಾಡಬೇಕೆ ಅಥವಾ ಅವರನ್ನು ವರ್ಗಾವಣೆ ಮಾಡುವಂತಹ ಕೆಲಸವನ್ನು ಮಾಡಬೇಕೆ ಎನ್ನುವುದು ಸಾರ್ವಜನಿಕವಾದ ಪ್ರಶ್ನೆ. ಈಗ ಶ್ರೀ ರವಿಕಾಂತೇ ಗೌಡ ಎನ್ನುವ ಅಧಿಕಾರಿಯನ್ನು ಅಲ್ಲಿಗೆ ನೇಮಕ ಮಾಡಿದ್ದೀರಿ. ಸದ್ಯಕ್ಕೆ ಅವರನ್ನು ಒಳ್ಳೆಯ ಅಧಿಕಾರಿ ಎಂದು ಹೇಳುತ್ತಿದ್ದಾರೆ. ಇವರು ಅಲ್ಲಿ ಎಷ್ಟು ದಿನ ಇರುತ್ತಾರೆ ಎನ್ನುವುದು ಸಾರ್ವಜನಿಕ ಚರ್ಚೆಯಾಗಿದೆ, ಇದನ್ನು ನಾನು ಮಾತ್ರ ಹೇಳುತ್ತಿಲ್ಲ. ಮಂಗಳೂರಿನಲ್ಲಿ ಡಿಸಿಪಿ ಕಛೇರಿ ಎದುರು *KFD* (Karnataka Forum for Dignity) ಕಾರ್ಯಕರ್ತರು ಪ್ರತಿಭಟನೆ ಮಾಡಿ, ಧರಣಿ ಮಾಡಿ ನಮ್ಮ ಕಾರ್ಯಕರ್ತರನ್ನು ಬಂಧಿಸಿದ್ದೀರಿ, ಬಿಡುಗಡೆ ಮಾಡಿ ಎಂದು ಹೇಳಿದ್ದಾರೆ. ನೂರಾರು ಜನ ಪ್ರತಿಭಟನೆ ಮಾಡಿದಾಗ, ಪೊಲೀಸ್‌ರವರು 'ಇವರು ಆರೋಪ ಮಾಡಿದ್ದಾರೆ, ಅದಕ್ಕಾಗಿ ಬಂಧಿಸಲಾಗಿದೆ, ನೀವು ಕೋರ್ಟ್‌ಗೆ ಹೋಗಿ ಅವರನ್ನು ಬಿಡುಗಡೆ ಮಾಡಿಸಿಕೊಳ್ಳಿ' ಎಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ ಪೊಲೀಸ್ ಕಛೇರಿಗೆ ಕಲ್ಲು ಹೊಡೆದಿದ್ದಾರೆ. ಆಗ ಪೊಲೀಸರು ಅವರೆಲ್ಲರನ್ನು ಬಂಧಿಸಿದ್ದಾರೆ. ಮಂಗಳೂರು ಡಿಸಿಪಿ ಕಛೇರಿ ಎದುರೇ ಅವರನ್ನು ಬಂಧಿಸಿದ್ದಾರೆ. ಅಲ್ಲಿಯ ಡಿಸಿಪಿ ಚಂದ್ರಶೇಖರರವರನ್ನು 24 ಗಂಟೆಗಳಲ್ಲಿ ಎತ್ತಂಗಡಿ ಮಾಡಿದ್ದಾರೆ. ಬಂಧಿಸಿದವರನ್ನು ಬಿಡುಗಡೆ ಮಾಡಿ ಎಂದು ಪ್ರತಿಭಟನೆ ಮಾಡಿ ಕಲ್ಲು ಹೊಡೆಯಲು ಬಂದವರನ್ನು ಬಂಧಿಸಿರುವುದರಿಂದ ಡಿಸಿಪಿ ಚಂದ್ರಶೇಖರ್‌ರವರನ್ನು 24 ಗಂಟೆಗಳಲ್ಲಿ ವರ್ಗಾವಣೆ ಮಾಡಿದ್ದೀರಿ. ಇನ್ನು ಯಾವ ಅಧಿಕಾರಿ ಬಂದು ಅಲ್ಲಿ ಕಾನೂನು ಸುವ್ಯವಸ್ಥೆ ನೋಡಿಕೊಳ್ಳಲು ಧೈರ್ಯ ಮಾಡುತ್ತಾರೆ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಮಂಗಳೂರು ಗ್ರಾಮೀಣ ಭಾಗದ ಪೊಲೀಸ್ ಠಾಣೆಯಲ್ಲಿ ಪ್ರಮೋದಕುಮಾರ್ ಎನ್ನುವ ಇನ್ಸ್‌ಪೆಕ್ಟರ್ ಇದ್ದರು. ಇವರು ಮೊದಲು ಕಾರ್ಕಳದಲ್ಲಿ ಇದ್ದರು, ಅಲ್ಲಿ ಒಳ್ಳೆಯ ಕೆಲಸವನ್ನು ಮಾಡಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದರು. ರಾಜಕಾರಣಿಗಳ ಸಿಟ್ಟಿಗೆ ಗುರಿಯಾಗಿ ಮಂಗಳೂರು ಗ್ರಾಮಾಂತರ ಠಾಣೆಗೆ ವರ್ಗಾಯಿಸಲ್ಪಟ್ಟಿದ್ದರು. ಇವರು ಒಬ್ಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರೋಪಿಯನ್ನು ಸೆಕ್ಷನ್ 307 ಸೇರಿದಂತೆ ಏಳು ಬೇರೆ-ಬೇರೆ ಆರೋಪಗಳ ಮೇಲೆ ಬಂಧಿಸಿರುತ್ತಾರೆ. ಬಂಧನಕ್ಕೆ ಒಳಪಟ್ಟವನ ಮೇಲೆ ವಾರೆಂಟ್ ಕೂಡಾ ಇತ್ತು. ಇವರನ್ನು ಬಂಧಿಸಿದ್ದಾರೆ ಎನ್ನುವ ಕಾರಣಕ್ಕೆ ಪ್ರಮೋದ್‌ಕುಮಾರ್‌ರವರನ್ನು ಅಲ್ಲಿಂದ ತೆಗೆದು ಚಾಮರಾಜನಗರಕ್ಕೆ Non Executive ಗೆ ಹಾಕುತ್ತಾರೆ. ಇದು ಒಬ್ಬ ಪೊಲೀಸ್ ಅಧಿಕಾರಿಗೆ ರಕ್ಷಣೆ ಕೊಡುವ ಸ್ಥಿತಿ, ಈ ರೀತಿಯಾದರೆ ಹೇಗೆ? ಈ ರೀತಿ ಮಾಡಿದರೆ ಬೇರೆ ಯಾವ ಪೊಲೀಸ್ ಅಧಿಕಾರಿ ಧೈರ್ಯದಿಂದ ಕೆಲಸ ಮಾಡಲು ಸಾಧ್ಯವಿದೆ?

Konaje ಪೊಲೀಸ್ ಠಾಣೆಯಲ್ಲಿ ಅನಿಲ ಎನ್ನುವ ಒಬ್ಬ ಎಸಿಪಿ ಇದ್ದರು. ಅವರು ಗಸ್ತು ತಿರುಗುವ ಸಮಯದಲ್ಲಿ ಹಿಂದಿನಿಂದ ಬಂದು ಅವರ ಕತ್ತಿಗೆ ಕತ್ತಿಯಿಂದ ಹೊಡೆದಿದ್ದಾರೆ. ಅವರು ಗಂಭೀರವಾದ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿದ್ದಾರೆ. ಪೊಲೀಸ್‌ರಿಗೆ ಈ ರೀತಿಯಾದರೆ ಯಾರಿಗೆ ಯಾರು ರಕ್ಷಣೆ ಕೊಡಬೇಕು? ಕುಂದಾಪುರದ ಕಂಗಳೂರು ಠಾಣೆಯಲ್ಲಿ ಅಕ್ರಮವಾಗಿ ಗೋವು ಸಾಗಾಣಿಕೆಯಾಗುತ್ತಿದೆ ಎಂಬ ದೂರಿನ ಮೇರೆಗೆ ಶಿವಮೊಗ್ಗದ ಪ್ರಶಾಂತ ನಾಗಣ್ಣ ಎನ್ನುವ ಎಎಸ್‌ಪಿ ಯವರು ಸಾಗಾಣಿಕೆ ಮಾಡುತ್ತಿದ್ದವರಿಗೆ ಅಡ್ಡ ಹಾಕಿದಾಗ ಸಾಗಾಣಿಕೆ ಮಾಡುತ್ತಿರುವವರು ಆ ಅಧಿಕಾರಿಯ ಕಾಲಿಗೆ ಹೊಡೆಯುತ್ತಾರೆ. ಅವರ ಅರ್ಧ ಕಾಲು ತುಂಡಾಗುತ್ತದೆ, ಅದಕ್ಕೆ ಅವರು ಚಿಕಿತ್ಸೆ ಪಡೆಯುತ್ತಾರೆ. ಈ ಬಗ್ಗೆ ನಾನು ಮಾನ್ಯ ಗೃಹ ಸಚಿವರಾದ ರಾಮಲಿಂಗಾ ರೆಡ್ಡಿಯವರಿಗೆ ‘ಈ ಎಎಸ್‌ಪಿಯವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ, ಇವರಿಗೆ ರಾಜೀವ ಗಾಂಧಿ ಆರೋಗ್ಯ ಯೋಜನೆಯಲ್ಲಿ ಹಣ ಬಿಡುಗಡೆಯಾಗಬೇಕು, ಅದು ಆಗುತ್ತಿಲ್ಲ, ಆದ್ದರಿಂದ ದಯಮಾಡಿ ಇವರ ಚಿಕಿತ್ಸಾ ಖರ್ಚನ್ನು ಸರ್ಕಾರದಿಂದ ಭರಿಸಿ’ ಎಂದು ಮನವಿಯನ್ನು ಕೊಟ್ಟೆ. ಇವತ್ತಿನವರೆಗೆ ಒಂದು ರೂಪಾಯಿ ಕೂಡಾ ಚಿಕಿತ್ಸಾ ವೆಚ್ಚವೆಂದು ಸರ್ಕಾರ ಅವರಿಗೆ ಕೊಟ್ಟಿರುವುದಿಲ್ಲ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ನಿಮ್ಮ ಪೊಲೀಸ್ ಇಲಾಖೆಯವರನ್ನು ನೀವೆ ಕಾಪಾಡದಿದ್ದರೆ ಯಾರು ಕಾಪಾಡಬೇಕು ಎನ್ನುವುದು ನಮ್ಮ ಮುಂದೆ ಇರುವ ಗಂಭೀರವಾದ ಪ್ರಶ್ನೆ.

ಗಂಗೊಳ್ಳಿಯಲ್ಲಿ ವೆಂಕಟೇಶ್ ಪೈ ಎನ್ನುವವರ ವಿಚಾರ ಹೇಳುತ್ತೇನೆ, ಒಂದೊಂದೇ ಪ್ರಕರಣ ಎಂದರೆ ಸರ್ಕಾರವಲ್ಲ, 35 ಜಿಲ್ಲೆಗಳು, 176 ತಾಲ್ಲೂಕುಗಳು ಇರುವ ರಾಜ್ಯದಲ್ಲಿ ಒಂದೊಂದೆ ಪ್ರಕರಣವನ್ನು ಉಲ್ಲೇಖ ಮಾಡಬೇಕಾ ಶ್ರೀನಿವಾಸ್ ಪೂಜಾರಿಯವರು ಎಂದು ನಿಮಗೆ ಅನ್ನಿಸಬಹುದು. ಆದರೆ ವಾಸ್ತವಿಕ ಸ್ಥಿತಿ ಏನಾಗಿದೆ ಎನ್ನುವುದನ್ನು ನೋಡಿ, ಕುಂದಾಪುರ ತಾಲ್ಲೂಕಿನಲ್ಲಿ ಗಂಗೊಳ್ಳಿ ಎನ್ನುವಲ್ಲಿ ವೆಂಕಟೇಶ್ ಪೈ ಎನ್ನುವವರ ಕುಟುಂಬವಿದೆ, ಅರ್ಧ ರಾತ್ರಿಯಲ್ಲಿ ಒಬ್ಬ ಮುಸುಕು ಹಾಕಿಕೊಂಡು ಅವರ ಮನೆಯ ಹತ್ತಿರ ಬಂದು ಪೆಟ್ರೋಲ್ ಹಾಕಿ, ಬೆಂಕಿ ಹಚ್ಚಿ ಓಡಿ ಹೋಗಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಿಡುತ್ತಾನೆ. ಇದು ಸಿಸಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿದೆ. ಆ ರೆಕಾರ್ಡ್ ಕ್ಯಾಸೆಟ್‌ನ್ನು ನಾನು ಮಾನ್ಯ ಪರಮೇಶ್ವರರವರಿಗೆ ಕೊಟ್ಟಿದ್ದೇನೆ. ಮನೆಗೆ ಬೆಂಕಿ ಹತ್ತಿದಾಗ ಒಳಗಿನವರು ಬೊಬ್ಬೆ ಹೊಡೆಯುತ್ತಾರೆ, ಅಕ್ಕ-ಪಕ್ಕದವರು ಬಂದು ಅವರನ್ನು ಕಾಪಾಡುತ್ತಾರೆ. ಪೈ ಕುಟುಂಬದವರು ದೇವರ ದಯೆಯಿಂದ ಉಳಿಯುತ್ತಾರೆ. ಅವರ ಎರಡು ವಾಹನಗಳು ಸುಟ್ಟು ಹೋಗುತ್ತವೆ, ಅವರ ವ್ಯಾಪಾರ ಕೇಂದ್ರ ಸುಟ್ಟು ಹೋಗುತ್ತದೆ, ಅರ್ಧ ಮನೆ ಸುಟ್ಟು ಹೋಗುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಎಸ್‌ಪಿ ಯವರು 'ಇದು ಕೋಮು ಗಲಭೆಯಿಂದ ಆಗಿರುವ ಪ್ರಕರಣ, ಅವರಿಗೆ 13 ಲಕ್ಷ ರೂ.ಗಳ ನಷ್ಟವಾಗಿದೆ' ಎಂದು ವರದಿಯನ್ನು ಕೊಡುತ್ತಾರೆ. ಸರ್ಕಾರ, ನಾವು-ನೀವು ಎಲ್ಲರೂ 'ಹಿಂದು, ಮುಸ್ಲಿಂ, ಕ್ರೈಸ್ತ್, ಜೈನ್, ಪಾರ್ಸಿ ಎಲ್ಲರೂ ಒಚಿದೇ' ಎಂದು ಹೇಳುತ್ತೇವೆ. ಆದರೆ ಆ ವೆಂಕಟೇಶ್ ಪೈರವರಿಗೆ ಇದುವರೆಗೆ ಒಂದು ರೂಪಾಯಿಯ ಪರಿಹಾರವನ್ನು ಸರ್ಕಾರ ಕೊಟ್ಟಿರುವುದಿಲ್ಲ. ಕೋಮು ಗಲಭೆ ಎಂದು ಎಸ್‌ಪಿ ಯವರು ವರದಿ ಕೊಟ್ಟಿದ್ದಾರೆ. ಆ ವರದಿ ನನ್ನ ಹತ್ತಿರ ಇದೆ. ಹಿಂದೆ ಈ ವಿಚಾರವನ್ನು ನಾನು ಉಲ್ಲೇಖ ಮಾಡಿದಾಗ ಮಾನ್ಯ ಉಪಸಭಾಪತಿಗಳಾದ ಮರಿತಿಬ್ಬೇಗೌಡರು ಪೀಠದಲ್ಲಿದರು. ಅವರು ಈ ಪ್ರಕರಣವನ್ನು ವಿಶೇಷ ಎಂದು ಪರಿಗಣಿಸಿ ಅವರಿಗೆ ತಕ್ಷಣ ಪರಿಹಾರವನ್ನು ಕೊಡಬೇಕೆಂದು ಗೃಹ ಮಂತ್ರಿಗಳಿಗೆ ಪೀಠದಿಂದ ಆದೇಶವನ್ನು ಕೊಟ್ಟರು. ಮೂರು ಬಾರಿ ಮನವಿಯನ್ನು ಕೊಟ್ಟಿದ್ದೇನೆ, ಅರ್ಜಿ ಸಮಿತಿಯಲ್ಲಿ ಅರ್ಜಿ ಬಾಕಿ ಇದೆ. ಇದುವರೆಗೆ ಸರ್ಕಾರ ಅವರಿಗೆ ಒಂದು ರೂಪಾಯಿ ಪರಿಹಾರವನ್ನು ಕೊಟ್ಟಿರುವುದಿಲ್ಲ. 'ಹಿಂದು, ಮುಸ್ಲಿಂ, ಕ್ರೈಸ್ತ್, ಜೈನ್, ಪಾರ್ಸಿ ಎಲ್ಲರೂ ಒಚಿದೇ, ಎಲ್ಲರಿಗೂ ನಮ್ಮ ಸರ್ಕಾರ ಒಂದೇ ನ್ಯಾಯವನ್ನು ಕೊಡುತ್ತದೆ' ಎಂದು ಹೇಳುತ್ತೀರಿ, ಇಲ್ಲ ಎಂದು ನಾನು ಹೇಳುತ್ತಿಲ್ಲ, ಆದರೆ ಪರಿಹಾರದ ವಿಚಾರದಲ್ಲಿ ತಾರತಮ್ಯಗಳೇಕೆ? ಇಂತಹ ಹತ್ತಾರು ಪ್ರಕರಣಗಳು ಇವೆ.

ಬೈಂದೂರು ಕಡೆಯಲ್ಲಿ ಮರವಂತೆ ಎನ್ನುವ ಪ್ರದೇಶವಿದೆ. ಅಲ್ಲಿ ಒಂದು ಕಡೆ ಸಮುದ್ರ, ಇನ್ನೊಂದು ಕಡೆ ಹೊಳೆ ಇದೆ. ಮಾನ್ಯ ರೇವಣ್ಣನವರೆ ನಿಮಗೆ ಗೊತ್ತಿಲ್ಲ ಎಂದರೆ ತಿಳಿದುಕೊಳ್ಳಿ. ಅಲ್ಲಿ ರಾತ್ರಿ ಹೊತ್ತು ಟೀ ಮಾರುವ ಸಂತೋಷ ಮರಕಾಳಿ ಎನ್ನುವವನಿದ್ದಾನೆ. ಅಲ್ಲಿಗೆ ರಾತ್ರಿ ಸಮಯದಲ್ಲಿ ಬೈಕ್‌ನಲ್ಲಿ ಇಬ್ಬರು ಬಂದು ಅವನ ಹತ್ತಿರ ಟೀ ತೆಗೆದುಕೊಂಡು ಕುಡಿದು ಅವನಿಗೆ ಹಣ ಕೊಡುತ್ತಾರೆ. ಅವನು ಚಿಲ್ಲರೆ ಕೊಡಲು ಬಗ್ಗಿದಾಗ ಅವನ ಹೊಟ್ಟೆಗೆ ಚಾಕು ಹಾಕುತ್ತಾರೆ. ಅವನು ಆರು ತಿಂಗಳ ಕಾಲ ಮಂಗಳೂರಿನ ಕೆಎಂಸಿ ಯಲ್ಲಿ ಸಾವು-ಬದುಕಿನ ನಡುವೆ ಹೋರಾಟ ಮಾಡಿ ಸತ್ತು ಹೋಗುತ್ತಾನೆ. ಕೋಮ ಗಲಭೆಯ ಒಂದು ಅಂಗವಾಗಿ ಸಂತೋಷ ಮರಕಾಳಿಯವರು ಸತ್ತು ಹೋಗಿದ್ದಾರೆ, ಅವನಿಗೆ ಇಬ್ಬರು ಮಕ್ಕಳಿದ್ದಾರೆ, ಹೆಂಡತಿ ತುಂಬಾ ಸಂಕಷ್ಟದಲ್ಲಿದ್ದಾರೆ, ಬಡ ಕುಟುಂಬ, ರಾತ್ರಿ ಹೊತ್ತು ಟೀ ಮಾರಿ ಜೀವನ ನಡೆಸುತ್ತಿರುವಂತಹ ಕುಟುಂಬ ಅವನ ಕುಟುಂಬಕ್ಕೆ ಪರಿಹಾರ ಕೊಡಿ ಎಂದು ಪೊಲೀಸ್‌ನವರು ವರದಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟರು. ಆದರೆ ಇವತ್ತಿನವರೆಗೆ ಸರ್ಕಾರ ಅವರ ಕುಟುಂಬಕ್ಕೆ ಒಂದು ರೂಪಾಯಿ ಪರಿಹಾರವನ್ನು ಸಹ ಕೊಟ್ಟಿರುವುದಿಲ್ಲ.

(ಮುಂದು)

ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)

ಅವರಿಗೆ ಇವತ್ತಿನವರೆಗೂ ಒಂದು ರೂಪಾಯಿಯನ್ನು ಪರಿಹಾರವಾಗಿ ಕೊಟ್ಟಿಲ್ಲ. ಇದು ಸರಿ ಎನಿಸುತ್ತದೆಯೇ ಎಂದು ಮಾನ್ಯ ಸಭಾನಾಯಕರು ತಿಳಿಸಬೇಕು. ಸರ್ಕಾರಕ್ಕೆ ಎಲ್ಲರೂ ಒಂದೇ ಎಂದಾದ ಮೇಲೆ ಮತ್ತು ಪೊಲೀಸರು ಕೋಮು ಗಲಭೆ ಎಂದು ವರದಿ ಕೊಟ್ಟ ಮೇಲೆ ಸತ್ತವರ ಜೊತೆ ಯಾವ ಜಾತಿ, ಯಾವ ವರ್ಗ, ಯಾವ ಧರ್ಮ, ಯಾವ ಭಾಷೆ ಎನ್ನುವುದಾದರೆ ಯಾವ ನ್ಯಾಯ? ಇದು ಹೌದಾದರೆ ಹೇಳಲಿ. ಶ್ರೀನಿವಾಸ ಪೂಜಾರಿ ಹೇಳುವುದು ಸುಳ್ಳಾದರೆ ನಾನು ಈ ಸದನದಲ್ಲಿ ಕ್ಷಮೆ ಕೇಳುತ್ತೇನೆ. ನಾನು ಹೇಳಿರುವುದು ಸರಿಯಾದರೆ ಶ್ರೀ ವೆಂಕಟೇಶ್ ಪೈ ಮತ್ತು ಶ್ರೀ ಸಂತೋಷ್‌ರರವರ ಕುಟುಂಬಕ್ಕೆ ಪರಿಹಾರವನ್ನು ಕೊಡುತ್ತಾರೆಯೇ? ಇದು ನೂರಕ್ಕೆ ನೂರು ಸರಿಯಿದ್ದರೆ ಮಾನ್ಯ ಸಭಾನಾಯಕರು ಹೇಳಬೇಕು. ಶ್ರೀ ವೆಂಕಟೇಶ್ ಪೈರವರ ಮನೆಗೆ ಒಬ್ಬ ಆರೋಪಿ ಬೆಂಕಿ ಹಾಕಿದ್ದಾನೆ, ಸುಮಾರು ರೂ.13 ಲಕ್ಷ ನಷ್ಟವಾಗಿದೆ ಎಂದು ಪೊಲೀಸ್ ಇಲಾಖೆಯ ವರದಿ ಬಂದಿದೆ. ಶ್ರೀ ಸಂತೋಷ್‌ರವರಿಗೆ ರಾತ್ರಿ ಚಾಕು ಹಾಕಿ ಹೋಗಿದ್ದಾರೆ. ಇದು ಕೋಮು ಗಲಭೆಯ ಒಂದು ಅಂಗ ಎಂದು ಪೊಲೀಸರು ವರದಿ ಕೊಟ್ಟಿದ್ಧಾರೆ. ಇವೆರಡು ಸರಿಯಿದ್ದರೆ ಒಂದು ವಾರದೊಳಗೆ ಪರಿಹಾರವನ್ನು ಕೊಡಬೇಕು. ಆದ್ದರಿಂದ ನಾವು ಇಲ್ಲಿ ಮಾತನಾಡಬೇಕಾದ ಅವಶ್ಯಕತೆಗಳಿವೆ. ಕೆಲವು ಸಾರಿ ಪರಿಸ್ಥಿತಿಗಳು ಎಷ್ಟು ತೀವ್ರತೆಯನ್ನು ಹೊಂದಿರುತ್ತವೆ ಎಂದು ನೋಡಬೇಕು. ಸರ್ಕಾರವು ಕಾನೂನು-ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ನಿರಪರಾಧಿಗಳಿಗೆ ಶಿಕ್ಷೆಯಾದರೂ ಸುಮ್ಮನಿರುತ್ತದೆಯೇ? ಅವರಿಗೆ ತಿಳಿದಿರುವಂತೆ ಬೀದರ್‌ನಲ್ಲಿ ಮೊನ್ನೆ ಪೂಜಾ ಎಂಬ 21 ವರ್ಷದ ವಿದ್ಯಾರ್ಥಿನಿಯನ್ನು ಅದೇ ಗ್ರಾಮದ ಶಹಾಬುದ್ದೀನ್ ಎಂಬ ಯುವಕ ಕಾನ್ಪುರದ ಅರಣ್ಯ ಪ್ರದೇಶದಲ್ಲಿ ಆಕೆಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡುತ್ತಾನೆ. ಈ ಹತ್ಯೆ ಹಿಂದೆ ಲವ್-ಜಿಹಾದ್ ಇದೆ ಎಂದು ವ್ಯಾಪಕವಾದ ಸುದ್ದಿ ಇರುತ್ತದೆ. ವಿದ್ಯಾರ್ಥಿ ಪೂಜಾ ಹತ್ಯೆಯನ್ನು ಖಂಡಿಸಿ ಸ್ಥಳೀಯವಾಗಿ ಮೆರವಣಿಗೆ ನಡೆಯುತ್ತದೆ. ಆ ಮೆರವಣಿಗೆ ಮೇಲೆ ಕಿಡಿಗೇಡಿಗಳು ಕಲ್ಲು ಬಿಸಾಡುತ್ತಾರೆ. ಆ ಸಂದರ್ಭದಲ್ಲಿ ಲೋಕಸಭಾ ಸದಸ್ಯರಾಗಿರುವ ಮಾನ್ಯ ಭಗವಂತ ಖೂಬಾರವರ ಕಣ್ಣಿಗೆ ಪೆಟ್ಟಾಗುತ್ತದೆ. ನಾನು ಹೇಳುವುದೇನೆಂದರೆ, ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕಾದ ಸರ್ಕಾರವು ಆರೋಪಿಗಳನ್ನು ತಕ್ಷಣ ಬಂಧನ ಮಾಡಿದ್ದರೆ ಅಥವಾ ಮೆರವಣಿಗೆ ಮಾಡುವವರನ್ನು ಕರೆದು ಸಂಧಾನ ಮಾಡಿದ್ದರೆ ಅಥವಾ ಆರೋಪಿಯನ್ನು ಬಂಧಿಸಿದ್ದೇವೆ, ಯಾರಿಗೂ ಅನುಮಾನ ಬೇಡ, ಲವ್-ಜಿಹಾದ್ ಅಥವಾ ಯಾವುದೇ ಆಗಿರಲಿ, ಯಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾದರೂ ಆಗಿರಲಿ, ಯಾವುದೇ ಧರ್ಮ ಅಥವಾ ಜಾತಿ ಆಗಿರಲಿ, ಅವನನ್ನು ಬಂಧಿಸುತ್ತೇವೆ ಎಂದು ಕಟುವಾದ ನಿರ್ಧಾರವನ್ನು ತೆಗೆದುಕೊಂಡಿದ್ದರೆ ಇಂತಹ ಅನಾಹುತಗಳಾಗಲು ಸಾಧ್ಯವಿತ್ತೇ ಎಂದು ಅವರಿಗೆ ಅನಿಸುವುದಿಲ್ಲವೇ? ಸರ್ಕಾರವನ್ನು ನಡೆಸುವವರು ಅನೇಕ ಸಾರಿ ಮಾತು ಕಡಿಮೆ ಆಡಬೇಕು ಎಂದು ಹೇಳಿಲ್ಲ. ನಾವು ವಿರೋಧ ಪಕ್ಷದವರು ತಪ್ಪನ್ನು ಎತ್ತಿ ಹೇಳಿದಾಗ ಗಲಾಟೆ ಮಾಡುತ್ತಾರೆ ಮತ್ತು ವಿಷಯವನ್ನು ಸೌಮ್ಯವಾಗಿ ಹೇಳಬಹುದಿತ್ತು, ಇಷ್ಟೆಲ್ಲಾ ಬೇಕೇ ಎಂದು ಹೇಳುತ್ತಾರೆ. ಆದರೆ ಸರ್ಕಾರವನ್ನು ನಡೆಸುವವರಿಗೆ ಸ್ವಲ್ಪ ತಾಳ್ಮೆ ಇರಬೇಕಲ್ಲವೇ? ಮಂಗಳೂರಿನ ಕುದ್ರೋಳಿ ದೇವಸ್ಥಾನದ ಒಂದು ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಮಾಧ್ಯಮ ಸಲಹೆಗಾರರು 'ಗೌರಿ ಹತ್ಯೆಯ ಪ್ರಕರಣವಾಗಿ ಒಂದು ವರ್ಷವಾಯಿತು' ಎಂಬ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ. ಅಲ್ಲಿ ಮಾನವ ಸರಪಳಿ ನಡೆಯುತ್ತದೆ. ಆ ಸಂದರ್ಭದಲ್ಲಿ ಮಾಧ್ಯಮ ಸಲಹೆಗಾರರು 'ಸಂಘ ಪರಿವಾರದ ಪ್ರಮುಖರು ಕುದ್ರೋಳಿ ದೇವಸ್ಥಾನಕ್ಕೆ ಬಂದಿದ್ದಾರೆ' ಎಂದು ಹೇಳಿಕೆ ಕೊಡುತ್ತಾರೆ. ಕುದ್ರೋಳಿ ದೇವಸ್ಥಾನವನ್ನು ಶ್ರೀಯುತ ನಾರಾಯಣ ಗುರುಗಳು ನಿರ್ಮಾಣ ಮಾಡಿರುತ್ತಾರೆ. ಒಂದೇ ಜಾತಿ, ಒಂದೇ ಧರ್ಮ ಒಂದೇ ವರ್ಗ ಎನ್ನುವ ಸಾಮಾಜಿಕ ನ್ಯಾಯಕ್ಕೆ ಮತ್ತೊಂದು ಹೆಸರೆಂದರೆ ಶ್ರೀಯುತ ನಾರಾಯಣ ಗುರುಗಳಾಗಿದ್ದಾರೆ. 'ಶ್ರೀಯುತ ನಾರಾಯಣ ಗುರುಗಳು ನಿರ್ಮಾಣ ಮಾಡಿದ ದೇವಸ್ಥಾನಕ್ಕೆ ಸಂಘ ಪರಿವಾರದವರು ಬಂದಿದ್ದರಿಂದ ದೇವಸ್ಥಾನದ ಪಾವಿತ್ರ್ಯ ಹಾಳಾಯಿತು ಮತ್ತು ನಾರಾಯಣ ಗುರುಗಳಿಗೆ ಅಪಮಾನ ಆಯಿತು' ಎಂದು ಮಾನ್ಯ ಮುಖ್ಯಮಂತ್ರಿಗಳ ಮಾಧ್ಯಮ ವರದಿಗಾರರಾದ ಶ್ರೀ ದಿನೇಶ್ ಅಮೀನ್‌ಮಟ್ಟು ಹೇಳಿಕೆ ಕೊಡುತ್ತಾರೆ. ಇದರ ಜೊತೆಗೆ ' ಶ್ರೀ ಜನಾರ್ಧನ ಪೂಜಾರಿಯವರು ಹಿರಿಯರಾಗಿದ್ದು, ಸಂಘ ಪರಿವಾರದವರ ಜೊತೆ ಒಂದೇ ವೇದಿಕೆಯಲ್ಲಿ ಕುಳಿತುಕೊಂಡ ಕಾರಣಕ್ಕಾಗಿ ಶ್ರೀ ಜನಾರ್ಧನ ಪೂಜಾರಿಯವರಿಂದಲೂ ದೇವಸ್ಥಾನಕ್ಕೆ ಅಪಮಾನವಾಗಿದೆ' ಎಂದು ಹೇಳಿಕೆ ಕೊಡುತ್ತಾರೆ. ಇದನ್ನು ರೆಕಾರ್ಡ್ ತೆಗೆಸಿ ನೋಡಬಹುದು. ಶ್ರೀನಿವಾಸ ಪೂಜಾರಿ ತಪ್ಪಾಗಿ ಮಾತನಾಡಿದ್ದರೆ ಈ ಮಾತುಗಳನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೂ ಕುದ್ರೋಳಿ ದೇವಸ್ಥಾನಕ್ಕೂ ಯಾವ ಸಂಬಂಧ? ಶ್ರೀಯುತ ನಾರಾಯಣ ಗೌಡರು ಇಂತಹವರೇ ದೇವಸ್ಥಾನಕ್ಕೆ ಬರಬೇಕೆಂದು ಹೇಳಿದ್ದಾರೆಯೇ? ಮಾನ್ಯ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು ಶ್ರೀ ಜನಾರ್ಧನ ಪೂಜಾರಿಯವರ ಬಗ್ಗೆಯೂ ಹೇಳಿಕೆ ಕೊಡುತ್ತಾರೆ. ಮಾನ್ಯ ಜನಾರ್ಧನ ಪೂಜಾರಿಯವರ ಸಮರ್ಥನೆಯನ್ನು ನಾನು ಮಾಡುವುದಿಲ್ಲ. ಏಕೆಂದರೆ ಮಾನ್ಯ ಜನಾರ್ಧನ ಪೂಜಾರಿಯವರು ಅವರ ಪಕ್ಷದವರಾಗಿದ್ದಾರೆ. ಆದರೆ ಅವರು ಹಿರಿಯರು ಎನ್ನುವ ಕಾರಣಕ್ಕೆ ಹೇಳಿದೆ. ಆದರೆ ಮಾತಿನ ಭರ ಮತ್ತು ವೇಗದಲ್ಲಿ ಸಂಘವನ್ನು , ಬಿಜೆಪಿ ಪಕ್ಷವನ್ನು ಮತ್ತು ಬೇರೆಯವರನ್ನು ಟೀಕಿಸುವಲ್ಲಿ ಮಾನ್ಯ ಮುಖ್ಯಮಂತ್ರಿಯವರ ಮಾಧ್ಯಮ ವರದಿಗಾರರು ಮಾನ್ಯ ಜನಾರ್ಧನ ಪೂಜಾರಿಯವರ ಬಗ್ಗೆಯೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದಾರೆ. ನಮ್ಮಗಳ ಅಭಿಪ್ರಾಯಗಳಲ್ಲಿ ಬೇಧ ಇರಬಹುದು. ಪಕ್ಷಗಳ ರಾಜಕಾರಣದಲ್ಲಿ ಅಭಿಪ್ರಾಯ ಬೇಧ ಇರಬಹುದು. ಆದರೆ ನಮ್ಮಲ್ಲಿ ಬಡವರಿಗೆ ನೂರು ರೂಪಾಯಿಯ ನೋಟನ್ನು ತೋರಿಸಿದ್ದೇ ಮಾನ್ಯ ಜನಾರ್ಧನ ಪೂಜಾರಿಯವರಾಗಿದ್ದಾರೆ ಎಂದಿದೆ. ಬ್ಯಾಂಕಿನ ಬಾಗಿಲು ತೆಗೆದು, ಸಾಲಮೇಳ ಮಾಡಿ ಬಡವರಿಗೆ ನೂರು ರೂಪಾಯಿಯ ನೋಟು ತೋರಿಸಿದ್ದು ಮಾನ್ಯ ಜನಾರ್ಧನ ಪೂಜಾರಿ ಎಂದೆನಿಸುತ್ತದೆ. ಈಗ ಇದನ್ನು ಐವನ್ ಡಿ'ಸೋಜಾ ರವರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ನಾವು ಒಪ್ಪಿಕೊಂಡಿದ್ದೇವೆ. ಈ ಸ್ಥಿತಿಯಲ್ಲಿ ಅವರನ್ನೂ ಕೂಡ ಟೀಕೆ ಮಾಡಬೇಕೆಂದು ಅವರಿಗೆ ಅನಿಸುತ್ತದೆಯೇ? ಅಧಿಕಾರ ನಡೆಸುವವರು ಮಾತನಾಡುವಾಗ ಸ್ವಲ್ಪ ಹಿಡಿತ ಹೊಂದಿರಬೇಕು ಎಂದು ಅವರಿಗೆ ಅನಿಸಿದ್ದರೆ ಸ್ವಲ್ಪ ನಿಯಂತ್ರಣ ಮಾಡುವುದು ಒಳ್ಳೆಯದು ಎಂದು ನನ್ನ ಅನಿಸಿಕೆ. ಇದರ ಮೂಲಕ ಅವರು ಯಾವ ಸಂದೇಶ ಕೊಡುತ್ತಾರೆ? ಮಾನ್ಯ ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರು ಇಂತಹ ಹೇಳಿಕೆಗಳ ಮೂಲಕ ಸಮಾಜಕ್ಕೆ ಯಾವ ಸಂದೇಶ ಕೊಡುತ್ತಾರೆ? ಇಂತಹ ಹೇಳಿಕೆಗಳಿಂದ ರಾಜಕೀಯವಾಗಿ ಏನಾದರೂ ಲಾಭ ಬರುತ್ತದೆ ಎಂದು ಅವರಿಗೆ ಅನಿಸುತ್ತದೆಯೇ?

ಇನ್ನು ಮಾನ್ಯ ಲಂಕೇಶ್‌ರವರ ಮಗಳಾದ ಶ್ರೀಮತಿ ಗೌರಿಯವರ ವಿಚಾರ ಏನೇ ಇರಬಹುದು, ಅವರು ಎಡಪಂಥೀಯ ಅಥವಾ ಬಲಪಂಥೀಯ ಇರಬಹುದು, ಅದು ಅವರವರಿಗೆ ಸಂಬಂಧಪಟ್ಟಿದ್ದು. ಆದರೆ ಅವರು ಒಳ್ಳೆಯ ಲೇಖಕಿ ಮತ್ತು ಸಾಹಿತಿ. ಗೌರಿ ಹತ್ಯೆಯ ಆರೋಪಿಗಳನ್ನು ಹಿಡಿಯಬೇಕಾಗಿದ್ದವರು ಯಾರು? ಸರ್ಕಾರ ಅವರದ್ದಾಗಿದೆ, ಗೃಹ ಇಲಾಖೆಯು ಅವರ ಬಳಿ ಇದೆ. ಪೋಲೀಸರು ಅವರ ಹತ್ತಿರ ಇದ್ದಾರೆ. ಯಾವ ವ್ಯವಸ್ಥೆ ಬೇಕಾದರೂ ಮಾಡಿಕೊಳ್ಳುವ ಅಧಿಕಾರ ಅವರಲ್ಲಿದೆ. ಆರೋಪಿಗಳನ್ನು ಹಿಡಿಯಬೇಕಾಗಿದ್ದವರು ಅವರು. ಆದರೆ ಅದನ್ನು ಬಿಟ್ಟು ಮಂಗಳೂರಿನಲ್ಲಿ ಮಾನವ ಸರಪಳಿಯನ್ನು ಮಾಡಿ, ನಾನು ಗೌರಿ, ನಾನೂ ಗೌರಿ ಎಂದು ಹೇಳಿದಾಗ ಇದಕ್ಕೆ ಯಾರು ಉತ್ತರ ಕೊಡಬೇಕು? ನನಗೆ ಅನಿಸುವುದೇನೆಂದರೆ ಅವರು ನಾನೂ ಗೌರಿ ಎಂದು ಹೇಳಿ ಸಾಮಾಜಿಕ ನ್ಯಾಯ ತೋರುವಾಗ ಅದೇ ರೀತಿ ನಾನು ಪರೇಶ್‌ಮೇಸ್ತಾ ಎಂದು ಹೇಳುತ್ತಾರೆ ಎಂದುಕೊಂಡಿದ್ದೇನೆ. ಆದರೆ ಅವರು ಹೇಳುವುದಿಲ್ಲ, ಅದನ್ನು ಹೇಳುವುದು ಬೇಡ.

ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಶ್ರೀ ಪರೇಶ್ ಮೆಸ್ತಾರವರು ಬಿಜೆಪಿ ಪಕ್ಷಕ್ಕೆ ಸೇರಿದವರೇ?

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಪರೇಶ್ ಮೆಸ್ತಾ ಬಿಜೆಪಿ ಪಕ್ಷಕ್ಕೆ ಸೇರಿದವರಾಗಿದ್ದರೆ ಅವರ ಸುದ್ದಿಯನ್ನು ಹೇಳಬಾರದೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಐವನ್ ಡಿ'ಸೋಜಾಃ- ಏಕೆಂದರೆ ಅವರ ಸಂಸದರ ಅವರ ಪಕ್ಷಕ್ಕೆ ಸೇರಿದವರು ಎಂದು ಹೇಳಿದರು. ಆದರೆ ಅವರು ಯಾವ ಪಕ್ಷದಲ್ಲಿಯೂ ಇರಲಿಲ್ಲ. ಸತ್ತ ಮೇಲೆ ಅವರ ಪಕ್ಷ ಎಂದು ಹೇಳುತ್ತಾರೆಯೇ ಎಂದು ಕೇಳಿದೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿಃ- ಇದೇ ಮಾನ್ಯ ಡಿಸೋ'ಜಾರವರ ಬುದ್ಧಿವಂತಿಕೆಯಾಗಿದೆ. ಗೌರಿ ಹತ್ಯೆಯನ್ನು ಇಡೀ ಕರ್ನಾಟಕ ಖಂಡಿಸುತ್ತದೆ ಎಂಬುದರಲ್ಲಿ ಬೇಧ ಇಲ್ಲ. ಆದರೆ ನಾನೂ ಗೌರಿ, ನಾನೂ ಗೌರಿ ಎಂದು ಹೇಳುವಾಗ ಮಾನ್ಯ ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರು ನಾನೂ ಪರೇಶ್ ಮೇಸ್ತ ಎಂದು ಹೇಳಬಹುದೇ? ನಾನೂ ಸಂತೋಷ್ ಎಂದು ಹೇಳಬಹುದೇ? ನಾನು ಶರತ್ ಮಡಿವಾಳ್ ಎಂದು ಹೇಳಬಹುದೇ? ಎಂದು ಕೇಳಿದೆ. ಏಕೆಂದರೆ ಕೊಲೆಯಾದವರ ಹೆತ್ತವರಿಗೆ ನೋವು ಇದೆಯಲ್ಲವೇ? ಸಾಂತ್ವನ ಮಾಡುವಾಗ ಬರೀ ಗೌರಿ ಹೆಸರನ್ನು ಉಲ್ಲೇಖ ಮಾಡುವುದರ ಮೂಲಕ ಸಾಮಾಜಿಕ ನ್ಯಾಯವನ್ನು ತರುತ್ತಾರೆಯೇ? ಪರೇಶ್ ಮೆಸ್ತಾ ಯಾವ ಪಾರ್ಟಿ ಎಂಬುದನ್ನು ಅವರು ನಿರ್ಧಾರ ಮಾಡಲಿ. ಏಕೆಂದರೆ ಅವರ ಹತ್ತಿರ ಆಡಳಿತ ಮತ್ತು ಸರ್ಕಾರ ಇದ್ದು, ಅವರು ಏನು ಬೇಕಾದರೂ ನಿರ್ಧಾರ ಮಾಡಲಿ. ನಾನು ಇದೆಲ್ಲವನ್ನೂ ಹೇಳಬೇಕಾದ ವ್ಯವಸ್ಥೆ ನಿರ್ಮಾಣವಾಗಿದೆ.

ಇನ್ನು ಬಲವಂತದ ಮತಾಂತರಗಳ ಬಗ್ಗೆ ಹೇಳಬೇಕೆಂದರೆ ಬೆಂಗಳೂರಿನ ನಾಲ್ವರು ಸೇರಿದಂತೆ ಒಂಭತ್ತು ಜನರ ಮೇಲೆ ಪ್ರಕರಣವನ್ನು ದಾಖಲು ಮಾಡಲಾಗಿದೆ ಎಂದು ವರದಿ ಕೊಡುತ್ತಾರೆ. ಆ ವರದಿಗಳು ' ವಿವಾದಿತ ಧರ್ಮಗುರು ಝಾಕೀರ್ ನಾಯಕರ ಶಿಷ್ಯನಾಗುವಂತೆ ವಿವಾಹಿತಳನ್ನು ಒತ್ತಾಯಿಸಲಾಗಿದೆ, ಆಕೆಯನ್ನು ಸೌದಿ ಅರೇಬಿಯಾಕ್ಕೆ ಕರೆದುಕೊಂಡು ಹೋಗಿ ಐಸಿಎಸ್ ಉಗ್ರರಿಗೆ ಮಾರಾಟ ಮಾಡಲು ಯತ್ನಿಸಲಾಗಿದೆ' ಎಂದಿದೆ. ಇಂತಹ ಪ್ರಕರಣಗಳಲ್ಲಿ ಒಂಭತ್ತು ಜನರ ಮೇಲೆ ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎನ್ನುವಂತಹ ವಿಚಾರ ಇದೆ. ದಯವಿಟ್ಟು ಆಡಳಿತ ನಡೆಸುವವರು ಯೋಚನೆ ಮಾಡಬೇಕು. ಯಾವುದೇ ಜಾತಿ, ವರ್ಗ ಆಗಿರಲಿ, ಯಾರೇ ತಪ್ಪು ಮಾಡಿದರೂ ತಕ್ಷಣ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎನ್ನುವ ಸಂದೇಶವನ್ನು ಗೃಹ ಇಲಾಖೆ ಮತ್ತು ಪೋಲೀಸರ ಮೂಲಕ ಕೊಟ್ಟಿದ್ದರೆ ಇದೆಲ್ಲಾ ಆಗುತ್ತಿತ್ತೇ? ಪೋಲೀಸರು ತುಂಬಾ ಕೆಟ್ಟು ಹೋಗಿದ್ದಾರೆ ಎಂದು ನನಗೆ ಅನಿಸುವುದಿಲ್ಲ. ಅನೇಕ ಪೋಲೀಸ್ ಅಧಿಕಾರಿಗಳು ಇವತ್ತಿಗೂ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕು ಎನ್ನುವಂತಹ ನಿರ್ಧಾರಕ್ಕೆ ಬದ್ಧರಾದ ಕೆಲಸಗಳನ್ನು ಮಾಡುತ್ತಾರೆ. ಸರ್ಕಾರಕ್ಕೆ ಇನ್ನು 3 ತಿಂಗಳ ಕಾಲಾವಕಾಶ ಇದ್ದು, 5 ವರ್ಷಗಳ ಆಡಳಿತವನ್ನು ನಡೆಸಿದ್ದಾರೆ. ನಾಲ್ಕು ಬಜೆಟ್ ಮತ್ತು 5 ರಾಜ್ಯಪಾಲರ ವರದಿಗಳನ್ನು ಮಂಡನೆ ಮಾಡಿದ್ದಾರೆ. ಈ ಸುಧೀರ್ಘ ಅವಧಿಯಲ್ಲಿ ಉಳಿದ 3 ತಿಂಗಳುಗಳಲ್ಲಿ ಇಷ್ಟು ತಪ್ಪುಗಳನ್ನು ಇನ್ನಾದರೂ ಸರಿ ಮಾಡಿಕೊಳ್ಳುತ್ತಾರೆಯೇ? ಈ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ, ಯಾರೇ ಆರೋಪಿಗಳಿದ್ದರೂ, ಅವರನ್ನು ಬಂಧಿಸಲು

ಪೋಲೀಸ್ ಇಲಾಖೆಗೆ ಮುಕ್ತವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ ಎಂದು ಹೇಳುವಂತಹ ತಾಕತ್ತು ಅವರಿಗೆ ಬೇಕು ಎನ್ನುವುದು ನನ್ನ ಆಗ್ರಹವಾಗಿದೆ. ದಯವಿಟ್ಟು ಶಾಂತಿ ಸುವ್ಯವಸ್ಥೆ ಕಾಪಾಡಲು ಇನ್ನು ಮುಂದಾದರೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಾಗ ಬಹಳಷ್ಟು ಒಳ್ಳೆಯದಾಗುತ್ತದೆ ಮತ್ತು ಕೊಡಗಿಗೂ ಬಹಳ ಒಳ್ಳೆಯದಾಗುತ್ತದೆ ಎಂದು ತಿಳಿದುಕೊಂಡಿದ್ದೆನು. ಕೊಡಗಿಗೆ ಟಿಪ್ಪು ಜಯಂತಿಯ ಆಚರಣೆಗೆ ಅವಕಾಶ ಕೊಟ್ಟರು. ಟಿಪ್ಪುವಿನ ಇತಿಹಾಸವನ್ನು ಹೇಳಬೇಕೆಂದರೆ ಕೊಡಗಿನಲ್ಲಿ ಸುಮಾರು 310 ದೇವಸ್ಥಾನಗಳನ್ನು ಧ್ವಂಸ ಮಾಡಿದವನಾಗಿದ್ದಾನೆ, ಮಂಗಳೂರಿನಲ್ಲಿ ಸುಮಾರು 26 ಚರ್ಚ್‌ಗಳನ್ನು ಧ್ವಂಸ ಮಾಡಿದ್ದವನಾಗಿದ್ದಾನೆ. ಕೊಡಗರ ಜೊತೆ ಹೋರಾಟ ಮಾಡಿದಾಗ ಸುಮಾರು 31 ಬಾರಿ ಟಿಪ್ಪುವನ್ನು ಸೋಲಿಸಿದ್ದಾರೆ. ಆ ಸಂದರ್ಭದಲ್ಲಿ ಟಿಪ್ಪು ಮೋಸದಿಂದ ಕೊಡಗರನ್ನು ಊಟಕ್ಕೆ ಕರೆದು ಕೊಡಗಿನವರನ್ನು ಮಾರಣ ಹೋಮ ಮಾಡಿದ್ದಾನೆ. ಇಂತಹವರ ಜಯಂತಿಯ ಆಚರಣೆಯನ್ನು ಕೊಡಗಿನಲ್ಲಿ ಮಾಡಬೇಕೆಂದು ಕರ್ನಾಟಕದ ಯಾವ ಮುಸಲ್ಮಾನರು ಕೇಳಲಿಲ್ಲ, ಯಾವ ಕ್ರೈಸ್ತರೂ ಕೇಳಲಿಲ್ಲ, ಯಾರೂ ಕೇಳಲಿಲ್ಲ. ಆದರೆ ಕೊಡಗು ಕಾವೇರಿ ನದಿ ಹುಟ್ಟುವ ಭೂಮಿ ಎಂದು ತಿಳಿದುಕೊಂಡಿದ್ದೇವೆ. ಏಕೆಂದರೆ ನೀರಿಗೆ ಹಾಹಾಕಾರ ಬಂದಾಗ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ, ಬಹಳ ಕಡೆ ಗಲಾಟೆಯಾಗುತ್ತದೆ. ನಾನು 2016ನೇ ಡಿಸೆಂಬರ್‌ನ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಮಾನ್ಯ ಸಭಾಪತಿಯವರ ಮೂಲಕ ಒಂದು ಮನವಿಯನ್ನು ಮಾಡಿದೆ. ಅದೇನೆಂದರೆ ನಾಡಿನ ದೊರೆ ಈ ನಾಡು ಸಮೃದ್ಧಿ ಮತ್ತು ನೆಮ್ಮದಿಯಿಂದ ಇರಬೇಕಾದರೆ ತಲಕಾವೇರಿಗೆ ಪೂಜೆಯನ್ನು ಮಾಡಬೇಕು, ಆ ನೀರನ್ನೇ ನಾವು ಕುಡಿಯುತ್ತೇವೆ. ಮೈಸೂರು, ಮಂಡ್ಯ, ತಮಿಳು ನಾಡಿನ ಭಾಗದ ಜನರು ಇರಬಹುದು, ಆ ನೀರನ್ನು ಕುಡಿಯಲು ಮತ್ತು ವ್ಯವಸಾಯವನ್ನು ಮಾಡಲು ಉಪಯೋಗಿಸಿಕೊಂಡು ಸಮೃದ್ಧಿಯಾಗಿ ಬದುಕುತ್ತಿದ್ದೇವೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಡಿಕೇರಿ ಹೋದ ಸಂದರ್ಭದಲ್ಲಿ ತಲಕಾವೇರಿಯಲ್ಲಿ ಪೂಜೆ ಮಾಡುತ್ತೇನೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಗೆ ಬಂದು ಅವರ ಸಾಧನೆಯ ಸಮಾವೇಶದ ಕಾರ್ಯಕ್ರಮವನ್ನು ಮಾಡಿದರು. (ಮುಂದು)

(25) 6.2.2018 : 4.20 ಪಿಕೆ:ಬಿಎನ್‌ಎಸ್

ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಮುಂದುವರೆದಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದರು. ಅಲ್ಲಿ "ಸಾಧನ ಸಮಾವೇಶ" ಕಾರ್ಯಕ್ರಮವನ್ನು ಮಾಡಿದರು. ಆ ಮೂಲಕ ಸರ್ಕಾರ ಮಾಡಿದ ಕೆಲಸಗಳನ್ನು ಹೇಳಿದರು, ಸಂತೋಷ. ಆದರೆ ತಲಕಾವೇರಿಗೆ ಬರಲಿಲ್ಲ, ಸದನದಲ್ಲಿ ಕೊಟ್ಟ ಭರವಸೆಯಂತೆ ನಡೆದುಕೊಳ್ಳಲಿಲ್ಲ. ಈ ಮುಖ್ಯಮಂತ್ರಿಗಳು ಅಲ್ಲಿ ಬಂದು ಟಿಪ್ಪುವಿನ ಗುಣಗಾನ ಮಾಡುತ್ತಾರೆ. ಟಿಪ್ಪುವಿಗೆ ಸಂಬಂಧಪಟ್ಟಂತೆ ಕೊಡಗಿನ ಇತಿಹಾಸ ನೋಡಿದರೆ ಅದು ನೋವು ತರುವಂಥದ್ದು. ಕೊಡಗು ಜಿಲ್ಲೆ ದೇಶಕ್ಕೆ ಜನರಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಅವರಂಥವರನ್ನು ಕೊಟ್ಟಿದೆ. ಇವರನ್ನು ವಿಶ್ವವೇ ಗುರುತಿಸುತ್ತದೆ. ಕಾವೇರಿ ಉಗಮವಾಗುವ ಇಂಥವರ ನಾಡಿನಲ್ಲಿ, ಟಿಪ್ಪು 310 ದೇವಸ್ಥಾನಗಳನ್ನು ಧ್ವಂಸ ಮಾಡುತ್ತಾನೆ, ಮೇಲುಕೋಟೆಯಲ್ಲಿ ಐಯ್ಯಂಗಾರ್‌ಗಳ ಮಾರಣ ಹೋಮ ಮಾಡುತ್ತಾನೆ, ಕೇರಳದಲ್ಲಿ ನಾಯರ್‌ಗಳ ಮಾರಣ ಹೋಮ ಮಾಡುತ್ತಾನೆ, ಮಂಗಳೂರಿನಲ್ಲಿ 26 ಚರ್ಚ್‌ಗಳನ್ನು ಧ್ವಂಸ ಮಾಡುತ್ತಾನೆ. ಮಂಗಳೂರು ದರ್ಶನ ಎನ್ನುವ ಒಂದು ಪುಸ್ತಕವನ್ನು ಮಾನ್ಯ ವಿನಯ್ ಕುಮಾರ್ ಸೊರಕೆಯವರು ಬಿಡುಗಡೆ ಮಾಡಿದರು. ಆ ಪುಸ್ತಕದಲ್ಲಿ, ಟಿಪ್ಪು ಒಬ್ಬ ಕ್ರೂರಿ ಎನ್ನುವ ಮಾತು ಇದೆ . . .

**ಶ್ರೀ ವಿ.ಎಸ್.ಉಗ್ರಪ್ಪ:**-ಮಾನ್ಯ ಸಭಾಪತಿಗಳೆ, ನನ್ನದು point of order ಇದೆ.

**ಸಭಾಪತಿಯವರು:**- ನಿಮ್ಮ point of order ಏನು?

**ಶ್ರೀ ವಿ.ಎಸ್.ಉಗ್ರಪ್ಪ:**-ಮಾನ್ಯ ಸಭಾಪತಿಗಳೆ, ಸಂವಿಧಾನದ Article 51A (b) reads as under:

> ***"(b) to cherish and follow the noble ideals which inspired our national struggle for freedom"***

ಯಾವ ಟಿಪ್ಪು . . .

**ಸಭಾಪತಿಯವರು:**- ಟಿಪ್ಪುವಿನ ವಿಚಾರ ಬೇಡ, ನಿಮ್ಮ point of order ಏನು ಎಂಬುದನ್ನು ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:**-ಸಂವಿಧಾನದ Article 51A ಕೆಳಗಡೆ, ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ಯಾರೆಲ್ಲಾ ಹೋರಾಡಿದ್ದಾರೋ . . .ಟಿಪ್ಪು ಕೂಡ ಬ್ರಿಟಿಷರ ವಿರುದ್ಧ ಎರಡು ಸಲ ಹೋರಾಡಿದ್ದಾರೆ . . . (ಗೊಂದಲ)

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ:-**ನಮ್ಮ ಪ್ರಕಾರ ಅವರು ಸ್ವತಂತ್ರ ಹೋರಾಟಗಾರರಲ್ಲ . . .

(ಗೊಂದಲ)

**ಸಭಾಪತಿಯವರು:-** ಈಗ ಟಿಪ್ಪುವಿನ ಬಗ್ಗೆ ಚರ್ಚೆ ಬೇಡ. ಮಾನ್ಯ ಉಗ್ರಪ್ಪನವರೇ, ನಿಮ್ಮ point of order ಏನು ಹೇಳಿ? What is your point of order?

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-**ಟಿಪ್ಪುವನ್ನು ತೆಗಳತಕ್ಕಂಥ ಮಾನ್ಯ ಸದಸ್ಯರ ವಾದ ಏನಿದೆ ಅದು ಸಂವಿಧಾನದ Article 51A ಪ್ರಕಾರ fundamental duties ಗೆ ವಿರುದ್ಧವಾಗಿದೆ. ಭಾರತಕ್ಕೆ ಸ್ವತಂತ್ರ ತಂದು ಕೊಡುವಲ್ಲಿ ಟಿಪ್ಪು ಹೋರಾಟ ಮಾಡಿದ್ದಾರೆ, ತ್ಯಾಗವನ್ನು ಮಾಡಿದ್ದಾರೆ. ಅಂತಹ ವ್ಯಕ್ತಿಯ ಮೇಲೆ ಆಪಾದನೆ ಮಾಡುತ್ತಿರುವುದು ಸಂವಿಧಾನಬಾಹಿರ ಆಗುತ್ತದೆ. ಈ ಹಿನ್ನೆಲೆಯಲ್ಲಿ ನನ್ನ point of order ಮೇಲೆ ಆದೇಶವನ್ನು ಮಾಡಬೇಕು, ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸುನಿಲ್ ಸುಬ್ರಮಣಿಯವರೇ, ತಾವೇನು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರೋ, ಯಾವ context ನಲ್ಲಿ ಹೇಳಹೊರಟಿದ್ದೀರೋ ಅದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ. ಇವತ್ತಿನ ಚರ್ಚೆ ವಿಷಯಾಂತರ ಆಗಬಾರದು. ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆಯ ಬಗ್ಗೆ ಈಗ ಚರ್ಚೆ ಆಗುತ್ತಿದೆ. ನೀವು ಪ್ರಾಸಂಗಿಕವಾಗಿ ಒಂದು ಹೆಸರನ್ನು ತೆಗೆದುಕೊಂಡಾಗ ಮಾನ್ಯ ಸದಸ್ಯರು ಮಧ್ಯೆ ಬಾಯಿ ಹಾಕಿದರು. ಹೀಗಾದರೆ ಚರ್ಚೆ ಎಲ್ಲಿಗೆ ಹೋಗುತ್ತದೆ? ಕಾನೂನು ಸುವ್ಯವಸ್ಥೆ ಬಗೆಗಿನ ಚರ್ಚೆ ಬಿಟ್ಟು ಬೇರೆ ಯಾವುದೋ ವಿಷಯಕ್ಕೆ ಹೋಗಿಬಿಡುತ್ತದೆ. Please, be careful. ವಿಷಯಾಂತರ ಮಾಡುವುದು ಬೇಡ. ನಿಮ್ಮ ಮಾತುಗಳನ್ನು ಮುಂದುವರೆಸಿ.

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ:-** ಕೊಡಗಿನಲ್ಲಿ ಶ್ರೀ ಕುಟ್ಟಪ್ಪ ಎನ್ನುವವರ ಹತ್ಯೆಯಾಯಿತು. ಆ ಸಂದರ್ಭದಲ್ಲಿ ಗೃಹ ಮಂತ್ರಿಗಳಾಗಿದ್ದ ಮಾನ್ಯ ಪರಮೇಶ್ವರ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಕೇರಳದಿಂದ ಎರಡು ಸಾವಿರ ಜನ ಬಂದಿದ್ದರು ಎಂದು ಅವರೇ ಉತ್ತರ ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಶ್ರೀ ಕುಟ್ಟಪ್ಪನವರು ಕಟ್ಟರ್ ಹಿಂದೂ ಅಭಿಮಾನಿಯಾಗಿದ್ದರು. ಆತ ಸತ್ತಾಗ ಇವರಿಗೆ ತೊಂದರೆ ಆಗುವುದಿಲ್ಲ, ನೋವಾಗುವುದಿಲ್ಲ. ಮಾನ್ಯ ಉಗ್ರಪ್ಪನವರು ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಾಗ ಅಲ್ಲಿನ D.C. (Deputy Commissioner) ಅವರನ್ನು ಹಿಗ್ಗಾ-ಮುಗ್ಗ ಬೈದರು, ನಿರೀಕ್ಷಿತ ಮಟ್ಟಕ್ಕೆ ಅಲ್ಲಿ ಕೆಲಸ ಆಗಿಲ್ಲ ಎಂದು ಪ್ರಸ್ತಾಪ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆ, ಸಂತೋಷ. ಮಾನ್ಯ ಉಗ್ರಪ್ಪನವರು ಈ ಸದನಕ್ಕೆ ಹಿರಿಯರು. ನಾನು ಜ್ಯೂನಿಯರ್. ನಾನು ಮಾತನಾಡುವಾಗ ದಯವಿಟ್ಟು ತಾವು ನನಗೆ ಸಹಕಾರ ಕೊಡಬೇಕು. ತಾವು ಹಿರಿಯರಾಗಿ ಒಬ್ಬ ಜ್ಯೂನಿಯರ್‌ಗೆ ಏನಾದರೂ ಹೇಳುವುದಿದ್ದರೆ ಖಾಸಗಿಯಾಗಿ ಕರೆದು ಹೇಳಬಹುದು. ಅದು ನಿಮ್ಮ ದೊಡ್ಡತನ. ಆದರೆ ನನ್ನಂಥವನಿಗೆ ಈ ಸದನದಲ್ಲಿ ಮಾತನಾಡುವುದಕ್ಕೆ ತೊಂದರೆ ಕೊಡುವುದು ಸರಿಯಲ್ಲ.

**ಸಭಾಪತಿಯವರು**:- ನೀವು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಮಾತನಾಡಿ. ಅದು ಬಿಟ್ಟು ಬೇರೆ ಏನನ್ನೋ ಮಾತನಾಡುತ್ತಿದ್ದೀರಿ. ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಿ. ಏನೋ ಪ್ರಾಸಂಗಿಕವಾಗಿ ನೀವು ಒಂದು ಮಾತನಾಡಿದಿರಿ, ಅವರೂ ಕೂಡ ಅದರ ಬಗ್ಗೆ ಮಾತನಾಡಿದರು. ಆ ವಿಷಯ ಸಾಕು. ದಯವಿಟ್ಟು ಮುಂದೆ ಮಾತನಾಡಿ.

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ**:- ಆ ಸಂದರ್ಭದಲ್ಲಿ ಶ್ರೀ ಕುಟ್ಟಪ್ಪನವರ ಹತ್ಯೆಯಾಯಿತು, ಒಬ್ಬ ಮುಸ್ಲಿಂನ ಹತ್ಯೆಯಾಯಿತು. ಸಾವಿರಾರು ಜನ ಪೋಲೀಸರನ್ನು ಇಟ್ಟುಕೊಂಡು, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಟಿಪ್ಪುವಿನ ಕಾರ್ಯಕ್ರಮ ಮಾಡುವುದು ಅವಶ್ಯಕತೆ ಇತ್ತೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಶ್ರೀ ದೀಪಕ್‌ರವರು ಹತ್ಯೆಯಾಯಿತು. ಈ ನಿಟ್ಟಿನಲ್ಲಿ ಯಾವ ರೀತಿಯ ಕ್ರಮ ಕೈಗೊಂಡಿರಿ? ಶ್ರೀ ಶರತ್ ಮಡಿವಾಳರವರ ಹತ್ಯೆಯಾಯಿತು. ಈ ನಿಟ್ಟಿನಲ್ಲಿ ಯಾವ ರೀತಿ ಕ್ರಮ ಕೈಗೊಂಡಿದ್ದೀರಿ? ಹಿಂದೆ ಮಾನ್ಯ ಗೃಹ ಸಚಿವರು, ಬಸವಣ್ಣನವರ ಜಯಂತಿಯನ್ನೂ ಮಾಡುತ್ತಿದ್ದೇವೆ ಎಂಬ ಮಾತನ್ನು ಹೇಳಿದ್ದರು. ಬಸವಣ್ಣನವರಿಗೂ ಮತ್ತು ಟಿಪ್ಪುವಿಗೂ ಹೋಲಿಕೆ ಮಾಡುವುದು ಸರಿಯೇ? ಬಸವಣ್ಣನವರು ಅನುಭವ ಮಂಟಪವನ್ನು ಸ್ಥಾಪನೆ ಮಾಡಿದರು. 12ನೇ ಶತಮಾನದಲ್ಲಿ ಉತ್ತಮ ಕೆಲಸ ಮಾಡಿದ ಬಸವಣ್ಣನವರಿಗೂ ಟಿಪ್ಪುವಿಗೂ ಹೋಲಿಕೆ ಮಾಡುವುದು ಸರಿಯಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ನಡೆಸುತ್ತಿರುವವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ತಲಕಾವೇರಿಗೆ ಭೇಟಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಮನವಿ ಮಾಡಿದ್ದೆ. ಅವರು ನುಡಿದಂತೆ ನಡೆಯಲಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:-ಮಾನ್ಯ ಸಭಾಪತಿಗಳೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಬಹುಶಃ ಸಾಕಷ್ಟು ವಿಚಾರಗಳನ್ನು ಮಾತನಾಡಿದ್ದೇವೆ. ಆದರೆ ನಾವಿಲ್ಲಿ ಮಾತನಾಡಿದ ಮೇಲೆ ಅದಕ್ಕೆ ಪರಿಹಾರ ಸಿಗುತ್ತದೆ ಎನ್ನುವ ವಿಶ್ವಾಸ ಇಲ್ಲ. ಸರ್ಕಾರ ನಾಲ್ಕು ಮುಕ್ಕಾಲು ವರ್ಷಗಳ ಆಳ್ವಿಕೆ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು, ರಾಜ್ಯಕ್ಕೆ ಸುಭಿಕ್ಷವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಡಳಿತವನ್ನು ಕೊಡುತ್ತೇವೆ, ಎಲ್ಲರನ್ನು ಸರಿಸಮಾನವಾಗಿ ಕಾಣುತ್ತೇವೆ ಎನ್ನುವ ಮಾತನ್ನು ಹೇಳಿ ಅಧಿಕಾರಕ್ಕೆ ಬಂದರು. ಹೊಸ ಸರ್ಕಾರ ಆಡಳಿತಕ್ಕೆ ಬಂತು. ಆದರೆ ನಂತರ ಮಾಡಿದ್ದೇನು? ಬಂದಂಥ ಪ್ರಥಮ ಹಂತದ ಒಳಗೆ ಕಾನೂನು ಸುವಸ್ಯವಸ್ಥೆ ಕಾಪಾಡುವುದನ್ನು ಬಿಟ್ಟು ಕಾನೂನನ್ನು ಒಡೆಯುವ ಪ್ರಯತ್ನ ಮಾಡಿದರು ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಇಡೀ ದೇಶದ ಒಳಗೆ ತುಂಬಾ ಶಾಂತಿ ಪ್ರಿಯರು ಎಂದರೆ ಕರ್ನಾಟಕ ರಾಜ್ಯದ ಜನ ಎನ್ನುವ ಭಾವನೆ ಇತ್ತು. ಇವತ್ತು ಈ ದೇಶದ ಒಳಗೆ ಎಲ್ಲಿ ಕೋಮು ಗಲಭೆ, ಎಲ್ಲಿ ಜಾತಿ-ಜಾತಿಗಳ ನಡುವೆ ಹೋರಾಟ, ಹೊಡೆದಾಟ ಮಾಡುತ್ತಿದ್ದಾರೆ ಎಂದು ಕೇಳಿದರೆ ಪ್ರಥಮ ಸ್ಥಾನದಲ್ಲಿ ಕರ್ನಾಟಕ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ನಾವು ಏನೆಂದು ಹೇಳಬೇಕು? ಯಾರನ್ನು ಗುರಿ ಮಾಡಿ ಹೇಳಬೇಕು? ಆಡಳಿತವನ್ನು ಯಾರು ನಡೆಸುತ್ತಿದ್ದಾರೋ ಅವರು, ನಿರ್ಮಾಣವಾಗುವಂತಹ ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ಬರುವಂತಹ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು ಸರ್ಕಾರದ ಕರ್ತವ್ಯ. ಇಂತಹ ಸಂದರ್ಭಗಳು ಬಂದಾಗ ಅದನ್ನು ಸೂಕ್ತ ರೀತಿಯಲ್ಲಿ ನಿಭಾಯಿಸುತ್ತಾರೆ ಎಂದು ಇಡೀ ರಾಜ್ಯದ ಜನತೆ ವಿಶ್ವಾಸ ಇಟ್ಟು ನಿಮ್ಮನ್ನು ಅಧಿಕಾರಕ್ಕೆ ತಂದರು. ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಏನು ಮಾಡಿತು? ಇವತ್ತು ಒಬ್ಬ ಮನುಷ್ಯ ಧೈರ್ಯದಿಂದ ರಸ್ತೆಯಲ್ಲಿ ತಿರುಗಾಡುವುದಕ್ಕೆ ಆಗುತ್ತಿಲ್ಲ. ಒಬ್ಬ ಮಹಿಳೆ ಸಂಜೆ 6-7 ಗಂಟೆ ಆದಮೇಲೆ ಬೀದಿಯಲ್ಲಿ ತಿರುಗಾಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಮೂಲ ಕಾರಣಕರ್ತರು ಯಾರು? ಇಂತಹ ಸಮಸ್ಯೆಗಳನ್ನು ನಿವಾರಿಸಲು ಪೋಲೀಸ್ ವ್ಯವಸ್ಥೆಯ ಜೊತೆ ಎಲ್ಲಾ ರೀತಿಯ ವ್ಯವಸ್ಥೆಗಳು ಸರ್ಕಾರದ ಬಳಿ ಇವೆ. ಆದರೂ ಈ ರೀತಿಯ ಪರಿಸ್ಥಿತಿ ಏಕೆ ನಿರ್ಮಾಣವಾಗಿದೆ? ಇದಕ್ಕೆ ರಾಜ್ಯ ಸರ್ಕಾರ ಉತ್ತರ ಕೊಡಬೇಕಾಗಿದೆ. ನಾನು ಮಾತನಾಡುವ ಪ್ರಾರಂಭದಲ್ಲೇ, ಈ ಕುರಿತು ಮಾತನಾಡಬೇಕೋ ಬೇಡವೋ ಗೊತ್ತಾಗುತ್ತಿಲ್ಲ, ಏಕೆಂದರೆ ಇದಕ್ಕೆ ಪರಿಹಾರ ಇಲ್ಲ ಎಂಬ ಮಾತನ್ನು ಹೇಳಿದೆ. ವಿರೋಧ ಪಕ್ಷದ ನಾಯಕರು, ದಿನಂಪ್ರತಿ ಯಾವರೀತಿಯ ಪರಿಸ್ಥಿತಿಗಳು ಉಂಟಾಗುತ್ತಿವೆ ಎಂಬ ಬಗ್ಗೆ ವಿವರವಾಗಿ ಹೇಳಿದರು. ಈ ಸರ್ಕಾರಕ್ಕೆ ಇನ್ನೂ 3 ತಿಂಗಳಿದೆ. ಸರ್ಕಾರದ ಅವಧಿ ಕೇವಲ ಒಂದು ತಿಂಗಳಿದ್ದರೂ ಕಾನೂನನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಅಧಿಕಾರ ಇರುತ್ತದೆ. ಏಕೆ ಆ ದಿಸೆಯಲ್ಲಿ ಪ್ರಯತ್ನ ಮಾಡುತ್ತಿಲ್ಲ? ಇದರಲ್ಲಿ ರಾಜಕಾರಣ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ಎಲ್ಲೋ ಒಂದು ಕಡೆ ಜಾತಿ-ಜಾತಿಯನ್ನು ಒಡೆಯುವಂಥದ್ದು, ಪ್ರತ್ಯೇಕ ವರ್ಗವನ್ನು ನಿಮ್ಮ ಪರವಾಗಿ ಪಾಲಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ ಎನ್ನುವ ಅನುಮಾನ ಬರುತ್ತಿದೆ. ಒಬ್ಬ ಶಾಸಕನಾಗಿ ಆಯ್ಕೆಯಾದವರಿಗೆ ಇವತ್ತು ಭದ್ರತೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಚಿಕ್ಕಮಗಳೂರಿನ ಶಾಸಕರಾದ ಮಾನ್ಯ ಸಿ.ಟಿ.ರವಿ ಅವರಿಗೆ ಒಂದು ವಾರದ ಹಿಂದೆ ಒಂದು ಬೆದರಿಕೆ ಪತ್ರ ಬಂತು. ನಿಮ್ಮನ್ನು ಕೊಲೆ ಮಾಡಲಾಗುತ್ತದೆ ಎಂದು ಆ ಬೆದರಿಕೆ ಪತ್ರದಲ್ಲಿ ಹೇಳಲಾಗುತ್ತದೆ. ಇಂತಹ ಸನ್ನಿವೇಶ ಬಂದಾಗ ನಿಮ್ಮ ಸರ್ಕಾರದ ನಿರ್ಧಾರ ಏನು? ನಿಮ್ಮ ಸರ್ಕಾರ ಏನು ಕ್ರಮ ಕೈಗೊಂಡಿದೆ? ಈ ರೀತಿ ಬೆದರಿಕೆ ಪತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸಿದಂಥವರ ಹುಡುಕಾಟದ ಪ್ರಯತ್ನ ನಡೆದಿದೆಯೇ? ಏಕೆ ಪ್ರಯತ್ನ ಆಗುತ್ತಿಲ್ಲ? ಒಬ್ಬ ಶಾಸಕನಿಗೆ ನೀವು ಭದ್ರತೆ ಕೊಡುವುದಕ್ಕಾಗುವುದಿಲ್ಲ ಎನ್ನುವುದಾದರೆ ಸಾಮಾನ್ಯ ಜನತೆಗೆ ಯಾವರೀತಿ ಭದ್ರತೆ ಕೊಡುತ್ತೀರಿ? ಇದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ನಾವೇ ರಸ್ತೆಗಳಲ್ಲಿ ತಿರುಗಾಡುವುದಕ್ಕಾಗದ ಪರಿಸ್ಥಿತಿ ಇದ್ದು, ಯಾವತ್ತು ಹೆಣವಾಗಿ ಬೀಳುತ್ತೇವೆಯೋ ಎನ್ನುವ ಭಾವನೆ ಬರುತ್ತಿದೆ. ಇನ್ನೂ ಕೂಡ ಸರ್ಕಾರಕ್ಕೆ ಇದು ಸಮಸ್ಯೆ ಎಂದು ಅನ್ನಿಸಲೇ ಇಲ್ಲವೇ? ಏಕೆ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ? ಕಾಂಗ್ರೆಸ್ ಪಕ್ಷವನ್ನು ಗುರಿ ಮಾಡಿಕೊಂಡು ಮಾತನಾಡಬೇಕು ಎನ್ನುವುದು ನಮ್ಮ ದೃಷ್ಟಿಕೋನವಲ್ಲ. ಈ ರಾಜ್ಯದ ಒಳಗೆ ಶಾಂತಿ ನೆಲೆಸಬೇಕು. ಎಲ್ಲರೂ ಧೈರ್ಯದಿಂದ ತಿರುಗಾಡುವ ವ್ಯವಸ್ಥೆ ಆಗಬೇಕು. ಈ ಸರ್ಕಾರ ವೇದಿಕೆಗಳಲ್ಲಿ ಮಾತನಾಡುವಾಗೆಲ್ಲಾ, ನಾವು ಮಹಿಳೆಯರಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ, ಹೆಣ್ಣು ಮಕ್ಕಳು ನಮ್ಮ ಅಕ್ಕ-ತಂಗಿಯರ ಸಮಾನ, ನಮ್ಮ ತಾಯಂದಿರ ಸಮಾನ ಎಂದು ಪ್ರತಿ ಬಾರಿಯೂ ಹೇಳುತ್ತದೆ. ವೇದಿಕೆ ಮೇಲಿಂದ ಇಳಿದ ಮೇಲೆ ನಿಮ್ಮ ಅಭಿಪ್ರಾಯಗಳೇನು, ನಿಮ್ಮ ಅನಿಸಿಕೆಗಳೇನು ಎಂಬುದನ್ನು ಜನತೆಯ ಮುಂದೆ ವ್ಯಕ್ತಪಡಿಸಿ.

(ಮುಂದು . . .)

ಶ್ರೀ ಎಂ.ಕೆ.ಪ್ರಾಣೇಶ್(ಮುಂದು):-

ಈಗ ಗೌರಿ ಲಂಕೇಶ್ ರವರ ಹತ್ಯೆಯನ್ನು ಎಲ್ಲರೂ ಉಲ್ಲೇಖ ಮಾಡಿದ್ದಾರೆ. ಇಷ್ಟೊಂದು ದೊಡ್ಡದಾಗಿ ಕೆಲವೇ ದಿನಗಳಲ್ಲಿ ನಮ್ಮ ಗೃಹ ಮಂತ್ರಿಗಳು 'ನಾವು ಗೌರಿ ಲಂಕೇಶ್ ರವರನ್ನು ಕೊಲೆ ಮಾಡಿದವರನ್ನು ಪತ್ತೆ ಹಚ್ಚಿದ್ದೇವೆ. ಸದ್ಯದಲ್ಲೇ ಅವರನ್ನು ಬಂಧಿಸುವಂತಹ ವ್ಯವಸ್ಥೆ ಆಗುತ್ತದೆ' ಎಂದು ಇಡೀ ರಾಜ್ಯದ ಜನತೆಗೆ ಹೇಳಿಕೆಯನ್ನು ಕೊಡುತ್ತಾರೆ. ಏಕೆ ದಿಕ್ಕು ತಪ್ಪಿಸುವಂತಹ ಕೆಲಸವನ್ನು ಮಾಡಿದ್ದಾರೆ? ಕೊಲೆ ಮಾಡಿದವರು ಯಾರು ಎಂದು ಗೃಹ ಇಲಾಖೆಗೆ ಗೊತ್ತಿದೆಯಲ್ಲಾ ಅವರನ್ನು ಬಂಧಿಸಿ. ರಾಜ್ಯದ ಒಬ್ಬ ಗೃಹ ಮಂತ್ರಿಯ ಹೇಳಿಕೆಗಳು ಅಷ್ಟು ಹಗುರವಾದ ಹೇಳಿಕೆಗಳೇ? ಮಾನ್ಯ ಗೃಹ ಮಂತ್ರಿಗಳು ಈ ಮಾತನ್ನು ಹೇಳಿದರು. 'ನಮಗೆ ಗೌರಿ ಹಂತಕರ ಸುಳಿವು ಸಿಕ್ಕಿದೆ, ಇನ್ನು ಕೆಲವೇ ದಿನಗಳಲ್ಲಿ ಅವರನ್ನು ಬಂಧಿಸುವ ಕೆಲಸವನ್ನು ನಾವು ಮಾಡುತ್ತೇವೆ' ಎನ್ನುವ ಮಾತನ್ನು ಹೇಳಿದರು. ಆರು ತಿಂಗಳಾಯಿತು, ಏಳು ತಿಂಗಳಾಯಿತು, ಅವರನ್ನು ಏಕೆ ಬಂಧಿಸಲಿಲ್ಲ? ಅವರೇನಾದರೂ ನಿಮ್ಮ ಅಭಿಮಾನಿಗಳೇ? ಕೊಲೆಯಾದ ದಿವಸದಲ್ಲಿ ಇದರ ಹಿಂದೆ ಒಬ್ಬ ಹಿಂದುವಿನ ಕೈವಾಡವಿದೆ ಎಂದು ಬಿಂಬಿಸಲಾಯಿತು. ಅವತ್ತು ಈ ಹೇಳಿಕೆಗಳನ್ನು ಕೊಟ್ಟಿದ್ದೀರಿ. ಆದರೆ ವಿಚಾರ ಮಾಡಿದಾಗ ಯಾವ ಹಿಂದುಗಳು, ಯಾವುದೇ ಹಿಂದೂಪರ ಸಂಘಟನೆಗಳು ಇದರಲ್ಲಿ ಇಲ್ಲ ಎನ್ನುವುದು ನಿಮಗೆ ಗೊತ್ತಾಯಿತು. ಹಾಗಾಗಿ ಆ ತನಿಖೆಯನ್ನು ಕೈಬಿಟ್ಟಿದ್ದೀರಿ. ಈಗ ನಿಮ್ಮ ಹತ್ತಿರ ಮಾಹಿತಿ ಇರುವುದರಿಂದ ಅವರನ್ನು ಬಂಧಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಒತ್ತಾಯವೇನೆಂದರೆ, ಗೌರಿ ರವರನ್ನು ಹತ್ಯೆ ಮಾಡಿದವರನ್ನು ಬಂಧಿಸಿ. ಈಗ ಅದರಲ್ಲಿ ರಾಜಕಾರಣ ಮಾಡುವುದಕ್ಕೆ ಹೊರಟಂತೆ ಭಾಸವಾಗುತ್ತಿದೆ. ಎಲ್ಲಿಯೋ ಒಂದು ಕಡೆ ಮಾನವ ಸರಪಳಿಯನ್ನು ನಿರ್ಮಾಣ ಮಾಡುತ್ತೀರಿ, 'ನಾನು ಗೌರಿ, ನಾನು ಗೌರಿ' ಎಂದು ಹೇಳುತ್ತೀರಿ, ಇದರ ಮೂಲ ಉದ್ದೇಶ ಏನು? ಕಲಬುರಗಿ ಅವರ ಹತ್ಯೆಯಾಗಿ ಎಷ್ಟು ಸಮಯವಾಯಿತು? ಅವತ್ತು ಕೂಡ ಯಾರೋ ಹಣೆಗೆ ಕುಂಕುಮ ಇಟ್ಟರೆ ಅವನನ್ನು ಹಿಂದುಪರ ಸಂಘಟನೆ ಎಂದು ಗುರುತು ಮಾಡುತ್ತೀರಿ, ಅವನಿಂದ ಹತ್ಯೆಯಾಯಿತು ಎಂದು ಹೇಳುತ್ತೀರಿ, ಅವತ್ತು ಕೂಡ ಕಲಬುರಗಿ ಅವರ ಹತ್ಯೆಯನ್ನು ಹಿಂದುಪರ ಸಂಘಟನೆಗಳು ಮಾಡಿದರು ಎಂದು ಹೇಳುತ್ತೀರಿ, ಮತ್ತೆ ಏಕೆ ಅವರನ್ನು ಬಂಧಿಸಲಿಲ್ಲ? ತನಿಖೆ ಮಾಡಿದಂತಹ ಸಂದರ್ಭದಲ್ಲಿ ಸುಳಿವು ಸಿಕ್ಕಿತು ಎಂದು ಕೂಡ ಹೇಳಿದ್ದೀರಿ. ಅಲ್ಲೂ ಕೂಡ ನೀವು ಬಂಧಿಸಲಿಲ್ಲ. ಇದರ ಮೂಲ ಉದ್ದೇಶಗಳು ಖಂಡಿತವಾಗಿಯೂ ಈ ರಾಜ್ಯದ ಜನತೆಗೆ ಗೊತ್ತಾಗುತ್ತಿದೆ. ಸರ್ಕಾರದವರು ಏನು ಮಾಡಿದ್ದೀರಿ? ಸರ್ಕಾರದ ಬಗ್ಗೆ ಖಂಡಿತವಾಗಿಯೂ ಏನು ಹೇಳಬೇಕು, ಯಾವ ಪದಗಳನ್ನು ಬಳಸಬೇಕು ಎಂಬುದು ಗೊತ್ತಾಗುತ್ತಿಲ್ಲ. ಜನರು ವಿಶ್ವಾಸ ಇಡುತ್ತಾರೆ, ನಿಮ್ಮ ಬಗ್ಗೆಯೂ ವಿಶ್ವಾಸ ಇಡುತ್ತಾರೆ, ಸರ್ಕಾರದ ಮೇಲೆ ವಿಶ್ವಾಸ ಇಡುತ್ತಾರೆ, ಮಂತ್ರಿಗಳ ಮೇಲೆ ಭರವಸೆಗಳನ್ನಿಟ್ಟುಕೊಳ್ಳುತ್ತಾರೆ. ಆದರೆ ನಿಮ್ಮ ಭರವಸೆಗಳನ್ನೆಲ್ಲಾ ಹುಸಿ ಮಾಡಿದ್ದಾರೆ. ಆದರೆ, ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಬಹುಶಃ ಯಾರನ್ನು ಮೆಚ್ಚಿಸುವುದಕ್ಕಾಗುವುದಿಲ್ಲ ದೇವರು ಮೆಚ್ಚುವಂತಹ ಕೆಲಸಗಳನ್ನು ಮಾಡಿ. ಕೇವಲ ರಾಜಕಾರಣ ಶಾಶ್ವತವಲ್ಲ. ನಾನು ಕೆಡಿಪಿ ಸಭೆಗಳಲ್ಲಿ ಯಾವಾಗಲೂ ಲಂಚ ತೆಗೆದುಕೊಳ್ಳುವವರಿಗೆ ಒಂದು ಮಾತನ್ನು ಹೇಳುತ್ತಿರುತ್ತೇನೆ, 'ನೀವು ಸಾಮಾನ್ಯ ಮನುಷ್ಯರಿಂದ ಲಂಚವನ್ನು ತೆಗೆದುಕೊಂಡು ಈಗ ಆನಂದವನ್ನು ಅನುಭವಿಸುತ್ತಿದ್ದೀರಿ. ಆದರೆ ನೀವು ನಿವೃತ್ತಿ ಹೊಂದಿದಂತಹ ಸಮಯದಲ್ಲಿ ಆ ದುಡಿದಂತಹ ಹಣವನ್ನು ಪೂರ್ಣವಾಗಿ ಆಸ್ಪತ್ರೆಗೆ ಕೊಡುವಂತಹ ವ್ಯವಸ್ಥೆ ಆಗುತ್ತದೆ. ಅದಕ್ಕೆ ಮೇಲೊಬ್ಬ ಇದ್ದಾನೆ, ಅದನ್ನು ನೋಡುತ್ತಿರುತ್ತಾನೆ' ಎನ್ನುವ ಮಾತನ್ನು ಹೇಳುತ್ತಿರುತ್ತೇನೆ. ನಿಮಗೆ ನಾಲ್ಕು ಮುಕ್ಕಾಲು ವರ್ಷ ಜನರು ಅವಕಾಶ ಕೊಟ್ಟಿದ್ದಾರೆ, ಅದರಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದರೆ ಈ ತರಹದ ಸಮಸ್ಯೆಗಳನ್ನೆಲ್ಲಾ ಪರಿಹಾರ ಮಾಡಿದ್ದರೆ ನಿಮಗೆ ಮುಂದೆ ಅವಕಾಶ ಸಿಗುವ ಸಾಧ್ಯತೆ ಇತ್ತು. ಆದರೆ ಜನ ತೀರ್ಮಾನ ಮಾಡಿಬಿಟ್ಟಿದ್ದಾರೆ, ನೀವು ಅಂತಹ ವ್ಯವಸ್ಥೆಯನ್ನು ಮಾಡಲಿಲ್ಲ. ಜನ ನಿಮಗೆ ಬುದ್ಧಿ ಕಲಿಸುವಂತಹ ಸಮಯ ಹತ್ತಿರ ಬಂದಿದೆ. ಹಾಗಾಗಿ ಇನ್ನಾದರೂ ಮುಂದೆ ಮಾಡಿದಂತಹ ಪಾಪಗಳನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಬೇರೆ ದಿಕ್ಕಿನಲ್ಲಾದರೂ ಒಳ್ಳೆಯ ಕೆಲಸಗಳನ್ನು ಮಾಡಿ ಎಂದು ಹೇಳುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಈ ಚರ್ಚೆಯಲ್ಲಿ ಭಾಗವಹಿಸುವಾಗ ನನಗೆ ಘನತೆವೆತ್ತ ರಾಜ್ಯಪಾಲರ ಮೂಲಕ ಏನು ಭಾಷಣವನ್ನು ಮಾಡಿಸಿದ್ದಾರೆ ಅದರ ವಾಕ್ಯ ನನಗೆ ನೆನಪಾಯಿತು. ಏಕೆ ನೆನಪಾಯಿತು ಎಂದರೆ ವಿಪಕ್ಷ ನಾಯಕರು, ನಮ್ಮ ಎಲ್ಲಾ ಸಹೋದ್ಯೋಗಿಗಳು ಮಾತನಾಡಿದ ಮೇಲೆ ಆ ಪುಸ್ತಕ ತೆಗೆದು ನಾನು ನೋಡಿದೆ. ಅದರಲ್ಲಿ ಏನು ಹೇಳುತ್ತಾರೆಂದರೆ 'ನನ್ನ ಸರ್ಕಾರವು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಹಲವಾರು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ ಹಾಗೂ ಕೋಮು ಸೌಹಾರ್ದ ಮತ್ತು ಸಾರ್ವಜನಿಕ ಸುವ್ಯವಸ್ಥೆಯನ್ನು ಖಾತರಿಪಡಿಸಿದೆ' ಎಂದು ಹೇಳಿದ್ದಾರೆ. ಇವರ ಕೈಯಲ್ಲಿ ಏಕೆ ಈ ಮಾತನ್ನು ಹೇಳಿಸಿದ್ದಾರೆ? ಇವತ್ತು ಈ ನಿಲುವಳಿ ಸೂಚನೆ ಪರಿವರ್ತನೆಯಾಗಿ ನಿಯಮ 68 ರಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈ ಎಲ್ಲಾ ಸಂಗತಿಗಳು ರಾಜ್ಯದಲ್ಲಿ ನಡೆಯುತ್ತಿರುವಂತಹ ಸಂಗತಿಗಳು. ಇಷ್ಟೆಲ್ಲಾ ನಡೆದರೂ ಕೂಡ ರಾಜ್ಯಪಾಲರ ಮೂಲಕ ಈ ರೀತಿ ಎಲ್ಲವೂ ಚೆನ್ನಾಗಿದೆ ಎಂದು ಹೇಳಿಸಿದರೆ ಎಲ್ಲಿಯೋ ಒಂದು ಕಡೆ ನನಗನಿಸುತ್ತಿದೆ ರಾಜ್ಯಪಾಲರಿಂದ ಸುಳ್ಳು ಹೇಳಿಸುತ್ತಿದ್ದಾರೆ. ಎಲ್ಲಾ ಉಲ್ಲೇಖ ಮಾಡಿದ್ದಾರೆ. ಆದರೆ ಕೆಲವು ಸಂಗತಿಗಳನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ನಗರ ಪೊಲೀಸ್ ಆಯುಕ್ತರು 'ಪುಂಡರಿಗೆ ಇನ್ನು ಗುಂಡೇಟು' ಎಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಡುತ್ತಾರೆ. ಅವರು ಏಕೆ ಇದನ್ನು ಹೇಳುತ್ತಾರೆಂದರೆ, ಕಳೆದ 15 ದಿನಗಳಲ್ಲಿ ಪೊಲೀಸರ ಮೇಲೆ 8 ಹಲ್ಲೆ ಪ್ರಕರಣಗಳು ದಾಖಲಾಗಿವೆ. ಬಾಕಿಯೆಲ್ಲಾ ಬಿಟ್ಟುಬಿಡಿ. ಪೊಲೀಸರ ಮೇಲೆ ಹಲ್ಲೆ ಮಾಡುವಂತಹ ವಾತಾವರಣ ಬೆಂಗಳೂರು ಮಹಾನಗರದಲ್ಲಿ ನಿರ್ಮಾಣವಾಗಿದೆ. ಪುಂಡರಿಗೆ ಕಂಡಲ್ಲಿ ಗುಂಡೇಟು ಹಾಕಬೇಕೆಂದು ಪೊಲೀಸ್ ಆಯುಕ್ತರು ಹೇಳುತ್ತಾರೆ. ಅದಾಗಿ 15 ದಿವಸಗಳಲ್ಲಿ ರಾಜ್ಯಪಾಲರ ಮೂಲಕ ಹೇಳಿಕೆಯನ್ನು ಕೊಡಿಸುತ್ತಾರೆ. ರಾಜ್ಯದಲ್ಲಿ ಎಲ್ಲಾ ಚೆನ್ನಾಗಿದೆ, ನಾವು ಪರಿಣಾಮಕಾರಿ ಕ್ರಮ ತೆಗೆದುಕೊಂಡಿದ್ದೇವೆ, ಕೋಮು ಸೌಹಾರ್ದ, ಎಲ್ಲವೂ ಚೆನ್ನಾಗಿ ನಡೆಯುತ್ತಿದೆ ಎಂದು ಅವರಿಂದ ಏಕೆ ಸುಳ್ಳು ಹೇಳಿಸುತ್ತಾರೆ? ಇನ್ನು ಅನೇಕ ಘಟನೆಗಳು ಪತ್ರಿಕೆಗಳಲ್ಲಿ ಬಂದಿವೆ. 'ಮಹಿಳಾ ಟೆಕ್ಕಿಗೆ ಲೈಂಗಿಕ ಕಿರುಕುಳ: ಐವರ ಬಂಧನ', 'ಪೊಲೀಸರ ಮೇಲೆ ಹಲ್ಲೆ: ಕಾಂಗೋ ಪ್ರಜೆಗಳ ಬಂಧನ' ಮತ್ತು 'ಇಬ್ಬರು ಆರೋಪಿಗಳ ಸೆರೆ', 'ಹಲ್ಲೆ ನಡೆಸಿ ಪೊಲೀಸರ ರೈಫಲ್ ದೋಚಿದರು' ಇದು ನಡೆದಿರುವಂಥದ್ದು.

**(ಈ ಹಂತದಲ್ಲಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಸಭಾಪೀಠವನ್ನಲಂಕರಿಸಿದರು)**

'ಚೂರಿಯಿಂದ ಇರಿದು ಸಹೋದ್ಯೋಗಿಯ ಕೊಲೆ' 'ವಿದೇಶಿ ಯುವತಿಯಿಂದ ಪೇದೆಗೆ ಕಪಾಳಮೋಕ್ಷ' ಇದೆಲ್ಲಾ ಬೆಂಗಳೂರಿನಲ್ಲಿ ನಡೆದಿರುವಂಥದ್ದು. 'ನಗರದಲ್ಲಿ ಇಬ್ಬರು ಕಾಂಗೋ ವಿದ್ಯಾರ್ಥಿಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವೇಚ್ಛಾಚಾರ', 'ಮಹಿಳಾ ಎಸ್ಐ ಮುಖಕ್ಕೆ ಗುದ್ದಿದ ಪುಂಡರು' 'ಗೃಹ ಸಚಿವ ರೆಡ್ಡಿ ಗರಂ' ಆಮೇಲೆ ಏನಾಯಿತು ಎಂಬುದು ಗೊತ್ತಿಲ್ಲ. 'ಪೋಲೀಸರ ಮೇಲೆ ಪಾನಮತ್ತರಿಂದ ಹಲ್ಲೆ'-ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ತಪಾಸಣೆ ವೇಳೆ ನಡೆದಿರುವಂತಹ ಘಟನೆ. ಪೋಲೀಸರು ತಪಾಸಣೆ ಮಾಡಬೇಕಾದರೆ ಕುಡಿದುಕೊಂಡು ಬಂದವರು ಪೋಲೀಸರ ಮೇಲೆ ಹಲ್ಲೆ ಮಾಡುತ್ತಾರೆಂದರೆ ಹೇಗೆ? 'ಆರಕ್ಷಕರಿಗೇ ರಕ್ಷಣೆ ಇಲ್ಲ' 'ಹೊಸ ವರ್ಷಾಚರಣೆಯ ರಾತ್ರಿ 5 ಮಂದಿ ಹತ್ಯೆ' ಹೊಸ ವರ್ಷಾಚರಣೆಯಾಗಿ ಎಷ್ಟು ದಿವಸಗಳಾಯಿತು? ಒಂದೇ ದಿವಸ 5 ಮಂದಿ ಹತ್ಯೆಯಾಗಿದೆ. ಈ ಸಲವಂತೂ ಗೃಹ ಮಂತ್ರಿಗಳು ಸೇರಿದ ಹಾಗೆ ಎಲ್ಲರೂ ಆ ತರಹ ನಿಯಂತ್ರಣ ಮಾಡುತ್ತೇವೆ, ಈ ತರಹ ನಿಯಂತ್ರಣ ಮಾಡುತ್ತೇವೆಂದು ಟಿ.ವಿ.ಯಲ್ಲಿ ಹೇಳಿಕೆಯನ್ನು ಕೊಡುತ್ತಲೇ ಇದ್ದರು. 'ಹೊಸ ವರ್ಷಾಚರಣೆಯ ರಾತ್ರಿ 5 ಮಂದಿ ಹತ್ಯೆ' ಪಾರ್ಟಿಯಲ್ಲಿ ಇರಿದು ಕೊಲೆ' 'ಪಾರ್ಟಿ ಗಲಾಟೆಗೆ ಬಲಿ' ಆಟೋ ಚಾಲಕನ ಕೊಲೆ' ಎಂಬಿಎ ವಿದ್ಯಾರ್ಥಿ ಹತ್ಯೆ' 'ರಿಯಲ್ ಎಸ್ಟೇಟ್ ಉದ್ಯಮಿಗಳ ಗೂಂಡಾಗಿರಿ' 'ಪಾನಮತ್ತ ಚಾಲನೆ ಪ್ರಶ್ನಿಸಿದ್ದಕ್ಕೆ ಟ್ರಾಫಿಕ್ ಪೋಲೀಸರ ಮುಖಕ್ಕೆ ಗುದ್ದಿ ಹಲ್ಲೆ, ಪಾರ್ಟಿ ಮುಗಿಸಿ ಬಿಎಂಡಬ್ಲ್ಯು ಕಾರಿನಲ್ಲಿ ಹೋಗುತ್ತಿದ್ದ ಆರೋಪಿಗಳು' ಇವೆಲ್ಲಾ ಡಿಸೆಂಬರ್ ಮತ್ತು ಜನವರಿ ತಿಂಗಳಿನಲ್ಲಿ ನಡೆದಂತಹ ಘಟನೆಗಳು. ಇದನ್ನು ರಾಜ್ಯಪಾಲರ ಮೂಲಕ ಹೇಳಿಸಬೇಕಾದರೆ ಸರ್ಕಾರದ ಉದ್ದೇಶ ಏನಿತ್ತು? ನಾವು ಇದನ್ನು ಸುಮ್ಮನೆ ಪ್ರಸ್ತಾಪ ಮಾಡುತ್ತಿಲ್ಲ. ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಯಾರು ಸಾರ್ವಜನಿಕರಿಗೆ ರಕ್ಷಣೆ ಕೊಡಬೇಕು, ಆ ಪೋಲೀಸ್ ಇಲಾಖೆಯ ಮೇಲೆ ಈ ರೀತಿ ಹಲ್ಲೆಯಾಗುತ್ತದೆ. ಒಬ್ಬ ಪೋಲೀಸ್ ಆಯುಕ್ತರು ಇನ್ನು ಮೇಲೆ ಆರೋಪಿಗಳು ಸಿಕ್ಕಿದರೆ ಕಂಡಲ್ಲಿ ಗುಂಡೇಟು ಹೊಡೆಯಿರಿ ಎಂದು ಹೇಳುತ್ತಾರೆ. ಇಷ್ಟೆಲ್ಲಾ ನಡೆಯುತ್ತಿರಬೇಕಾದರೆ, ನಾನು ಪತ್ರಿಕೆಯಲ್ಲಿ ಬಂದಿರುವ ಮತ್ತೊಂದು ಘಟನೆಯನ್ನು ಹೇಳುತ್ತೇನೆ. ನಮ್ಮ ಕರಾವಳಿ ಜಿಲ್ಲೆಗಳ ಬಗ್ಗೆ ಬಹಳ ಚರ್ಚೆಯಾಗುತ್ತದೆ. ಅಲ್ಲಿ ಕೇವಲ ಕೋಮುವಾದ, ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರ ಗಲಾಟೆ ನಡೆಯುತ್ತಿರುತ್ತದೆ ಎಂದು ಚರ್ಚೆಯಾಗುತ್ತಿರುತ್ತದೆ. 'ಕದುಡಿದ ಕರಾವಳಿ' ಎಂದು ಒಂದು ಆರ್ಟಿಕಲ್ ಬಂದಿದೆ. ಅದರಲ್ಲಿ ಏನು ಹೇಳುತ್ತಾರೆಂದರೆ, ಕರಾವಳಿಯಲ್ಲಿ ನಡೆಯುತ್ತಿರುವ ವ್ಯಾಪಕವಾದ ಹಿಂಸಾಚಾರಕ್ಕೆ ಕಾರಣ ಎಲ್ಲಿದೆ? ಒಂದನೆಯದು, ಮರಳು ಮಾಫಿಯಾ, ಮತ್ತೊಂದು ಡ್ರಗ್ಸ್ ಮಾಫಿಯಾ. ಅವರು ವಿವರಣೆಯನ್ನು ಕೊಡುತ್ತಾರೆ. ಅದರಲ್ಲಿ ಪೋಲೀಸ್ ಅಧಿಕಾರಿಯ ಹೆಸರು ಉಲ್ಲೇಖ ಮಾಡುವುದಿಲ್ಲ. ಒಬ್ಬ ಪೋಲೀಸ್ ಅಧಿಕಾರಿಯನ್ನು ಉಲ್ಲೇಖ ಮಾಡುತ್ತಾರೆ. ಹೆಸರು ಹೇಳಲು ಇಚ್ಛಿಸದ ಒಬ್ಬ ಪೋಲೀಸ್ ಅಧಿಕಾರಿ ಎಂದು ಉಲ್ಲೇಖ ಮಾಡುತ್ತಾರೆ. ಇದು ಏಕೆ ನಡೆಯುತ್ತಿದೆ? ತಮ್ಮ ಮೂಲಕ ಮಾನ್ಯ ಸಭಾನಾಯಕರನ್ನು ಕೇಳುತ್ತೇನೆ, ಕಳೆದ ನಾಲ್ಕೂವರೆ ವರ್ಷದಲ್ಲಿ ಎಷ್ಟು ಮರಳು ಲೈಸೆನ್ಸ್‌ಗಳನ್ನು ನವೀಕರಣ ಮಾಡಿಸಿದ್ದಾರೆ? ಎಷ್ಟು ಲೈಸೆನ್ಸ್‌ಗಳನ್ನು ಹೊಸದಾಗಿ ಕೊಟ್ಟಿದ್ದಾರೆ? CRZ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(Coastal Regulation Zone) ನಲ್ಲಿ sand policy ಏನಿದೆ? Fresh water ಗೆ sand policy ಏನಿದೆ? ಕಳೆದ ನಾಲ್ಕೂವರೆ ವರ್ಷದಲ್ಲಿ ಎಷ್ಟು royalty receive ಮಾಡಿದ್ದಾರೆ? ಎಷ್ಟು penalty charge ಮಾಡಿದ್ದಾರೆ? ನನಗೆ ತಿಳಿದಿರುವಂತೆ 43 ಕೋಟಿ ರೂಪಾಯಿ penalty ಹಾಕಿದ್ದಾರೆ. ಅವರಿಗೆ ಗೊತ್ತಿರುವ ಹಾಗೆ ಅವ್ಯಾಹತವಾಗಿ ಅಲ್ಲಿ ಮರಳು ದಂಧೆ ನಡೆಯುತ್ತಿದೆ. Penalty ಕೊಟ್ಟು... ಒಂದು ಲೋಡ್ ಮರಳಿಗೆ ಎಂಟು ಸಾವಿರ-ಹತ್ತು ಸಾವಿರ ರೂಪಾಯಿ ಬೆಂಗಳೂರಿನಲ್ಲಿ ಇತ್ತು. ಇವತ್ತು ಐವತ್ತು ಸಾವಿರ, ಅರವತ್ತು ಸಾವಿರ ರೂಪಾಯಿ ಆಗಿದೆ. ಒಂದು ಲೋಡ್ ಮರಳು ಅಕ್ರಮವಾಗಿ ಸಾಗಿಸಬೇಕಾದರೆ ಹತ್ತರಿಂದ ಹನ್ನೆರಡು ಸಾವಿರ ರೂಪಾಯಿ ಬೇರೆ ಬೇರೆ ಕೈಗಳಿಗೆ ಹಣ ಹೋಗುತ್ತದೆ. ಈ ರೀತಿ ನಡೆಯುತ್ತಿದೆ. ಈ ಹಣ ಎಲ್ಲಿ ಹೋಗುತ್ತಿದೆ? ಅವರು ಹೇಳಿದ ಪ್ರಕಾರ 'ಕಾರವಳಿಯಲ್ಲಿ ಕೋಮು ಉದ್ವೇಗದ ಮನಸ್ಥಿತಿಯ ಬೆನ್ನಟ್ಟಿ ಹೊರಟರೆ ಮರಳು, ಗಾಂಜಾ ಮಾಫಿಯಾ, ಭೂಗತ ಜಗತ್ತು ಮತ್ತು ಆಡಳಿತ ವೈಫಲ್ಯದ ಎಳೆಗಳು ಒಂದಕ್ಕೊಂದು ಕೊಂಡಿಗಳಂತೆ ಬೆಸೆದುಕೊಂಡಿರುವುದು ಭಾಸವಾಗುತ್ತದೆ' ಏನು ನಡೆಯುತ್ತಿದೆ ಎಂದು ಹೆಸರು ಹೇಳಲು ಇಚ್ಛಿಸದ ಒಬ್ಬ ಪೋಲೀಸ್ ಅಧಿಕಾರಿ ಎಂದು ಉಲ್ಲೇಖ ಮಾಡುತ್ತಾರೆ. ಇದನ್ನು ಏಕೆ ನಿಯಂತ್ರಣ ಮಾಡುತ್ತಿಲ್ಲ. ನಾಲ್ಕೂವರೆ ವರ್ಷದಲ್ಲಿ ಸರ್ಕಾರ ಮರಳು ನೀತಿಯನ್ನು ತರುವುದಕ್ಕಾಗಲಿಲ್ಲವೆ? ನಾಲ್ಕೂವರೆ ವರ್ಷದಲ್ಲಿ ಯಾರು ಅಧಿಕೃತವಾಗಿ ಲೈಸೆನ್ಸ್‌ಗಳನ್ನು ಪಡೆದುಕೊಂಡಿದ್ದರು ಆ ಲೈಸೆನ್ಸ್‌ಗಳನ್ನು ನವೀಕರಣ ಮಾಡುವುದಕ್ಕಾಗಲಿಲ್ಲವೆ? ಇಷ್ಟೊಂದು penalty ಹಾಕುತ್ತಾರೆಂದರೆ ಅಕ್ರಮ ದಂಧೆ ನಡೆಯುತ್ತಿದೆ ಎಂದು ಗೊತ್ತಾಗುವುದಿಲ್ಲವೆ?

(ಮುಂದು)

(027) 06-02-2018/4-00/bkp/ks

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**(ಮುಂದು. . )

ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಉಲ್ಲೇಖ ಮಾಡಿದ್ದಾರೆ. ಒಬ್ಬ ಜಿಲ್ಲಾಧಿಕಾರಿ ಅಕ್ರಮ ಮರಳು ದಂಧೆಯನ್ನು ನಿಲ್ಲಿಸಬೇಕೆಂದು ಹೋದರೆ, ಆಕೆಯ ಮೇಲೆಯೇ ಧಾಳಿ ನಡೆಸುವಷ್ಟು ವ್ಯವಸ್ಥೆ ಕೆಟ್ಟು ಹೋಗಿದೆ. ಈ ಬಗ್ಗೆ ನೀವು ಯಾವಾಗ ಎಚ್ಚೆತ್ತುಕೊಳ್ಳುತ್ತೀರಿ? ಒಬ್ಬ ಜಿಲ್ಲಾಧಿಕಾರಿಯ ಮೇಲೆ ಧಾಳಿ ನಡೆದರೂ ಕೂಡ ನೀವು ಮರಳು ನೀತಿಯನ್ನು ತರುವುದಿಲ್ಲ, ಅಕ್ರಮ ಮರಳು ಮಾಫಿಯಾವನ್ನು ನೀವು control ಮಾಡುವುದಿಲ್ಲವೆಂದರೆ ಹೇಗೆ? ಇದಾದ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಪೊಲೀಸ್ ಅಧಿಕ್ಷಕರನ್ನು ಅವರ ಐ.ಬಿ.ಗೆ ಕರೆಸಿಕೊಂಡು,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರು ಮರಳು ಮಾಫಿಯಾದಲ್ಲಿ ಭಾಗಿಯಾಗಿದ್ದಾರೆ; ಯಾರ ಮೇಲೆ ಆರೋಪ ಇದೆ, ಅವರ ಮುಂದೆ ಜಿಲ್ಲಾಧಿಕಾರಿಯವರ ಮಾನವನ್ನು ಹರಾಜು ಮಾಡುತ್ತೀರಿ ಎಂದರೆ, ಅವರನ್ನು ವರ್ಗಾವಣೆ ಮಾಡುತ್ತೀರಿ ಎಂದರೆ; ಯಾರು ಈ ಮರಳು ಮಾಫಿಯಾವನ್ನು ಮಟ್ಟ ಹಾಕಲಿಕ್ಕೆ 6 ತಿಂಗಳಿನಲ್ಲಿ ಪ್ರಯತ್ನ ಮಾಡುತ್ತಾರೆ, ಆ ಬಗ್ಗೆ ಇಲ್ಲಿ ಉಲ್ಲೇಖ ಮಾಡಿದ್ದಾರೆ. ಇಲ್ಲಿ ಅಧಿಕಾರಿಗಳ ಹೆಸರನ್ನು ಉಲ್ಲೇಖ ಮಾಡಬಾರದು. ಆದರೆ, ಉಲ್ಲೇಖ ಮಾಡುತ್ತಾರೆ, ಶ್ರೀ ಸುಧೀರ್ ಕುಮಾರ್ ರೆಡ್ಡಿಯ ಹಿಂದುಗಡೆ ಮಾಫಿಯಾ' ಎಂದು ಇಲ್ಲಿ ಉಲ್ಲೇಖ ಮಾಡುತ್ತಾರೆ. ಮಾಫಿಯಾದಿಂದ ಬರುವ ಹಣಕ್ಕೂ, ಕೋಮುವಾದಿ ಸಂಘಟನೆಗಳ ಬಲವರ್ಧನೆಗೂ ಅಂತರ್ ಸಂಬಂಧ ಇದೆ ಎಂದು ಖಚಿತಪಡಿಸಿಕೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಹಿಂದಿನ ಎಸ್‌ಪಿ. ಶ್ರೀ ಸಿ.ಎಸ್. ಸುಧೀರ್ ಕುಮಾರ್ ರೆಡ್ಡಿ ಕೆಲವು ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಕೈಗೊಂಡಿದ್ದರು. ಈ ಸಂಘಟನೆಗಳ ಚಟುವಟಿಕೆಗಳನ್ನು ಹತ್ತಿಕ್ಕಬೇಕಾದರೆ, ಅದಕ್ಕೆ ಬರುತ್ತಿರುವ ಹಣದ ಮೂಲವನ್ನು ನಿರ್ಬಂಧಿಸಬೇಕು; ಹಣ ಬರುವುದು ತಪ್ಪಿದರೆ ಕಾನೂನು ನೆರವು ಕೊಡುವುದು ನಿಲ್ಲುತ್ತದೆ ಎನ್ನುವ ಕಾರಣಕ್ಕೆ ಮರುಳು ಮಾಫಿಯಾವನ್ನು ತುಳಿದು ಹಾಕಿದ್ದರು. ಮರುಳು ಮಾಫಿಯಾ ನಿಯಂತ್ರಣ ಮಾಡುವಲ್ಲಿ ಬಹುತೇಕ ಯಶಸ್ವಿಯಾಗಿದ್ದ ರೆಡ್ಡಿಯವರನ್ನು 6 ತಿಂಗಳಿನಲ್ಲಿಯೇ ಬೆಳಗಾವಿಗೆ ಎತ್ತಂಗಡಿ ಮಾಡಿದರು ಎನ್ನುವ ಟೀಕೆಗಳಿವೆ.

ನೀವು ಒಂದು ಕಡೆಯಿಂದ ಕಾನೂನು ಸುವ್ಯವಸ್ಥೆ ಚೆನ್ನಾಗಿರಬೇಕೆಂದು ಹೇಳುತ್ತೀರಿ. ಮತ್ತೆ ಎಲ್ಲವೂ ಚೆನ್ನಾಗಿದೆ ಎಂದು ರಾಜ್ಯಪಾಲರಿಂದ ಹೇಳಿಸುತ್ತೀರಿ. ಯಾರು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ, ಅ ಅಧಿಕಾರಿಗೆ 6 ತಿಂಗಳಿನಲ್ಲಿಯೇ ಎತ್ತಂಗಡಿ ಮಾಡುತ್ತೀರಿ. Touch your heart and tell me, ನಿಜವಾಗಿಯೂ ಸಹ ನಿಮಗೆ ಆ concern ಇದೆಯೇ? ಇಷ್ಟೊಂದು ಕೊಲೆ-ಸುಲಿಗೆಗಳಾದ ಮೇಲೆಯೂ ರಾಜಾರೋಷವಾಗಿ ಹಗಲು ಹೊತ್ತು, ಈ ರೀತಿಯಲ್ಲಿ ನಡೆಯುತ್ತಿರಬೇಕಾದರೆ ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಸನ್ಮಾನ್ಯ ಸಭಾನಾಯಕರು ಕೊಡಬೇಕು. ಅವರು ಉಲ್ಲೇಖ ಮಾಡಿದಂತೆ ಪ್ರಮೋದ್ ಎನ್ನುವಂತಹ ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಹೇಳುವುದಾದರೆ, 12 ವರ್ಷಗಳ ಸೇವೆಯಲ್ಲಿ 18 ಬಾರಿ ವರ್ಗಾವಣೆಯಾಗಿದ್ದಾರೆ. ಅವರ ಮೇಲೆ ಏನು ಆರೋಪ? ವಾರೆಂಟ್ ಇದ್ದು, ಬಂಧನ ಮಾಡಬೇಕಾದ ಒಬ್ಬ ಆರೋಪಿಯನ್ನು ಹೋಗಿ ಬಂಧಿಸಿದರು ಎನ್ನುವ ಒಂದೇ ಒಂದು ಕಾರಣಕ್ಕಾಗಿ ವರ್ಗಾವಣೆ ಮಾಡಿದಂತಹ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ, ಕರಾವಳಿಯ ಪೊಲೀಸ್ ಇತಿಹಾಸದಲ್ಲಿ ಮೊದಲ ಬಾರಿಗೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಬೀದಿಗಿಳಿದು ಧರಣಿ ಮಾಡಿದರು. ನಾವು ಆ ಸಂದರ್ಭದಲ್ಲಿ ಅಲ್ಲಿಗೆ ಭೇಟಿ ಕೊಟ್ಟಿದ್ದೆವು. ಅವರನ್ನು ಸಮಾಧಾನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಿಕ್ಕೆ ಹೋಗಿದ್ದೆವು. ಆ ಒಬ್ಬ ದಕ್ಷ ಅಧಿಕಾರಿ ಹಿಂದೆ, ಅಕ್ರಮವಾಗಿ ಗೋ-ಹತ್ಯೆ ಮತ್ತು ಗೋ-ಸಾಗಾಣಿಕೆ ಆಗುತ್ತಿದೆ, ಅಕ್ರಮ ಕಸಾಯಿ ಖಾನೆ ನಡೆಯುತ್ತಿದೆ ಎನ್ನುವ ಕಾರಣಕ್ಕಾಗಿ ನಮ್ಮ ಮಂಗಳೂರಿನ ಹೊರಭಾಗದಲ್ಲಿರುವಂತಹ ಬೆಂದ್ರೆ ಎನ್ನುವಂತಹ ಒಂದು ಜಾಗ ಇದ್ದು, ಆ ಜಾಗಕ್ಕೆ ಪೊಲೀಸ್ ಅಧಿಕಾರಿ/ಸಿಬ್ಬಂದಿ ಸೇರಿದಂತೆ 3 ಜನರು ಹೋಗಿದ್ದರು. ಮೂರು ಸಾವಿರ ಜನ ಅವರ ಮೇಲೆ ಮುತ್ತಿಗೆ ಹಾಕಿದ್ದರು. ಅವರನ್ನು ವಾಪಸ್ಸು ಕರೆದುಕೊಂಡು ಬರಬೇಕಾದರೆ ಅಲ್ಲಿಗೆ special force ಅನ್ನು ಕಳುಹಿಸಬೇಕಾಯಿತು. ಅಂತಹ ಒಬ್ಬ ದಕ್ಷ ಅಧಿಕಾರಿಯನ್ನು ನೀವು 12 ವರ್ಷಗಳಲ್ಲಿ 18 ಬಾರಿ ವರ್ಗಾವಣೆ ಮಾಡುತ್ತೀರಿ ಎಂದು ಹೇಳಿದರೆ ದಕ್ಷ ಅಧಿಕಾರಿಗಳಿಗೆ ನೀವು ಕೊಡುವಂತಹ ಗೌರವ, ನಿಮ್ಮ ಪೊಲೀಸ್ ಇಲಾಖೆಯ ಮೂಲಕ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ನಿಮ್ಮ ಕಾಳಜಿ ಅರ್ಥವಾಗುವುದಿಲ್ಲವೇ ಮಾನ್ಯ ಸಭಾನಾಯಕರೆ?

ಮತ್ತೆ, 'ಮಂಗಳೂರು ಜೈಲಿನಲ್ಲಿ ಖೈದಿಗಳ ಹೋರಾಟ' ಜೈಲಿನೊಳಗಡೆ ಎರಡು ಕೊಲೆಯಾಗಿದೆ. ಜೈಲಿನೊಳಗಡೆ ಖೈದಿಗಳ ಗುಂಪುಗಳ ನಡುವೆ ಹೋರಾಟ ಆಗುತ್ತದೆ. ಜೈಲು ಸಿಬ್ಬಂದಿಗಳ ಮೇಲೆ ಅವರು attack ಮಾಡುತ್ತಾರೆ. ಜೈಲಿನಲ್ಲಿ ಮೊಬೈಲ್ ನಿಷೇಧ ಮಾಡಬೇಕೆಂದರೆ ಇವರು ಜೈಲಿಗೆ jammer ಹಾಕುತ್ತಾರೆ. ನೀವು jammer ಏತಕ್ಕೆ ಹಾಕಬೇಕು? ನೀವು ಮೊಬೈಲ್‌ಗಳನ್ನು ಜೈಲಿನಲ್ಲಿ ಇಟ್ಟುಕೊಳ್ಳಲಿಕ್ಕೆ ಕಾನೂನಿನಲ್ಲಿ ಸಾಧ್ಯವಿಲ್ಲವೆಂದರೆ ನೀವು ಜೈಲಿನಲ್ಲಿ jammer ಏತಕ್ಕೆ ಹಾಕಬೇಕು? ಜೈಲಿಗೆ jammer ಹಾಕುತ್ತೇವೆಂದರೆ ನೀವು ಜೈಲಿನೊಳಗಡೆ ಮೊಬೈಲ್ ತೆಗೆದುಕೊಂಡು ಹೋಗಲಿಕ್ಕೆ ಬಿಡುತ್ತೀರಿ ಎಂದು ಗೊತ್ತಾಗುತ್ತದೆ. ಇವತ್ತಿನ 4G ಹಾಗೂ 5G ಮಾದರಿಯ ಮೊಬೈಲ್ ಬಂದಿದೆ. ಉದಾಹರಣೆಗೆ ನನ್ನ ಹತ್ತಿರ 4G ಮೊಬೈಲ್ ಇದೆ. ಇಲ್ಲಿ ಜಾಮರ್ ಹಾಕಿದ್ದೀರಿ, ಆದರೆ, ನನ್ನ ಮೊಬೈಲ್‌ಗೆ network ಸಿಕ್ಕುತ್ತದೆ. ಇದನ್ನು ನಾನು ಸದನದಲ್ಲಿ ಉಲ್ಲೇಖ ಮಾಡಿದ್ದೇನೆ. ಆದರೆ, ಇವತ್ತಿಗೂ ಬದಲಾಗಿಲ್ಲ. ಯಾರಿಗೆ ತೊಂದರೆಯಾಗುತ್ತಿದೆ? ಜೈಲಿನ ಹೊರಗಡೆ ಇರುವಂತಹ ಎಲ್ಲಾ ನಾಗರೀಕರಿಗೆ ತೊಂದರೆ. ಅಲ್ಲಿನ ಶಾಲಾ-ಕಾಲೇಜುಗಳಲ್ಲಿ ಮೊಬೈಲ್ ಸಂಪರ್ಕವೇ ಸಿಗುವುದಿಲ್ಲ. 10 ಬಾರಿ ಫೋನ್ ಮಾಡಿದರೆ ಒಂದು ಬಾರಿ connect ಆಗುತ್ತದೆ. ಜೈಲಿನೊಳಗಡೆ ರಾಜಾರೋಷವಾಗಿ ಮೊಬೈಲ್‌ಗಳನ್ನು ಉಪಯೋಗ ಮಾಡುತ್ತಿದ್ದಾರೆ. ವಾಕಿಂಗ್ ಸ್ಟಿಕ್‌ನಲ್ಲಿ ಗಾಂಜಾ ಎಂದು ಹೇಳಿದರು. ವಾಕಿಂಗ್ ಸ್ಟಿಕ್‌ನಲ್ಲಿ ಗಾಂಜಾ ಅಷ್ಟೇ ಏತಕ್ಕೆ, ಅವರಿಗೆ ಬಿರಿಯಾನಿ ಊಟ ಸಿಕ್ಕುತ್ತದೆ, ಮತ್ತೆ ಎಲ್ಲವೂ ಸಿಕ್ಕುತ್ತದೆ. ಒಬ್ಬ ಖೈದಿಗೆ ಕೋರ್ಟ್‌ನಲ್ಲಿ ಶಿಕ್ಷೆಯಾಗಿ ಒಳಗಡೆ ಬರುತ್ತಾನೆಂದರೆ ಅವನು ನೇರವಾಗಿ ಒಳಗಡೆ ಹೆಜ್ಜೆ ಇಡಬೇಕಾದರೆ ಸಿಬ್ಬಂದಿಗೆ ಸಲ್ಯೂಟ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೊಡೆಯುತ್ತಾನಂತೆ. ಅಲ್ಲಿಯೇ ಅವರುಗಳಿಗೆ understanding ಆಗುತ್ತದೆ. ನಿಮಗೆ ಏನು ಬೇಕು, ಎಲ್ಲಾ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತಾರಂತೆ. ಇದು ಕೇವಲ ಮಂಗಳೂರು ಜೈಲಿನಲ್ಲಿ ಮಾತ್ರವಲ್ಲ, ಎಲ್ಲಾ ಕಡೆ ಇದೆ.

**ವೈಸ್ ಛೇರ್ಮನ್:-** ಈ ವಿಚಾರವಾಗಿ ನಾನು ಒಂದು cartoon ಓದಿದ್ದೆ. ಮಂಗಳೂರು, ದಕ್ಷಿಣ ಕನ್ನಡ, ಕರಾವಳಿ ಭಾಗದಲ್ಲಿ jammer ಹಾಕುವುದಾದರೆ ಬಹುತೇಕ ಈ ರೀತಿಯ ಪ್ರಕರಣಗಳು ತಪ್ಪಿ ಹೋಗುತ್ತವೆ ಎಂದು ಹೇಳಲಾಗಿತ್ತು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಾನು ಸಹ ಅದೇ ವಿಷಯವನ್ನು ಹೇಳುತ್ತಿದ್ದೇನೆ. ಆ ವಿಚಾರವನ್ನು ನಾನು ಈ ಮೊದಲೇ ಸದನದಲ್ಲಿ ಉಲ್ಲೇಖ ಮಾಡಿದ್ದೆ. Jammer ಯಾರಿಗೆ? ಜೈಲಿನ ಹೊರಗಡೆ ಇರುವಂತಹ ಉಳಿದ ಎಲ್ಲಾ ಸಾರ್ವಜನಿಕರಿಗೆ jammer ಹಾಕುತ್ತಿದ್ದಾರೆ. ಜೈಲಿನೊಳಗಡೆ ಈ ಸಮಸ್ಯೆಯೇ ಇರುವುದಿಲ್ಲ. ನೇರವಾಗಿ ಮೊಬೈಲ್ ಬಳಕೆ ಮಾಡುತ್ತಿದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ ನೇರ ನಿಮ್ಮ ಮೂಗಿನ ಕೆಳಗಡೆ ಇರುವಂತಹ, ಜೈಲಿನೊಳಗಡೆ ಇರುವಂತಹ ಖೈದಿಗಳಿಗೆ ರಕ್ಷಣೆ ಕೊಡಲಿಕ್ಕೆ ಆಗುತ್ತಿಲ್ಲ. ಅಲ್ಲಿ ಒಳಗಡೆ murder ಆಗುತ್ತಿದೆ, ಖೈದಿಗಳ ನಡುವೆ ಹೋರಾಟವಾಗುತ್ತಿದೆ, ಖೈದಿಗಳು ಜೈಲು ಸಿಬ್ಬಂದಿಗಳ ಮೇಲೆ ಹಲ್ಲೆ ನಡೆಸುತ್ತಾರೆ. ಅ ವಿಚಾರ ನನಗೆ ಗೊತ್ತಿದೆ, ಅವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ರೀತಿ ಅಲ್ಲಿ ನಡೆಯುತ್ತಿದೆ ಎಂದರೆ ಇನ್ನು ರಾಜ್ಯಾದ್ಯಂತ ಎಲ್ಲಿ ನೀವು ರಕ್ಷಣೆ ಕೊಡುತ್ತೀರಿ? ಇದು ನಿಮಗೆ ಸಾಧ್ಯವಾಗುತ್ತದೆಯೇ? ಅದನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು. ನಮ್ಮ ರಾಜ್ಯಪಾಲರ ಮೂಲಕ ಈ ಮಾತನ್ನು ನೀವು ಹೇಳಿಸುತ್ತೀರಲ್ಲಾ! ಇದು ಎಷ್ಟರಮಟ್ಟಿಗೆ ಸರಿಯಾಗುತ್ತದೆ? "ಕಾನೂನು ಸುವ್ಯವಸ್ಥೆ ಕಾಪಾಡಲು ಹಲವಾರು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ ಹಾಗೂ ಕೋಮು ಸೌಹಾರ್ದ, ಸಾರ್ವಜನಿಕ ಸುವ್ಯವಸ್ಥೆಯನ್ನು ಖಾತರಿಪಡಿಸಿದೆ ಎಂದು ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸಲಾಗಿದೆ. 'ಖಾತರಿಪಡಿಸಿದೆ' ಎಂದರೆ ಏನು ಮಾನ್ಯ ಸಭಾಪತಿಯವರೇ, whether the citizens have been assured that absolutely there is no problem? ಇದು ಸತ್ಯವೇ?

**ವೈಸ್ ಚೇರ್ಮನ್:-** ತಾವು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಾನು ಇನ್ನು ಸುಮಾರು ವಿಷಯಗಳನ್ನು ಮಾತನಾಡಬೇಕಾಗಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಇನ್ನೂ ಕ್ಯಾಬಿನೆಟ್ ರಚನೆಯಾಗಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಅವರು ಏನು ಹೇಳಿದರು ಎಂದರೆ, 'ನಾವು ಮತ್ತೆ ಹಳೆಯ ಗೋ-ಹತ್ಯೆ ನಿಷೇಧ ಕಾನೂನಿಗೆ ಹೋಗುತ್ತೇವೆ ಎಂದು ಹೇಳಿದರು. ಅದನ್ನು ಅವರು ಹೇಳಿದ್ದು, ಹೌದೋ ಇಲ್ಲವೋ ಹೇಳಿ. ಅದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದರ ಎರಡು ದಿವಸಗಳ ನಂತರ **ಖಾಖಿಪಡದಲ್ಲಿ** ಒಬ್ಬ ಕ್ರಿಶ್ಚಿಯನ್ ನಿವೃತ್ತ ಮಾಸ್ಟರ್ ರವರು ನಿವೃತ್ತಿಯಾದ ಮೇಲೆ ಹಸುಗಳನ್ನು ಸಾಕಣೆ ಮಾಡಿ ಹಾಲು-ಮೊಸರು ಮಾರುತ್ತಿದ್ದಾರೆ. ಅವರ ಮನೆಗೆ ಕೆಲವು ಜನರು ದನಗಳನ್ನು ಕದ್ದುಕೊಂಡು ಹೋಗಲಿಕ್ಕೆ ನುಗ್ಗುತ್ತಾರೆ. ರಾತ್ರಿ ಸದ್ದು ಆಯಿತು ಎಂದು ಹೇಳಿ ಹೊರಗಡೆ ಬಂದು ಲೈಟ್ ಹಾಕುತ್ತಾರೆ. ಲೈಟ್ ಹಾಕಿದರೆ ಅವರು ಏನು ಹೇಳುತ್ತಾರೆಂದರೆ " ಹುಷಾರ್ ಹೊರಗಡೆ ಬಂದರೆ, ನಮ್ಮ ಸರ್ಕಾರ ಇದೆ" ಎಂದು ಹೇಳಿದಾಗ ಆತ ಹೆದರಿಕೊಂಡು ಹೊರಗಡೆ ಬರಲಿಲ್ಲ. ಅವರ ಮನೆಯ ಹಸುವನ್ನು ಅವರ ಕಣ್ಣಾರೆ ಕದ್ದುಕೊಂಡು ಹೋಗುತ್ತಾರೆ. ಅದಾಗಿ ಒಂದು ವಾರದಲ್ಲಿ ಉಪ್ಪಿನಂಗಡಿ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ದೇವಸ್ಥಾನದ ದನಗಳನ್ನು ಕದ್ದುಕೊಂಡು ಹೋಗುತ್ತಾರೆ. ಇಷ್ಟೆಲ್ಲಾ ಘಟನೆಗಳು ಆಗಿವೆ ಎಂದು ಹೇಳಿ, ಬೇಕಾದರೆ ಪಟ್ಟಿ ಮಾಡಿ ಹೇಳುತ್ತೇನೆ. ಕದ್ದುಕೊಂಡು ಹೋಗುವುದು ಮಾತ್ರವಲ್ಲ, ಮರುದಿನ ಆ ದನದ ರುಂಡ-ಮುಂಡ ಮತ್ತು ಕಾಲಿನ ಗೊರಸಲ್ಲು ತೆಗೆದುಕೊಂಡು ಬಂದು ದೇವಸ್ಥಾನದ ಹತ್ತಿರ ಹಾಕಿ ಹೋಗುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳ ಒಂದು ಸಣ್ಣ ನಿರ್ಣಯ, ಒಂದು ಸಣ್ಣ ಮಾತು ಹೇಗೆ ಸಮಾಜದಲ್ಲಿ ದುಷ್ಟರಿಗೆ ಈ ರೀತಿಯಲ್ಲಿ ಮಾಡಲಿಕ್ಕೆ ಅವಕಾಶವನ್ನು ಕೊಡುತ್ತದೆ ಎಂಬುದನ್ನು ನೋಡಿ. ಕಬೀರ್ ಎನ್ನುವಂತಹ ಒಬ್ಬ ವ್ಯಕ್ತಿ, ಶೃಂಗೇರಿ ಹತ್ತಿರ ಎಎನ್ಎಫ್ ಚೆಕ್‌ಪೋಸ್ಟ್ ಹತ್ತಿರ ಹಸುಗಳನ್ನು ಕಳ್ಳಸಾಗಾಣಿಕೆ ಮಾಡಿಕೊಂಡು ಬಂದು ಚೆಕ್ ಪೋಸ್ಟ್‌ನಲ್ಲಿ ನಿಲ್ಲಿಸುತ್ತಾರೆ. ಸಿಬ್ಬಂದಿ ಆ ವಾಹನವನ್ನು ತಡೆದು ನಿಲ್ಲಿಸಲಿಕ್ಕೆ ಹೇಳಿದ ತಕ್ಷಣ ಅವನು ತನ್ನ ಗಾಡಿಯನ್ನು ನಿಲ್ಲಿಸದೇ ಓಡಿಸುತ್ತಾನೆ. ಅಲ್ಲಿಯ ಎ.ಎನ್.ಎಫ್ ನ ಗಣೇಶ್ ನಾಯಕ್ ಎನ್ನುವಂತಹವರು ಅವನ ಮೇಲೆ fire ಮಾಡುತ್ತಾರೆ. Fire ಮಾಡಿದಾಗ ಕಬೀರ್ ತೀರಿ ಹೋಗುತ್ತಾನೆ. ಕಬೀರ್ ಸತ್ತು ಹೋದರೆ. . . ಯಾರು ಗೋವುಗಳನ್ನು ಕಳ್ಳಸಾಗಾಣಿಕೆ ಮಾಡುತ್ತಾನೆ, ಅವನ ವಾಹನದಲ್ಲಿ ಗೋ-ಮಾಂಸ ಪತ್ತೆಯಾಗುತ್ತದೆ, ದನಗಳು ಪತ್ತೆಯಾಗುತ್ತವೆ. ಆದರೆ, ಅವನು ಸತ್ತು ಹೋದ ಎಂದು ಹೇಳಿ, ಕಣ್ಣು ಮಿಟುಕಿಸುವುದರೊಳಗಡೆ 10 ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡುತ್ತಾರೆ. ಅಮೇಲೆ ಅರಣ್ಯ ಇಲಾಖೆ ವರದಿಯನ್ನು ಕೊಡುತ್ತದೆ. ಅದು ಏನೆಂದರೆ, ಅವನು ಬರಿ ದನಗಳನ್ನು ಸಾಗಾಣಿಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿರಲಿಲ್ಲ, ಅವನ ದಂಧೆ ಕಾಡು ಪ್ರಾಣಿಗಳನ್ನು ಕದ್ದು ಸಾಗಿಸುವಂತಥದ್ದಾಗಿದ್ದು, ಈ ಹಿಂದೆ ಅನೇಕ ಬಾರಿ ಸಿಕ್ಕಿಹಾಕಿಕೊಂಡಿದ್ದು, ಅವನ ಮೇಲೆ ಕೇಸ್ ಇತ್ತು ಎಂದು ಹೇಳಲಾಗಿದೆ. ಆದರೆ, ಈ ಬಗ್ಗೆ ತಾವು ಏನು ಸಂದೇಶ ಕಳುಹಿಸಿದಿರಿ ಎನ್ನುವುದನ್ನು ಮಾನ್ಯ ಸಭಾನಾಯಕರು ಹೇಳಬೇಕು.

ಮಾನ್ಯ ಸಭಾಪತಿಯವರೇ, ಇಷ್ಟೇ ಆದರೆ ಪರವಾಗಿಲ್ಲ. ಅವನು ಏನೋ ಸತ್ತ, ಅವನ ಕುಟುಂಬಕ್ಕೆ ಆಗುತ್ತದೆ ಎಂದು ಹೇಳಿ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಯಾರು ಆ ಎಎನ್‌ಎಫ್ ನ ಗಣೇಶ್ ನಾಯಕ್ ಎನ್ನುವಂತಹ ಪೊಲೀಸ್ ಸಿಬ್ಬಂದಿ ಇದ್ದಾರೆ, ಅವರ ಮೇಲೆ ನೀವು ಕೇಸ್ ಹಾಕುತ್ತೀರಿ. ಅವನನ್ನು ಕೆಲಸದಿಂದ suspend ಮಾಡುತ್ತೀರಿ. ಅವನು ಕರ್ತವ್ಯದ ಮೇಲೆ ಇರಬೇಕಾದರೆ, ಯಾವಾಗ ಗಾಡಿಯನ್ನು ನಿಲ್ಲಿಸಿ ಎಂದು ಹೇಳಿದಾಗ, ಗಾಡಿಯನ್ನು ನಿಲ್ಲಿಸುವುದಿಲ್ಲ, ಆ ಸಂಬಂಧ ನಿಮ್ಮ ಆಯುಕ್ತರು 'ಪುಂಡರ ಮೇಲೆ ಗುಂಡು ಏಟು ಹಾಕಿ' ಎಂದು ಹೇಳುತ್ತಾರೆ. ಯಾವ ಕರ್ತವ್ಯನಿರತ ಸಿಬ್ಬಂದಿ, ಅವನ ಕರ್ತವ್ಯ ಮಾಡುತ್ತಾನೆ, ಅವನ ಮೇಲೆ ಕೇಸ್ ಹಾಕುತ್ತೀರಿ, ಅವನನ್ನು ಕೆಲಸದಿಂದ suspend ಮಾಡುತ್ತೀರಿ. ಯಾರು ಕದ್ದು ಕಳ್ಳಸಾಗಾಣಿಕೆ ಮಾಡುತ್ತಾರೆ, wild animals ಅನ್ನು ಕಳ್ಳಸಾಗಾಣಿಕೆ ಮಾಡುತ್ತಾನೆ, ಆತನ ಕುಟುಂಬಕ್ಕೆ 10 ಲಕ್ಷ ರೂಪಾಯಿಗಳ ಪರಿಹಾರಧನವನ್ನು ಕೊಡುತ್ತೀರಲ್ಲಾ! ಸಮಾಜಕ್ಕೆ ನೀವು ಏನು ಸಂದೇಶವನ್ನು ಕಳುಹಿಸಿದಿರಿ?

ಇಷ್ಟೆಲ್ಲಾ ಆದ ಮೇಲೂ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ ಎಂದು ಹೇಳಿದರೆ ನಾವು ಹೇಗೆ ನಂಬಬೇಕು? ಮೂರು ತಿಂಗಳಿನಲ್ಲಿ ಏನು ಮಾಡುತ್ತೀರಿ ಎಂದು ಅವರು ಉಲ್ಲೇಖ ಮಾಡಿದರು. ನಾನು ಇಲ್ಲಿ ಸುಮ್ಮನೆ headlines ಮಾತ್ರ ಓದುತ್ತೇನೆ. "ವಿಜಯಬಟ್ಟಗುಡ್ಡೆಯಲ್ಲಿ ವಾಹನ ತಾಪಾಸಣೆ ವೇಳೆ ನಡೆದ ಘಟನೆಯಲ್ಲಿ ಕರ್ತವ್ಯನಿರತ ಪೊಲೀಸರಿಗೆ ಚಾಲಕನಿಂದ ಹಲ್ಲೆ." "ಮನೆಯೊಳಗಡೆ ಪೆಟ್ರೋಲ್ ಸುರಿದು ಬೆಂಕಿ, ಯಜಮಾನನಿಗೆ ಗಾಯ" "ಮನೆಮಂದಿಯನ್ನು ಕಟ್ಟಿ ಹಾಕಿ ದರೋಡೆ" ಇಂತಹದ್ದನ್ನು ಎಷ್ಟು ಬೇಕಾದರೂ ಓದಬಹುದು. ಅದನ್ನು ಏತಕ್ಕೆ ಹೇಳುತ್ತೇನೆಂದರೆ ಇಂತಹ ಬಹಳಷ್ಟು ಪ್ರಕರಣಗಳು ನಡೆದಿವೆ. "ಗೋ ಕಳ್ಳರಿಂದ ಪೊಲೀಸರ ಹತ್ಯೆಯತ್ನ-ಪರಾರಿ" "ಮುಕ್ಕಾತೋಂಗೇಟ್ ಬಳಿ ದನ ಅಕ್ರಮ ಸಾಗಾಟ ಪತ್ತೆ, ಇಬ್ಬರ ಬಂಧನ, 5 ಜನ ಪರಾರಿ" ಮಂಗಳೂರು, "ಅಪರಿಚಿತ ವ್ಯಕ್ತಿಯ ಮುಖಕ್ಕೆ ಕಲ್ಲಿನಿಂದ ಜಜ್ಜಿ ಕೊಲೆ" ಜೈಲು ಅಧೀಕ್ಷಕರ ಕೊಠಡಿ ಕಿಟಕಿಗೆ ಕಲ್ಲು" ಜೈಲಿನಲ್ಲಿ ಕೊಲೆ ಯತ್ನ" "ಗೋ-ಮಾಂಸ ಸಾಗಾಟ, ಆರೋಪಿ ಬಂಧನ" "ದನ ಕರು ಕಳವು ದೂರು" ಇದು ಕೇವಲ ದಕ್ಷಿಣ ಕನ್ನಡ ಜಿಲ್ಲೆಯದ್ದನ್ನು ಮಾತ್ರ ಹೇಳುತ್ತಿದ್ದೇನೆ. "ಗೋ-ಮಾಂಸ ಇಬ್ಬರ ಬಂಧನ" 'ನೈತಿಕ ಪೊಲೀಸ್‌ಗಿರಿ ಹಲ್ಲೆ' ಇಬ್ಬರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರೋಪಿಗಳ ಬಂಧನ" ಇದು ಸಾಧಾರಣವಾಗಿ ನೈತಿಕ ಪೋಲೀಸ್‌ಗಿರಿ ಎಂದರೆ ಬಜರಂಗದಳ, ಹಿಂದೂ ಜಾಗೃತಿ ವೇದಿಕೆ ಎಂದು ಹೇಳುತ್ತಾರೆ. ಇಲ್ಲಿಯೂ ನಡೆದಿದೆ. ಉಳ್ಳಾಲದಲ್ಲಿ ಸೋಮವಾರ ಭಿನ್ನ ಕೋಮಿನ ವೈದ್ಯಕೀಯ ವಿದ್ಯಾರ್ಥಿಗಳ ಮೇಲೆ ತಂಡವೊಂದು ಹಲ್ಲೆ ಮಾಡಿದೆ. ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಕೋಟೆಪುರ, ಕೋಡಿ ನಿವಾಸಿ, ತೌಸೀಫ್, ಹಾಗೂ ಉಳ್ಳಾಲ ಸುಂದರಿ ಭಾಗ್ ನಿವಾಸಿ ನಿಜಾಮುದ್ದೀನ್ ಬಂಧಿತ ಆರೋಪಿಗಳು.

**ಮುಂದು. . .**

(028) 06.02.2018 04.50 ಎಸ್‌ವಿ-ಕೆಎಸ್

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಮುಂದು):-**

ದೇರಳಕಟ್ಟೆ ಸಮೀಪದ ವೈದ್ಯಕೀಯ ಕಾಲೇಜಿನ ಅರೆ ವೈದ್ಯಕೀಯ ವಿಭಾಗದ ರಾಂಚಿ ಮೂಲದ ವಿದ್ಯಾರ್ಥಿ ರಾಹುಲ್ ಮೇಲೆ ಹಲ್ಲೆ ಮಾಡಲಾಗಿದೆ. 'ಉದ್ಯಮಿಯನ್ನು ಬೆದರಿಸಿ ದರೋಡೆ', 'ಹಾಡುಹಗಲೇ ಮನೆಯಲ್ಲಿದ್ದ 2.5 ಲಕ್ಷ ರೂಪಾಯಿಯ ಸ್ವತ್ತು ಕಳವು' ಈ ಸುದ್ದಿಗಳು ಮಣಿಪಾಲದ್ದಾದರೆ, ಪುತ್ತೂರಿನ 'ಆಭರಣ ಮಳಿಗೆಗೆ ಗುಂಡು, ಪರಾರಿಯಾದ ದುಷ್ಕರ್ಮಿಗಳು, ಭೂಗತ ಪಾತಕಿಗಳತ್ತ ಅನುಮಾನ', ಉಪ್ಪಿನಂಗಡಿಯಲ್ಲಿ 'ಶಿಕ್ಷಕಿಯನ್ನು ಬೆದರಿಸಿ ಸರ ಕಸಿದು ಪರಾರಿ', ಕಣ್ಣೂರಿನ 'ದಲಿತ ಯುವಕರ ಮೇಲೆ ಹಲ್ಲೆ-ಮೂವರ ಬಂಧನ'. ಕಣ್ಣೂರಿನಲ್ಲಿ ಶರದೋತ್ಸವದ ಪೂರ್ವಭಾವಿಯಾಗಿ ಬ್ಯಾನರ್ ಹಾಗೂ ಬಂಟಿಂಗ್ಸ್ ಅನ್ನು ಹಾಕುವ ಕೆಲಸವನ್ನು ಮುಗಿಸಿ, ಸ್ನೇಹಿತರ ಮನೆಯಲ್ಲಿ ಊಟ ಮಾಡಿ ವಾಪಸ್ಸಾಗುತ್ತಿದ್ದ ವೇಳೆ ನಡೆದಂತಹ ಘಟನೆ ಇದಾಗಿದೆ. ಎಲ್ಲೋ ಒಂದು ಕಡೆ ಸರ್ಕಾರ ಪ್ರಾರಂಭವಾದಂದಿನಿಂದಲೂ ಇಲ್ಲಿಯವರೆವಿಗೂ ಎಷ್ಟು ಘಟನೆಗಳು ನಡೆದಿದೆಯೋ ಅದರ ಬಗ್ಗೆ ಯಾರ ತಲೆಯ ಮೇಲೆಯೋ ಗೂಬೆಯನ್ನು ಕೂರಿಸಿ ನಮ್ಮ ಜವಾಬ್ದಾರಿ ಏನೂ ಇಲ್ಲ ಎನ್ನುವ ರೀತಿಯಲ್ಲಿ ವರ್ತನೆ ಮಾಡುತ್ತಿದೆ. ಸರ್ಕಾರದ ಕೈಯಲ್ಲಿ ಪೋಲೀಸ್ ಇಲಾಖೆಯಿದೆ, Trained Police Force ಇದೆ. ಅವರಿಗೆ ನೇರವಾಗಿ, ಪ್ರಾಮಾಣಿಕವಾಗಿ ಕೆಲಸ ಮಾಡಲು ಬಿಟ್ಟರೆ ಅಧಿಕಾರಿಗಳ ಮೇಲೆ ಒತ್ತಡ ಹಾಕುವುದನ್ನು ನಿಲ್ಲಿಸಿದರೆ, ಅಧಿಕಾರಿಗಳ ಅವಧಿಪೂರ್ವ ವರ್ಗಾವಣೆಯನ್ನು ನಿಲ್ಲಿಸಿದರೆ, ಅಧಿಕಾರಿಗಳನ್ನು ಪ್ರವಾಸಿಮಂದಿರಕ್ಕೆ ಕರೆಯಿಸಿ ಧಮಕಿ ಹಾಕುವುದನ್ನು ನಿಲ್ಲಿಸಿದರೆ, ಆರೋಪಿಗಳ ಪರವಾಗಿ ಹೇಳಿಕೆಯನ್ನು ಕೊಡುವುದನ್ನು ನಿಲ್ಲಿಸಿದರೆ ಸರ್ಕಾರ ಎಲ್ಲರನ್ನೂ ಒಂದಾಗಿ ತೆಗೆದುಕೊಂಡು ಹೋಗಿದ್ದೇ ಆದರೆ ಕೇವಲ ಕರಾವಳಿ ಕರ್ನಾಟಕ ಮಾತ್ರವಲ್ಲ, ಇಡೀ ಕರ್ನಾಟಕದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯು ನೆಲೆಸಲು ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ಈ ರೀತಿ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎನ್ನುವ ಕೆಲಸವನ್ನು ಮಾಡಿದರೆ ಒಂದು ಕೊಲೆಯಾದಾಗ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹತ್ಯೆಯಾದಾಗ ಅದರ ಬಗ್ಗೆ ತನಿಖೆಯಾಗುವ ಮುಂಚೆಯೇ ಹೇಳಿಕೆಯನ್ನು ಕೊಡುವಂತಹ ಕೆಲಸವನ್ನು ಮಾಡುವುದು. ಗೌರಿ ಕೊಲೆಯ ಬಗ್ಗೆ ಉಲ್ಲೇಖ ಮಾಡಿದರು. ಚರ್ಚೆಗಳಾಯಿತು. ಯಾವುದೇ ಸಂಗತಿಗಳಿರಲಿ ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಕಳೆದರೂ ಹಂತಕರನ್ನು ಪತ್ತೆ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ ಎನ್ನುವುದಾದರೆ, ಸಿ.ಐ.ಡಿ. ತನಿಖೆಯನ್ನು ಮಾಡಿ ಕ್ಲೀನ್ ಚಿಟ್ ಅನ್ನು ಕೊಡುವ ಕೆಲಸವನ್ನು ಸರ್ಕಾರವೇ ಮುಂದುವರೆಸಿಕೊಂಡು ಹೋಗುವುದಾದರೆ ಖಂಡಿತವಾಗಿಯೂ ಸರ್ಕಾರದಿಂದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಆಗುವುದಿಲ್ಲ ಎಂದು ಪ್ರಾಮಾಣಿಕವಾಗಿ ನನಗನ್ನಿಸುತ್ತದೆ. ಯಾವುದೇ ಪಕ್ಷದ ಚುನಾಯಿತ ಸರ್ಕಾರವೇ ಬರಲಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವಂತಹದ್ದು ಅದರ ಕರ್ತವ್ಯವಾಗಿರುತ್ತದೆ. ರಾಜ್ಯದ ಜನತೆಗೆ ನ್ಯಾಯ ಒದಗಿಸಬೇಕು. ಅಪರಾಧಿಗಳನ್ನು ಪತ್ತೆ ಹಚ್ಚಿ ಶಿಕ್ಷೆ ಕೊಡಿಸಬೇಕು. ಈ ಎಲ್ಲಾ ಸಂಗತಿಗಳಲ್ಲಿಯೂ ಈ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಸರ್ಕಾರ ರಾಜ್ಯಪಾಲರ ಬಾಯಿಯಲ್ಲಿ ಹೇಳಿಸಿದ ಹಾಗೆ ಇಲ್ಲ. ಅದು ಸಂಪೂರ್ಣ ವಿಫಲವಾಗಿದೆ. ಈಗ ನಾವು ಇಲ್ಲಿ ಮಾತನಾಡುತ್ತಿದ್ದೇವೆ. ನಾಳೆ ಬೆಳಗ್ಗೆ ಏನಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಏಕೆಂದರೆ ಪೋಲೀಸರ ಮೇಲೆ ಯಾರಿಗೂ ಹೆದರಿಕೆ ಇಲ್ಲ. ಪೋಲೀಸರಿಗೆ ಅಪರಾಧಿಗಳನ್ನು ನೋಡಿದರೆ ಭಯವಾಗುವಂತಹ ಒಂದು ವಾತಾವರಣ ನಿರ್ಮಾಣವಾಗಿದೆ. ಈ ಸರ್ಕಾರಕ್ಕೆ ಇನ್ನು ಕೊನೆಯ ಎರಡು ಮೂರು ತಿಂಗಳ ಅಧಿಕಾರಾವಧಿ ಇದೆ. ಅಷ್ಟರಲ್ಲಿಯಾದರೂ ಎಚ್ಚೆತ್ತುಕೊಂಡು ಪೋಲೀಸ್ ಇಲಾಖೆಗೆ ಶಕ್ತಿಯನ್ನು ತುಂಬುವಂತಹ ಕೆಲಸವನ್ನು ಮಾಡಬೇಕು. ಚುನಾವಣೆಗೆ ಪೂರ್ವಭಾವಿಯಾಗಿ ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆ ನೆಲೆಸುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದಿನ ವಿಚಾರದಲ್ಲಿ ಕಾನೂನು ಸುವ್ಯವಸ್ಥೆಯ ಲೋಪದೋಷಗಳ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಗೃಹ ಇಲಾಖೆಯನ್ನು ಜ್ಞಾಪಿಸಿಕೊಂಡಾಗ ನನಗೆ ಜ್ಞಾಪಕ ಬರುವುದು ಶ್ರೀ ಬಿ.ರಾಚಯ್ಯನವರು ಗೃಹ ಸಚಿವರಾಗಿದ್ದಂತಹ ಸಂದರ್ಭ. ಶ್ರೀ ರಾಮರಾವ್ ಎನ್ನುವವರೊಬ್ಬರಿದ್ದರು. ಅವರೂ ಸಹ ನನಗೆ ಜ್ಞಾಪಕ ಬರುತ್ತಾರೆ. ಶ್ರೀ ಬಿ.ರಾಚಯ್ಯನವರಿದ್ದ ಕಾಲದಲ್ಲಿ ಜನತಾ ಪಕ್ಷ ಅಧಿಕಾರದಲ್ಲಿತ್ತು. ಬೆಂಗಳೂರು ನಗರದಲ್ಲಿ ಹಲವಾರು ರೌಡಿಗಳು ಉದಾಹರಣೆಗೆ ಕೊತ್ವಾಲ್ ರಾಮಚಂದ್ರ, ಜೈರಾಜ್‌ನಂತಹ ಘಟಾನುಘಟಿ ರೌಡಿಗಳು ರೌದ್ರಾವತಾರವನ್ನು ತಾಳುತ್ತಿದ್ದರು. ಆದರೆ ಶ್ರೀ ಬಿ.ರಾಚಯ್ಯನವರು ಗೃಹ ಸಚಿವರಾಗಿದ್ದಾಗ ರೌಡಿಗಳನ್ನು ರೌಡಿಗಳ ಕೈಯಲ್ಲಿಯೇ ಕೊಲೆ ಮಾಡಿಸಿ ಬೆಂಗಳೂರು ನಗರವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂಟ್ರೋಲ್‌ಗೆ ತಂದಿದ್ದರು. ಇಂದು ಅವರು ಇಲ್ಲ. ಆದರೂ ಆ ಕೀರ್ತಿ ಶ್ರೀ ಬಿ.ರಾಚಯ್ಯನವರಿಗೆ ಸಲ್ಲಬೇಕು ಎಂದು ನಾನು ಪ್ರತಿಭಾಜ್ಞಾನ ಮಾಡುತ್ತಿದ್ದೇನೆ. ಏತಕ್ಕೆ ಇದು ಕಾರಣವಾಯಿತು? ಶ್ರೀ ಬಿ.ರಾಚಯ್ಯನವರು ನ್ಯಾಯಯುತವಾಗಿ ಪೋಲೀಸ್ ಇಲಾಖೆಗೆ ಧೈರ್ಯವನ್ನು ಕೊಟ್ಟಿದ್ದರು. ಗೃಹ ಸಚಿವರಾಗಿ ಪೋಲೀಸರು ಅವರ ಕೆಲಸವನ್ನು ಧೈರ್ಯದಿಂದ ಮಾಡುವುದಕ್ಕೆ, ನಿಷ್ಠೆಯಿಂದ ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದರು. ತಾನು ಮತ್ತು ಬೇರೆಯವರು ಎಂದು partiality ಮಾಡುತ್ತಿರಲಿಲ್ಲ. ಶಾಸಕನಾಗಿ ಒಮ್ಮೆ ನನಗೆ ಕೊಲೆ ಬೆದರಿಕೆ ಬಂದಿತ್ತು. ಕೊಲೆಯಾಗುವುದಕ್ಕೆ ಪ್ರಯತ್ನವೂ ಆಯಿತು. ಆಗ ನಾನು ವಿರೋಧಪಕ್ಷದಲ್ಲಿದ್ದೆನು. ಆದರೂ ಸಹ ನನಗೆ ಹಾಗೂ ನನ್ನ ಮನೆಗೆ ರಕ್ಷಣೆಯನ್ನು ಕೊಟ್ಟರು. ಗೃಹ ಇಲಾಖೆಯಲ್ಲಿ ಅವರ ವೈಯಕ್ತಿಕ ನಂಬರ್ ಅನ್ನೂ ಸಹ ನನಗೆ ಕೊಟ್ಟಿದ್ದರು. ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ಒಬ್ಬ ವಿರೋಧಪಕ್ಷದ ಶಾಸಕನಿಗೆ ಅವಮಾನವಾಗಬಾರದು, ತೊಂದರೆಯಾಗಬಾರದು ಎನ್ನುವ ಕಾರಣದಿಂದ ಕೊಟ್ಟಿದ್ದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಗೃಹ ಇಲಾಖೆಯನ್ನು ನಡೆಸುವವರು ಭಿನ್ನ ಭಾವನೆಯನ್ನು ಮಾಡಬಾರದು. ರಾಜಕೀಯವನ್ನು ಮಾಡಬಾರದು ಮತ್ತು ಪೋಲೀಸ್ ಅಧಿಕಾರಿಗಳಿಗೆ ವರ್ಗಾವಣೆಯಲ್ಲಿ ಒಂದು ಧೈರ್ಯವನ್ನು ಕೊಡಬೇಕು. ಶ್ರೀ ಬಿ.ರಾಚಯ್ಯನವರನ್ನು ಬಿಟ್ಟರೆ ಗೃಹ ಇಲಾಖೆಯನ್ನು ಕಟ್ಟುನಿಟ್ಟಾಗಿ ಮಾಡಿದವರೆಂದರೆ ಶ್ರೀ ಗುಂಡೂರಾವ್ ಅವರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ 24 ಜನ ಶಾಸಕರು ಸಹಿ ಹಾಕಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಕೊಟ್ಟಿದ್ದರು. ಆದರೆ ಶ್ರೀ ಗುಂಡೂರಾಯರು ಅವರಿಗೆ ಏನೂ ಮಾಡದೆ ಕಲಬುರಗಿಗೆ ಹಾಕಿದರು. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಂತಹ ಇಲಾಖೆಯಲ್ಲಿ ರಾಜಕೀಯದ influence ಸುಳಿಯಬಾರದೆಂದು ಆ ರೀತಿ ಮಾಡಿದರು. ಗೃಹ ಇಲಾಖೆಯಲ್ಲಿ ಪೋಲೀಸ್ ಅಧಿಕಾರಿಗಳಿಗೆ ನೈತಿಕತೆಯನ್ನು, ಧೈರ್ಯವನ್ನು ಹಾಗೂ ಅವರ ಅಧಿಕಾರವನ್ನು ಚಲಾಯಿಸುವಂತಹ ಅಧಿಕಾರವನ್ನು ಕೊಟ್ಟಾಗ ಮಾತ್ರ ನಿಷ್ಪಕ್ಷಪಾತವಾಗಿ ಅವರು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂದಿನ ಸರ್ಕಾರದಲ್ಲಿ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಹಗಲು ಹೊತ್ತಿನಲ್ಲಿಯೇ ಕತ್ತನ್ನು ಕತ್ತರಿಸುವಂತಹ ಕೆಲಸವನ್ನು ಮಾಡುವ ಕೊಲೆಗಡುಕರನ್ನು ನೋಡಿದ್ದರೂ ಸಹ ಗೃಹ ಸಚಿವರು ಇದಕ್ಕೆ ಭಾರತೀಯ ಜನತಾ ಪಾರ್ಟಿಯವರ ಕುಮ್ಮಕ್ಕಿದೆ ಎಂದು ಹೇಳುತ್ತಾರೆ. ಕೇರಳದಿಂದ ಬಂದು ಬೆಂಗಳೂರು ನಗರದಲ್ಲಿ ಕತ್ತು ಕತ್ತರಿಸುವವರು, ಮೈಸೂರಿನಲ್ಲಿ ಕತ್ತು ಕತ್ತರಿಸುವವರು ಇಂತಹ ಕೃತ್ಯಗಳನ್ನು ಮಾಡಿದರೆ ಅದಕ್ಕೆ ಬಿ.ಜೆ.ಪಿ.ಯವರ ಪ್ರೋತ್ಸಾಹ ಇದೆ ಎಂದು ಹೇಳುತ್ತಾರೆ. ಈ ರೀತಿಯ ಮಾತುಗಳನ್ನಾಡುವುದರಿಂದ ಯಾರು ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತಾರೆಯೋ ಅಂತಹವರಿಗೆ ಮತ್ತಷ್ಟು ಬಲವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಂತಾಗುತ್ತದೆ. ಈ ಹಿನ್ನೆಲೆಯಿಂದಾಗಿ ಇಂದು ಕರ್ನಾಟಕ ರಾಜ್ಯದಲ್ಲಿ ಸುಮಾರು 24 ಜನರನ್ನು ಹಾಡು ಹಗಲೇ ಕತ್ತು ಕತ್ತರಿಸಿ ಹತ್ಯೆ ಮಾಡಲಾಯಿತು. ಇದು ಈ ರಾಜ್ಯದ ಇತಿಹಾಸದಲ್ಲಿಯೇ ಇರಲಿಲ್ಲ. ಅದು ಈ ಸರ್ಕಾರದಲ್ಲಿ ಕಪ್ಪು ಚುಕ್ಕೆಯಾಗಿ ಉಳಿದಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಸರ್ಕಾರ ಬಂದ ನಂತರ ದಿನಾಂಕ 16.03.2017ರವರೆಗೆ ನಡೆದಿರುವಂತಹ ಅಪರಾಧ ಪ್ರಕರಣಗಳ ಕುರಿತು ನಾನು ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಸರ್ಕಾರದಿಂದ ಪಡೆದಂತಹ ಉತ್ತರವನ್ನು ಈಗ ತಮ್ಮ ಮುಂದೆ ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಇದುವರೆವಿಗೂ ವೈಯಕ್ತಿಕ ದ್ವೇಷ ಹಾಗೂ ವೈಷಮ್ಯಗಳಿಂದ ಕೊಲೆಗಳು ನಡೆಯುತ್ತಿದ್ದವು. ಆದರೆ ಕತ್ತು ಕತ್ತರಿಸುವಂತಹ ಪ್ರಕರಣಗಳು, ಉದ್ದೇಶಪೂರ್ವಕವಾಗಿ ಗುರಿ ಇಟ್ಟು ಕೊಲೆ ಮಾಡುವಂತಹ ಪ್ರಕರಣಗಳು ನಡೆದಿದ್ದು, ಅದನ್ನು ನಿಲ್ಲಿಸುವ ಒಂದು ಪ್ರಯತ್ನವನ್ನು ಸರ್ಕಾರ ಮಾಡಿಲ್ಲ ಎನ್ನುವುದು ನನ್ನ ನೇರ ಆಪಾದನೆಯಾಗಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳು ಏಕೆ ನಿಷ್ಕ್ರಿಯರಾಗಿದ್ದಾರೆಂದರೆ ಅವರಿಗೆ ನಾವು ಈ ಸ್ಥಾನದಲ್ಲಿ ಎಷ್ಟು ದಿನಗಳಿರುತ್ತೇವೆ ಎಂಬ ನಂಬಿಕೆಯೇ ಇರುವುದಿಲ್ಲ. ಅವರು DCP (Deputy Commissioner of Police) ಆಗಿರಬಹುದು, Circle Inspector ಆಗಿರಬಹುದು, IGP (Inspector General of Police) ಆಗಿರಬಹುದು ಅಥವಾ DGP (Director General of Police) ಆಗಿರಬಹುದು, ಯಾವತ್ತು ನಮ್ಮ ವರ್ಗಾವಣೆ ಆಗುತ್ತದೆ ಎಂಬ ಭಯದಲ್ಲಿರುತ್ತಾರೆ. ಆದುದರಿಂದ ಅವರು ಸಕ್ರಿಯವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗದ ಕಾರಣ ನಾನು ಪಡೆದುಕೊಂಡಿರುವಂತಹ ಅಂಕಿ ಅಂಶಗಳ ಒಂದು ನಿದರ್ಶನವನ್ನು ಸದನದ ಮುಂದೆ ಇಡಬೇಕಾಗುತ್ತಿದೆ.

ಈ ಸರ್ಕಾರ ಬಂದ ನಂತರ 4 ವರ್ಷ 2 ತಿಂಗಳುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ 6521 ಕೊಲೆಗಳು ನಡೆದಿದ್ದು, ಇದರಲ್ಲಿ 2,534 ಮಹಿಳೆಯರು ಕೊಲೆಗೀಡಾಗಿದ್ದಾರೆ. 19382 ಲೈಂಗಿಕ ಕಿರುಕುಳಗಳು/ಅತ್ಯಾಚಾರ ಪ್ರಕರಣಗಳು ನಡೆದಿವೆ. 5,647 ಪ್ರಕರಣಗಳಲ್ಲಿ ಮಕ್ಕಳ ಮೇಲೆ ಅತ್ಯಾಚಾರ ನಡೆದಿರುವಂಥದ್ದಾಗಿದೆ. 4,759 ಪ್ರಕರಣಗಳು ಹೆಣ್ಣು ಮಕ್ಕಳು ಕಾಣೆಯಾಗಿರುವಂತಹ ಪ್ರಕರಣಗಳಾಗಿವೆ. ಬೆಂಗಳೂರು ನಗರದಲ್ಲಿ 1,24,655 ಕ್ರಿಮಿನಲ್ ಕೇಸುಗಳು ದಾಖಲಾಗಿವೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿದೆ ಎಂದೆನಿಸುತ್ತದೆಯೇ? ಇದಕ್ಕೆ ಯಾರು ಕಾರಣ? ನಾನು ಇದಕ್ಕೆ ಅಧಿಕಾರಿಗಳನ್ನು ಹೊಣೆ ಮಾಡುವುದಿಲ್ಲ. ನಾಲ್ಕು ವರ್ಷಗಳಿಂದ ಅಧಿಕಾರಿಗಳನ್ನು ನಿಷ್ಕ್ರಿಯ ಮಾಡಿರತಕ್ಕಂತಹ ನಿಷ್ಕ್ರಿಯ ಸರ್ಕಾರಕ್ಕೆ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

charge ಮಾಡಬೇಕಾಗಿದೆ. ಈ ಸರ್ಕಾರದ ನಿಷ್ಕ್ರಿಯತೆ, partiality ಮತ್ತು ವರ್ಗಾವಣೆ ದಂಧೆಯಿಂದ ಇಂದು ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಆಗುವುದಿಲ್ಲ.

ನಾನು ನನ್ನದೇ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಅನವಶ್ಯಕವಾಗಿ ಒಬ್ಬ ನನ್ನ ಮೇಲೆ ಬಾಯಿಗೆ ಬಂದಂತೆ ಪತ್ರಗಳನ್ನು ಬರೆದಿದ್ದನು.

(...ಮುಂದು)

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ಮುಂದು..):-**

ಮೂರು ಕಡೆ ಆ ಪ್ರಕರಣ ವಜಾ ಆಗಿರುತ್ತದೆ. ನಾನು ಅವರ ವಿರುದ್ಧ ದೂರನ್ನು ಕೊಟ್ಟು ಮೂರು ತಿಂಗಳು ಆಗಿದೆ. ಇದುವರೆವಿಗೂ ಸಹ, ಆ ದೂರಿನಲ್ಲಿ ಅವರನ್ನು ವಿಚಾರಣೆ ಮಾಡಿಲ್ಲ. ಮಾನ್ಯ ಸಭಾಪತಿಯವರೇ, ಆ ದೂರನ್ನು ನಾಳೆ ಅಥವಾ ನಾಳಿದ್ದು ತಮಗೆ ಕೊಡುತ್ತೇನೆ. ಈ ಸರ್ಕಾರ ಏನಾದರೂ ಬದುಕಿದ್ದರೆ, ಒಬ್ಬ ಶಾಸಕನಿಗೆ ರಕ್ಷಣೆ ಕೊಡುವಂತಹ ಕೆಲಸ ಮಾಡಲಿ. ಇಲ್ಲವೆಂದರೆ, ಸರ್ಕಾರಕ್ಕೆ ನಾಚಿಗೆ ಇಲ್ಲವೆಂದು ನಾವು ಹೊರಗಡೆ ಹೋಗುತ್ತೇವೆ. ನಾವು ಇನ್ನೇನು ಮಾಡಬೇಕು ಹೇಳಿ? ನನ್ನ ವಿರುದ್ಧ ಕೇಸ್ ಇದ್ದರೆ, ನನ್ನನ್ನು ನಾಳೆಯೇ ಬಂಧಿಸಲಿ. ಅದನ್ನು ಬಿಟ್ಟು ಯಾರೋ ಪೋಲಿ-ಪೋಕರಿಗಳು ಬಾಯಿಗೆ ಬಂದಂತೆ ಮಾತನಾಡಿದಾಗ ನಾವು ಅವರ ವಿರುದ್ಧ ಒಂದು ದೂರನ್ನು ಕೊಟ್ಟರೆ, ಅವರ ಬಗ್ಗೆ ಇದುವರೆವಿಗೂ ವಿಚಾರಣೆ ಮಾಡಿಲ್ಲ. ಆ ಪೋಲೀಸ್ ಠಾಣೆಯಲ್ಲಿರುವಂತಹ ಇನ್ಸ್‌ಪೆಕ್ಟರ್‌ರವರು ಬಹಳ ಒಳ್ಳೆಯವರಿದ್ದಾರೆ. ಅವರು ಬಹಳ ಪ್ರಮಾಣಿಕವಾಗಿ ಚಾರ್ಜ್‌ಶೀಟ್ ಹಾಕಿದ್ದಾರೆ. ಆದರೆ, ಸಬ್-ಇನ್ಸ್‌ಪೆಕ್ಟರ್ ಅದನ್ನು ಮುಕ್ತಾಯವಾಗುವಂತಹ ರೀತಿಯಲ್ಲಿ ಹಿಂಬರಹ ಕೊಡುವುದಕ್ಕೆ ಬರುತ್ತಾರೆ. ಅದರ ಬಗ್ಗೆ ಸಾಕಷ್ಟು ದಾಖಲೆಗಳನ್ನು ಕೊಟ್ಟಿದ್ದೇನೆ. ಯಾರಾದರೂ ಉನ್ನತ ಅಧಿಕಾರಿಗಳು ಆ ದಾಖಲೆಗಳನ್ನು ಇಲ್ಲವೆಂದು ಹೇಳಲಿ ನೋಡೋಣ. ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರವನ್ನು ನಡೆಸುವುದಾದರೆ, ಯಾವ ರೀತಿ ಕಾನೂನನ್ನು ಕಾಪಾಡುತ್ತಾರೆ? ಇದು ಇಲ್ಲಿ ಮುಖ್ಯವಾದಂತಹ ಪ್ರಶ್ನೆ. ಇವತ್ತಿನ ದಿವಸ ಇಷ್ಟೊಂದು ಪ್ರಮಾಣದಲ್ಲಿ ಅನಾಹುತಗಳು ನಡೆಯಬೇಕಾದರೆ ಅದರ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಾಗುತ್ತದೆ. ನಾವು ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದರಿಂದ ಇಷ್ಟೊಂದು ಕೊಲೆಗಳು ಆಗಿವೆ ಎಂದು ಹೇಳಿದರೆ, ಅದಕ್ಕೆ ಸರ್ಕಾರ ಆರ್.ಎಸ್.ಎಸ್‌ನವರು ಉಗ್ರರು ಎಂದು ಹೇಳುತ್ತಾರೆ. 'ರಾಷ್ಟ್ರೀಯ ಸ್ವಯಂ ಸೇವಕರು', 'ಭಾರತ ಮಾತಕೀ ಜಯ್' ಎನ್ನುವವರು, 'ವಂದೇ ಮಾತರಂ' ಹೇಳುವಂತಹವರು ಉಗ್ರರ ಸಮಾನರೆ? ಕೇರಳದಿಂದ ಬಂದು ಕತ್ತು ಕತ್ತರಿಸುವಂತಹ ಪಿಎಫ್‌ಐನವರು ಸಂಭಾವಿತರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಎಂತಹ ಸರ್ಕಾರ ಇದೆ ನೋಡಿ. ನಮ್ಮ ರಾಜ್ಯವನ್ನು ಏನು ಪಾಕಿಸ್ಥಾನ ಮಾಡುತ್ತಾರಾ? ನಮ್ಮ ರಾಜ್ಯವನ್ನು ಕಾಶ್ಮೀರ ಮಾಡುತ್ತಾರಾ? ಕಾನೂನು ಸುವ್ಯವಸ್ಥೆ ಪ್ರಶ್ನೆ ಬಂದಾಗ, ಯಾರೇ ಆಗಿರಲಿ ನಿಷ್ಪಕ್ಷಪಾತವಾಗಿ ಅದನ್ನು ನಾವು ತಡೆಯುತ್ತೇವೆ, ಯಾರು ಆ ತರಹ ಮಾಡುತ್ತಿದ್ದಾರೆ ಅದನ್ನು ಬಂದ್ ಮಾಡುತ್ತೇವೆ, ಯಾರು ಹೊರಗಡೆ ರಾಜ್ಯದಿಂದ ಕರ್ನಾಟಕಕ್ಕೆ ಬರುತ್ತಿದ್ದಾರೆ ಅವರನ್ನು ನಿಲ್ಲಿಸುತ್ತೇವೆ ಎಂದು ಹೇಳುವ ಬದಲು ಅದಕ್ಕೆ ರಾಜಕೀಯ ಲೇಪನ ಹಚ್ಚಿ ಇವತ್ತಿನ ದಿವಸ ಸುಮಾರು 34 ಜನ ಅಮಾಯಕರ ಕತ್ತುಗಳನ್ನು ಕತ್ತರಿಸಿದ್ದಾರೆ. ಒಟ್ಟು ಕೊಲೆಯಾಗಿರುವಂತಹದ್ದು 6,521 ಜನರು. ಆದರೆ, ಇದು ನೇರವಾಗಿ ಕತ್ತರಿಸುವಂತಹ ಸುವ್ಯವಸ್ಥೆಯನ್ನು ಕಾಪಾಡಬಹುದೇ? ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ದಿವಸ ಮಾನ್ಯ ಪ್ರಧಾನಿ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಗೋಧ್ರದ ಬಗ್ಗೆ ನೆನಪು ಬರಲಿಲ್ಲವೆ ಎಂದು ಹೇಳಿದ್ದಾರೆ. ಇಲ್ಲಿ ಹಲವಾರು ದಂಧೆಗಳು ನಡೆಯುತ್ತವೆ. ಕೋಮುಗಲಭೆಗಳು ನಡೆಯುತ್ತವೆ. ಅವು ಉದ್ಧೇಶಪೂರ್ವಕವಾಗಿ ನಡೆಯುತ್ತವೆಯೋ ಅಥವಾ ಆಕಸ್ಮಿಕವಾಗಿ ನಡೆಯುತ್ತವೆಯೋ ಅದನ್ನು ನಾನು ಹೇಳುವುದಿಲ್ಲ. ಪ್ರತಿಯೊಂದು ವಿವರ ಇಲ್ಲದೆ. ಆದರೆ, ನಾನು ಒಟ್ಟಾಗಿ ಲೆಕ್ಕ ಹಾಕಿದ್ದೇನೆ. 1947 ರಿಂದ 2002 ರವರೆಗೆ ಗುಜರಾತ್ ರಾಜ್ಯವನ್ನು ಬಿಟ್ಟು ನಮ್ಮ ದೇಶದಲ್ಲಿ ಒಟ್ಟು 15,739 ಜನರು ಸತ್ತಿದ್ದಾರೆ. ದೆಹಲಿಯಲ್ಲಿ 2,500 ಜನರು ಸಿಖ್ಖರು ಸತ್ತಿದ್ದಾರೆ. ಅದಕ್ಕೆ ಮಾನ್ಯ ದಿವಂಗತ ರಾಜುಗಾಂಧಿಯವರನ್ನು ಕೊಲೆಗಡುಕರೆಂದು ಕರೆಯಬಹುದೆ? ಮಾನ್ಯ ಮುಖ್ಯ ಮಂತ್ರಿಯವರು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಪಟ್ಟ ಕಟ್ಟುತ್ತಾರೆ. ಹಾಗಾದರೆ, ಇವರು ದೆಹಲಿಯಲ್ಲಿ 2,500 ಜನರು ಸಿಖ್ಖರು ಸತ್ತಿದ್ದನ್ನು ಒಪ್ಪಿಕೊಳ್ಳಬೇಕು. ಕೋಲ್ಕತ್ತಾದಲ್ಲಿ ಮಾನ್ಯ ದಿವಂಗತ ನೆಹರುರವರು ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ 5,000 ಜನರು ಸತ್ತಿದ್ದಾರೆ. ಹಾಗಾದರೆ, ನೆಹರುರವರನ್ನು ಕೊಲೆಗಡುಕರೆಂದು ಕರೆಯಬಹುದೇ? ಮಾನ್ಯ ಮುಖ್ಯಮಂತ್ರಿಯವರು ಇಂತಹ ಬೇಜವ್ದಾರಿಯುತವಾದಂತಹ ಹೇಳಿಕೆಯನ್ನು ಕೊಡುವುದು ಸರಿಯಲ್ಲ. ಗೋಧ್ರದಲ್ಲಿ ಕರ ಸೇವಕರು ಹೋಗುತ್ತಿದ್ದಂತಹ ರೈಲಿಗೆ ಬೆಂಕಿ ಹಾಕಿದಾಗ ಆಕ್ರೋಶಕ್ಕೆ ಆಗಿರುವಂಥದಕ್ಕೆ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರನ್ನು ಜವಾಬ್ದಾರರನ್ನಾಗಿ ಮಾಡುವುದಾದರೆ, ದೆಹಲಿಯಲ್ಲಿ 2,500 ಜನ ಸಿಖ್ಖರು ಸತ್ತರು. ಅದಕ್ಕೆ ಯಾರನ್ನು ಜವಾಬ್ದಾರರನ್ನಾಗಿ ಮಾಡಬೇಕು? ಅದಕ್ಕೆ ಯಾರನ್ನು ಕೊಲೆಗಡುಕರು ಎಂದು ಕರೆಯಬೇಕು? ಇವರು ಆ ಜವಾಬ್ದಾರಿಯನ್ನು ಹೊರಬೇಕು ಅಲ್ಲವೇ? ಇದನ್ನು ಮಾತ್ರ ಹೇಳುವುದಕ್ಕೆ ಆಗುತ್ತದೆಯೇ? ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ನಾಳೆ ದಿವಸ ಉತ್ತರ ಹೇಳಬೇಕು. ಕ್ರಾಂಗೆಸ್‌ನ ಪ್ರಧಾನ ಮಂತ್ರಿಯವರು ಮತ್ತು ಮುಖ್ಯಮಂತ್ರಿಯವರು ಅಧಿಕಾರದಲ್ಲಿದ್ದಾಗ ಒಟ್ಟು 15,739 ಜನರು ಸತ್ತಿದ್ದಾರೆ. ನಾನು ಬೇಕಾದರೆ ಆ ಬಗ್ಗೆ ಇರುವಂತಹ ದಾಖಲೆಗಳನ್ನು ಕಳುಹಿಸಿ ಕೊಡುತ್ತೇನೆ. ಆದ್ದರಿಂದ, ನಾನು ಹೆಚ್ಚಿಗೆ ಮಾತನಾಡಿ ಈ ಸದನದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಯವನ್ನು ಹಾಳು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಕಾನೂನಿನ ಸುವ್ಯವಸ್ಥೆ ಹಾಳಾಗಬೇಕಾದರೆ ಇವತ್ತಿನ ದಿವಸ ಮಾನ್ಯ ಗೃಹಮಂತ್ರಿಯವರು ಸರಿಯಾದಂತಹ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು ಇಲ್ಲಿ ಇನ್ನೊಂದು ಮಾತನ್ನು ಹೇಳಲೇಬೇಕಾಗಿದೆ. ಗೃಹ ಇಲಾಖೆಯಲ್ಲಿಯೇ ಕೆಲಸ ಮಾಡುತ್ತಿದ್ದಂತಹ ಒಬ್ಬ ನಿವೃತ್ತ ಪೋಲೀಸ್ ಅಧಿಕಾರಿಯನ್ನು ನೇಮಕ ಮಾಡಿಕೊಂಡು ಅವರ ಸಲಹೆಗಳನ್ನು ಪಡೆಯುವುದು ಇದೆ ಅಲ್ಲವೇ? ಇದು ವೈಯಕ್ತಿಕವಾಗಿ ಯಾರಾದರೂ ಅಧಿಕಾರಿಗಳು ಅಲ್ಲಿದ್ದರೆ ಅವರ ಕೈಕೆಳಗೆ ಕೆಲಸ ಮಾಡಿದವರು ಇದ್ದಂತಹವರಿದ್ದರೆ ಅಥವಾ ಅವರ ವಿರುದ್ಧವಾಗಿ ಕೆಲಸ ಮಾಡಿದವರಿದ್ದರೆ ಅವರ ವಿರುದ್ಧ ದ್ವೇಷವನ್ನು ಸಾಧಿಸುವುದಕ್ಕೆ ಆಗಲೀ ಅಥವಾ ತನಗೆ ಬೇಕು, ಬೇಡ ಎನ್ನುವಂಥ ಇಚ್ಛೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಇವತ್ತು ಗೃಹ ಇಲಾಖೆಯನ್ನು ನಿಷ್ಕ್ರೀಯ ಮಾಡಿದ್ದಾರೆ. ವರ್ಗಾವಣೆಯಲ್ಲಿ ಭ್ರಷ್ಟಚಾರ ನಡೆಯುತ್ತಿದೆ. ಅಧಿಕಾರಿಗಳಲ್ಲಿ ವರ್ಗಾವಣೆ ದಂಧೆ ನಡೆಯುತ್ತಿದೆ. ಮೊನ್ನೆ ದಿವಸ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಇದೇ ವಿಷಯವನ್ನು ಹೇಳಿದ್ದು. ಆ ವರ್ಗಾವಣೆಯ ದಂಧೆಯಿಂದ ಪೋಲೀಸ್ ಅಧಿಕಾರಿಗಳು ನಿಷ್ಕ್ರೀಯರಾಗಿದ್ದಾರೆ. ಇವತ್ತಿನ ದಿವಸ ಕೊಲೆ ಮಾಡುವಂಥದ್ದು ನಮ್ಮ ರಾಜ್ಯದಲ್ಲಿ ಸುಲಭವಾಗಿ ನಡೆಯುತ್ತಿದೆ ಎಂದು ಹೇಳುವಂತಹ ಪರಿಸ್ಥಿತಿ ಬಂದಿದೆ. ಮಾನ್ಯ ಸಭಾಪತಿಯವರೇ. ಈ ಸರ್ಕಾರದ ಅವಧಿಯಲ್ಲಿ ಯಾವೊಬ್ಬ ನಾಗರೀಕರು ಸಹ ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಎಲ್ಲದಕ್ಕೂ ಸಹ ರಾಜ್ಯಕ್ಕೆ ಲೇಪವನ್ನು ಹಚ್ಚಿ ಗೃಹ ಇಲಾಖೆಯನ್ನು ಸಂಪೂರ್ಣವಾಗಿ ನಿಷ್ಕ್ರೀಯ ಮಾಡುತ್ತಿರುವಂತಹ ಸರ್ಕಾರಕ್ಕೆ ನಾನು ಧಿಕ್ಕಾರವನ್ನು ಹೇಳಬೇಕಾಗುತ್ತದೆ. ನಾನು ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಕಾನೂನು ಸುವ್ಯವಸ್ಥೆ ವಿಫಲವಾಗಿದ್ದನ್ನು ನೋಡಿಲ್ಲವೆಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ ಸೋಜಾ (ಸರ್ಕಾರದ ಮುಖ್ಯ ಸಚೇತಕರು) :-** ಮಾನ್ಯ ಸಭಾಪತಿಯವರೇ, ನಿಯಮ 68 ರಡಿಯಲ್ಲಿ ಸುಮಾರು ಒಂದೂವರೆ ಗಂಟೆಗಳ ಕಾಲ ಚರ್ಚೆ ನಡೆದಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವಂತಹ ನಿರಂತರ ಕೊಲೆಗಳು, ಸುಲಿಗೆ, ಅತ್ಯಾಚಾರ, ಸರಗಳ್ಳತನ, ಪೋಲೀಸ್ ಇಲಾಖೆಯ ಸಿಬ್ಬಂದಿಗಳ ಮೇಲೆ ಹಲ್ಲೆ, ಜೈಲಿನ ಆವರಣದಲ್ಲಿ ಗುಂಪು ಘರ್ಷಣೆ ಮತ್ತು ಕೊಲೆ, ರಾಜ್ಯದಾಂತ್ಯ ಹಿಂಸಾಚಾರ ನಡೆಸುತ್ತಿರುವಂತಹ ಗ್ಯಾಂಗ್‌ಗಳ ನಡುವೆ ಒಡೆದಾಟ ವಿಚಾರಗಳ ಬಗ್ಗೆ ನಮ್ಮ ಮಾನ್ಯ ಪ್ರತಿ ಪಕ್ಷದ ನಾಯಕರು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿ ಬಹಳ ಗಂಭೀರವಾಗಿ ಆರೋಪ ಮಾಡುವುದಕ್ಕೆ ಹೊರಟ್ಟಿದ್ದರು. ಆದರೆ, ನನ್ನ ಮುಂದೆ ಇರುವಂತಹ ಪ್ರಶ್ನೆ ಏನೆಂದರೆ, ಈಗ ಆಗಿರುವಂತಹ ಗಲಾಟೆಗಳಿಗೆ ಪೋಲೀಸರು ಹೊಣೆ ಎನ್ನುವ ರೀತಿಯಲ್ಲಿ ಹೇಳಿದರೆ ಸರ್ಕಾರ ಅದಕ್ಕೆ ಜವಾಬ್ದಾರಿ ಎನ್ನುವಂತಹ ರೀತಿಯಲ್ಲಿ ಈಗಾಗಲೇ ಒಂದು ತರಹ ವಾದವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆಂದು ಹೇಳಬಹುದು. ಇವತ್ತು crime rate ಅನ್ನು ತೆಗೆದುಕೊಂಡರೆ, ಇವತ್ತು ದೇಶದ ಒಟ್ಟು ನಮ್ಮ ರಾಜ್ಯಗಳಲ್ಲಿರುವಂತಹ crime rate ಅನ್ನು ಶೇಕಡಾವಾರು ತೆಗೆದುಕೊಂಡರೆ, ನಮ್ಮ ರಾಜ್ಯ 10ನೇ ಸ್ಥಾನದಲ್ಲಿ ಇದೆ ಎನ್ನುವುದು ಗೊತ್ತಾಗುತ್ತದೆ. ಬಿಜೆಪಿ ಆಡಳಿತ ಇದ್ದಂತಹ ಅವಧಿಯಲ್ಲಿ ಅಂದರೆ, 2008 ರಿಂದ 2013 ರವರೆಗೆ crime rate 7.2 ಶೇಕಡ ಇದ್ದಿದ್ದು, 2014 ರಿಂದ 2018 ರವರೆಗೆ ತೆಗೆದುಕೊಂಡರೆ, crime rate ಶೇಕಡಾ 5.2 ಇರುವಂಥದ್ದನ್ನು ನಾವು ಕಾಣುತ್ತೇವೆ. ಅಂದರೆ, ಸುಮಾರು ಶೇಕಡಾ 2 ರಷ್ಟು crime rate ರಾಜ್ಯದಲ್ಲಿ ಕಡಿಮೆ ಆಗಿದೆ ಎನ್ನುವಂಥದ್ದು ನಮ್ಮ ಗಮನಕ್ಕೆ ಬರುತ್ತದೆ. ಹಾಗಾಗಿ, ನಮ್ಮ ರಾಜ್ಯದಲ್ಲಿ ಆಗಿರುವಂತಹ ಎಲ್ಲಾ ಗಲಾಟೆಗಳು, ಕೊಲೆಗಳು ಇವೆಲ್ಲಾ ವೈಯಕ್ತಿಕವಾದಂತಹ ಕೊಲೆಗಳು. ಇವು ಪಕ್ಷ ಆಧಾರಿತ ಕೊಲೆಗಳು, ಜಾತಿ ಆಧಾರಿತ ಕೊಲೆಗಳು ಎಂದು ವಿರೋಧ ಪಕ್ಷಗಳು ಪ್ರತಿಬಿಂಬನೆ ಮಾಡಲು ಪ್ರಯತ್ನಿಸುತ್ತಿವೆ. ಸರ್ಕಾರ ಕಳೆದ ಐದು ವರ್ಷಗಳಲ್ಲಿ ಯಾವ ರೀತಿ ಕ್ರಮ ತೆಗೆದುಕೊಂಡಿದೆ ಎಂದರೆ, ಅದು ಅತ್ಯಾಚಾರ ಇರಬಹುದು ಅಥವಾ ಜೂಜಾಟ ಇರಬಹುದು ಇವುಗಳನ್ನು ತಡೆಯಲಿಕ್ಕೆ ಬಹುಶಃ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 29,684 ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಅವರಿಗೆ ಪದೋನ್ನತಿ ಕೊಟ್ಟು ಅವರನ್ನು ಬೇರೆ ಬೇರೆ ಸೆಲ್‌ಗಳಿಗೆ ನೇಮಕ ಮಾಡಿದ್ದಾರೆ. ಇವತ್ತು crime ಗಳು ಏನು ನಡೆಯುತ್ತಿವೆ, ಅದು ಗಾಂಜಾ ಮಾರಾಟ ಇರಬಹುದು ಅಥವಾ ನೈತಿಕ ಪೊಲೀಸ್‌ಗಿರಿ ಇರಬಹುದು ಇವುಗಳನ್ನು ತಡೆಯುವುದಕ್ಕೆ ಸರ್ಕಾರ ಒಂದು ಒಳ್ಳೆಯ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಕಾನೂನು ಸುವ್ಯವಸ್ಥೆಯನ್ನು ಹತೋಟಿಗೆ ತರುವುದಕ್ಕೆ ಕೆಲಸ ಮಾಡಿದೆ. ಆ ಕಾರಣದಿಂದಲೇ ಬಿಜೆಪಿ ಸರ್ಕಾರದ ಆಡಳಿತದ ಅವಧಿಗಿಂತ ಕಾಂಗ್ರೆಸ್ ಸರ್ಕಾರದ ಆಡಳಿತದ ಅವಧಿಯಲ್ಲಿ crime rate ಕಡಿಮೆ ಆಗುವುದಕ್ಕೆ ಕಾರಣವಾಗಿದೆ ಎನ್ನುವುದನ್ನು ನಾನು ಮಾನ್ಯ ಸಭಾಪತಿಯವರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಕಾರವಳಿ ಭಾಗದಿಂದ ಬಂದಿರುವಂತಹವನು. ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬಗ್ಗೆ ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಮತ್ತು ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಈಗಾಗಲೇ ಮಾತನಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಆಗಿರುವಂತಹ ಕೊಲೆಗಳ ಬಗ್ಗೆ ನಾವು ಎಲ್ಲಿಯಾದರೂ ಒಂದು glance ಮಾಡಿದಾಗ ನನ್ನಲ್ಲಿ ಆ ಬಗ್ಗೆ ಅನೇಕ ದಾಖಲೆಗಳಿವೆ. ಎಲ್ಲಾ ಕೊಲೆ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೇ ಹಚ್ಚುವುದರಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪೋಲೀಸರು ಅತ್ಯಂತ ನಿಷ್ಠೂರವಾದಂತಹ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

(ಮುಂದು...)

(030)06.02.2018-05.10-ಎಂವಿ-ಜಿಆರ್

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಅದು ಯಾವುದೇ ಪ್ರಕರಣ ಇರಬಹುದು, ಈಗ ನರೇಶ್ ಶೆಣೈ ಪ್ರಕರಣ ಇರಬಹುದು, ಪ್ರಶಾಂತ್ ಪೂಜಾರಿ ಪ್ರಕರಣ ಇರಬಹುದು, ಶರತ್ ಮಡಿವಾಳ ಪ್ರಕರಣ ಇರಬಹುದು ಅಥವಾ ಬಶೀರ್ ಪ್ರಕರಣ ಇರಬಹುದು, ಇಂತಹ ಯಾವುದೇ ಪ್ರಕರಣಗಳಲ್ಲೂ ಕೂಡ ಪೋಲೀಸ್‌ನವರು ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಂಡಿದ್ದಾರೆ. ಎಲ್ಲಿಯವರೆವಿಗೆ ಎಂದರೆ, ಇತ್ತೀಚೆಗೆ ಮರ್ಡರ್ ಆಗಿರುವಂತಹ, ಬಹಳ sensational murder case ಎಂದು ಹೇಳುವಂತಹ, ದೀಪಕ್ ರಾವ್ ಪ್ರಕರಣದಲ್ಲಿ ಪೋಲೀಸರು ಮರ್ಡರ್ ಆದಂತಹ ಮೂಕ್ಕಾಲು ಗಂಟೆಯ ಒಳಗಡೆ, ಸುಮಾರು 30 ಕಿಲೋಮೀಟರ್‌ಗಳ ಉದ್ದಕ್ಕೆ ಆ ಆರೋಪಿಗಳನ್ನು ಚೇಸ್ ಮಾಡಿ, ಅವರ ಕಾರಿನ ಟೈರ್‌ಗೆ ಗುಂಡನ್ನು ಹೊಡೆದು, ಆ ಕಾರನ್ನು ಪಂಕ್ಚರ್ ಮಾಡಿ, ತಮ್ಮ ಜೀವವನ್ನು ಒತ್ತೆ ಇಟ್ಟು ಆ ಆರೋಪಿಗಳನ್ನು ಬಂಧನ ಮಾಡಿರುವಂಥದ್ದಕ್ಕೆ, ಇಡೀ ರಾಜ್ಯದಲ್ಲಿ ಪೋಲೀಸರ ಕಾರ್ಯಾಚರಣೆಯನ್ನು ಶ್ಲಾಘನೆ ಮಾಡಿದ್ದಾರೆ. ಅದರ ಅರ್ಥ, ಪೋಲೀಸರು ತಮ್ಮದೇ ಆದಂತಹ ಒಂದು ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದುದರಿಂದ ನಾವು ಈ ವೇದಿಕೆಯ ಒಳಗಡೆ ರಾಜಕಾರಣವನ್ನು ಮರೆತು ಮಾತನಾಡಬೇಕಾಗುತ್ತದೆ. ಯಾರೂ ಸಹ ಯಾವ ಕೊಲೆಯನ್ನು, ಯಾವ ಗಲಭೆಯನ್ನು ಸಮರ್ಥನೆ ಮಾಡಕೂಡದು, ಸಮರ್ಥನೆ ಮಾಡುವುದಿಲ್ಲ, ಸಮರ್ಥನೆಯನ್ನು ಮಾಡಿದರೆ ಅದು ಸಮಾಜಕ್ಕೆ ಒಳ್ಳೆಯದಲ್ಲ. ಅದು ಯಾವುದೇ ಸಂಘಟನೆ ಇರಬಹುದು, ಅದು PFI (Popular Front of India) ಇರಬಹುದು, SDPI (Social Democratic Party of India) ಇರಬಹುದು, ಭಜರಂಗದಳ ಇರಬಹುದು ಮತ್ತು ಯಾವುದೇ ಸಂಘಟನೆ ಇರಬಹುದು. ಕೊಲೆ ಮಾಡಿರುವುದನ್ನು ಯಾರೂ ಸಮರ್ಥನೆ ಮಾಡುವುದಿಲ್ಲ. ಆದರೆ, ಆ ಕೊಲೆಯ ಹಿಂದೆ ಯಾರೋ ವ್ಯಕ್ತಿಗಳು ಅದಕ್ಕೆ ಬೇಕಾಗಿರುವಂತಹ ಪ್ರೋತ್ಸಾಹ ಕೊಡುವುದನ್ನು ನಾವು ಕಾಣುತ್ತೇವೆ. ಸರ್ಕಾರ ಅದರ ಹಿಂದೆ ಇರುವಂತಹವರನ್ನು ಪತ್ತೆಹಚ್ಚಿ ಎಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಇತ್ತೀಚೆಗೆ ದೀಪಕ್ ರಾವ್ ಕೊಲೆಯಾದ ನಂತರ, ಅದೇ ದಿವಸ ರಾತ್ರಿ ಬಶೀರ್‌ರವರ ಕೊಲೆ ಆಯಿತು. ದೀಪಕ್ ರಾವ್‌ಗೆ ಯಾರೋ ಒಬ್ಬ ಬಂದು ಉದ್ದೇಶಪೂರ್ವಕವಾಗಿ ಕೊಂದಿದ್ದಾನೆ, ಅದು ತಪ್ಪು. ಆದರೆ, ಆ ಸಮಯದಲ್ಲಿ ಬಶೀರ್ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದನೆಂದರೆ, ಎಲ್ಲೋ ಒಂದು ಕಡೆ ಗೂಡು ಅಂಗಡಿ ನಡೆಸುತ್ತಿದ್ದ. ಆ ಗೂಡು ಅಂಗಡಿ ನಡೆಸುತ್ತಿದ್ದ ರಾತ್ರಿ ಸುಮಾರು 12.00 ಗಂಟೆಗೆ ಅಂಗಡಿಯನ್ನು ಮುಚ್ಚಿ ಮನೆಗೆ ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದು ಅವನನ್ನು ಎಳೆದು ಹೊರಗೆ ಹಾಕಿ, ಮಾರ್ಗ ಮಧ್ಯದಲ್ಲಿ ಕೊಚ್ಚಿ ಹಾಕಿ, ಅವನ ಕೊಲೆಯನ್ನು ಮಾಡುತ್ತಾರೆ. ಆ ಕೊಲೆಯನ್ನು ಮಾಡಿದಂತಹ ಸ್ವಲ್ಪ ದಿನಗಳ ನಂತರ ಭಜರಂಗದಳದ ಜಿಲ್ಲಾ ಅಧ್ಯಕ್ಷ ಜಗದೀಶ್ ಶೆಣವ ಎಂದು ಅವನ ಹೆಸರನ್ನು ಸಹ ಹೇಳಬಹುದು. ಅವರು ಇದನ್ನು ನಾನು ಸಮರ್ಥನೆ ಮಾಡುತ್ತೇನೆ, ದೀಪಕ್ ರಾವ್ ಕೊಲೆ ಮಾಡಿದವರಿಗೆ ಇದು ನಮ್ಮ ಪ್ರತಿಕಾರದ ಕೊಲೆ ಎಂದು ಹೇಳುತ್ತಾನೆ. ಇದಕ್ಕೆ ನಾವು ಏನು ಹೇಳುವುದು? ಇದಕ್ಕೆ ನಾವು ಅಳಬೇಕೋ ನಗಬೇಕೋ ಗೊತ್ತಿಲ್ಲ. ಅವನು ನನ್ನ ಮೇಲೆ ಎಂತಹ ಪ್ರಕರಣವನ್ನು ಹೂಡಿದರು ಅದನ್ನು ನಾನು ಎದುರಿಸಲು ತಯಾರಿದ್ದೇನೆ ಎಂದು ತುಂಬಿದ ಒಂದು ದೊಡ್ಡ ಸಭೆಯಲ್ಲಿ ಈ ಮಾತನು ಹೇಳುತ್ತಾನೆ. ಈ ರೀತಿಯಾದರೆ ನಾವು ಏನೆಂದು ಹೇಳಬೇಕು? ನಂತರ ಒಬ್ಬ ಶರತ್ ಮಡಿವಾಳರವರ ಕೊಲೆಯಾಗುತ್ತದೆ. ಆ ನಂತರ ಆರೋಪಿಗಳನ್ನು ಪತ್ತೆ ಹಚ್ಚುತ್ತಾರೆ. ಆರೋಪಿಗಳನ್ನು ಕೂಡಲೇ ಪತ್ತೆ ಹಚ್ಚಬೇಕೆಂದು ಸುಮಾರು ಆರರಿಂದ ಏಳು ಸಾವಿರ ಜನ ಬಿ.ಸಿ. ರೋಡ್‌ನಲ್ಲಿ ಸೇರುತ್ತಾರೆ. ನಮ್ಮ ಸಂಸತ್ ಸದಸ್ಯರು, ಯಾರು ಸರ್ಕಾರದ ವಿರುದ್ಧ ಮಾತನಾಡುತ್ತಾರೋ ಅವರನ್ನು ಎತ್ತಿಕೊಂಡು, order issued under Section 144, IPC ಅನ್ನು ಉಲ್ಲಂಘನೆ ಮಾಡಿ, ತಾಕತ್ತಿದ್ದರೆ ನಮ್ಮನ್ನು ಬಂಧಿಸಿ, ನಾವು ಪ್ರತಿಭಟನೆಯನ್ನು ಮಾಡಿಯೇ ಮಾಡುತ್ತೇವೆಂದು ಹೇಳಿ, ನಮ್ಮ Constitution ನಲ್ಲಿ elect ಆಗಿರತಕ್ಕಂತಹ ಮತ್ತು ಸಂವಿಧಾನದ ಬದ್ಧತೆಯ ಅಡಿಯಲ್ಲಿ, ಚುನಾಯಿತರಾದಂತಹವರು ಕಾನೂನನ್ನು ಉಲ್ಲಂಘನೆ ಮಾಡಿ, ತಾಕತ್ತಿದ್ದರೆ ನನ್ನನ್ನು ಬಂಧನ ಮಾಡಿ ಎಂದು ಹೇಳಿ, ಕೇಕೆ ಹೊಡೆಯುತ್ತಾರೆ ಮತ್ತು ಜನರಿಗೆ ನಮಸ್ಕಾರ ಹಾಕುತ್ತಾರೆ. ಅದಕ್ಕಿಂತಲ್ಲೂ ಜಾಸ್ತಿಯಾಗಿ, ಯಾರಾದರೂ ಕೋಮು ಪ್ರಚೋದನೆಯ ಭಾಷಣ ಮಾಡಿದವರನ್ನು ಬಂಧನ ಮಾಡಿದರೆ, ಇಡೀ ರಾಜ್ಯದಲ್ಲಿ ಬೆಂಕಿ ಹತ್ತುತ್ತದೆ ಎಂದು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹೇಳಿಕೆಯನ್ನು ಕೊಡುತ್ತಾರೆ.

ಮಾನ್ಯ ಸಭಾಪತಿಯವರೇ, ಇಂತಹ ಪರಿಸ್ಥಿತಿಯ ಒಳಗಡೆ, ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕೆಂದು ಒಂದು ಕಡೆ ಹೇಳುತ್ತಾರೆ. ಮತ್ತೊಂದು ಕಡೆ ಯಾರು ಇಂತಹ ಘಟನೆಗಳನ್ನು ಮಾಡುತ್ತಾರೆ ಅಂತಹವರನ್ನು ಪ್ರೋತ್ಸಾಹ ಮಾಡುತ್ತಾರೆ. ಈ ರೀತಿಯಾದರೆ ಅದು ಎಷ್ಟು ಸರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ,...

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿಯವರು ಮಾತನಾಡುವಾಗ ಅವರಿಗೆ ಯಾರು ಅಡ್ಡ ಬರಲಿಲ್ಲ. ಅವರು ಈಗಾಗಲೇ ಮಾತನಾಡಿ ಮುಗಿಸಿದ್ದಾರೆ. ದಯವಿಟ್ಟು ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾ ರವರು ಮಾತನಾಡುವುದಕ್ಕೆ ಅವಕಾಶ ನೀಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಮಾತನಾಡುವಾಗ ನೋಟ್ ಮಾಡಿಕೊಳ್ಳಿ. ಈ ಮಧ್ಯ ಅವರಿಗೆ disturb ಮಾಡಬೇಡಿ, ಅವರು ಮಾತನಾಡಲಿ, ಆಮೇಲೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರು ಹೇಳಿದ್ದಾರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ತರಹದ ಕೊಲೆಗಳು ಮತ್ತು ಘಟನೆಗಳು ನಡೆದಾಗ, ಇದು ಎಷ್ಟು ಸರಿ ಎನ್ನುವಂಥದ್ದು ನನ್ನ ಪ್ರಶ್ನೆ. ಇವೋತ್ತು ಎಲ್ಲಿಯೋ ಒಂದು ಕಡೆ ದನಗಳ ಸಾಗಾಟ ಮಾಡುವುದಕ್ಕೆ ಕಾನೂನು ಮತ್ತು ಕ್ರಮಗಳಿದೆ. ಯಾರು ದನಗಳ ಸಾಗಾಟ ಮಾಡುತ್ತಾರೊ ಅಥವಾ ಎಲ್ಲಿಯೋ ಸಿಕ್ಕಿಬಿದ್ದರೆ, ಅವರನ್ನು ಅಲ್ಲಿಯೇ ಇಳಿಸಿ, ಚೆನ್ನಾಗಿ ಹೊಡೆದು, ಅವನಿಗೆ manhandling ಮಾಡುವಂತಹ ಕ್ರಮಗಳು ನಡೆಯುತ್ತದೆ. ಪೋಲೀಸರು ಬರುತ್ತಾರೆ ಅವರನ್ನು ಬಂಧಿಸುತ್ತಾರೆ, ಅದು ಎಲ್ಲೋ ಒಂದು ಕಡೆ. ಮತ್ತೊಂದು ಕಡೆ ಅಂದರೆ ಬ್ರಹ್ಮಾವರದಲ್ಲಿ ಪ್ರಶಾಂತ ಎಂಬುವನನ್ನು ಕೊಂದು ಹಾಕಿರುವುದು ಉಂಟು. ಅವನು ಅದೇ ಸಂಘಟನೆಗೆ ಸೇರಿದವನು, ಅಂದರೆ ಭಜರಂಗದಳಕ್ಕೆ ಸೇರಿದವನು. ಅವನನ್ನು ಕಾರಿನಿಂದ ಎಳೆದು ಅವನ ಕೊಲೆ ನಡೆಯುತ್ತದೆ. ಅದಕ್ಕೆ ಇದನ್ನು ಯಾರು ಸಮರ್ಥನೆ ಮಾಡಬೇಕು ಮತ್ತು ಯಾರು ಅಸಮರ್ಥನೆ ಮಾಡಬೇಕು. ಇಂತಹ ಘಟನೆಗಳಿಗೆ ಪ್ರೋತ್ಸಾಹ ಕೊಡುವುದನ್ನು ನಿಲ್ಲಿಸಿದರೆ, ಬಹುಶಃ ಏನು ಕೊಲೆಗಳು, ಅಪರಾಧಗಳು ನಡೆಯುತ್ತವೆ ಅವುಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ ಎನ್ನುವುದು ನನ್ನ ಭಾವನೆ. ಇದರಲ್ಲಿ ಯಾವ ರಾಜಕಾರಣ ಮಾಡಬೇಕಾಗಿಲ್ಲ. ನಮ್ಮಲ್ಲಿ moral ಪೋಲೀಸ್‌ಗಿರಿ ಎನ್ನುತ್ತಾರೆ. ಬೇರೆ ಬೇರೆ ಧರ್ಮದ ಯಾರಾದರೂ ಒಬ್ಬ ಹುಡುಗ ಮತ್ತೊಂದು ಹುಡುಗಿ ಜೊತೆಯಲ್ಲಿ ಚಹಾ ಕುಡಿಯುವುದಕ್ಕೆ ಹೋದರೆ, ಅವರನ್ನು ಹಿಡಿದು, ನೀನು ಹಿಂದು ಧರ್ಮದವನು ಮುಸ್ಲಿಂ ಧರ್ಮದವನ ಬಳಿ ಏಕೆ ಮಾತನಾಡುತ್ತಿದ್ದೀಯಾ, ನೀನು ಏಕೆ ಟೀ ಕುಡಿಯುತ್ತಿದ್ದೀಯಾ, ಈಗ ದೇವಸ್ಥಾನಕ್ಕೆ ಹೋದರೆ, ನೀನು ಏಕೆ ದೇವಸ್ಥಾನಕ್ಕೆ ಹೋಗುತ್ತಿದ್ದೀಯಾ, ಮಾರ್ಕೆಟ್‌ಗೆ ಹೋದರೆ ನೀನು ಏಕೆ ಮಾರ್ಕೆಟ್‌ಗೆ ಹೋಗುತ್ತಿದ್ದೀಯಾ ಎನ್ನುತ್ತಾರೆ. ಈ ತರಹ ಮಾಡುವಂತಹ ವಿಕೃತ ಮನಸ್ಸುಗಳಿಗೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಪೋಲೀಸ್‌ನವರು ನಿಯಂತ್ರಣ ಮಾಡುವುದಕ್ಕೆ ಸಾಧ್ಯನಾ. ಆ ವಿಕೃತ ಮನಸ್ಸುಗಳಿಗೆ ಕಡಿವಾಣ ಹಾಕುವುದಕ್ಕೆ ಯಾವ ಸರ್ಕಾರದಿಂದ ಸಾಧ್ಯ. ಇಂತಹ ವಿಚಾರಗಳಿಗೆ ಯಾರು ಕಂಟ್ರೋಲ್ ಮಾಡಬೇಕು? ಕೆಲವರು ಹಿಂದು ಧರ್ಮದ ಹುಡುಗ ಯಾರಾದರೂ ಮುಸ್ಲಿಂ ಜೊತೆಗೆ ಮಾತನಾಡಿದರೆ, ಅದನ್ನು ನಿಯಂತ್ರಣ ಮಾಡುವುದಕ್ಕೆ ನಾವು taskforceಗಳನ್ನು ಮಾಡುತ್ತೇವೆಂದು ಹೇಳುತ್ತಾರೆ. ಏನು ಈ taskforceಗಳು ಈಗ ಕ್ರಿಶ್ಚಿಯನ್ ಹುಡುಗ ಹಿಂದುಗಳ ಹತ್ತಿರ ಮಾತನಾಡಬಾರದು, ಮುಸ್ಲಿಂ ಹುಡುಗ ಹಿಂದುಗಳ ಹತ್ತಿರ ಮಾತನಾಡಬಾರದು ಮತ್ತೆ ಹಿಂದು ಹುಡುಗ ಮತ್ತೊಬ್ಬರ ಜೊತೆ ಮಾತನಾಡಬಾರದು. ಒಂದು ವೇಳೆ ಅಂತಹವರು ಎಲ್ಲಾದರೂ ಹೊಟೇಲ್‌ಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಪಾರ್ಕ್‌ಗಳಲ್ಲಿ ಕಂಡರೆ ಅಂತಹವರನ್ನು ಹಿಡಿದುಕೊಡುವುದಕ್ಕೆ ನಾವು ಒಂದು taskforce ಅನ್ನು ಮಾಡುತ್ತೇವೆ. Legally how it holds sanctity ಎಂದು ನನಗೆ ಗೊತ್ತಿಲ್ಲ. taskforceಗಳನ್ನು ಮಾಡುವುದು, ಅದರ ಮುಖಾಂತರ ನಾವು ಇಷ್ಟು ಜನರನ್ನು ಹಿಡಿದು ಬಿಡಿಸಿ ತಂದಿದ್ದೇವೆ ಎಂದು ಹೇಳುವ ರೀತಿಯಲ್ಲಿ, ಆಗುವಂತಹ ಘಟನೆಗಳು moral policing ಅಥವಾ ನೈತಿಕ ಪೋಲೀಸ್‌ಗಿರಿ. ಪದೇಪದೇ ಕರ್ನಾಟಕ ರಾಜ್ಯದ ಕರಾವಳಿ ಭಾಗದಲ್ಲಿ ಹೆಚ್ಚಾಗಿ ನಡೆಯುವಂಥದ್ದು, ನಮ್ಮ ಕಾರವಾರದಲ್ಲಿ ಅಂದರೆ North Canara ದಲ್ಲಿ ಪರೇಶ್ ಮೇಸ್ತ ತೀರಿಹೋದರು, ಅವರ ತಂದೆ ಹೇಳುತ್ತಾರೆ 'He does not belongs to any political party.' ಆದರೆ, ಮಾನ್ಯ ಸಂಸತ್ ಸದಸ್ಯರಾದ ಕುಮಾರಿ ಶೋಭ ಕರ್ಲಂದಾಜೆಯವರು ಅವರು ಬಿಜೆಪಿ ಕಾರ್ಯಕರ್ತರನ್ನು ಕೊಂದಿದ್ದಿರೆಂದು ಹೇಳುತ್ತಾರೆ. ಅಂದರೆ, ಕಾಂಗ್ರೆಸ್‌ನವರು ಕೊಲೆ ಮಾಡಿದ್ದಾರೆ ಎಂದು, ಹೀಗಾದರೆ ಏನಪ್ಪ ಇದು, ಅವರು ಸತ್ತ ಮೇಲೆ ಬಿಜೆಪಿ ಕಾರ್ಯಕರ್ತರನ್ನು ಕೊಲೆ ಮಾಡಿದ್ದೀರಿ, ಆರ್.ಎಸ್.ಎಸ್., ಕಾರ್ಯಕರ್ತರನ್ನು ಕೊಲೆ ಮಾಡಿದ್ದೀರಿ ಎಂದು ಹೇಳುತ್ತಾರೆ. ಅದು ಎದುರಿನಲ್ಲಿ ಮಾಡಿದ್ದಾರಲ್ಲ ಅವರು ಯಾವ ಪಕ್ಷದ ಕಾರ್ಯಕರ್ತರು, ಅವರು ಎಲ್ಲಿಯವರು, ಅವರು ಸಾಮಾನ್ಯ ಪ್ರಜೆಗಳು ಅಲ್ಲವೇ? ಅವರ ಬಗ್ಗೆ ನಾವು ಮಾತನಾಡುವುದೇ ಇಲ್ಲ. ಈಗ ಅದೇ ಘಟಕದ ಬಾಳಿಗ ಎಂಬುವಂತಹ ಆರ್.ಟಿ.ಐ., ಕಾರ್ಯಕರ್ತನನ್ನು ಮಂಗಳೂರಿನಲ್ಲಿ ಕೊಲೆ ಮಾಡಿದರು. ಅವನನ್ನು ಕೊಲೆ ಮಾಡಿದವರು ಯಾರೆಂದು ಕೇಳಿದರೆ, ಅವನು ಅದೇ ಪಕ್ಷದವನು. ಈಗ ಬ್ರಹ್ಮಾವರದಲ್ಲಿ ಪ್ರಶಾಂತ ಪೂಜಾರಿಯ ಕೊಲೆಯಾಯಿತು, ಅವನನ್ನು ಕೊಲೆ ಮಾಡಿದವರು ಯಾರೆಂದು ಕೇಳಿದರೆ, ಅವನು ಅದೇ ಸಂಘಟನೆಗೆ ಸೇರಿದವನು. ಈಗ ಬಂಟ್ವಾಳದಲ್ಲೂ ಸಹ ಒಂದು ಕೊಲೆಯಾಗುತ್ತದೆ, ಹೇಗೆ ಎಂದರೆ, ಅವನನ್ನು ಮುಸ್ಲಿಂ ಎಂದು ಭಾವಿಸಿ ನಾನು ಅವನನ್ನು ಕೊಲೆ ಮಾಡಿದೆ ಎಂದು ಹೇಳುತ್ತಾನೆ. ಅವನು ಕ್ರಿಕೆಟ್ ಆಡಿಕೊಂಡು ಬಂದು ಜ್ಯೂಸ್ ಕುಡಿಯುವಾಗ ಅವನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತನ್ನ ಟೋಪ್ಪಿಯನ್ನು ಕೆಳಗೆ ಇಟ್ಟಿದ್ದ, ಆದುದರಿಂದ ಮುಸ್ಲಿಂ ಎಂದು ಭಾವಿಸಿ ಅವನನ್ನು ಕೊಲೆ ಮಾಡಿದೆ ಎಂದು ಹೇಳುತ್ತಾನೆ. ಈ ರೀತಿ ಆಗುವುದರಿಂದ ಸಮಾಜದಲ್ಲಿ ಅಶಾಂತಿಗೆ ಕಾರಣವಾಗಿದೆ. ನಾನು ಇದರಲ್ಲಿ ಯಾವುದೇ ರಾಜಕೀಯ ಬೆರೆಸುವುದಕ್ಕೆ ಬಯಸುವುದಿಲ್ಲ, ಅದು ಯಾವುದೇ ಇರಬಹುದು. ನಾವು ಅದನ್ನು ಖಂಡನೆ ಮಾಡುತ್ತೇವೆ. ಯಾವುದೇ ಪಕ್ಷ ಇದ್ದರೂ ಸಹ ಇದನ್ನು ನಾವು ಖಂಡನೆ ಮಾಡುತ್ತೇವೆ. ಇದು ಸರಿಯಾದ ಕ್ರಮವಲ್ಲ. ಶಾಂತಿ ಮತ್ತು ನೆಮ್ಮದಿ ಬರಬೇಕಾಗಿದ್ದರೆ, ಪೊಲೀಸರು ಮತ್ತು ಸರ್ಕಾರದಿಂದಲೇ ಮಾತ್ರ ಸಾಧ್ಯ ಎಂದು ಹೇಳುವುದಕ್ಕಿಂತ, ಇಂತಹ ವಿಕೃತ ಮನಸ್ಸುಗಳನ್ನು ಬದಲಾವಣೆ ಮಾಡುವಂತಹ ಕೆಲಸ ಮಾಡಬೇಕಾಗುತ್ತದೆ. ಇದು ಕರಾವಳಿ ಜಿಲ್ಲೆಯಲ್ಲಿ ಸತತವಾಗಿ ನಡೆಯುತ್ತಿದೆ. ಆ ನೈತಿಕ ಪೋಲೀಸ್‌ಗಿರಿ ಇರಬಹುದು, taskforceಗಳು ಇರಬಹುದು ಅಥವಾ ಅದನ್ನೇ ಮಾಡುವುದಕ್ಕೆ ಕೆಲವು ಸಂಘಟನೆಗಳು ಹುಟ್ಟಿಕೊಂಡಿರುವಂಥದರ ಬಗ್ಗೆ ನಿಗಾವಹಿಸಿ, ಅವರನ್ನು ಎಲ್ಲೋ ಒಂದು ಕಡೆ ನಿಷೇಧ ಮಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ.

**(ಮುಂದು...)**

**ಶ್ರೀ ಐವನ್ ಡಿ'ಸೋಜಾ(ಮುಂದುವರೆದಿದ್ದು...):-**

ಯಾರು ಇಂತಹ continuous history ಹೊಂದಿದ್ದಾರೆ, ಇಂತಹ ಕೃತ್ಯಗಳನ್ನು ಮಾಡುವುದಕ್ಕಾಗಿಯೇ ಸಂಘಟನೆಗಳು ಏನು ಹುಟ್ಟಿಕೊಂಡಿವೆ ಅವುಗಳ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳುವುದು ಅವಶ್ಯಕತೆಯಿದೆ. ಅದು ಯಾವುದೇ ಪಾರ್ಟಿ ಇರಬಹುದು. ಹಾಗಾಗಿ, ಇಂತಹ ಘಟನೆಗಳು ಮರುಕಳಿಸುವುದಕ್ಕೆ ನಾವು ಕೂಡ ನೇರ ಕಾರಣಕರ್ತರಾಗುತ್ತೇವೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಅಲ್ಲದೇ, ಯಾರು ಇದರ ಬಗ್ಗೆ ಹೆಚ್ಚು ಮಾತನಾಡುತ್ತಾರೆ ಅವರು ಕೂಡ ಅದಕ್ಕೆ ಪ್ರೋತ್ಸಾಹ ಕೊಡುವುದನ್ನು ನಿಲ್ಲಿಸಿದರೆ, ಆಡಳಿತ ಮತ್ತು ವಿರೋಧ ಪಕ್ಷದ ಎರಡು ಕಡೆಯವರು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಲ್ಲರೂ ಸೇರಿ ಇನ್ನು ಮುಂದೆ ಅವರಿಗೆ support ಮಾಡುವುದಿಲ್ಲವೆಂದು ಪಕ್ಷಾತೀತವಾಗಿ ಹೇಳಿದರೆ ಬಹುಶಃ ಎಲ್ಲಿಯೋ ಒಂದು ಕಡೆ ಅದಕ್ಕೆ ಕಡಿವಾಣ ಹಾಕುವುದಕ್ಕೆ ಸಾಧ್ಯವಿದೆ. ನನಗೆ ಒಂದು ವಿಷಯ ನೆನಪಿದೆ. ಅದೇನೆಂದರೆ, ನಮ್ಮ ಮಂಗಳೂರಿನಲ್ಲಿ Home Stay ಗಳಿವೆ. ಅದರಲ್ಲಿ ಹುಡುಗ-ಹುಡುಗಿಯರು ಹೋಗಿ ಒಂದು ಮನೆಯಲ್ಲಿದ್ದಾಗ ಅವರನ್ನು ಅತ್ಯಾಚಾರ ಮಾಡಿ, ಅವರನ್ನು ವಿವಸ್ತ್ರಗೊಳಿಸಿ ಓಡಿಸುವಂತಹ ಈ ರೀತಿ ಎಲ್ಲ ಕೆಲಸವನ್ನೂ ಮಾಡಿದ್ದರು. ಆಗ ನಮ್ಮ ಸರ್ಕಾರ ಅಧಿಕಾರದಲ್ಲಿರಲಿಲ್ಲ. ಬಿಜೆಪಿ ಸರ್ಕಾರ ಆಡಳಿತದಲ್ಲಿತ್ತು. ಆ ಆರೋಪಿಗಳು ಮೂರುವರೆ ವರ್ಷಗಳ ಕಾಲ ಜೈಲಿನಲ್ಲಿದ್ದರು. ಆ ಆರೋಪಿಗಳು ಈಗ ಮಂಗಳೂರಿನಲ್ಲಿ ಸುತ್ತಾಡಿದರೆ, "ಹೋಂ ಸ್ಟೇ ಅಟಾಕ್ ಮಲ್ದಂಡ ಎಂಕಲೇಕ್ ಏರ್‌ಲ್ಲಾ ಕೇನೊನನಕಲು ಇಜ್ಜೆರ್" ಎಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆ. ಅವರಿಗೆ ಬೆಂಬಲ ಮಾಡಿಲ್ಲ. ಅಂತಹವರು ಪುನಃ ಇಂತಹ ಕೃತ್ಯಗಳಿಗೆ ಹೋಗುವುದಿಲ್ಲ. ನಾನು ಮತ್ತೆ ನೋಡಿರುವುದೇನೆಂದರೆ, ಯಾರು ಈ ಕೃತ್ಯಗಳಲ್ಲಿ ಭಾಗಿಗಳಾಗಿದ್ದಾರೆ, ಯಾವ್ಯಾವ ಪೊಲೀಸ್ ಠಾಣೆಗಳಲ್ಲಿ ಎಷ್ಟು ಪ್ರಕರಣಗಳಿವೆ, ಯಾರ್ಯಾರು ಆರೋಪಿಗಳಿದ್ದಾರೆ ಎಂಬ ಬಗ್ಗೆ ನನ್ನ ಹತ್ತಿರ ಪಟ್ಟಿ ಇದೆ. ಅದರಲ್ಲಿ ಎಲ್ಲಾ ಆರೋಪಿಗಳು ಸಹ ಅತ್ಯಂತ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಯಾರು ಈ ಕೃತ್ಯವನ್ನು ಮಾಡಿಸಿದ್ದಾರೆ, ಅವರ ಮಗ/ಮಗಳು ಯಾರೂ ಕೂಡ ಈ ಕೃತ್ಯದಲ್ಲಿ ಭಾಗಿಯಾಗಿರುವುದಿಲ್ಲ. ಇಂತಹ ಕೃತ್ಯಗಳನ್ನು ಮಾಡು ನಾನು ನೋಡಿಕೊಳ್ಳುತ್ತೇನೆಂದು ಹೇಳುವವರ ಮಗ/ಮಗಳು ಅಮೇರಿಕಾ ಮತ್ತು ಯು.ಕೆ. ಅಂತಹ ದೇಶಗಳಲ್ಲಿ ಓದುತ್ತಿದ್ದಾರೆ. ಕೇವಲ ಪಾಪದವರು, ಮನೆಯಲ್ಲಿ ಎರಡು ಹೊತ್ತಿನ ಊಟ ಮಾಡಲಿಕ್ಕೆ ಸಾಧ್ಯತೆ ಇಲ್ಲದವರು, ಅತ್ಯಂತ ಕಡು ಬಡವರು, ಬಿ.ಪಿ.ಎಲ್. ಕಾರ್ಡ್ ಹೊಂದಿರತಕ್ಕಂಥವರು ಇಂತಹ ಕೃತ್ಯಗಳಲ್ಲಿ ಭಾಗಿಯಾಗುತ್ತಾರೆ.

ಮೊನ್ನೆಯ ದಿವಸ ನಾನು ಮಾನ್ಯ ಮುಖ್ಯ ಮಂತ್ರಿಗಳ ಬಳಿ ಒಂದು ಪ್ರಕರಣ ತೆಗೆದುಕೊಂಡು ಹೋಗಿದ್ದೆನು. ಸೂರತ್‌ಕಲ್ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ನಡೆಯುತ್ತದೆ. ಅದೇನೆಂದರೆ, ಅಣ್ಣ ಆರೋಪಿಯಾಗಿದ್ದು, ಆತ ಹೋಗಿ terrace ಮೇಲೆ ಮಲಗಿದ್ದ ತಮ್ಮನನ್ನು ಕೊಲ್ಲುತ್ತಾನೆ. ಮನೆಯಲ್ಲಿ ಬಿಪಿಎಲ್ ಕಾರ್ಡ್ ಇದೆ, ಊಟಕ್ಕೆ ಗತಿಯಿಲ್ಲ. ತಮ್ಮ ಬೆಳಗ್ಗೆ ಮೀನು ಹಿಡಿಯುವುದಕ್ಕೆ ಹೋಗಬೇಕಾಗಿತ್ತು. ಆ ದಿವಸ ಬೋಟ್‌ಗೆ ಲೇಟ್ ಆಯಿತು ಎಂದು ಹೋಗಿ ಮಲಗಿದ್ದಾನೆ. ಅಣ್ಣನಿಗೆ ಯಾವುದೋ ಒಂದು ಪ್ರಕರಣದಲ್ಲಿ ವೈಮನಸ್ಸು ಇತ್ತು. ಅಣ್ಣ ಮತ್ತು ತಮ್ಮ ಒಟ್ಟಿಗೆ ಮಲಗುವುದು ಎಂದು ಟೆರೇಸ್‌ಗೆ ಹೋಗಿ ತಮ್ಮನನ್ನು ಕೊಂದು ಬಿಡುತ್ತಾನೆ. ಅಲ್ಲಿ ಅಮಾಯಕನ ಕೊಲೆಯಾಗುತ್ತದೆ. ಈ ರೀತಿ ಕೊಲೆಗಳಲ್ಲಿ ಯಾರು ಭಾಗಿಯಾಗಿದ್ದಾರೆ, ಅವರೆಲ್ಲರೂ ಅಮಾಯಕರು; ಅವರು ಯಾವುದರಲ್ಲಿಯೂ ಇಲ್ಲದವರು. ಹಾಗಾಗಿ ಇಂತಹ ಒಂದು ಘಟನೆಗಳನ್ನು ನಾವು ಕೂಡ ಗಮನದಲ್ಲಿಟ್ಟುಕೊಂಡು, ಯಾರು ಈ ಕೃತ್ಯಗಳಲ್ಲಿ ಭಾಗಿಯಾಗುವುದಕ್ಕೆ ಅಥವಾ ಪ್ರೋತ್ಸಾಹ ಮಾಡುವುದಕ್ಕೆ ಸಂಘಟನೆಗಳನ್ನು ಕಟ್ಟುತ್ತಾರೆ ಅವರು ಯಾರೂ ಕೂಡ ಈ ಕೃತ್ಯಗಳಲ್ಲಿ ಭಾಗಿಯಾಗುವುದಿಲ್ಲ. ಕೇವಲ ಅತ್ಯಂತ ಕಡು ಬಡವರು, ಹಿಂದುಳಿದ ವರ್ಗಕ್ಕೆ ಸೇರಿದವರು, ಎರಡು ಹೊತ್ತಿನ ಊಟಕ್ಕೆ ಸರಿಯಿಲ್ಲದವರು, ಬಂಡೆಗೆತ್ತುವವರು, ರಸ್ತೆ ಬದಿಯಲ್ಲಿ ಆಮ್ಲೆಟ್ ಮಾಡುವವರು ಇಂತಹ ಕೃತ್ಯಗಳಲ್ಲಿ ಭಾಗಿಯಾಗುತ್ತಾರೆ. ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಅವರಿಗೆ ಪರಿಹಾರ ಕೊಡಲಿಲ್ಲವೆಂದು ಹೇಳಿದರು. ಆದರೆ, ಶ್ರೀ ದೀಪಕ್‌ರಾವ್‌ರವರು ಮರಣ ಹೊಂದಿದಾಗ, ಪೊಲೀಸರು, ಜಿಲ್ಲಾಧಿಕಾರಿಗಳು within one hour 10 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಅವರ ಮನೆಯಲ್ಲಿ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದ್ದು ಅದೇ ಪ್ರಕರಣ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅಲ್ಲಿಗೆ ಹೋಗಿದ್ದಾಗ 5 ಲಕ್ಷ ರೂಪಾಯಿ ಪರಿಹಾರ ಕೊಟ್ಟರು. ಆದಾದ ನಂತರ ಅಲ್ಲಿ ಮುಷ್ಕರ ಮಾಡಬೇಕಾಯಿತು. ಆ ಮುಷ್ಕರ ಮಾಡುವುದಕ್ಕೆ ಒಂದು ಗಂಟೆಯಲ್ಲ, ಎರಡೂವರೆ-ಮೂರು ಗಂಟೆ ಆಯಿತು. ಅಷ್ಟು ಹೊತ್ತಿಗೆ ಮಧ್ಯಾಹ್ನ 1 ಗಂಟೆಯಾಯಿತು.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಅಲ್ಲಿ ಘೋಷಣೆ ಮಾಡಬೇಕೆಂದು ಮುಷ್ಕರ ಮಾಡಿದ್ದಾರೆ. ಸಾಮಾನ್ಯವಾಗಿ ಮೃತ ವ್ಯಕ್ತಿಗೆ 5 ಲಕ್ಷ ರೂಪಾಯಿ ಪರಿಹಾರದ ಮೊತ್ತ ನೀಡಬೇಕೆಂದು ಕಾನೂನು ಇದೆ. ಪುನಃ ಅವರು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿ ಒಟ್ಟು 10 ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿ ಕೊಟ್ಟರು ಎಂದು ಹೇಳುವಂಥದ್ದು ಮತ್ತು ಎಲ್ಲಾ ಪ್ರಕರಣಗಳಲ್ಲಿಯೂ ಕೂಡ ಪರಿಹಾರ ಕೊಟ್ಟಿದ್ದಾರೆ. ಅಂತಹ ಪರಿಹಾರವನ್ನು ಕೊಡಬೇಕು, ಆ ಮಾನವೀಯತೆ ಎಲ್ಲರಿಗೂ ಒಂದು ಲೆಕ್ಕದಲ್ಲಿ ಬರಬೇಕು. ಹಾಗಾಗಿ ಸರ್ಕಾರ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದರಲ್ಲಿ ಮತ್ತು ಯಾರು ಇಂತಹ ಕೃತ್ಯಗಳಲ್ಲಿ ಆರೋಪಿಗಳಾಗಿದ್ದಾರೆ, ಅವರಿಗೆ ಕಡಿವಾಣ ಹಾಕುವುದರಲ್ಲಿ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳುವಂಥದ್ದನ್ನು ನಾನು ಎದೆ ತಟ್ಟಿ ಹೇಳಬಲ್ಲೆ. ಅಲ್ಲದೇ, ಕರಾವಳಿ ಭಾಗದಲ್ಲಿದ್ದಂತಹ ಎಲ್ಲಾ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಿ ಅವರನ್ನು ಜೈಲಿಗೆ ಅಟ್ಟುವಂತಹ ಕೆಲಸ ಮಾಡಿದ್ದಾರೆ ಹಾಗೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾರು ಇಂತಹ ಕೃತ್ಯಗಳಿಗೆ ಪ್ರೋತ್ಸಾಹ ಕೊಡುತ್ತಾರೆ ಅಂತಹವರನ್ನು ಕೂಡ ಜೈಲಿಗೆ ಅಟ್ಟುವ ಮುಖಾಂತರ ಇನ್ನು ಮುಂದೆ ಇಂತಹ ಗಲಾಟೆಗಳು ನಮಗೆ ಬೇಡವೆಂದು, ಏನೆಲ್ಲಾ ಕ್ರಮಗಳನ್ನು ಅವರ ವಿರುದ್ಧ ಕೈಗೊಳ್ಳುವುದಕ್ಕೆ ಸಾಧ್ಯವಿದೆ ಅದನ್ನು ಕೈಗೊಂಡಿದ್ದಾರೆ.

ಆರೋಪಿಗಳ ವಿರುದ್ಧ ಗೂಂಡಾ ಕಾನೂನು ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸುತ್ತಿದ್ದಾರೆಂದು ಹೇಳಿರುವುದನ್ನು ನಾನು ನಿನ್ನೆಯ ದಿವಸ ಒಂದು ದಿನಪತ್ರಿಕೆಯಲ್ಲಿ ನೋಡಿದೆನು. ಹಾಗಾದರೆ, ಏನು ಮಾಡಬೇಕು? ಅವರನ್ನು procession ಮಾಡಬೇಕಾ? ಅಂತಹ ಕೃತ್ಯ ಯಾರು ಮಾಡುತ್ತಾರೆ ಅವರ ವಿರುದ್ಧ ಗೂಂಡಾ ಕಾಯ್ದೆ ಹಾಕುವುದನ್ನು ಬಿಟ್ಟು ಬೇರೆ ಏನು ಮಾಡಬೇಕು? ಈ ವಿಷಯದಲ್ಲಿ I appreciate the Police Commissioner of Mangalore. 8 ಜನ ಆರೋಪಿಗಳು ಇನ್ನು ಜಿಲ್ಲೆಗೆ ಬರಬಾರದೆಂದು ಗಡಿಪಾರು ಮಾಡಿದ್ದಾರೆ. ಇಂತಹ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಈ ವಿಷಯದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಗೃಹಮಂತ್ರಿಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿನಂದನೆ ಸಲ್ಲಿಸುತ್ತೇನೆ. ಅದರ ಜೊತೆಗೆ ನಾವು ಕೂಡ ಸಹಕಾರ ಮಾಡುವಂಥದ್ದು ಅವಶ್ಯಕತೆಯಿದೆ ಎನ್ನುವುದನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಡಾ|| ಜಯಮಾಲ ರಾಮಚಂದ್ರ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಶ್ರೀ ವಿ.ಎಸ್. ಉಗ್ರಪ್ಪ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗ ಡಾ|| ಜಯಮಾಲ ರಾಮಚಂದ್ರರವರು ಮಾತನಾಡುತ್ತಾರೆ. ಅವರು ಮಾತನಾಡಿದ ನಂತರ ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ಆಯಿತು. ತಾವು ಡಾ|| ಜಯಮಾಲ ರಾಮಚಂದ್ರರವರಿಗೆ ಬಿಟ್ಟುಕೊಡುವುದಾದರೆ ಸರಿ. ನನ್ನ ಹತ್ತಿರ ಇರುವ ಪಟ್ಟಿಯಲ್ಲಿ ಅವರ ಹೆಸರು ಕೊನೆಯಲ್ಲಿದೆ. ಆ ಪಟ್ಟಿಯ ಪ್ರಕಾರ ಈಗ ತಮ್ಮ ಹೆಸರು ಇದೆ. ಆದರೆ, ಅವರು ಮಾತನಾಡಿದ ನಂತರ ತಾವು ಮಾತನಾಡುತ್ತೇನೆಂದರೆ, ತಾವು ಮಾತನಾಡಿ. Ok, no problem.

**ಡಾ|| ಜಯಮಾಲ ರಾಮಚಂದ್ರ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರತಕ್ಕಂತಹ ಒಂದು ನಿಲುವಳಿ ಸೂಚನೆಯಲ್ಲಿ ಇವತ್ತಿನ ದಿವಸ ಕೊಲೆ, ಸುಲಿಗೆ, ಹಿಂಸೆ ಇವುಗಳ ಬಗ್ಗೆ ಚರ್ಚೆಯಾಗುತ್ತಿದೆ. ನಾನು ಈ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದಂತಹ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ಮೊದಲು ಈ ವಿಷಯವನ್ನು ನಾವು ತೆಗೆದುಕೊಂಡಿದ್ದು, ಎಲ್ಲಿಯೋ ಒಂದು ಕಡೆ ನನಗೆ ನೋವಾಗುತ್ತಿದೆ. ನಂತರ ನಮ್ಮ ಹಲವಾರು ಗೌರವಾನ್ವಿತ ಸದಸ್ಯರುಗಳು ರಾಜ್ಯಪಾಲರಿಗೆ ಈ ವಿಷಯಗಳು ಗೊತ್ತಿರುವುದಿಲ್ಲ, ರಾಜ್ಯಪಾಲರ ಮುಖಾಂತರ ಈ ಮಾತುಗಳನ್ನು ಹೇಳಿಸಿದ್ದಾರೆ ಎಂದು ಹೇಳುವುದು ಎಲ್ಲಿಯೋ ಒಂದು ಕಡೆ ಈ ಸದನದ ಮುಖಾಂತರ ಘನತೆವೆತ್ತ ರಾಜ್ಯಪಾಲರನ್ನು ನಾವು ಅವಮಾನಿಸಿದಂತಾಗುತ್ತದೆ. ಅಷ್ಟು ದೊಡ್ಡ ಸ್ಥಾನಕ್ಕೆ ಏರಿದವರು ವಿಷಯವನ್ನು ಗ್ರಹಿಸದೇ ಯಾರೋ ಕಳುಹಿಸಿದ ಪತ್ರಕ್ಕೆ ಸಹಿ ಹಾಕುವಂತಹ ವ್ಯಕ್ತಿತ್ವ ಅವರದ್ದಲ್ಲ. ಅವರ ಘನತೆಯನ್ನು ಇಲ್ಲಿ ಉಳಿಸಬೇಕು ಎಂಬ ವಿಷಯವನ್ನು ಹೇಳಬೇಕು ಎನ್ನುವುದು ನನ್ನ ಅನಿಸಿಕೆ.

ಇಲ್ಲಿಯವರೆಗೂ ಕೂಡ ನಮ್ಮಲ್ಲಿ ಕಗ್ಗೊಲೆ ಬಗ್ಗೆ ಮಾತನಾಡುತ್ತಿದ್ದರು. ಇಲ್ಲಿ 23 ಕೊಲೆಯಾದ ವಿಷಯಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಈ 23 ಕೊಲೆಗಳಲ್ಲಿ ನಾನು ನೋಡಿರತಕ್ಕಂತಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಕಿ-ಅಂಶ ಮತ್ತು ಅದರ ದಿನಾಂಕಗಳನ್ನು ನಾನು ಗುರುತು ಹಾಕಿದ್ದೇನೆ. 2014 ರಲ್ಲಿ ಒಂದು, 2015 ರಲ್ಲಿ 7, 2016 ರಲ್ಲಿ ಒಂದು, 2017 ರಲ್ಲಿ ಒಂದು ಈ ರೀತಿ 23 ಕೊಲೆಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ. ನಾವು ಈಗ 2018 ರಲ್ಲಿದ್ದೇವೆ. ಹಾಗಾದರೆ 2014 ರಿಂದ 2018 ರವರೆಗೆ ಈ ವಿಷಯಗಳ ಬಗ್ಗೆ ನಾವು ಪ್ರಸ್ತಾವ ಅಥವಾ ಚಕಾರ ಎತ್ತಿರುವುದಿಲ್ಲ. ಈ ಮಾತನ್ನು ನಾನು ಹೇಳುವುದಕ್ಕೆ ಕಾರಣವೇನೆಂದರೆ, ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಏನು ಪ್ರಾರಂಭಿಸಬೇಕಾಗಿತ್ತು, ಅದನ್ನು ನಿಲ್ಲಿಸಿ, ಈ ನಿಲುವಳಿ ಸೂಚನೆಯಲ್ಲಿ 4 ವರ್ಷದಿಂದ ನಡೆಯುತ್ತೇ ಇರುವಂತಹ ವಿಷಯಕ್ಕೆ ಈಗ ಅವಸರವಿತ್ತೇ ಅಥವಾ ಅವಶ್ಯಕತೆಯಿತ್ತೇ ಎನ್ನುವಂಥದ್ದು ಮತ್ತು ರಾಜ್ಯಪಾಲರ ಬಗ್ಗೆ ಮಾತನಾಡಿರುವುದು ಕೂಡ ನನ್ನ ಮನಸ್ಸಿನಲ್ಲಿ ನೋವುಂಟು ಮಾಡಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳಷ್ಟು ಒಳ್ಳೆಯ ಮಾತುಗಳನ್ನಾಡಿದ್ದಾರೆ. ಈ ವಿಷಯದಲ್ಲಿ ಇಷ್ಟು ಒಳ್ಳೆಯ ಮಾತುಗಳನ್ನು ಆಡಿರತಕ್ಕಂಥದ್ದನ್ನು ಸಹಿಸುವುದಕ್ಕೆ ಆಗುವುದಿಲ್ಲವೇ ಎನ್ನುವಂತಹ ಒಂದು ಗುಮಾನಿ ನಮಗೂ ಕೂಡ ಬರುತ್ತದೆ. ಕಾರಣವೇನೆಂದರೆ, ಇತ್ತೀಚೆಗೆ ಒಂದಷ್ಟು ಚರ್ಚೆಗಳಾಗಿದ್ದು, ಅವು ಪತ್ರಿಕೆಗಳಲ್ಲಿಯೂ ಸಹ ವರದಿಯಾಗುತ್ತಿವೆ. ಮಾನ್ಯ ಮುಖ್ಯಮಂತ್ರಿಯವರು ನೀಡಿದಂತಹ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಹೀಗೆ ಹೇಳಿದ್ದಾರೆ ಎಂದು ನನಗನ್ನಿಸುತ್ತದೆ. ಒಬ್ಬ ಕೇಂದ್ರ ಮಂತ್ರಿಗಳು ಒಂದು ನದಿಗೆ ಸಂಬಂಧಪಟ್ಟಂತಹ ಅಥವಾ ಕೊಲೆಗೆ ಸಂಬಂಧಪಟ್ಟ ವಿಷಯಗಳು ಬಂದಾಗ, "ಇಷ್ಟು ಸಾಕಾ, ನಿಮಗೆ ಇನ್ನು ಬೇಕಾ? ಮುಂದೆ ಇದೆ ನಿಮಗೆ ಮಾರಿಹಬ್ಬ" ಎನ್ನುವಂತಹ ಹೇಳಿಕೆಯನ್ನು ನೀಡುತ್ತಾರೆ. ಇದರಿಂದಾಗಿ, ನಮಗೆ ಏನು ಅನ್ನಿಸುತ್ತದೆಯೆಂದರೆ... ಈ ಹೇಳಿಕೆಗಳು ಪ್ರಚೋದನಕಾರಿಯಾದಂತಹ ಹೇಳಿಕೆಗಳಾಗಿದ್ದು, ಈ ಹೇಳಿಕೆಗಳಿಂದಾಗಿ ಜನರಲ್ಲಿ ಒಬ್ಬರಿಂದ ಒಬ್ಬರಲ್ಲಿ ವಿಷ ಬೀಜವನ್ನು ನಾವು ಬಿತ್ತುತ್ತಿದ್ದೇವೆ ಎಂದು ನನಗನ್ನಿಸುತ್ತದೆ. ಅಷ್ಟೇ ಅಲ್ಲದೇ, ನಮ್ಮ ಒಬ್ಬ ಸಂಸದರು, "ಕೇಂದ್ರದಿಂದ ಅಧ್ಯಕ್ಷರು ಬಂದರೆ ನಮಗೆ ತುಂಬಾ ಒತ್ತಡ ಬರುತ್ತದೆ. ಅದೇನೆಂದರೆ, ಎಷ್ಟು ಪ್ರಕರಣಗಳನ್ನು ದಾಖಲಿಸಿದ್ದೀರಿ, ಎಷ್ಟು ಗಲಭೆ ಮಾಡಿಸಿದ್ದೀರಿ, ಎಷ್ಟು ಬಾರಿ ಜೈಲಿಗೆ ಹೋಗಿದ್ದೀರಿ, ಎಷ್ಟು ಜೈಲಿಗೆ ಹೋಗುವಂತಹ ಪ್ರಕರಣಗಳನ್ನು ದಾಖಲಿಸಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಹೇಳುತ್ತಾರೆ. ನಾನು ಈ ಮಾತನ್ನು ಹೇಳುವುದಕ್ಕೆ ಕಾರಣವೇನೆಂದರೆ, ನಮ್ಮ ಪಕ್ಷಗಳು ಇಂತಹ ಹೇಳಿಕೆಗಳನ್ನು ನೀಡಿದಾಗ ಜನರು, ನಿಜಕ್ಕೂ ಹೇಳುತ್ತೇನೆ ಅವರಷ್ಟಕ್ಕೆ ಅವರು ಗೌರವವಾಗಿದ್ದಾರೆ.

(ಮುಂದುವರೆದಿದೆ...)

(033)/06.02.2018/05.40/ಎಸ್‌ಕೆ-ಎಕೆ

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು)**:- ಮಾನ್ಯ ಸಭಾಪತಿಯವರೇ, ನಾವು ನಿಮ್ಮ ಮೇಲೆ ಕೆಸರು ಎರಚುವುದು, ನೀವು ನಮ್ಮ ಮೇಲೆ ಕೆಸರು ಎರಚುವುದರಿಂದ ಬಹುಶಃ ಸಮಾಜದ ಪಿಡುಗು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವಂತಹ ಈ ಕ್ರೌರ್ಯವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಎಲ್ಲೋ ಒಂದು ಕಡೆ ನಾವೆಲ್ಲರೂ ಸೇರಿ ರಾಜಕೀಯ ಇಚ್ಛಾಶಕ್ತಿಯನ್ನು ತೋರಿದಾಗ ಮಾತ್ರ ನಾಗರಿಕ ಸಮಾಜದ ಎಲ್ಲಾ ವರ್ಗದ ಜನರನ್ನು ರಕ್ಷಣೆ ಮಾಡುವಂತಹದ್ದಕ್ಕೆ ಸಾಧ್ಯತೆಯಿದೆ. ಅದೇ ಹಿಂದುತ್ವದ ಫಿಲಾಸಫಿ. ‘ಸರ್ವೇ ಜನಾಃ ಸುಖಿನೋ ಭವಂತು’ ಅಥವಾ ವಸುಧೈವ ಕುಟುಂಬಕಂ’ ಎಂದು ಇದೆ. ಅದನ್ನು ಬಿಟ್ಟು, ಅಲ್ಲಿ ಹಿಂದುಗಳ ಕೊಲೆ ಆಯಿತು, ಮುಸಲ್ಮಾನರ ಕೊಲೆ ಆಯಿತು ಅಥವಾ ಕ್ರೈಸ್ತರ ಕೊಲೆ ಆಯಿತು ಎಂದು ಹೇಳಿ ನಾವು ವಾದ ಮಾಡುವಂಥದ್ದರಲ್ಲಿ ಅಷ್ಟೊಂದು ಸಮಂಜಸವಲ್ಲ. ಸ್ವಾಮಿ ವಿವೇಕಾನಂದರವರಗಿಂತಲೂ ದೊಡ್ಡ ಹಿಂದುತ್ವ ವಾದಿಗಳು ಇರುವುದಕ್ಕೆ ಸಾಧ್ಯತೆಯಿಲ್ಲ. ಸ್ವಾಮಿ ವಿವೇಕಾನಂದರವರು ಚಿಕಾಗೋ ನಗರದಲ್ಲಿ ಭಾಷಣ ಮಾಡಬೇಕಾದರೆ ಏನು ಹೇಳುತ್ತಾರೆ ಎಂದರೆ “My Dear Christian Brothers and Sisters, My Dear Hindu Brothers and Sisters, My Dear Muslim Brothers and Sisters” ಎಂದು ಹೇಳಲಿಲ್ಲ. ಅವರು ಹೇಳಿದ್ದು, “My Dear Brothers and Sisters of this Universe” ಅಂದರೆ ಮನುಷ್ಯರೆಲ್ಲರೂ ಸಹ ಒಂದು ಎನ್ನುವಂತಹ ಆ ‘ವಿಶ್ವಮಾನವತ್ವ’ದ ಸಂದೇಶವನ್ನು ಕೊಟ್ಟಂತಹವರು ಯಾರಾದರೂ ನಿಜಕ್ಕೂ ಸಹ ಇದ್ದರೆ ಅದು ಅಲ್ಲಿ ಸ್ವಾಮಿ ವಿವೇಕಾನಂದರವರು. ಇಲ್ಲಿ ಕುವೆಂಪುರವರು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಅತ್ಯಂತ ಮುಕ್ತ ಕಂಠದಿಂದ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಯವರೆ, ಅಷ್ಟೇ ಹೇಳಲಿಲ್ಲ ಅವರು ಇನ್ನೊಂದು ಮಾತನ್ನು ಹೇಳುತ್ತಾರೆ. ನಾನು ಸನಾತನ ಧರ್ಮದ ಹಿನ್ನೆಲೆ ಇರತಕ್ಕಂಥ ಭಾರತದಿಂದ ಬಂದಿದ್ದೇನೆ. ನೂರಾರು, ಸಾವಿರಾರು ಋಷಿಮುನಿಗಳ ಪರಂಪರೆಯಿಂದ ಬಂದಿದ್ದೇನೆ. ಧರ್ಮ ಸಹಿಷ್ಣುತೆಯ ಸಮಾಜದಿಂದ ಬಂದಿದ್ದೇನೆ. ಯಾವ ದೇಶಗಳಲ್ಲಿ ಧರ್ಮ ಸಹಿಷ್ಣುತೆಯಿಲ್ಲವೋ, ಅವರಿಗೆ ರಕ್ಷಣೆ ಕೊಟ್ಟಿರತಕ್ಕಂತಹ ದೇಶದಿಂದ ಬಂದಿದ್ದೇನೆ. ಅದು ನನ್ನ ಸಂಸ್ಕೃತಿ ಎಂದು ಹೇಳಿ ಸ್ವಾಮಿ ವಿವೇಕಾನಂದರವರು ಹೇಳುತ್ತಾರೆ. ಈ ದೇಶವನ್ನು ಉತ್ತುಂಗದ ಶಿಖರಕ್ಕೆ ತೆಗೆದುಕೊಂಡು ಹೋಗಬೇಕಾದರೆ, ಹಿಂದುತ್ವದ ಫಿಲಾಸಫಿಯನ್ನು ಹೊಂದಿರತಕ್ಕಂತಹ ಮುಸಲ್ಮಾನರ ಶಾರೀರಿಕ ದೇಹದಾರ್ಢ್ಯವನ್ನು ಹೊಂದಿರುವಂತಹ, ಕ್ರೈಸ್ತರ ಸೇವಾ ಮನೋಭಾವನೆಯನ್ನು ಹೊಂದಿರುವಂತಹ ಯುವಕರು ನೂರು ಜನ ಸಿಕ್ಕಿದರೆ ಈ ದೇಶವನ್ನು ಉತ್ತಮ ಸ್ಥಿತಿಗೆ ತೆಗೆದುಕೊಂಡು ಹೋಗುತ್ತೇನೆಂಬ ಮಾತನ್ನು ಸ್ವಾಮಿ ವಿವೇಕಾನಂದರವರು ಹೇಳುತ್ತಾರೆ. ಹಾಗಾಗಿ ನಾನು ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ಬಹುತೇಕ ಕೇಸ್‌ಗಳಲ್ಲಿ ಕ್ರೈಂ ಕೇವಲ ವೈಯಕ್ತಿಕ ಕಾರಣಗಳಿಗಾಗಿ ನಡೆಯುತ್ತವೆ. ಶೇಕಡ ೯೯ ರಷ್ಟು ideological issues ಮೇಲೆ ನಾನು ಎಡ ಪಂಥಿಯ, ಅವನು ಬಲ ಪಂಥಿಯ, ಇನ್ನೊಬ್ಬ Centrist ಎಂದು ಹೇಳಿ ಕೊಲೆ ಆಗುವಂತಹದ್ದು ಅತ್ಯಂತ microscopic

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎನ್ನುವುದನ್ನು ನಾವೆಲ್ಲರೂ ಸಹ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ವೈಚಾರಿಕ ಹಿನ್ನಲೆಯಲ್ಲಿ ಮಹಾತ್ಮ ಗಾಂಧೀಜಿಯವರನ್ನು ಕೊಂದಂತಹದ್ದು. ಆ ರೀತಿ ವೈಚಾರಿಕ ಹಿನ್ನಲೆಯಲ್ಲಿ ಕೊಂದಂತಹವರನ್ನು ಇವತ್ತು ಇಷ್ಟು ಜನರು ವೈಭವಕರಿಸುವಂಥದ್ದಕ್ಕೆ ಪ್ರಯತ್ನ ಮಾಡುತ್ತಾರೆ. ಅವರು ಸಹ ದೊಡ್ಡವರು. ಮೊನ್ನೆ ತಾನೇ ಒಬ್ಬರು ಹೇಳಿಕೆ ಕೊಡುತ್ತಾರೆ. ಅವರು ದೇಶದಲ್ಲಿ ಒಂದು ದೇವಸ್ಥಾನ ಕಟ್ಟುವಂಥದ್ದಕ್ಕೆ ಹೋಗುತ್ತಾರೆ. ನಮ್ಮ ದೇಶದ ಸಂಸ್ಕೃತಿ ಅದನ್ನು ಮಹಾತ್ಮ ಗಾಂಧೀಜಿಯವರು “ಈಶ್ವರ ಅಲ್ಲಾ ತೇರೆ ನಾಮ್ ಸಬಕೊ ಸನ್ಮತಿ ದೆ ಭಗವಾನ್” ಎಂದು ಹೇಳಿದ್ದಾರೆ. ವಸುಧೈವ ಕುಟುಂಬಕಂ ನಾವು ಯಾರೂ ಸಹ ಇಂಥ ಧರ್ಮದಲ್ಲಿಯೇ, ಇಂಥ ಜಾತಿಯಲ್ಲಿ ಹುಟ್ಟಬೇಕೆಂದು ಹೇಳಿ ನಾವು ಯಾರೂ ಅರ್ಜಿ ಹಾಕಿ ಹುಟ್ಟಿದಂತಹವರಲ್ಲ. ಭಾರತೀಯರಾಗಿ ಹುಟ್ಟಿದ್ದೇವೆ, ಕನ್ನಡಿಗರಾಗಿ ಹುಟ್ಟಿದ್ದೇವೆ. ಸಾಯ ಬೇಕಾದರೂ ಭಾರತೀಯರಾಗಿ, ಕನ್ನಡಿಗರಾಗಿ ಸಾಯಬೇಕಾಗುತ್ತದೆ. ಅವನು ಮೇಲು, ಇವನು ಕೀಳು, ಅವನು ಆ ಧರ್ಮ, ಇವನು ಈ ಜಾತಿ ಇಲ್ಲದೇ ಇರುವಂತಹದ್ದನ್ನು ನಾವು ಸೃಷ್ಟಿ ಮಾಡುವಂತಹದ್ದಕ್ಕೆ ultimately who has to investigate whether he belongs to ‘A’ Group, ‘B’ Group or a particular political party or other political parties? Ultimately, as per the provisions of the Criminal Procedure Code and other related Acts, the Investigating Officer has to decide what was the motive for a murder or what was the motive for a rape. ಇದನ್ನು ಎಲ್ಲರೂ ಸಹ ಏಕಾಏಕೀ ಹೇಳುವಂಥದ್ದಕ್ಕೆ ಬಹುಶಃ ಸಮಂಜಸವಾಗುವುದಿಲ್ಲ. ಸಮಾಜದಲ್ಲಿ ಎಲ್ಲೋ ಒಂದು ಕಡೆ ನಾವು ಒಂದೇ ರೀತಿಯಲ್ಲಿ Abettors ಆಗುವಂತಹ ರೀತಿಯಲ್ಲಿ ಅನೇಕರು ಮಾತನಾಡುವುದು ಅಷ್ಟೊಂದು ಸಮಂಜಸವಲ್ಲ. ನಿಜ ಮಾತು ಎತ್ತಿದರೆ ನೋಡಿ ನೀವು ಅಧಿಕಾರದಲ್ಲಿದ್ದಾಗ ಇಷ್ಟು crime rate ಜಾಸ್ತಿಯಾಯಿತು. ನಾವು ಅಧಿಕಾರಕ್ಕೆ ಬಂದಾಗ ಕಡಿಮೆ ಆಯಿತು ಅಥವಾ ಜಾಸ್ತಿಯಾಯಿತು. ಮಾನ್ಯ ಸಭಾಪತಿಯವರೇ, ಅಂಕಿ-ಅಂಶಗಳನ್ನು ನೋಡಿದರೆ, ನಮ್ಮ ರಾಜ್ಯದಲ್ಲಿ ಕೊಲೆ, ದರೋಡೆ, ಅತ್ಯಾಚಾರ, ಸರ ಅಪಹರಣ, ಹಲ್ಲೆ ಮತ್ತು ಖೋಟಾ ನೋಟ್ ಪ್ರಕರಣಗಳು 2008ನೇ ಸಾಲಿನಲ್ಲಿ ಎಷ್ಟು? 2009 ನೇ ಸಾಲಿನಲ್ಲಿ ಎಷ್ಟು? 2010 ನೇ ಸಾಲಿನಲ್ಲಿ ಎಷ್ಟು? 2011 ನೇ ಸಾಲಿನಲ್ಲಿ ಎಷ್ಟು? 2012 ನೇ ಸಾಲಿನಲ್ಲಿ ಎಷ್ಟು? ಎಂಬುದರ ಬಗ್ಗೆ ನನ್ನ ಬಳಿ ಅಂಕಿ-ಅಂಶಗಳಿವೆ. ಅದೇ ರೀತಿಯಾಗಿ 2013-14, 2015-16 ಮತ್ತು 2017 ನೇ ಸಾಲಿನಲ್ಲಿ ನಡೆದಂತಹ ಕೊಲೆಗಳು, ನಾನು ಎಲ್ಲಾ ವರ್ಷಗಳದ್ದನ್ನು ಹೇಳುವುದಕ್ಕೆ ಹೋದರೆ, ಸಮಯದ ಪ್ರಶ್ನೆ ಬರುತ್ತದೆ. 2012 ನೇ ಸಾಲಿನಲ್ಲಿ ಸುಮಾರು 1860 ಕೊಲೆ ಪ್ರಕರಣಗಳು ರಾಜ್ಯದಲ್ಲಿ ಆಗಿದೆ. 2013 ನೇ ಸಾಲಿನಲ್ಲಿ ಸುಮಾರು 1601 ಕೊಲೆ ಪ್ರಕರಣಗಳು, 2014ನೇ ಸಾಲಿನಲ್ಲಿ ಸುಮಾರು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

1636 ಕೊಲೆ ಪ್ರಕರಣಗಳು, 2015ನೇ ಸಾಲಿನಲ್ಲಿ ಸುಮಾರು 1557 ಕೊಲೆ ಪ್ರಕರಣಗಳು, 2016ನೇ ಸಾಲಿನಲ್ಲಿ ಸುಮಾರು 1573 ಕೊಲೆ ಪ್ರಕರಣಗಳು, 2017 ನೇ ಸಾಲಿನಲ್ಲಿ ಸುಮಾರು 1392 ಕೊಲೆ ಪ್ರಕರಣಗಳು ನೀವು ಯಾವುದೇ ರೀತಿಯಲ್ಲಿ ತೆಗೆದುಕೊಂಡರೂ ಸಹ 2012ಕ್ಕೆ ಕೊಲೆ ಪ್ರಕರಣಗಳು ರಾಜ್ಯದಲ್ಲಿ ಕಡಿಮೆಯಾಗಿದೆ.

ಮಾನ್ಯ ಸಭಾಪತಿಯವರೆ, ದರೋಡೆಗಳನ್ನು ತೆಗೆದುಕೊಂಡರೆ, 2012 ನೇ ಸಾಲಿನಲ್ಲಿ ಸುಮಾರು 2190 ದರೋಡೆ ಪ್ರಕರಣಗಳಿತ್ತು. 2011 ನೇ ಸಾಲಿನಲ್ಲಿ ಸುಮಾರು 2169 ದರೋಡೆ ಪ್ರಕರಣಗಳಿತ್ತು. 2017 ರಲ್ಲಿ ಸುಮಾರು 1339 ದರೋಡೆಗಳು ಆಗಿರುವಂತಹದು ಇದೆ.

ಮಾನ್ಯ ಸಭಾಪತಿಯವರೆ, ಅತ್ಯಾಚಾರಗಳನ್ನು ತೆಗೆದುಕೊಂಡರೆ, 2012 ನೇ ಸಾಲಿನಲ್ಲಿ ಸುಮಾರು 709 ಅತ್ಯಾಚಾರಗಳು ನಮ್ಮ ರಾಜ್ಯದಲ್ಲಿ ಆಗಿದೆ. 2013 ನೇ ಸಾಲಿನಲ್ಲಿ ಸುಮಾರು 786 ಅತ್ಯಾಚಾರ ಪ್ರಕರಣಗಳು, 2014ನೇ ಸಾಲಿನಲ್ಲಿ ಸುಮಾರು 879 ಅತ್ಯಾಚಾರ ಪ್ರಕರಣಗಳು, 2015ನೇ ಸಾಲಿನಲ್ಲಿ ಸುಮಾರು 913 ಅತ್ಯಾಚಾರ ಪ್ರಕರಣಗಳು, 2016ನೇ ಸಾಲಿನಲ್ಲಿ ಸುಮಾರು 2003 ಅತ್ಯಾಚಾರ ಪ್ರಕರಣಗಳು,. ಆದರೆ ಆಗ 709 ಅತ್ಯಾಚಾರ ಪ್ರಕರಣಗಳು, ಈಗ 2017ನೇ ಸಾಲಿನಲ್ಲಿ ಸುಮಾರು 652 ಅತ್ಯಾಚಾರ ಪ್ರಕರಣಗಳು ಇಲ್ಲಿ ಕಡಿಮೆಯಾಗಿದೆ. ನಾನು ಎಲ್ಲಾ ದಾಖಲಾತಿಗಳ ಅಂಕಿ-ಅಂಶಗಳ ಆಧಾರದ ಮೇಲೆ ಸದನಕ್ಕೆ ಅತ್ಯಂತ ಜವಾಬ್ದಾರಿಯಿಂದ ಈ ಮಾಹಿತಿಯನ್ನು ಕೊಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೆ, ಸರಗಳ್ಳತನವನ್ನು ತೆಗೆದುಕೊಂಡರೆ, 2012ನೇ ಸಾಲಿನಲ್ಲಿ ಸುಮಾರು 1322 ಸರಗಳ್ಳತನವಾಗಿತ್ತು. 2017ನೇ ಸಾಲಿನಲ್ಲಿ ಸುಮಾರು 872 ಸರಗಳ್ಳತನ ವಾಗಿದೆ. ಇದು ಕಡಿಯೆಯಾಗಿಲ್ಲವೇ?

ಮಾನ್ಯ ಸಭಾಪತಿಯವರೇ, ಅದೇ ರೀತಿ ಹಲ್ಲೆ ಪ್ರಕರಣಗಳನ್ನು ತೆಗೆದುಕೊಂಡರೆ, 2012ನೇ ಸಾಲಿನಲ್ಲಿ ಸುಮಾರು 21,993 ಹಲ್ಲೆ ಪ್ರಕರಣಗಳು. 2017ನೇ ಸಾಲಿನಲ್ಲಿ ಸುಮಾರು 16,808 ಹಲ್ಲೆ ಪ್ರಕರಣಗಳು. ಸುಮಾರು 5,000 ಹಲ್ಲೆ ಪ್ರಕರಣಗಳು ಕಡಿಮೆಯಾಗಿರುವುದು ಅಂಕಿ-ಅಂಶಗಳಿಂದ ಗೊತ್ತಾಗುತ್ತದೆ.

ಮಾನ್ಯ ಸಭಾಪತಿಯವರೇ, ಖೋಟಾ ನೋಟ್ ಪ್ರಕರಣವನ್ನು ತೆಗೆದುಕೊಂಡರೆ, 2012ನೇ ಸಾಲಿನಲ್ಲಿ 81 ಖೋಟಾ ನೋಟ್ ಪ್ರಕರಣಗಳಿರುವಂಥಹದ್ದು, ಈಗ ಸುಮಾರು 37 ಖೋಟಾ ನೋಟ್ ಪ್ರಕರಣ ಇಳಿದಿರುವಂತಹದ್ದು ಇದೆ. ಆದರೆ, ಎಲ್ಲಾ ಅಂಕಿ-ಅಂಶಗಳನ್ನು ನೋಡಿದಾಗ ಇವತ್ತು 2013

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಿಂದ 2018ರ ವರೆಗೆ ಯಾವ crime rate ಇದೆ. ಇದು ಕಡಿಮೆಯಾಗಿರುವಂಥಹದ್ದನ್ನು ಸಹ ನಾವು ನೋಡುವುದಕ್ಕೆ ಸಾಧ್ಯತೆಯಿದೆ. ಇದರ ಬಗ್ಗೆ ಒಟ್ಟಾರೆ ವಿಚಾರವನ್ನು ಅರ್ಥ ಮಾಡಿಕೊಂಡು, ನಾವು ಕೆಲಸ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಈಶ್ವರಪ್ಪನವರು ನನ್ನ ವರದಿಯನ್ನು ಪ್ರಸ್ತಾಪ ಮಾಡಿದ್ದಾರೆ. ನನ್ನ ಪ್ರಾಥಮಿಕ ವರದಿಯನ್ನು ದಿನಾಂಕ: 30-12-2015 ರಲ್ಲಿ ರಾಜ್ಯ ಸರ್ಕಾರಕ್ಕೆ ನೀಡಿದ್ದೇನೆ. ಅಂತಿಮ ವರದಿಯನ್ನು ಸಹ ನೀಡತಕ್ಕಂಥದ್ದರಲ್ಲಿ ಇದ್ದೇನೆ. ಅದು ಸುಮಾರು ಸಾವಿರಾರು ಪುಟಗಳ ವರದಿಗಳಾಗುವ ಎಲ್ಲಾ ಅವಕಾಶಗಳು ಇವೆ. ಇದರಲ್ಲಿ ಪ್ರಾಥಮಿಕವಾಗಿ ಏನೇನು recommend ಮಾಡಬಹುದು ಎಂಬುದನ್ನು recommend ಮಾಡಿದ್ದೇನೆ.

(ಮುಂದು...)

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು)**

ಇದಕ್ಕೆ ನಾನು ದೋಷ ಕೊಡುವುದಕ್ಕೆ ಹೋಗುವುದಿಲ್ಲ. ಇದು ನನಗೆ ಅರ್ಥವಾಗುವುದಿಲ್ಲ. ಎರಡು-ಮೂರು ವಿಚಾರಗಳಿವೆ. ಒಂದು ಕಡೆ crime rate ಕಡಿಮೆಯಾಗಿದೆ. ಇನ್ನೊಂದು ಕಡೆ conviction rate ಹೆಚ್ಚಾದಾಗ crime rate ಕಡಿಮೆ ಆಗುವುದಕ್ಕೆ ಸಾಧ್ಯತೆ ಇದೆ. ಇವತ್ತಿನ ದಿವಸ 100 ಪ್ರಕರಣಗಳು trial ಆದರೆ conviction ಆಗುವಂತದ್ದು, ಶೇ.2.8 ಅಥವಾ ಶೇ.3 ರಷ್ಟು ಮಾತ್ರ. ಶೇ. 97ರಷ್ಟು ಕೇಸ್‌ಗಳು ಇವತ್ತಿನ ದಿವಸ acquittal ಆಗುತ್ತಿವೆ. ಇದಕ್ಕೆ ಅನೇಕ ಕಾರಣಗಳು ಇವೆ. ಬಹುಶಃ ಇದು other way ಆದರೆ, ಈಗ ಉದಾಹರಣೆಗೆ ದೋಷಾರೋಪ ಪಟ್ಟಿ ಹಾಕುತ್ತಾರೆಂದರೆ, "ಬಿ" ರಿಪೋರ್ಟ್ ಹಾಕಿದರೆ, ಸಾಕ್ಷಿ ಇಲ್ಲ. ಅದಕ್ಕೋಸ್ಕರ ದೋಷಾರೋಪ ಪಟ್ಟಿ ಹಾಕಿದ್ದಾರೆ. ಆದರೆ ದೋಷಾರೋಪ ಪಟ್ಟಿ ಸಲ್ಲಿಸಿದ ನಂತರ, ಆ ದೋಷಾರೋಪ ಪಟ್ಟಿಗೆ ಯಾರೆಲ್ಲಾ ಸಹಿ ಮಾಡುತ್ತಾರೆಂದರೆ, the concerned S.P., D.C.P., Public Prosecutor and Investigating Officer i.e. Circle Inspector or the Dy.S.P., whoever it may be. ಇಷ್ಟೆಲ್ಲಾ ಆದರೂ ಸಹ why so much of acquittals? ಬಹುಶಃ ಇವತ್ತಿನ ವ್ಯವಸ್ಥೆಯಲ್ಲಿರತಕ್ಕಂಥದ್ದನ್ನು ಏನಾದರೂ ಸರಿಪಡಿಸತಕ್ಕಂತಹ ಪ್ರಯತ್ನ ಆಗದಿದ್ದರೆ acquittal rate ಬಹುಶಃ ಶೇ.50, ಶೇ.60 ಮತ್ತು ಶೇ.90 ಆದಾಗ, ಬಹುಶಃ ನನಗೆ ಅನಿಸುವುದೇನೆಂದರೆ, crime rate ಕಡಿಮೆಯಾಗುವುದಕ್ಕೆ ಸಾಧ್ಯತೆ ಇದೆ. ನಮ್ಮ ದೇಶದಲ್ಲಿ 2013ರಲ್ಲಿ ನಿರ್ಭಯ ಕೇಸ್ ಏನು ನಡೆಯಿತು. ದೆಹಲಿಯಲ್ಲಿ ನಡೆದಂತಹ ನಿರ್ಭಯ ಕೇಸ್‌ನ ಹಿನ್ನೆಲೆಯಲ್ಲಿ, ಜಸ್ಟೀಸ್ ವರ್ಮಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಮಿಷನ್‌ನ್ನು constitute ಮಾಡಿದ್ದರು. ಜಸ್ಟೀಸ್ ವರ್ಮಾ ರವರು ಬಹಳ ಒಳ್ಳೆಯ ವರದಿಯನ್ನು ಕೊಟ್ಟರು. Justice Verma had given a very good report but unfortunately even after years... ನಾನು ಆ ಸರ್ಕಾರ ಮತ್ತು ಈ ಸರ್ಕಾರವೆಂದು ಹೇಳುವುದಕ್ಕೆ ಹೋಗುವುದಿಲ್ಲ. National level ನಲ್ಲಿ ಆ ಜಸ್ಟೀಸ್ ವರ್ಮಾ ಸಮಿತಿಯ ವರದಿಯನ್ನು ಯಥಾವತ್ತಾಗಿ ಜಾರಿಗೆ ತರುವಂತಹದ್ದರ ಮೂಲಕ ಹೋಗಬೇಕಾಗಿತ್ತು. ನಾನು ಈಗ ಉದಾಹರಣೆಗೆ ರಾಷ್ಟ್ರದಲ್ಲಿ ಸುಮಾರು ಶೇ.50ರಷ್ಟು ಮಹಿಳೆಯರು ಇದ್ದಾರೆ. 0-18 ವಯೋಮಾನದ ’ಯಸ್ಸಿನ ಗ್ರೂಪ್‌ನಲ್ಲಿರತಕ್ಕಂತಹವರು ಶೇ.37 ಅಥವಾ ಶೇ.38 ಇದ್ದಾರೆ. ಒಟ್ಟಾರೆಯಾಗಿ ತೆಗೆದುಕೊಂಡರೆ, ಸಮಾಜದಲ್ಲಿ ಬಹುತೇಕ ಮಕ್ಕಳು ಮತ್ತು ಮಹಿಳೆಯರು ಇದ್ದಾರೆ. ಆದರೆ, ಅವರ ರಕ್ಷಣೆ ಮಾಡತಕ್ಕಂಥದ್ದಕ್ಕೆ ಎಲ್ಲಾ ಸರ್ಕಾರಗಳು, ಕೇಂದ್ರ ಸರ್ಕಾರ ಸೇರಿದಂತೆ, ರಾಜ್ಯ ಸರ್ಕಾರಗಳು ಸೇರಿದಂತೆ ಎಲ್ಲೋ ಒಂದು ಕಡೆ ಅದರ ಬಗ್ಗೆ ಹೆಚ್ಚು ಮಹತ್ವ ಕೊಡಬೇಕಾಗಿತ್ತು. ಹೆಚ್ಚು ಒತ್ತನ್ನು ಕೊಡಬೇಕಾಗಿತ್ತು. ಆದರೆ, ಒತ್ತು ಕೊಡುತ್ತಿಲ್ಲ ಎನ್ನುವಂತಹ ನೋವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಸುಮಾರು 25 ನಿಮಿಷಗಳು ಆಯಿತು. ತಾವು ಇನ್ನೊಂದು ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, 10 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. Sexual Harassment of Women at Workplace (Prevention, Prohibition and Redressal) Act, 2013. ಇದು 1998ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ judgment ಆಯಿತು. ಆ ಗ್ರೈಡ್‌ಲೈನ್ಸ್ ಪ್ರಕಾರ, ಏನು ವಿಶಾಖ ವಿರುದ್ಧ ರಾಜಸ್ಥಾನ ರಾಜ್ಯ ಒಂದು ಕೇಸ್ ಏನಿತ್ತು ಅದರ ಹಿನ್ನೆಲೆಯಲ್ಲಿ, *Vishaka vs. State of Rajasthan* ಎನ್ನುವಂಥದ್ದರಲ್ಲಿ ಏನು ಕೇಸ್ ಆಯಿತು. ಅದರಲ್ಲಿ ಒಂದು ಗೈಡ್‌ಲೈನ್ಸ್‌ನ್ನು ಕೊಟ್ಟರು. ಅದಾದ ನಂತರ, Sexual Harassment of Women at Workplace (Prevention, Prohibition and Redressal) Act, 2013 ಜಾರಿಗೆ ಬಂತು. Irrespective of gender ಎಲ್ಲಿ 10 ಜನ ಕೆಲಸ ಮಾಡುತ್ತಾರೆ ಅಲ್ಲಿ ಒಂದು Internal Complaints Committee ಇರಬೇಕು. ನಾನು ನಮ್ಮ ಕಾರ್ಯದರ್ಶಿಯವರನ್ನು ಕೇಳಿದೆನು. ನಮ್ಮಲ್ಲಿ ಇದೆ, ನಾವು ಕಮಿಟಿ ಮಾಡಿದ್ದೇವೆಂದು ಹೇಳಿದರು. ನಾನು ಪ್ರಧಾನ ಕಾರ್ಯದರ್ಶಿ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಡಿ.ಜಿ.ಪಿಯವರನ್ನು ಇನ್ನಿತರೆ ಎಲ್ಲರನ್ನೂ ಸಹ ಅನೇಕರನ್ನು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಬಹುತೇಕ ಕಡೆಗಳಲ್ಲಿ ಈ ರೀತಿಯ ಸಮಿತಿಗಳು ಇಲ್ಲ. ನಾನು ಅತ್ಯಂತ ನೋವಿನಿಂದ ಈ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ಅದೇ ರೀತಿಯಲ್ಲಿ ರೇಪ್ ಕೇಸ್ ಅಥವಾ POCSO (Protection of Children from Sexual Offences Act) ಕಾಯ್ದೆಯಡಿ amended provisions ಪ್ರಕಾರ, ೯೦ ದಿನಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಬೇಕು. Investigation has to be completed within 90 days. Otherwise, 'as a matter of right, the Accused will be entitled for bail' ಎಂದು ಕಾನೂನಿನಲ್ಲಿ ಇದೆ. ಹಾಗಾಗಿ, ೯೦ ದಿನಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ ನಂತರ, amended provisions ಪ್ರಕಾರ 'trial has to be completed within two months/60 days' ಎಂದು ಇದೆ. ಆದರೆ, ಒಂದು ರೇಪ್ ಕೇಸ್ ಐದು ತಿಂಗಳಿನಲ್ಲಿ ಮುಗಿಯಬೇಕು ಎನ್ನುವಂಥದ್ದು that is the rule of law and mandate. ಆದರೆ, ಮಾನ್ಯ ಸಭಾಪತಿಯವರೇ, ಅತ್ಯಂತ ನೋವಿನಿಂದ ನಾನು ಒಬ್ಬ ವಕೀಲನಾಗಿ, ಒಬ್ಬ ಕಾನೂನನ್ನು ತಿಳಿದುಕೊಂಡವನಾಗಿ ಹೇಳುವುದಕ್ಕೆ ಬಯಸುತ್ತೇನೆ. ಈ ಸಮಿತಿಯ ಹಿನ್ನೆಲೆಯಲ್ಲಿ, ನಾನು ಅಧ್ಯಯನ ಮಾಡಿದಾಗ, ಇವತ್ತಿನ ದಿವಸ 5 ವರ್ಷವಾದರೂ ಸಹ ರೇಪ್ ಕೇಸ್‌ಗಳು ಇತ್ಯರ್ಥವಾಗುವುದಿಲ್ಲ. ಇದರ ಜೊತೆಗೆ ಪೋಕ್ಸೋ ಆಕ್ಟ್ ಇದೆ. As per POCSO Act, 2012 and as per Section 164 of Cr.P.C., ಒಂದು ತಿಂಗಳಿನಲ್ಲಿ Victim Statement ಆಗಬೇಕು. ಒಂದು ವರ್ಷದಲ್ಲಿ ಕೇಸ್ ಅಂತಿಮಗೊಳಿಸಬೇಕು. But even after 3, 4 or 5 years if proceedings or trial is not completed then where is the justice? ನನಗೆ ಅರ್ಥವಾಗುವುದಿಲ್ಲ, ಮಾನ್ಯ ಸಭಾಪತಿಯವರೇ, ಇದರಲ್ಲಿ ಏನು ಹೇಳುತ್ತದೆ ಎಂದರೆ, ಯಾವ 'victim' ಇದ್ದಾನೆ, ಆ victim ನ whereabouts ಆಗಲೀ, ಅವರ ಹೆಸರಾಗಲೀ, ಅವರ identity ಆಗಲೀ, publish ಆಗಬಾರದು ಎಂದು ಹೇಳಿದರೆ, ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಸಂಬಂಧಪಟ್ಟಂತಹವರ ಗಮನಕ್ಕೆ ತಂದಿದ್ದೇನೆ. ರಾಜಾರೋಷವಾಗಿ ವಿಜಯಪುರದ ಆ ಹೆಣ್ಣು ಮಗಳ ಹೆಸರನ್ನು ಎಲ್ಲರೂ publish ಮಾಡುತ್ತಾರೆ. ಆಕೆಯ ಫೋಟೋವನ್ನು ತೋರಿಸುತ್ತಾರೆ. There is a law which prohibits such things. ಏಕೆಂದರೆ, ಆ ಮಗುವಿಗೆ ಮತ್ತು ಆ ಮಗುವಿನ ಕುಟುಂಬಕ್ಕೆ ಅಪಮಾನ ಆಗಬಾರದು

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವಂತಹ ಉದ್ದೇಶದಿಂದ ಕಾನೂನು ಇದೆ. ಅದನ್ನು ಅನೇಕ ಮಾಧ್ಯಮ ಸ್ನೇಹಿತರು ಕೆಲವರು ಪಾಲನೆ ಮಾಡುತ್ತಿಲ್ಲ. ಆ ರೀತಿ ಪಾಲನೆ ಮಾಡದೇ ಇರತಕ್ಕಂತಹವರ ಮೇಲೆ ಕ್ರಮ ಜರುಗಿಸದೇ ಇರತಕ್ಕಂಥದ್ದು ಸಹ ಇದೆ. ಇದರ ಜೊತೆಗೆ compensation ಕೊಡುವ ಎನ್ನುವ ಪ್ರಶ್ನೆ ಬಂದಾಗ, ಸ್ಥೈರ್ಯ, ಯೋಜನೆ ರಾಜ್ಯ ಸರ್ಕಾರದ್ದು ಇದೆ. 2015ರಲ್ಲಿ Victim Compensation Fund Scheme ನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ರಾಜ್ಯ ಸರ್ಕಾರದವರು ಸಹ ಸಂತ್ರಸ್ತ ಪರಿಹಾರ ನಿಧಿ ಎಂದು ಸಹ ಮಾಡಿದ್ದಾರೆ. ಇದೆಲ್ಲಾ ಮಾಡಿತಕ್ಕಂತಹ ಹಿನ್ನೆಲೆಯಲ್ಲಿ. ಮಾನ್ಯ ಸಭಾಪತಿಯವರೇ, ನಾನು ತಮಗೆ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಸುಮಾರು 10 ಬೇರೆ ಬೇರೆ ವಿಚಾರಗಳಲ್ಲಿ, ಇನ್ನೊಂದರಲ್ಲಿ ಕೆಲವಲ್ಲಿ 12ರಲ್ಲಿ ಅವರಿಗೆ compensation ಸಿಗತಕ್ಕಂಥದ್ದಕ್ಕೆ. Minor victims ಗೆ ಅಕಸ್ಮಾತ್ ಅವರಿಗೆ ಏನಾದರೂ ರೇಪ್ ಆದಲ್ಲಿ, 4.50 ಲಕ್ಷ ರೂಪಾಯಿಗಳನ್ನು compensation ಕೊಡಬೇಕು ಎಂದು ಇದೆ. Acid attack, rape, physical abuse of minor, rehabilitation of victim, human trafficking, sexual assault, death, permanent disability, partial disability, burns affecting greater than 25%, loss of foetus ಮತ್ತು loss of fertility ಗೆ compensation ಕೊಡಬೇಕು ಎಂದು ಇದೆ. Women victim of cross-border firing ಗೆ compensation ಇದೆ. Death or permanent disability ಶೇ.80 ರಷ್ಟು ಇದ್ದರೆ, 2 ಲಕ್ಷ ರೂಪಾಯಿಗಳ compensation ಇದೆ. Partial disability ಆದಲ್ಲಿ, 1 ಲಕ್ಷ ರೂಪಾಯಿಗಳ compensation ಇದೆಲ್ಲಾ ಇದೆ. ಆದರೆ, ರಾಜ್ಯ ಸರ್ಕಾರದ ಕೆಲವು ಸ್ಕೀಂಗಳಲ್ಲಿ ಹಣವನ್ನು ಕೊಟ್ಟಿದ್ದಾರೆ. ನಾನು ರೆಕಮೆಂಡ್ ಮಾಡುವುದು, ಅಲ್ಲೊಂದು ಜಿಲ್ಲಾ ಮಟ್ಟದ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ District Legal Services Authority ಎಂದು ಇದೆ. ಅದಕ್ಕೆ District Judge ರವರು Chairman ಆಗಿದ್ದಾರೆ. ಅಲ್ಲಿ ಸಂಬಂಧಪಟ್ಟಂತಹ ಮ್ಯಾಜಿಸ್ಟ್ರೇಟ್‌ರವರು ಕಾರ್ಯದರ್ಶಿ ಆಗಿರುತ್ತಾರೆ. Section 357-A of Cr.P.C. ಪ್ರಕಾರ ಪರಿಹಾರ ಕೊಡತಕ್ಕಂಥದ್ದು ಇದೆ. ಕೋರ್ಟ್‌ನಲ್ಲಿ ಆ ಸೆಕ್ಷನ್‌ರಡಿಯಲ್ಲಿ ಆದೇಶ ಮಾಡುವುದು ಬೇರೆ. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಮಾಡಿರತಕ್ಕಂತಹ ಸ್ಕೀಂಗಳ ಕೆಳಗಡೆ ಮಾಡತಕ್ಕಂಥದ್ದು ಬೇರೆ. ಆದರೆ, ವರ್ಷಗಳಾದರೂ ಸಹ ಆ ಹೆಣ್ಣು ಮಕ್ಕಳಿಗೆ ಆ victimsಗೆ ಇವತ್ತಿನ ದಿವಸ ಪರಿಹಾರ ಸಿಗುವುದಿಲ್ಲವೆಂದರೆ, ಅದಕ್ಕೆ ನೇರವಾಗಿ ಸಂಬಂಧಪಟ್ಟಂತಹ ಅಧಿಕಾರಿಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣರಾಗಿದ್ದಾರೆ. ಆ ಅಧಿಕಾರಿಗಳ ಮೇಲೆ ಕ್ರಮ ಜರುಗಿಸತಕ್ಕಂತಹ ಕೆಲಸ ಆಗಬೇಕು ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅಂತಿಮವಾಗಿ ಮಾನ್ಯ ಸಭಾಪತಿಯವರೇ, ಈ ರೀತಿಯ ಕ್ರೈಂಗಳು ಮಹಿಳೆಯರ ಮೇಲೆ ಇರಬಹುದು, ಮಕ್ಕಳ ಮೇಲೆ ಇರಬಹುದು ಅಥವಾ ದೇಶದಲ್ಲಿರತಕ್ಕಂತಹ ಬೇರೆ ಬೇರೆ ಕಾರಣಗಳಿಂದ ಕ್ರೈಂಗಳು ಏನು ಆಗುತ್ತಿವೆ, ಇದನ್ನು ತಡೆಗಟ್ಟುವಂತಹ ಹಿನ್ನೆಲೆಯಲ್ಲಿ ಒಂದು ಕಡೆ, ಜಸ್ಟೀಸ್ ವರ್ಮಾ ಸಮಿತಿ ವರದಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಒಂದು ರಾಷ್ಟ್ರೀಯ ನೀತಿಯನ್ನು ರೂಪಿಸತಕ್ಕಂತಹದ್ದರ ಮೂಲಕ speedy disposal ಹೇಗೆ ಮಾಡಬೇಕು, ಕೋರ್ಟ್‌ಗಳು ಹೇಗೆ ಮಾಡಬೇಕು, ಮತ್ತೊಂದನ್ನು ಹೇಗೆ ಮಾಡಬೇಕು ಎನ್ನುವಂಥದ್ದಕ್ಕೆ ಒಂದು national policy evolve ಮಾಡತಕ್ಕಂಥದ್ದು ಮೊದಲನೆಯದು. ಎರಡನೆಯದು, ರಾಜಕಾರಣಿಗಳು ಮಾತನಾಡಬೇಕಾದರೆ, ಮಾನ್ಯ ಪ್ರಧಾನ ಮಂತ್ರಿಗಳ ಬಗ್ಗೆ ನನಗೆ ಗೌರವ ಇದೆ. ಏಕೆಂದರೆ, ಬಿಜೆಪಿಗೆ ಪ್ರಧಾನ ಮಂತ್ರಿಗಳು ಅಷ್ಟೇ ಅಲ್ಲ. ಈ ದೇಶದ 135 ಕೋಟಿ ಭಾರತೀಯರ ಪ್ರಧಾನ ಮಂತ್ರಿಗಳಾಗಿದ್ದಾರೆ. ಪ್ರಧಾನ ಮಂತ್ರಿ ಆದ ನಂತರ, ಅವರು ಬಿಜೆಪಿ ಪಕ್ಷಕ್ಕಷ್ಟೇ ಸೀಮಿತ ಆಗಬಾರದು. ಅವರು ಒಂದು ರೀತಿಯ Statesman ರೀತಿಯಲ್ಲಿ ನೋಡಬೇಕು. ಇತ್ತೀಚೆಗೆ ಅವರು ನಮ್ಮ ರಾಜ್ಯ ಸರ್ಕಾರವನ್ನು ಶೇ.10 ಕಮಿಷನ್ ಸರ್ಕಾರ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕಮಿಷನ್ ತೆಗೆದುಕೊಳ್ಳುವುದು it is an offence.

**(ಮುಂದು...)**

**(035)06.02.2018/6.00/ಎಂಎಂ-ಆರ್‌ಎನ್**

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು):-**

Prevention of Corruption Act ಪ್ರಕಾರ ಅಪರಾಧವಾಗುತ್ತದೆ. ನನಗೆ ಅರ್ಥವಾಗುತ್ತಿಲ್ಲ. Section.201 of Indian Penal Code ಪ್ರಕಾರ...

**ಸಭಾಪತಿಯವರು:-** ವಿಷಯಾಂತರ ಮಾಡುವುದು ಬೇಡ.

**ಶ್ರೀ ವಿ.ಎಸ್. ಉಗ್ರಪ್ಪ:-** ಇದೊಂದು ಅಪರಾಧವಾಗಿದೆ.

**ಸಭಾಪತಿಯವರು:-** ಅದರ ಬಗ್ಗೆ ಮಾತನಾಡುವುದಕ್ಕೆ ತಮಗೆ ನಂತರ ಅವಕಾಶ ಕೊಡುತ್ತೇನೆ.

**Sri V.S.UGRAPPA:-** It is a crime.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದಕ್ಕೊಂದು ಡಿಬೇಟ್ ಇಡಿ. ನಾವು ಅದನ್ನು ಪ್ರೂವ್ ಮಾಡುತ್ತೇವೆ. ಶೇ.10 ಎಂಬುದಕ್ಕೆ ಶೇ.30 ರಷ್ಟು ಎಂದು ನಾವು ಸಾಬೀತು ಮಾಡುತ್ತೇವೆ. ಇದನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ದಯವಿಟ್ಟು . .

**ಸಭಾಪತಿಯವರು:-** ಈಗ ಚರ್ಚೆಯಾಗುತ್ತಿರುವುದು Law and Order ಬಗ್ಗೆ. ದಯವಿಟ್ಟು ಇದನ್ನು ಸೀಮಿತಗೊಳಿಸಿ ಮುಗಿಸಿ.

(ಗೊಂದಲ)

**Sri V.S.UGRAPPA:-** It is a crime. …(**Interruptions**)… Please…

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಎ.ಸಿ.ಬಿ ಯಲ್ಲಿ ನಾವು ಒಂದು ಪ್ರಕರಣವನ್ನು ದಾಖಲಿಸಿದ್ದೇವೆ. ಅದರ ತನಿಖೆಯನ್ನು ಮಾಡಲಿ ಏನು ಎನ್ನುವುದು ಗೊತ್ತಾಗುತ್ತದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಜೆ. ಪುಟ್ಟಸ್ವಾಮಿಯವರು ಮಾತನಾಡುವಾಗ ನಾನು ಸುಮ್ಮನೆ ಇದ್ದೆ.

(ಗೊಂದಲ)

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲಿರುವ ವಿಷಯದ ಬಗ್ಗೆ ಮಾತ್ರ ಮಾತನಾಡಲಿ ಬೇರೆ ಮಾತನಾಡುವುದು ಬೇಡ.

**ಶ್ರೀ ಹೆಚ್. ಎಂ. ರೇವಣ್ಣ (ಸಾರಿಗೆ ಸಚಿವರು):-** ಮಾನ್ಯ ಪುಟ್ಟಸ್ವಾಮಿಯವರೇ, ಪ್ರೂವ್ ಮಾಡಲು ಸಾಕ್ಷ್ಯ ತೆಗೆದುಕೊಂಡು ಬನ್ನಿ . . .

(ಗೊಂದಲ)

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಷಯವನ್ನು ತೆಗೆದುಕೊಳ್ಳಿ. ನಾಳೆ ನೋಟಿಸ್ ಕೊಡುತ್ತೇವೆ ನಂತರ ಡಿಬೇಟ್ ಮಾಡಿ. ಉತ್ತರವನ್ನು ಹೇಳುತ್ತೇವೆ.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಒಂದು ಅಪರಾಧವಾಗಿದೆ.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ, ನಿಮಗೆ ಅವಕಾಶ ಕೊಡುತ್ತೇನೆ. ಸದನವು ಬೆಳಗ್ಗೆಯಿಂದ ಒಬ್ಬರ ಮಧ್ಯೆ ಇನ್ನೊಬ್ಬರು ಮಾತನಾಡದೇ ಬಹಳ ಸುಗಮವಾಗಿ ಚೆನ್ನಾಗಿ ನಡೆದುಕೊಂಡು ಬಂದಿದೆ. ನಾನು ಮಾಧ್ಯಮದವರಿಗೆ ಕೊನೆಯಲ್ಲಿ ಹೇಳಬೇಕೆಂದಿದ್ದೆ ಆದರೆ ಈಗ ಹೇಳುತ್ತಿದ್ದೇನೆ. ನಮ್ಮ ಸದನದಲ್ಲಿರುವ ಸದಸ್ಯರ ಸಂಖ್ಯೆಯನ್ನು ಎಣಿಸಿ ನೋಡಿದರೆ 75 ಜನ ಸದಸ್ಯರಲ್ಲಿ 30 ಜನ ಸದಸ್ಯರು ಹಾಜರಿದ್ದೇವೆ. ಇಷ್ಟು ಚೆನ್ನಾಗಿ ಕರ್ನಾಟಕ ವಿಧಾನ ಪರಿಷತ್ತು ನಡೆದುಕೊಂಡು ಬರುತ್ತಿದೆ. ಇದನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಎಲ್ಲರದ್ದೂ ಆಗಿದೆ. ಯಾರದ್ದೋ ಒಬ್ಬರದ್ದು ಮಾತ್ರ ಅಲ್ಲ. ಅವರದ್ದು ಮಾತ್ರ ಇದೆ ಅಥವಾ ಇವರದ್ದು ಮಾತ್ರ ಇದೆ, ಈ ಕಡೆ ಕುಳಿತಿರುವವರದ್ದು ಮಾತ್ರ ಆಗಿದೆ ಎಂದಲ್ಲ, ನಮ್ಮೆಲ್ಲರದ್ದೂ ಆಗಿದೆ. ಈಗ ನಿಯಮ 68ರಡಿಯಲ್ಲಿ ಏನು ಚರ್ಚೆ ನಡೆಯುತ್ತಿದೆ ಅದನ್ನು ಮುಗಿಸುವ ಹಂತಕ್ಕೆ ಬಂದಿದ್ದೇವೆ, ಅದನ್ನು ತಾವು ಮುಗಿಸಿಬಿಡಿ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ,

**ಸಭಾಪತಿಯವರು:-** ಮಾನ್ಯ ಈಶ್ವರಪ್ಪನವರೇ, ಅವರು ಮುಗಿಸಿದ ನಂತರ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ತಾವು ಒಪ್ಪಿಗೆ ಕೊಟ್ಟರೆ ಒಂದೇ ನಿಮಿಷ ಮಾತನಾಡುತ್ತೇನೆ. ಈಗ ಪ್ರಧಾನಮಂತ್ರಿಯವರು ಪರ್ಸೆಂಟೇಜ್ ಅಂಶದ ಬಗ್ಗೆ ಹೇಳಿದ್ದಾರೆ. ನಾನು ಈ ಸದನದಲ್ಲಿ ಹೇಳುವುದೇನೆಂದರೆ, ಮಾನ್ಯ ಉಗ್ರಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ. ಪರ್ಸೆಂಟೇಜ್ ಶೇ.10ಕ್ಕಿಂತ ಜಾಸ್ತಿ ಇರುವುದನ್ನು ನಾನು ಪ್ರೂವ್ ಮಾಡುತ್ತೇನೆ. ಇಲ್ಲ ಅಂದರೆ ನಾನು ರಾಜೀನಾಮೆ ಕೊಡಲು ತಯಾರಿದ್ದೇನೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಈಶ್ವರಪ್ಪನವರೇ, ದಯವಿಟ್ಟು ಅದನ್ನು ಪ್ರೂವ್ ಮಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಒಂದು ಸಮಿತಿಯನ್ನು ಮಾಡಿ, ನಾನು ಸಾಕ್ಷಿ ಸಮೇತ ತಂದಿಡುತ್ತೇನೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಆಯಿತು ಬಿಡಿ . .

(ಗೊಂದಲ)

**ಶ್ರೀ ಪ್ರಿಯಾಂಕ್ ಎಂ. ಖರ್ಗೆ (ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿಯವರು ಮಾತನಾಡಿದ್ದಾರೆ, ಮತ್ತೊಬ್ಬರು ಮಾತನಾಡಿದ್ದಾರೆ ಎಂದರೆ ಅದಕ್ಕೋಸ್ಕರ ಸಮಿತಿ ಏಕೆ ಬೇಕು? ಅವರು ಸಾಬೀತು ಮಾಡಲಿ, ಸುಮ್ಮನೆ hit and run ಪ್ರಕರಣದ ರೀತಿ ಇವರು ಮಾತನಾಡಿದರೆ ಹೇಗೆ?

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಪ್ರೂವ್ ಮಾಡಲಿಲ್ಲವೆಂದರೆ, ಸಾಕ್ಷಿಯನ್ನು ಕೊಡಲಿಲ್ಲವೆಂದರೆ ರಾಜಕೀಯ ನಿವೃತ್ತಿಯನ್ನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:–** ಆಯಿತು ಈಗ . . .

**ಶ್ರೀ ಕೆ.ಎಸ್. ಈಶ್ವರಪ್ಪ:–** ವಿಷಯವನ್ನು ಎಲ್ಲಿಗೋ ತೆಗೆದುಕೊಂಡು ಹೋದರೆ ಇದು ಯಾವ ನ್ಯಾಯ?

**ಶ್ರೀ ಹೆಚ್. ಎಂ. ರೇವಣ್ಣ:–** ಪರ್ಸೆಂಟೇಜ್ ಹೋಗಲಿ, ಕೌಂಟಿಂಗ್ ಮಷಿನ್ ಇಟ್ಟುಕೊಂಡಿದ್ದೀರಲ್ಲಾ . . .

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಇನ್ನು ಎರಡೇ ನಿಮಿಷದಲ್ಲಿ ನಾನು ಮಾತನಾಡಿ ಮುಗಿಸುತ್ತೇನೆ.

(ಗೊಂದಲ)

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):–** ಮಾನ್ಯ ಉಗ್ರಪ್ಪನವರೇ, ತಾವು ಮಾತನಾಡಲು ಪ್ರಾರಂಭ ಮಾಡಿ.

**ಶ್ರೀ ಪ್ರಿಯಾಂಕ್ ಎಂ. ಖರ್ಗೆ (ಪ್ರವಾಸೋದ್ಯಮ ಸಚಿವರು):–** ನಾವೇನು ಸೃಷ್ಟಿ ಮಾಡುತ್ತಿಲ್ಲ, ಅವರು ಹೇಳುತ್ತಿರುವುದನ್ನೇ ನಾವು ಹೇಳುತ್ತಿದ್ದೇವೆ.

**ಸಭಾಪತಿಯವರು:–** ವಿಷಯಾಂತರ ಮಾಡಬೇಡಿ ಎಂದು ಬೆಳಗ್ಗೆಯಿಂದ ಎಲ್ಲರಿಗೂ ಹೇಳುತ್ತಿದ್ದೇನೆ. ಸಮಯ ಆಗುತ್ತಿದೆ, ತಾವು ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ವಿಷಯವೇನೆಂದರೆ, ನಾನು intervene ಆಗಬೇಕಾದರೆ, 'ಯಾರೂ ಮಾತನಾಡಬೇಡಿ, ನಿಮಗೆ ಮಾತನಾಡಲು ಅವಕಾಶ ಕೊಟ್ಟಾಗ ಮಾತನಾಡಿ, ಅವರು ಬೇಕಾದರೆ ಉತ್ತರ ಕೊಡಲಿ' ಎಂದು ತಾವು ಹೇಳಿದಿರಿ.

**ಸಭಾಪತಿಯವರು:-** ಅವರಿಗೂ ಅದನ್ನೇ ಹೇಳಿದ್ದೇನೆ, ನಿಮಗೂ ಅದನ್ನೇ ಹೇಳಿದ್ದೇನೆ.

**ಶ್ರೀ ವಿ.ಎಸ್. ಉಗ್ರಪ್ಪ:-** ನಾನು ಮಾತನಾಡುವಾಗ ದಯವಿಟ್ಟು ಅವರು intervene ಆಗುವುದು ಬೇಡ.

**ಸಭಾಪತಿಯವರು:-** ಆಯಿತು ಮುಗಿಸಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿಷಯಾಂತರ ಆಗಬಾರದು.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ . .

**ಸಭಾಪತಿಯವರು:-** ಆಯಿತು, ವಿಷಯಾಂತರ ಮಾಡಬೇಡಿ ಎಂದು ನಾನು ಹೇಳಿದ್ದೇನೆ

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರು ನಿಮಗೆ ಸಪೋರ್ಟ್ ಮಾಡುವುದಕ್ಕೆ ಹೇಳಿದ್ದಾರೆ.

**ಸಭಾಪತಿಯವರು:-** ಆಯಿತು. ಅವರು ಮುಗಿಸುತ್ತಾರೆ ಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಯಾವ Prevention of Corruption Act ಪ್ರಕಾರ ಲಂಚ ತೆಗೆದುಕೊಳ್ಳುವುದು ಅಪರಾಧವಾಗಿದೆ. ಒಬ್ಬರು ಪ್ರಧಾನಮಂತ್ರಿಯವರು ಶೇ.10 ಎಂದು ಹೇಳುತ್ತಾರೆ, ಮತ್ತೊಬ್ಬರು ಕೇಂದ್ರ ಸಚಿವರು ಹೇಳುತ್ತಾರೆ...

**(ಗೊಂದಲ)**

**Sri V.S.UGRAPPA:-** What nonsense...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಹೇಳಿ ಆಯಿತಲ್ಲವೇ, ಈಗ ಮುಂದಕ್ಕೆ ಹೋಗಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಇನ್ನೊಬ್ಬರು ಶೇ.೩೦ರಷ್ಟು ಎಂದು ಹೇಳುತ್ತಾರೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಎ.ಸಿ.ಬಿ ನಲ್ಲಿ ಕೇಸ್ ಫೈಲ್ ಮಾಡಿದ್ದೇವೆ.

**ಸಭಾಪತಿಯವರು:–** ವಿಷಯವನ್ನು ಬಿಟ್ಟು ಮಾತನಾಡಿದರೆ ಹೇಗೆ? ಬೇಡ ದಯಮಾಡಿ ಕುಳಿತುಕೊಳ್ಳಿ.

**ಸಭಾನಾಯಕರು:–** ಮಾನ್ಯ ಸಭಾಪತಿಯವರೇ, ಅವರು ಮುಂದಕ್ಕೆ ಹೋಗುತ್ತಿದ್ದಾರೆ ಬಿಡಿ.

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ರೇವಣ್ಣನವರೇ, ಮುಗಿಸುತ್ತೇನೆ ಬಿಡಿ.

**ಶ್ರೀ ಹೆಚ್.ಎಂ. ರೇವಣ್ಣ:–** 'ನಂಗಾನಾಚ್' ಎಂಬ ಪದ ಹೇಳುವುದಕ್ಕೆ ನಿಮಗೆ ನಾಚಿಕೆಯಾಗಬೇಕು.

**ಸಭಾಪತಿಯವರು:–** ವಿಷಯಾಂತರ ಆಗಬಾರದು ಎಂದು . .

**ಶ್ರೀ ಹೆಚ್.ಎಂ. ರೇವಣ್ಣ:–** ಇದು ಪ್ರಧಾನಮಂತ್ರಿಯವರು ಆಡುವ ಮಾತೇ?

**ಸಭಾಪತಿಯವರು:–** ಉದ್ದೇಶಪೂರ್ವಕವಾಗಿ ವಿಷಯಾಂತರವನ್ನು ಮಾಡಿದರೆ ಅದನ್ನು ಗಮನಿಸಲು ನಾನು ಇದ್ದೇನೆ. ನೀವು ಏಕೆ ಮಧ್ಯೆ ಬಾಯಿ ಹಾಕುತ್ತೀರಿ?

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಎ.ಸಿ.ಬಿ. ನಲ್ಲಿ ತನಿಖೆ ಮಾಡಲಿ. We have filed a case.

**ಸಭಾಪತಿಯವರು:–** ಅವರು ಹೇಳುತ್ತಾರೆ ಬಿಡಿ. ಅವರು ಉದ್ದೇಶಪೂರ್ವಕವಾಗಿ ವಿಷಯಾಂತರ ಮಾಡುತ್ತಿದ್ದಾರೆಂಬುದು ನಿಮಗೆ ಅರ್ಥವಾಗುವುದಿಲ್ಲವೇ? ಉದ್ದೇಶಪೂರ್ವಕವಾಗಿ ವಿಷಯಾಂತರ ಮಾಡಬೇಡಿ ಎಂದು ಹೇಳುತ್ತಿದ್ದೇನೆ. ದಯವಿಟ್ಟು ಬೇಗ ಮುಗಿಸಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ President of India is the Constitutional head and Prime Minister of India is the Executive head. ಅವರ ಗಮನಕ್ಕೆ ಭ್ರಷ್ಟಾಚಾರ ನಡೆದಿದೆ, ಕಾನೂನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಸುವ್ಯವಸ್ಥೆ ಇಲ್ಲ ಸರಿಯಿಲ್ಲ, ಕೇಂದ್ರದಿಂದ ಬಂದಿರುವ ಹಣ ದುರ್ಬಳಕೆಯಾಗಿದೆ ಎಂದು ಇಲ್ಲಿ ಹೇಳಿಕೆ ಮಾಡಿರುವ ಹಿನ್ನೆಲೆಯಲ್ಲಿ . .

**ಸಭಾಪತಿಯವರು:–** ಇದು ಯಾವ ವಿಷಯ? ಲಾ & ಆರ್ಡರ್‌ಗೂ ಇದಕ್ಕೂ ಏನು ಸಂಬಂಧ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ದಯಮಾಡಿ ಈ ರಾಜ್ಯದ ವ್ಯವಸ್ಥೆಯನ್ನು 'ನಂಗಾನಾಚ್' ಎಂದರೆ, ನಗ್ನತೆಯಲ್ಲಿರುವಂತಹದ್ದು ಎಂದು ಹೇಳಿರುವ ಹಿನ್ನೆಲೆಯಲ್ಲಿ...

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ಯಾವಾಗ ಏನು ಬೇಕಾದರೂ ಮಾತನಾಡಬಹುದೇ? ಏಕೆ ಮಾತನಾಡುತ್ತೀರಿ? ನನಗೂ ಸಹನೆ ಎಂಬುದು ಇದೆ. ಸಾಕು ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ಕೊನೆಯದಾಗಿ ಇಷ್ಟನ್ನು ಹೇಳುತ್ತೇನೆ. ಪ್ರಧಾನಮಂತ್ರಿಯವರಲ್ಲಿ ಮಾಹಿತಿ ಇದ್ದರೆ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಈ ರಾಜ್ಯದ ಜನತೆಗೆ ಅಪಮಾನ ಮಾಡುವಂತಹ ಹೇಳಿಕೆ ನೀಡಿರುವುದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾವೆಲ್ಲರೂ ಆಗ್ರಹ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

**ಸಭಾಪತಿಯವರು:–** ಆಯಿತು, ಧನ್ಯವಾದಗಳು.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಪ್ರಧಾನಮಂತ್ರಿಯವರು ನಡೆಯುತ್ತಿರುವ ವಿಷಯವನ್ನು ಹೇಳಿದ್ದಾರೆ.

**ಸಭಾಪತಿಯವರು:–** ಆಯಿತು. ಏಕೆ ಅವರ ಬಲೆಗೆ ಬೀಳುತ್ತಿದ್ದೀರಿ? ಅದನ್ನೇಕೆ ಈಗ ಚರ್ಚೆ ಮಾಡುತ್ತೀರಿ? ಕುಳಿತುಕೊಳ್ಳಿ. ಮಾನ್ಯ ಶ್ರೀಕಂಠೇಗೌಡರೇ ಒಂದು ನಿಮಿಷ ಇರಿ. ಈ ಚರ್ಚೆಯಲ್ಲಿ ಮಹಿಳೆಯರಿಗೆ ಮಾತನಾಡಲು ಅವಕಾಶ ಕೊಡಬೇಕಾಗಿದೆ. ಆಮೇಲೆ ನಿಮಗೆ ಅಂತಿಮವಾಗಿ ಅವಕಾಶ ಕೊಡುತ್ತೇನೆ. You will be the last speaker. ಈಗ ತಾರಾ ಅನೂರಾಧರವರು ಮಾತನಾಡುತ್ತಾರೆ ಅವರು 5–8 ನಿಮಿಷದೊಳಗೆ ಮುಗಿಸಬೇಕು. ನಿಮ್ಮಿಬ್ಬರದ್ದೂ ಸೇರಿ ಹತ್ತು ನಿಮಿಷಗಳು ಮಾತ್ರ. ಅವರು 5–8 ನಿಮಿಷ ಮಾತನಾಡುತ್ತಾರೆ. ಹತ್ತು ನಿಮಿಷಗಳಲ್ಲಿ ಉಳಿದದ್ದನ್ನು ನೀವು ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೇವಲ ಎರಡು ನಿಮಿಷ ಮಾತ್ರ ಮಾತನಾಡುತ್ತೇನೆ.

**ಸಭಾಪತಿಯವರು:-** ಈಗ ಮಾನ್ಯ ಶ್ರೀಕಂಠೇಗೌಡರವರಿಗೆ ಈ ಕುರ್ಚಿಯ ಮೇಲೆ ಕುಳಿತು ಅದರ ಗೋಳು ಏನೆಂಬುದು ಗೊತ್ತಾಗಿದೆ. ಅದಕ್ಕೆ ಈಗ ಎರಡು ನಿಮಿಷ ಮಾತ್ರ ಕೇಳುತ್ತಿದ್ದಾರೆ, ಇಲ್ಲದಿದ್ದರೆ ಅವರು 20 ನಿಮಿಷಗಳನ್ನು ಕೇಳುತ್ತಿದ್ದರು.

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತೇನೆ. ಈ ದಿನ ನಿಯಮ 68ರಡಿಯಲ್ಲಿ ಈ ರೀತಿಯ ವಿಷಯವನ್ನು ನಮ್ಮ ನಾಯಕರು ತಂದಾಗ ತಾವು ಅನುಮತಿಯನ್ನು ಕೊಟ್ಟಿರುವುದಕ್ಕಾಗಿ ತಮಗೆ ಅಭಿನಂದನೆಯನ್ನು ಸಹ ಸಲ್ಲಿಸುತ್ತೇನೆ. ನಿಜವಾಗಿಯೂ ಒಬ್ಬ ಮಹಿಳೆಯಾಗಿ ಈ ಘನತೆವೆತ್ತ ಮನೆಯಲ್ಲಿ ಒಂದು ಅತ್ಯಾಚಾರ, ದೌರ್ಜನ್ಯ, ಮಕ್ಕಳನ್ನು ಕಳ್ಳತನ ಮಾಡುವ ಮತ್ತು ಮಕ್ಕಳ ಮೇಲೆ ಅತ್ಯಾಚಾರ ಮಾಡುವ ಬಗ್ಗೆ, ಸುಲಿಗೆಗಳ ಬಗ್ಗೆ, ಕೊಲೆಗಳ, ಸರಗಳ್ಳತನದ ಬಗ್ಗೆ ಈ ರೀತಿ ಸಮಾಜದ ಎಲ್ಲಾ ಕೆಟ್ಟ ವಿಷಯಗಳ ಬಗ್ಗೆ ಮಾತನಾಡಬೇಕೆಂದರೆ, ಒಬ್ಬ ಮಹಿಳೆಯಾಗಿ ನಿಜವಾಗಿಯೂ ತಲೆತಗ್ಗಿಸುವಂತಹ ವಿಷಯವಾಗಿದೆಯೆಂದು ಹೇಳುತ್ತೇನೆ. ಸರ್ಕಾರಗಳು ಮಾನ್ಯ ಉಗ್ರಪ್ಪನವರು ಹೇಳಿದ ಹಾಗೆ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದ್ದು, ಇದೇನೂ ಹೊಸದಲ್ಲ. ಆದರೆ ಆ ಪಾರ್ಟಿ ಮಾಡಿದ್ದಲ್ಲ, ಈ ಪಾರ್ಟಿ ಮಾಡಿದ್ದಲ್ಲ; ಅವರಿಗೆ ಇವರು, ಇವರಿಗೆ ಅವರು ಕೆಸರೆರಚುವುದಲ್ಲ ಎಂಬುದು ಸತ್ಯವಾದರೂ ಕೂಡ ನಮಗೆ ಇಲ್ಲಿ ಮಹಿಳೆಯರು, ಮಕ್ಕಳು ಮತ್ತು ಸರ್ಕಾರಗಳು; ಸರ್ಕಾರಗಳು ಏನು ಮಾಡಬೇಕೆಂಬುದನ್ನು ನಾವು ಮೂಲಭೂತವಾಗಿ ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರಗಳು ಅಂದಾಗ ನಮಗೆ ಕಾಪಾಡುವ ದೇವರುಗಳು ಮತ್ತು ನಮ್ಮಗಳ ಕೈ ಹಿಡಿಯುತ್ತಾರೆಂದು ಸಾರ್ವಜನಿಕರು ನೆನೆಸಿಕೊಳ್ಳುತ್ತಾರೆ.

(ಮುಂದು . . .

(36) 06-02-2018/6-10/ಕೆಹೆಚ್/ಆರ್‌ಎನ್

**ಶ್ರೀಮತಿ ತಾರಾ ಅನುರಾಧ (ಮುಂದು):-** ಅದೇ ಸರ್ಕಾರದಲ್ಲಿ ಕೋಟ್ಯಾಂತರ ಜನರ ಪ್ರತಿನಿಧಿಗಳಾಗಿ ನಾವು ಈ ಸದನದಲ್ಲಿದ್ದು, ಈ ರೀತಿಯಲ್ಲಿ ದೌರ್ಜನ್ಯಗಳು ನಡೆಯುತ್ತಿವೆ ಎಂದು ಇದನ್ನು ನಮ್ಮ ಮೇಲೆ ಎರಚಿಕೊಳ್ಳುವುದು ಬೇಡವೆಂದು ಸುಮ್ಮನಿರುತ್ತಾರೆ. ಅತಿ ಹೆಚ್ಚು ಸಂಖ್ಯೆಯಲ್ಲಿ ಈ ರೀತಿಯಲ್ಲಿ ಸುಲಿಗೆ, ಅತ್ಯಾಚಾರ ಮತ್ತು ಮಕ್ಕಳ ಮೇಲೆ ದೌರ್ಜನ್ಯಗಳಾಯಿತು. ಅಂತಹ ಸಂಖ್ಯೆಗಳ ಮೂಲಕ ಮಾತನಾಡುವುದು ಇದೆಯಲ್ಲ, ಅದು ಸರಿಯಲ್ಲ. ಅದು ಜನರ ಭಾವನೆಗಳನ್ನು ಕೊಲ್ಲುತ್ತದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ನನಗನಿಸುತ್ತದೆ. ಇದರಲ್ಲಿ ಸಂಖ್ಯೆಗಳು ಮುಖ್ಯವಲ್ಲ. ಆದರೆ ಇಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ನಾವು ರಕ್ಷಣೆಯನ್ನು ಕೊಡುವುದಕ್ಕಾಗುತ್ತಿಲ್ಲವೆಂಬ ಭಾವನೆಯಲ್ಲಿ ನಾವು ಸೋತಿದ್ದೇವೆ. ನಾವು ಆ ಸೋತ ಧ್ವನಿಯಲ್ಲಿ ಈ ವಿಚಾರದ ಬಗ್ಗೆ ಹೇಳುವುದಿದೆಯಲ್ಲ ಅದು ನಾವೆಲ್ಲರೂ ತಲೆತಗ್ಗಿಸುವಂತಹ ವಿಚಾರವಾಗಿದೆ. ಈ ವಿಚಾರಗಳಿಗೆ ಭಾಷಣಗಳ ಮೂಲಕ ಮತ್ತು ಮಾತುಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳುವುದು ಬಹಳ ಸುಳ್ಳಿನ ಸಂಗತಿ. ಇದರ ಬಗ್ಗೆ ಹೊರಗಿನ ಜನರಿಗೆ ಮತ್ತು ನಮಗೆ ಗೊತ್ತಿರಬಹುದು. ನಾವು ಅಂಕಿ-ಅಂಶಗಳ ಬಗ್ಗೆ ಮಾತನಾಡುತ್ತೇವೆ. ಜನರಿಗೆ ಬೇಕಾಗಿರುವುದು . . .

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶ್ರೀಮತಿ ತಾರಾ ಅನುರಾಧರವರೆ ಒಂದು ನಿಮಿಷ. ಈ ರೀತಿಯಲ್ಲಿ ಸೋತಿದ್ದಾರೆಂದು ಯಾರು ನಿಮಗೆ ಹೇಳಿದ್ದಾರೆ. ಮಹಿಳೆಯರ ಬಗ್ಗೆ ಮಾತನಾಡುವುದಕ್ಕೆ ನಮಗೆ ತುಂಬಾ ಗೌರವವಿದೆ. ಆದರೆ ಈ ವಿಚಾರದಲ್ಲಿ ಸೋತಿದ್ದೇವೆ ಎಂದು ಯಾರು ಹೇಳಿದ್ದಾರೆ.

**ಶ್ರೀಮತಿ ತಾರಾ ಅನುರಾಧ:-** ಶ್ರೀಮತಿ ಜಯಮ್ಮನವರೆ, ನಾನು ಆ ರೀತಿಯಲ್ಲಿ ಹೇಳುತ್ತಿಲ್ಲ. ನಮ್ಮ ನೋವು, ಹತಾಶೆಗಳನ್ನು ಈ ಸದನದಲ್ಲಿ ತೋಡಿಕೊಳ್ಳುತ್ತಿದ್ದೇವೆ. ಸೋತಿದ್ದೇವೆ ಎಂದರೆ ಏನು ಅರ್ಥವೆಂದರೆ ನಾವು ಸಂಖ್ಯೆಗಳ ಬಗ್ಗೆ ಮಾತನಾಡುತ್ತಿದ್ದೇವೆ. 2009ನೇ ಸಾಲಿನಲ್ಲಿ ಈ ರೀತಿಯಾಯಿತು. 2013ನೇ ಸಾಲಿನಲ್ಲಿ ಈ ರೀತಿಯಾಯಿತು. 2014ನೇ ಸಾಲಿನಲ್ಲಿ ಇಷ್ಟು ಸಂಖ್ಯೆಯಲ್ಲಿ ದೌರ್ಜನ್ಯಗಳಾಯಿತು, ಈ ರೀತಿಯಾಯಿತು ಎಂದು ಇದರ ಬಗ್ಗೆ ಮಾತನಾಡುವುದು ಅಸಹ್ಯವಲ್ಲವೇ?

**ಶ್ರೀಮತಿ ಜಯಮ್ಮ:-** ತಾವು ಹೇಳುತ್ತಿರುವುದು ಸರಿಯಾಗಿದೆ. ಸಂಖ್ಯೆಗಳನ್ನು ಕೊಟ್ಟಿದ್ದಾರೆ ಅಷ್ಟೆ. ನೀವು ಸೋತಿದ್ದೀರಿ ಎಂದು ಹೇಳಿಲ್ಲ.

**ಶ್ರೀಮತಿ ತಾರಾ ಅನುರಾಧ:-** ಮಾನ್ಯ ಸಭಾಪತಿಯವರೆ, ಶ್ರೀಮತಿ ಜಯಮ್ಮನವರೆ ಈ ವಿಚಾರದಲ್ಲಿ ನೀವು ಸೋತಿದ್ದೀರಿ ಎಂದು ಹೇಳುತ್ತಿಲ್ಲ. ನಾವು ನಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುವುದು ಇದೆಯಲ್ಲವೇ, ಅದು ನಮ್ಮ ಬಲಹೀನತೆಯನ್ನು ತೋರಿಸುತ್ತದೆ. ಜನರು ಏನು ಮಾತನಾಡಿಕೊಳ್ಳುತ್ತಾರೆ ಎಂದರೆ, ಈ ವಿಚಾರಗಳ ಬಗ್ಗೆ ಫಲಿತಾಂಶ ಬೇಕು, ಮಹಿಳೆಯರಿಗೆ ಮತ್ತು ಮಕ್ಕಳಿಗೆ ನಾವು ಇದ್ದೇವೆ ಎನ್ನುವ ಸರ್ಕಾರ ನಮಗೆ ಬೇಕು, ನಾವು ನಿಮ್ಮ ಜೊತೆಯಲ್ಲಿ ಇದ್ದೇವೆ ಎನ್ನು ಸರ್ಕಾರ ನಮಗೆ ಬೇಕು. ಹತಾಶ ಭಾವನೆಯನ್ನು ತೋರಿಸುವಂತಹ ಸರ್ಕಾರ ನಮಗೆ ಬೇಕಾಗಿಲ್ಲ. ಯಾವುದೇ ಸರ್ಕಾರವಾಗಲಿ, ನಾನು ಇದೇ ಸರ್ಕಾರ, ಅದೇ ಸರ್ಕಾರವೆಂದು ಹೇಳುತ್ತಿಲ್ಲ. ನಾವು ಏನು ಮಾತನಾಡುತ್ತಿದ್ದೇವೆಂದರೆ . . .

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೆ, . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾ ಅನುರಾಧ**:- ಮಾನ್ಯ ಸಭಾಪತಿಯವರೆ, ಶ್ರೀಮತಿ ಜಯಮ್ಮನವರೆ ನಾವು ನೀವು ಜಗಳವಾಡುವುದು ಬೇಡ.

**ಸಭಾಪತಿಯವರು**:- ಶ್ರೀಮತಿ ಜಯಮ್ಮನವರೆ ದಯಮಾಡಿ ಕುಳಿತುಕೊಳ್ಳಿ. ಶ್ರೀಮತಿ ತಾರಾ ಅನುರಾಧ ರವರು ಮಾತನಾಡಲಿ.

**ಶ್ರೀಮತಿ ತಾರಾ ಅನೂರಾಧ**:- ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಮಹಿಳೆಯರ ಸಂಖ್ಯೆ ಬಹಳ ಕಡಿಮೆಯಿದೆ. ರಾಜ್ಯಪಾಲರ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆಂಬ ಬಗ್ಗೆ ಯೋಚನೆ ಮಾಡಿದ್ದೆ. ಈ ಸದನದಲ್ಲಿ 75 ಸದಸ್ಯರ ಪೈಕಿ ಕೇವಲ 5 ರಿಂದ 6 ಜನ ಮಹಿಳಾ ಸದಸ್ಯರು ಮಾತ್ರ ಇದ್ದೇವೆ. ಮಹಿಳೆಯರಿಗೆ ಶೇಕಡಾ 33 ರಷ್ಟು ಸ್ಥಾನಗಳನ್ನು ಕೊಡುವುದರ ಬಗ್ಗೆ ಬಹಳ ದಶಕಗಳಿಂದ ಚರ್ಚೆ ನಡೆಯುತ್ತಿದೆ. ಸದನದಲ್ಲಿ ಮಹಿಳೆಯರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂಬುದರ ಬಗ್ಗೆ ಸರ್ಕಾರ ಈ ನಿಟ್ಟಿನಲ್ಲಿ ಯೋಚನೆ ಮಾಡುತ್ತದೆ ಎಂದು ನಾನು ಅಂದುಕೊಂಡಿದ್ದೆ. ಆದರೆ ಆ ರೀತಿಯ ಯಾವುದೇ ಪ್ರಸ್ತಾಪವನ್ನು ಮಾಡಲಿಲ್ಲ. ಅದರ ಬಗ್ಗೆ ಮಾತನಾಡುವುದು ಬೇಡ. ಸರ್ಕಾರ ಈ ನಿಟ್ಟಿನಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ನಿಜವಾಗಿಯೂ ಶ್ರೀ ವಿ.ಎಸ್.ಉಗ್ರಪ್ಪನವರ ಸಮಿತಿಯ ಬಗ್ಗೆ ನಮ್ಮ ನಾಯಕರು ಬಹಳ ಮೆಚ್ಚಿಕೊಂಡು ಮಾತನಾಡಿದರು. ಆ ಸಮಿತಿಯ ಬಗ್ಗೆ ರಾಜ್ಯಾದ್ಯಂತ ಹೋರಾಡಿ ವಕೀಲರಾದ ಶ್ರೀ ವಿ.ಎಸ್.ಉಗ್ರಪ್ಪನವರು ಎಷ್ಟು ಚೆನ್ನಾಗಿ ಮಾತನಾಡುತ್ತಿದ್ದರು. ಶ್ರೀ ನಾಣಯ್ಯನವರು ಸಹ ಒಂದು ಸಮಿತಿಯನ್ನು ಮಾಡಿದ್ದರು. ಶ್ರೀ ನಾಣಯ್ಯನವರ ನಂತರ ಶ್ರೀ ವಿ.ಎಸ್. ಉಗ್ರಪ್ಪನವರು ಅಧ್ಯಕ್ಷತೆಯನ್ನು ವಹಿಸಿಕೊಂಡರು. ಇವರು ಅನೇಕ ವಿಚಾರಗಳಲ್ಲಿ ಮತ್ತು ಎಲ್ಲೆಲ್ಲಿ ಈ ರೀತಿಯ ದೌರ್ಜನ್ಯಗಳು ಆಗಿದೆಯೋ, ಆ ಸಂತಸ್ತ್ರರ ಮನೆಗಳಿಗೆ ಹೋಗಿ, ಆ ಸ್ಥಳದಲ್ಲಿಯೇ ಅಧಿಕಾರಿಗಳನ್ನು ಕೂರಿಸಿಕೊಂಡು ಸಭೆಗಳನ್ನು ಮಾಡಿದರು. ಇದರ ಬಗ್ಗೆ ಮಧ್ಯಂತರ ವರದಿಯನ್ನು ಕೊಟ್ಟರು. ಹಿಂದು ಪತ್ರಿಕೆಯಲ್ಲಿ ಶ್ರೀ ವಿ.ಎಸ್.ಉಗ್ರಪ್ಪನವರು ಹೇಳಿರುವ ಹೇಳಿಕೆಯನ್ನು ನಾನು ಸದನದ ಗಮನಕ್ಕೆ ತರುತ್ತೇನೆ: *"I accepted the post as head of panel last year after M.C.Nanaiah quit. But, the government has not taken action on the interim report recommendations submitted six months ago by the panel. I am pained by it."* This is the statement of Sri.V.S.Ugrappa. ಸರ್ಕಾರಕ್ಕೆ ಮಧ್ಯಂತರ ವರದಿಯನ್ನು ಕೊಟ್ಟರೂ ಸಹ ಇದರ ಬಗ್ಗೆ ಏನು ಆಲೋಚನೆ ಮಾಡಲಿಲ್ಲ ಮತ್ತು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿಲ್ಲ ಎನ್ನುವುದು ಶ್ರೀ ವಿ.ಎಸ್. ಉಗ್ರಪ್ಪನವರ ಮಾತಾಗಿದೆ. ಶ್ರೀಮತಿ ಜಯಮ್ಮನವರೇ ಅದಕ್ಕೆ ನಾನು ಹೇಳುತ್ತಿರುವುದು ಅಷ್ಟೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀವು ಯಾರು ಎಂದು ಕೇಳಿದರಲ್ಲವೇ, ಈ ಹೇಳಿಕೆಯನ್ನು ನೋಡಿ ಎಲ್ಲಾ ಹಿರಿಯರು ಸಹ ಇದರಲ್ಲಿ ಇದ್ದಾರೆ. ಇಷ್ಟು ಚೆನ್ನಾಗಿ ಕೆಲಸ ಮಾಡಿದರೂ ಕೂಡ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳದೇ ಹೋದರೆ . . .

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೆ, . . .

**ಸಭಾಪತಿಯವರು:-** ಶ್ರೀ ಶರಣಪ್ಪ ಮಟ್ಟೂರ್‌ರವರೇ, ದಯವಿಟ್ಟು ಅವರು ಮಾತನಾಡಲು ಬಿಡಿ. ಮಧ್ಯ ಬಾಯಿ ಹಾಕಬೇಡಿ. ದಯಮಾಡಿ ಕುಳಿತುಕೊಳ್ಳಿ. . . .

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಯವರೆ, ನಾನು ಒಬ್ಬ ಮಹಿಳೆಯಾಗಿ ಹೇಳುತ್ತಿದ್ದೇನೆ. ನಾವು ನಮ್ಮ ರಾಜ್ಯದ ಜನರ ಪ್ರತಿನಿಧಿಗಳಾಗಿ ನಮಗೆ ಬೇಕಾಗಿರುವುದು ಒಂದು ಸದೃಢ ಸರ್ಕಾರ ಮತ್ತು ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೋಸ್ಕರ ಇರುವಂತಹ ಸರ್ಕಾರ. ಶ್ರೀಮತಿ ಜಯಮ್ಮನವರೆ ಪತ್ರಿಕೆಯವರೆ ಹೇಳಿದ ಹಾಗೆ ಒಂದು ಹೇಳಿಕೆ ಇದೆ ಅದನ್ನು ಗಮನಿಸಿ; *If this kind of situation continues, it will be very difficult to ensure safety of women and minor children, who constitute 75 percent of the State's population,."* ಮಹಿಳೆಯರು ಮತ್ತು ಮಕ್ಕಳು ಶೇಕಡಾ 75 ರಷ್ಟು ಇದ್ದಾರೆ. ಅವರ ಪರಿಸ್ಥಿತಿ ಏನಾಗಬೇಕು? ಅದರ ಬಗ್ಗೆ ನಾವು ಆಲೋಚನೆ ಮಾಡಬೇಕು. ಶ್ರೀಮತಿ ನಿರ್ಭಯರವರ ಪ್ರಕರಣ ನಡೆದ ಮೇಲೆ ಅದಕ್ಕೆ ಅನುದಾನವೆಂದು ಇಡಲಾಗಿತ್ತು. ರಾಜ್ಯ ಸರ್ಕಾರ ಅನುದಾನವನ್ನು ಯಾವ ಯಾವ ರೀತಿಯಲ್ಲಿ ಖರ್ಚು ಮಾಡಲಾಗಿದೆ. ಆ ಅನುದಾನವನ್ನು ಎಲ್ಲಿ ಇಡಲಾಗಿದೆ. ಈ ಅನುದಾನದಿಂದ ಯಾರ್ಯಾರಿಗೆ ಪರಿಹಾರವನ್ನು ಕೊಡಲಾಗಿದೆ. ಅತ್ಯಾಚಾರ, ಇನ್ನು ಅನೇಕ ದೌರ್ಜನ್ಯಗಳು ನಡೆದ್ಮ ಮೇಲೆ ಪರಿಹಾರವನ್ನು ಕೊಡುವುದಲ್ಲ. ಅತ್ಯಾಚಾರಗಳನ್ನು ತಡೆಯುವ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಇದರ ಬಗ್ಗೆ ಕಾನೂನನ್ನು ಹೇಗೆ ಮಾಡಬೇಕು? ಕಾನೂನು ಹೇಗೆ ಪರಿಣಾಮಕಾರಿಯಾಗಿ ತರಬೇಕೆಂಬುದರ ಬಗ್ಗೆ ಸರ್ಕಾರ ಮತ್ತು ನಾವೆಲ್ಲರೂ ಸೇರಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಯಾವ ರೀತಿಯಲ್ಲಿ ರಕ್ಷಣೆಯನ್ನು ಕೊಡಬೇಕು ಎಂಬುದರ ಕಡೆಗೆ ಹೆಚ್ಚಿನ ಗಮನವನ್ನು ವಹಿಸಬೇಕು. ಇದರಲ್ಲಿ ಕಾನೂನು ಸುವ್ಯವಸ್ಥೆಯನ್ನು ಹೇಗೆ ನೋಡಿಕೊಳ್ಳಬೇಕು ಎಂಬುದರ ಕಡೆಗೆ ಚಿಂತನೆ ನಡೆಸಬೇಕು. ಸರ್ಕಾರದವರು ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದು ಎಷ್ಟು ಮುಖ್ಯವೋ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ರಕ್ಷಣೆಯನ್ನು ಒದಗಿಸಿಕೊಡುವುದು ಅಷ್ಟೆ ಮುಖ್ಯವಾದ ವಿಚಾರ. ಆ ನಿಟ್ಟಿನಲ್ಲಿ ಎಲ್ಲರೂ ಆಲೋಚನೆ ಮಾಡಿ ಎಲ್ಲರೂ ಒಂದು ತೀರ್ಮಾನಕ್ಕೆ ಬರಬೇಕೇ ಹೊರತು, ಈಗ ಕೆಸರು ಎರಚುವ ಕೆಲಸದಲ್ಲಿ ನೀನು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಎಂಬುದರಲ್ಲಿ ಬರಬಾರದು. ಈ ನಿಟ್ಟಿನಲ್ಲಿ ಈಗಲಾದರೂ ಸರ್ಕಾರ ಶ್ರೀ ವಿ.ಎಸ್.ಉಗ್ರಪ್ಪನವರ ವರದಿಯನ್ನು ಸರಿಯಾಗಿ ಅನುಷ್ಠಾನಗೊಳಿಸಿ, ಅದರ ಪ್ರಕಾರ ನಡೆದುಕೊಂಡರೆ ಮತ್ತು ಆ ವರದಿಗೆ ಬೆಲೆ ಕೊಟ್ಟು ಒಳ್ಳೆಯ ಅಧಿಕಾರಿಗಳನ್ನು ತೆಗೆದುಕೊಂಡು ಈ ಕಾನೂನನ್ನು ಗಟ್ಟಿ ಮಾಡದೇ ಹೋದರೆ ನಾವು ಇದೇ ಸ್ಥಿತಿಯಲ್ಲಿ ಮುಂದುವರೆಯುತ್ತಾ ಹೋಗುತ್ತೇವೆಂದು ಹೇಳುತ್ತಾ ಬಹಳ ನೊಂದು ಈ ಅವಕಾಶವನ್ನು ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ವಾಸ್ತವವಾಗಿ ನಾನು ಏನು ಮಾತನಾಡಬಾರದು ಎಂದು ಕುಳಿತುಕೊಂಡಿದ್ದೆ. ಪರಸ್ಪರ ದೋಷಾರೋಪ ಮತ್ತು ಚಿತ್ಕಾರಗಳ ಮಾತುಗಳನ್ನು ಕೇಳಿದ ಮೇಲೆ ಎರಡು ನಿಮಿಷಗಳ ಕಾಲ ಮಾತನಾಡಬೇಕೆಂದು ನಿಂತುಕೊಂಡಿದ್ದೇನೆ. ಮನಕಲಕುವ ಘಟನೆಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿಯ ಸೂಚನೆಯ ಮೂಲಕ ನಿಯಮ 68 ರಡಿಯಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಮಾನವೀಯ ನೆಲೆಯಲ್ಲಿ ಆಗಬೇಕಾಗಿರುವಂತಹ ಚರ್ಚೆ, ಇನ್ನು ಎಲ್ಲೋ ಒಂದು ಕಡೆ ರಾಜಕೀಯ ಮೇಲಾಟದ ಮೂಲದಲ್ಲಿಯೇ ಚರ್ಚೆಯಾಗುತ್ತಿದೆ ಎಂಬುದು ನನ್ನನ್ನು ತೀವ್ರವಾಗಿ ಕಾಡುತ್ತಿದೆ. ಒಂದು ಬಾರಿ ಶ್ರೀ ಪೂಜ್ಯ ದೇವೇಗೌಡರವರು ನಮ್ಮನ್ನೆಲ್ಲ ಕರೆದು ರಾಜಕಾರಣವನ್ನು ಹೊರತುಪಡಿಸಿ, ಮಂಗಳೂರಿನಲ್ಲಿ ಒಂದು ಸೌಹಾರ್ದ ಯಾತ್ರೆಯನ್ನು ಮಾಡೋಣ. ಪ್ರತಿನಿತ್ಯ ಹತ್ಯೆಯಾಗುತ್ತಿದೆ ಇದಕ್ಕೆ ನಾವೆಲ್ಲರೂ ತಲೆತಗ್ಗಿಸಬೇಕಾಗಿದೆ. ಇದನ್ನು ಕೇಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಮಾತನಾಡಿದರು. ಅದಕ್ಕೆ ಅವಕಾಶವನ್ನು ತಿರಸ್ಕಾರ ಮಾಡಿದರು. ಮಾನವ ಜೀವ ಅಮೂಲ್ಯ, ಅದಕ್ಕೆ ಬೆಲೆ ಕಟ್ಟುವುದಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಒಂದು ಬಾರಿ ಜೀವ ಹೋದ ಮೇಲೆ ಅದನ್ನು ವಾಪಸ್ಸು ಪಡೆಯುವುದಕ್ಕೂ ಆಗುವುದಿಲ್ಲ. ಇಂತಹ ಜೀವಗಳನ್ನು ರಕ್ಷಣೆ ಮಾಡುವಂತಹ ದಿಸೆಯಲ್ಲಿ ರಾಜಕಾರಣವನ್ನು ನಾವೆಲ್ಲರೂ ಮರೆಯಬೇಕಾಗಿದೆ. ಮಾನವೀಯ ನೆಲೆಯಲ್ಲಿ ನಿಂತು ಪರಿಹಾರವನ್ನು ಕಂಡುಕೊಳ್ಳುವಂತಹ ಸರ್ವ ಪ್ರಯತ್ನವನ್ನು, ಸರ್ವ ಪಕ್ಷಗಳು ಮತ್ತು ಸಂಘಟನೆಗಳು ಮಾಡಬೇಕಾಗಿದೆ. ಬಹುಶಃ ಇದು ಆಗದೇ ಹೋದರೆ ಕರಾವಳಿಯಲ್ಲಿ ನಿರಂತರವಾಗಿ ನಡೆಯುತ್ತಿರುವಂತಹ ಹತ್ಯೆ, ಹಲ್ಲೆ, ಕೊಲೆಗಳು ನಿರಂತರವಾಗಿ ನಡೆಯುತ್ತಾ ಹೋಗುತ್ತದೆ. ಯಾವುದೋ ಒಂದು ಹತ್ಯೆಯಲ್ಲಿ, ಕೊಲೆಯಲ್ಲಿ ತನ್ನ ಪ್ರತಿಷ್ಠೆಯನ್ನು ಮೆರೆಯುವ ಮತ್ತು ತನ್ನ ರಾಜಕೀಯವನ್ನು ಮೆರೆಯುವ ಹಾಗೂ ರಾಜಕಾರಣದ ಮೈಲಿಯನ್ನು ತೆಗೆದುಕೊಳ್ಳುವ ಪ್ರಯತ್ನವಿದೆಯಲ್ಲಾ, ಅದಕ್ಕೆ ನನ್ನ ಒಂದು ದೊಡ್ಡ ಧಿಕ್ಕಾರ ಇದೆ. ದಯಮಾಡಿ ಇವತ್ತಿನ ಚರ್ಚೆಯಲ್ಲಿ ಪಾಲ್ಗೊಂಡ ಎರಡು ಕಡೆಯ ಮುಖಂಡರುಗಳಿಗೆ ಕೈಮುಗಿದು ಮನವಿಯನ್ನು ಮಾಡುತ್ತೇನೆ. ಈ ನಾಡಿನ ಜನರ ಆಸೆ ಇಷ್ಟೆಯಿದೆ. ಮಾನವೀಯ ನೆಲೆಯಲ್ಲಿ ನಿಂತು, ಕರಾವಳಿಯಲ್ಲಿ ನಡೆಯುತ್ತಿರುವಂತಹ ರಕ್ತದ ಓಕುಳಿಯನ್ನು ನಿಲ್ಲಿಸುವಂತಹ ಪ್ರಯತ್ನ, ನಿರಂತರವಾಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಯುತ್ತಿರುವ ಹತ್ಯಾಕಾಂಡವನ್ನು ನಿಲ್ಲಿಸುವಂತಹ ದೊಡ್ಡ ಪ್ರಯತ್ನವನ್ನು ಒಂದು ಸಾಮಾಜಿಕ ಮಾನವೀಯ ಹಿನ್ನೆಲೆಯಲ್ಲಿ ಮಾಡುವಂತಹ ಕೆಲಸವನ್ನು ಮಾಡಬೇಕೇ ಹೊರತು, ಯಾವ ಕಾರಣಕ್ಕೂ ರಾಜಕಾರಣವನ್ನು ಬೆರೆಸುವ, ಅದರ ಮೇಲಾಟಕ್ಕೆ ನಾವು ಏನಾದರೂ ತೆಗೆದುಕೊಳ್ಳುವ ಸಾಧ್ಯವೆ ಎನ್ನುವ ಪ್ರಯತ್ನ ಇದೆಯಲ್ಲವೇ, ಅದನ್ನು ನಾವು ನಿಲ್ಲಿಸಬೇಕು. ಅದನ್ನು ನಿಲ್ಲಿಸದೇ ಹೋದರೆ, ಇದಕ್ಕೆ ಇತಿಶ್ರೀ ಹಾಡುವುದಕ್ಕೆ ಸಾಧ್ಯವೇ ಇಲ್ಲ. ಆ ಕಾಲದಲ್ಲಿ, ಈ ಕಾಲದಲ್ಲಿ ಎಷ್ಟಾಯಿತು ಎಂಬುದರ ಬಗ್ಗೆ ಅಂಕಿ-ಅಂಶಗಳು ಬೇಕು. ಯಾವುದೇ ಕಾರಣಕ್ಕೂ ಹತ್ಯೆಗಳು, ಕೊಲೆಗಳು ನಿಂತಿಲ್ಲ. ಇದು ನಿಲ್ಲಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕಲ್ಲವೇ, ಅದಕ್ಕೆ ಒಂದು ಭದ್ರವಾದ ಸೌಹಾರ್ದತೆಯುಳ್ಳ ತಳಪಾಯವನ್ನು ಹಾಕಬೇಕಲ್ಲವೇ, ಆ ದಿಸೆಯಲ್ಲಿ ನಾವೆಲ್ಲರೂ ಗಂಭೀರವಾಗಿ ಯೋಚನೆ ಮಾಡೋಣ. ಕರಾವಳಿಯ ಜನರಿಗೆ ನೆಮ್ಮದಿಯನ್ನು ಕೊಡುವಂತಹ ಪ್ರಯತ್ನಕ್ಕೆ ನಾವೆಲ್ಲರೂ ಒಟ್ಟಾಗಿ ನಿಲ್ಲೋಣವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಸದನವು ಬೆಳಗ್ಗೆ ಪ್ರಾರಂಭವಾದಂತಹ ಸಂದರ್ಭದಲ್ಲಿ Law & Order ಬಗ್ಗೆ ಅಂಗೀಕಾರಕ್ಕೆ ಕೊಟ್ಟಾಗ, ಒಬ್ಬ ಪೋಲೀಸ್ ಅಧಿಕಾರಿಯು ಸದನದಲ್ಲಿ ಇರಲಿಲ್ಲ. ಸಭಾಪತಿಯವರು ಬಹಳ ಬಿಗಿಯಾಗಿ ಹೇಳಿದರು. ಇದರ ಬಗ್ಗೆ ಹೇಳಿದರೂ ಕೂಡ ಸದನವೂ ಮುಗಿಯುತ್ತಾ ಬಂದಿದೆ, ಈಗಲೂ ಕೂಡ ಒಬ್ಬ ಪೋಲೀಸ್ ಅಧಿಕಾರಿ ಸದನದಲ್ಲಿ ಇಲ್ಲ. ಒಬ್ಬ ಗೃಹ ಇಲಾಖೆಯ ಮುಖ್ಯ ಅಧಿಕಾರಿ ಮುಂದುಗಡೆ ಕುಳಿತುಕೊಂಡಿಲ್ಲವೆಂದರೆ ಅದಕ್ಕೆ ಏನು ಹೇಳಬೇಕು? ಅದಕ್ಕೋಸ್ಕರ ನಾನು ಹೇಳುತ್ತಿರುವುದು ಗೃಹ ಇಲಾಖೆಯವರ ಮುಖಾಂತರ ಈ ಧೋರಣೆ ಒಳ್ಳೆಯದಲ್ಲವೆಂದು ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಧ್ಯಾಹ್ನ ಮಾನ್ಯ ಗೃಹ ಸಚಿವರ ಗಮನಕ್ಕೆ ತಂದಿರುವ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾಳೆ ಅವರು ರಿಫ್ಲೈ ಕೊಡುವಾಗ ಎಲ್ಲರೂ ಸದನದಲ್ಲಿ ಹಾಜರಿರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವು ನಾಳೆ ಸಚಿವರು ಉತ್ತರ ನೀಡುವ ರಿಫ್ಲೈ ಬಗ್ಗೆ ಹೇಳುತ್ತಿರುವುದು ಸರಿಯಾಗಿದೆ. ಆದರೆ ಈಗ ಇಷ್ಟೊಂದು ಜನ ಸದಸ್ಯರು ಮಾತನಾಡಬೇಕಾದರೆ ಒಬ್ಬ ಪೋಲೀಸ್ ಇಲಾಖೆಗೆ ಸಂಬಂಧಿಸಿದ ಅಧಿಕಾರಿಯು ಸದನದಲ್ಲಿ ಇಲ್ಲವೆಂದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಪೋಲೀಸ್ ಅಧಿಕಾರಿಗಳು ಇಷ್ಟು ಹೊತ್ತಿನವರೆಗೂ ಸದನದಲ್ಲಿ ಇದ್ದರು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸದನದಲ್ಲಿ ಯಾರು ಇದ್ದರು.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಶ್ರೀ ಹರಿಶೇಖರನ್ ರವರು ಸದನದಲ್ಲಿ ಇದ್ದರು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನೀವು ಹೀಗೆ defend ಮಾಡಿಕೊಂಡರೆ ಒಬ್ಬರು ನಿಮ್ಮ ಪೋಲೀಸ್ ಅಧಿಕಾರಿಗಳು ಸದನದಲ್ಲಿ ಇಲ್ಲ. ನಾವು ಏನೋ ವಿರೋಧಪಕ್ಷದವರು ಇದರ ಬಗ್ಗೆ ಹೇಳದ್ದೇವೆ. ಆದರೆ ಇದರ ಬಗ್ಗೆ ಸಭಾಪತಿಯವರು ಹೇಳದರೂ ಕೂಡ ಯಾರು ಇಲ್ಲಿ ಇಲ್ಲವೆಂಬುದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ.

**ಸಭಾಪತಿಯವರು:-** ನಿಯಮ 68 ರಡಿಯಲ್ಲಿ ನಡೆದ ಚರ್ಚೆಯು ಈಗ ಮುಗಿದಿದೆ. ಇದರ ಬಗ್ಗೆ ಉತ್ತರವನ್ನು ನಾಳೆ ಮಾನ್ಯ ಗೃಹ ಸಚಿವರು ಅಥವಾ ಸರ್ಕಾರದ ಪರವಾಗಿ ಒಬ್ಬ ಸಚಿವರು ಉತ್ತರವನ್ನು ಕೊಡುವುದಕ್ಕೆ ಅವಕಾಶವಿರುತ್ತದೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಸಂಜೆ 6 ಗಂಟೆ 20 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 07ನೇ ಫೆಬ್ರವರಿ ಮಾಹೆ 2018ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"